
ಪ್ರತಿಫಲಿಸಿದ ಪ್ರಭೆ

ಪದ್ಮಾ ಶ್ರೀಧರ್



ಪ್ರತಿಫಲಿಸದ ಪ್ರಭೆ

(ಕಾದಂಬರಿ)

ಪದ್ಮಾ ಶ್ರೀಧರ್

ಸೌಮ್ಯ ಎಂ.
ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳು
ನಂ. 7/1, 'ವೈದೇಹಿ', ಎಂ.ಎಸ್. ಕೃಷ್ಣರಾವ್ ಪಾರ್ಕ್ ಎದುರು
ದಿವಾನ್ ಮಾಧವರಾವ್ ರಸ್ತೆ, ಬಸವನಗುಡಿ
ಬೆಂಗಳೂರು-560 004

PRATHIPHALISADA PRABHE
(NOVEL)
Written by : **Padmasridhar**
Published by : **SOWMYA M.**
No. 7/1, 'Vaidehi', Opp. M.N. Kumara Park,
Diwan Madhavarao Road, Basavanagudi
Bangalore-560 004

ಮೊದಲ ಮುದ್ರಣ	:	2008
ಬೆಲೆ	:	**ರೂ. 70/-**
ಉಪಯೋಗಿಸಿದ ಕಾಗದ	:	70 ಜಿ.ಎಸ್.ಎಂ. ಮ್ಯಾಪ್‌ಲಿಥೋ
ಪುಟಗಳು	:	140
ಮುಖಪುಟ	:	ಆರ್ಟ್ ಫೋಕಸ್
ಹಕ್ಕುಗಳು	:	ಲೇಖಕರದ್ದು

ಪ್ರಕಾಶಕರು:
ಸೌಮ್ಯ ಎಂ.
ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳು
ನಂ. 7/1, 'ವೈದೇಹಿ', ಎಂ.ಎನ್. ಕೃಷ್ಣರಾವ್ ಪಾರ್ಕ್ ಎದುರು
ದಿವಾನ್ ಮಾಧವರಾವ್ ರಸ್ತೆ, ಬಸವನಗುಡಿ
ಬೆಂಗಳೂರು-560 004

ಛಾಯಾಕ್ಷರ ಜೋಡಣೆ:
ಕುಮುದ ಗ್ರಾಫಿಕ್ಸ್, ಬೆಂಗಳೂರು. ದೂ : 9945814774

ಮುದ್ರಣ : ಅಶ್ವಿನಿ ಪ್ರಿಂಟರ್ಸ್
ಕಾಟನ್‌ಪೇಟೆ, ಬೆಂಗಳೂರು - 53

ಲೇಖಕಿಯ ನುಡಿ

ಓದುಗರೇ,

ನಮಸ್ಕಾರಗಳು. 'ಪ್ರತಿಫಲಿಸದ ಪ್ರಭೆ' ಎಂಬ ಹೆಸರಿನ ಈ ಕಾದಂಬರಿ ನನ್ನ ಇಪ್ಪತ್ತೈದನೆಯ ಕೃತಿ. ಇದು ಒಂದು ಸಾಮಾಜಿಕ ಲಘು ಕಾದಂಬರಿ. ಆದರೆ ಓದಿ ಮರೆಯುವಂಥದಲ್ಲ. ಒಬ್ಬ ಹೆಂಗಸಿನ ಪ್ರೀತಿ ಹೇಗೆ ಜೀವಂತವಾಗಿರುತ್ತದೆ ಎನ್ನುವುದನ್ನು ತೋರಿಸುತ್ತದೆ. ತಾನು ಪ್ರೀತಿಸಿದ ವ್ಯಕ್ತಿಗಾಗಿ ಯಾವ ಯಾವ ಘಟ್ಟವನ್ನು ತಲುಪುತ್ತಾಳೆ ಎನ್ನುವುದು ಮುಖ್ಯವಾಗುತ್ತದೆ.

ಈಗಾಗಲೇ ನನ್ನ ಹಲವಾರು ಕಾದಂಬರಿಗಳನ್ನು ಓದಿರಬಹುದು, ಮೆಚ್ಚಿರಬಹುದು. ಅದೇ ರೀತಿಯ ಅಭಿಮಾನವನ್ನು ಈಗಲೂ ತೋರುವಿರೆಂದು ನಂಬಿದ್ದೇವೆ. ಪ್ರಕಾಶಕ ವರ್ಗದವರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು.

ವಂದನೆಗಳು,

ತಮ್ಮ ವಿಶ್ವಾಸಿ,
ಪದ್ಮಾ ಶ್ರೀಧರ್

ಈ ಕಾದಂಬರಿಯ ನಾಯಕಿ ಮೇಡಂ ವೃದುಲಾ, ಕಾಲೇಜಿನಲ್ಲಿ ಲೆಕ್ಚರರ್ ಆಗಿರುತ್ತಾಳೆ. ಕಾರಣಾಂತರಗಳಿಂದ ಪತಿಯಿಂದ ದೂರವಿದ್ದರೂ, ಪ್ರೀತಿಯನ್ನು ಮರೆತಿರುವುದಿಲ್ಲ. ಇಪ್ಪತ್ತೈದು ವರ್ಷಗಳ ನಂತರ ಪ್ರೀತಿಸಿದವನನ್ನು ಕಂಡಾಗ, ಅವಳು ಮತ್ತೊಮ್ಮೆ ಒಂದು ನಿರ್ಧಾರಕ್ಕೆ ಬರುತ್ತಾಳೆ. ಆ ನಿರ್ಧಾರ ಬೇರೆಯೇ ಆಗಿರುತ್ತದೆ. ತನ್ನ ಪತಿಯೊಡನೆ, ಅವನ ಮಕ್ಕಳೊಡನೆ ಇರುವ ಬಯಕೆಯನ್ನು ಹೊರಗೆಡವುತ್ತಾಳೆ. ಮೊದಲ ಪತ್ನಿಯನ್ನು ಮತ್ತೆ ಒಪ್ಪಿಕೊಳ್ಳಬೇಕಾದ ಸ್ಥಿತಿ ಅವನದು. ಆದರೆ ಅವನ ಮೂರು ಹೆಣ್ಣು ಮಕ್ಕಳು? ಸಾಕ್ಷಿ ಮದುವೆಯಾಗಿದ್ದವಳು, ಕ್ಷೀರಾ ಮದುವೆಯಾಗಲಿರುವವಳು, ರಾಶಿ ಓದುತ್ತಿರುವವಳು... ಮೂವರಿಗೂ ಮೂರು ರೀತಿಯ ಮನಸ್ಸುಗಳು, ಮೃದುಲಾಳನ್ನು ತಾಯಿಯ ಸ್ಥಾನಕ್ಕೆ ಬರಮಾಡಿಕೊಂಡರೆ...? ಇದು ನೀವು ಓದಿ ತಿಳಿಯಬೇಕಾಗಿದೆ.

ಕುತೂಹಲಕಾರಿ ಓದುಗರಿಗೆ, ಇದೊಂದು ಕುತೂಹಲವನ್ನು ಹುಟ್ಟಿಸುವ ಕಾದಂಬರಿ.

–ಪ್ರಕಾಶಕರು

ಪ್ರತಿಫಲಿಸದ ಪ್ರಭೆ

1

"ರಾಶಿ ರಾಶಿ..."

"ಯಾವ ರಾಶಿ?..."

"ಕನ್ಯಾ ರಾಶಿ..."

"ಯಾವ ಕನ್ಯಾ..."

"ದಿಸ್ ಕನ್ಯಾ..." ಎನ್ನುತ್ತಾ ಚಪ್ಪಾಳೆ ಹಾಕುತ್ತಾ ಕೆಲವು ಹುಡುಗಿಯರು ರಾಶಿಯ ಸುತ್ತುವರೆದು ಗೇಲಿ ಮಾಡುತ್ತಿದ್ದರು. ರಾಶಿಯ ಮುಖ ಕೆಂಪಾಗಿತ್ತು, ಕಣ್ಣುಗಳಲ್ಲಿ ನೀರು ತುಂಬಿಕೊಂಡಿತ್ತು. ಉಳಿದ ಕೆಲವು ಹುಡುಗಿಯರು ಈ ಹುಡುಗಾಟವನ್ನು ನೋಡುತ್ತಾ ತಮ್ಮ ತಮ್ಮಲ್ಲೇ ನಗುತ್ತಿದ್ದರು.

ಲೆಕ್ಚರರ್ ಮೃದುಲಾ ಕ್ಲಾಸ್ ರೂಂನೊಳಕ್ಕೆ ಹೆಜ್ಜೆ ಇಡುತ್ತಿದ್ದಂತೆಯೇ ಹುಡುಗಿಯರ ಧ್ವನಿ ಕೇಳದಂತಾಯಿತು. ಎಲ್ಲರೂ ತಮ್ಮ ತಮ್ಮ ಜಾಗಗಳಿಗೆ ಹೋಗಿ ನಿಂತು, "ಗುಡ್ ಮಾರ್ನಿಂಗ್ ಮೇಡಂ" ಎಂದು ಕೋರಸ್‌ನಲ್ಲಿ ವಿಶ್ ಮಾಡಿದರು.

"ವೆರಿ ಗುಡ್ ಮಾರ್ನಿಂಗ್, ಆಲ್ ಆಫ್ ಯೂ ಸಿಡೌನ್" ಎಂದ ಮೃದುಲಾ ತನ್ನ ಕುರ್ಚಿಯಲ್ಲಿ ಕುಳಿತಳು. ಅವಳ ಗಮನ ನಿಂತಿದ್ದ ಹುಡುಗಿಯತ್ತ ಹರಿಯಿತು.

"ನೀವ್ಯಾಕ್ರೀ ಇಲ್ಲೇ ನಿಂತಿದೀರಿ? ಹೋಗಿ ಕೂತ್ಕೊಳ್ಳಿ" ಎಂದಳು.

"ನ್ಯೂ ಕಮ್ಮರ್ ಮೇಡಂ..." ಹಿಂದಿನ ಬೆಂಚಿನ ಹುಡುಗಿ ನುಡಿದಳು.

"ಹೌದಾ?... ಅಲ್ಲೇ ಎಲ್ಲಾದ್ರೂ ಅಡ್ಜಸ್ಟ್ ಮಾಡ್ಕೊಂಡು ಕುತ್ಕೊಳ್ಳಿ... ಎಷ್ಟು ಹೊತ್ತು ನಿಂತಿರೋಕೆ ಆಗುತ್ತೆ? ಕೀರ್ತೀ... ನಿನ್ನ ಪಕ್ಕ ಪ್ಲೇಸ್ ಇದೆ ಅಲ್ವಾ?"

"ಯೆಸ್ ಮೇಡಂ" ಎನ್ನುತ್ತಾ ಕೀರ್ತಿ ಪಕ್ಕಕ್ಕೆ ಸರಿದು ಕೂತಳು.

"ಹೊಸಾ ಹುಡುಗಿ ಅಂತೀರಿ... ಹೀಗಾ ಹೊಸಬರನ್ನು ಗ್ರೀಟ್ ಮಾಡೋದು? ಇದೇನಾ ನೀವು ಕಲಿತಿರೋದು?... ಹೂಂ ಹೋಗಿ ಕೂತ್ಕೊಳ್ಳಿ. ನಿಮ್ಮ ಹೆಸರೇನು?"

"ರಾಶಿ..." ಅವಳ ಧ್ವನಿ ಅವಳಿಗೇ ಕೇಳುವಂತಿರಲಿಲ್ಲ.

"ಸ್ವಲ್ಪ ಜೋರಾಗಿ ಹೇಳಿ, ಕೇಳಿಸ್ಲೇ ಇಲ್ಲ"

"ರಾಶಿ ಅಂತ ಮೇಡಂ" ಮಧ್ಯದಲ್ಲಿ ಕುಳಿತವಳೊಬ್ಬಳು ಜೋರಾಗಿ ಹೇಳಿದಳು.

"ಕೀಪ್ ಕ್ವೈಟ್... ನಾನು ನಿಮ್ಮನ್ನು ಕೇಳಲಿಲ್ಲ" ಎಲ್ಲರೂ ನಕ್ಕರು.

"ಸಾರಿ ಮೇಡಂ" ಮತ್ತೊಮ್ಮೆ ಎಲ್ಲರೂ ನಕ್ಕರು.

"ರಾಶಿ... ನೈಸ್ ನೇಮ್. ಎಲ್ಲಿಂದ ಬರ್ತಿದೀರಿ? ಫಸ್ಟ್ ಪಿಯುಸಿ ಓದಿದ್ದೆಲ್ಲಿ?"

"ಚಿತ್ರದುರ್ಗದಲ್ಲಿ ಮೇಡಂ..."

"ಓ... ನಿಮ್ಮ ತಂದೆಗೆ ಟ್ರಾನ್ಸ್‌ಫರ್ ಆಯ್ತಾ?" ರಾಶಿ ಉತ್ತರಿಸಲಿಲ್ಲ. ಅವಳು ಕೀರ್ತಿಯ ಪಕ್ಕ ಮೈ ಮುದುರಿ ಕುಳಿತಳು. ಕೀರ್ತಿಯ ಕಡೆ ತಿರುಗಿ, ಅವಳೊಬ್ಬಳಿಗೇ ಕೇಳಿಸುವಂತೆ "ಥ್ಯಾಂಕ್ಸ್" ಎಂದಳು. ಕೀರ್ತಿ ಮುಗುಳ್ನಕ್ಕಳು. ಮೃದುಲಾ ಪುಸ್ತಕವನ್ನು ತೆರೆದು ಪಾಠವನ್ನು ಪ್ರಾರಂಭಿಸಿದಳು. ರಾಶಿ ಆಗಾಗ್ಗೆ ಚಡಪಡಿಸುತ್ತಿರುವುದನ್ನು ಗಮನಿಸಿದಳು.

"ಯಾಕ್ರೀ...? ಆರ್ ಯೂ ನಾಟ್ ಕಂಫರ್ಟಬಲ್ ದೇರ್?" ಪ್ರಶ್ನಿಸಿದಳು.

"ಮುಳ್ಳು ಚುಚ್ತಾ ಇದೆಯಂತೆ ಮೇಡಂ" ಅವಳ ಹಿಂದಿನ ಬೆಂಚಿನಲ್ಲಿ ಕುಳಿತಿದ್ದ ಹುಡುಗಿ ನುಡಿದು ಕಿಸಕ್ಕನೆ ನಕ್ಕಳು. ರಾಶಿ ಪೆಚ್ಚಾಗಿದ್ದಳು.

"ನೀನು ಎದ್ದು ಹಿಂದಿನ ಬೆಂಚಿನಲ್ಲಿ ಕೂತ್ಕೋ ರಶ್ಮಿ... ನಂಗೊತ್ತು ನೀನು ಅತೀ ತರಲೆ" ರಶ್ಮಿ, ರಾಶಿಯ ಕಡೆ ನೋಡಿ, ಮೂತಿ ಸೊಟ್ಟಗೆ ಮಾಡಿ, ತನ್ನ ಪುಸ್ತಕಗಳನ್ನೆತ್ತಿಕೊಂಡು ಹಿಂದಿನ ಬೆಂಚಿನತ್ತ ನಡೆದಳು. ರಾಶಿ ಕಣ್ಣುಗಳಲ್ಲೇ ಮೇಡಂಗೆ ಥ್ಯಾಂಕ್ಸ್ ಹೇಳಿದಳು. ಮೃದುಲಾ ಪಾಠವನ್ನು ಮುಂದುವರೆಸಿದಳು. ಆಗಾಗ್ಗೆ ರಾಶಿಯ ಮೇಲೆ ಅವಳ ಗಮನ ಹರಿಯುತ್ತಿತ್ತು. ಸಮಯ ಮುಗಿದು, ಬೆಲ್ ಆಗಿ ಹೊರಡುವ ಸಮಯದಲ್ಲಿ ರಾಶಿಯನ್ನು ತನ್ನ ಬಳಿಗೆ ಕರೆದಳು. ತನ್ನ ಎದುರಿಗೆ ಬಂದು ನಿಂತವಳನ್ನೇ ಆಳವಾಗಿ ದಿಟ್ಟಿಸಿದಳು.

"ನೀವು ಹೀಗೆ ಮೆತ್ತಗಿದ್ರೆ ಈ ಹುಡುಗೀರು ಹುರಿದು ಮುಕ್ಕಿ ಬಿಡ್ತಾರೆ. ಬೀ ಬೋಲ್ಡ್... ಆಮೇಲೆ ಸ್ಟಾಫ್‌ರೂಂ ಗೆ ಬನ್ನಿ ಮಾತಾಡ್ತೀನಿ" ಮೃದುಲಾ ಮುಗುಳ್ನಕ್ಕು ನುಡಿದಳು. ರಾಶಿಗೆ ಹಾಯೆನಿಸಿತ್ತು.

"ಯೆಸ್ ಮೇಡಂ..." ಎಂದು ತಲೆಯಾಡಿಸಿದಳು. ಮೃದುಲಾ ತನ್ನ ಹ್ಯಾಂಡ್ ಬ್ಯಾಗ್‌ನ್ನೆತ್ತಿಕೊಂಡು ಆಚೆ ನಡೆದಳು. ಕೀರ್ತಿ ಅವಳ ಪಕ್ಕ ಬಂದು ನಿಂತಳು.

"ಮೇಡಂ ಏನು ಹೇಳಿದ್ರು?"

"ಆಮೇಲೆ ಸ್ಟಾಫ್‌ರೂಂಗೆ ಬಾ ಅಂತ ಕರೆದ್ರು"

"ಯಾರ ಮೇಲೂ ಚಾಡಿ ಹೇಳ್ಬೇಡಿ. ಆಮೇಲೆ ಇವರ್‍ಯಾರೂ ನಿಮ್ಮನ್ನು ಸುಮ್ಮನೆ ಬಿಡುಲ್ಲ...." ಕೀರ್ತಿ ಎಚ್ಚರಿಕೆ ನೀಡಿದಳು.

"ಸರಿ... ನನಗೊಬ್ಬಳಿಗೇ ಹೋಗೋಕೆ ಭಯ. ನೀವೂ ಬರ್ತೀರಾ?"

"ಓ...ಕೇ. ಬರ್ತೀನಿ... ನಂಗೆ ಐಸ್‌ಕ್ರೀಂ ಕೊಡಿಸ್ಬೇಕು"

"ನನ್ಹತ್ರ ಅಷ್ಟೊಂದು ದುಡ್ಡಿಲ್ಲ"

"ಡೋಂಟ್‌ವರಿ, ನಾಳೆ ಕೊಡಿಸೋರಂತೆ" ಅವಳ ತೋಳನ್ನು ಅದುಮಿದಳು.

"ಥ್ಯಾಂಕ್ಸ್ ಕೀರ್ತಿ. ನೀವು ತುಂಬಾ ಒಳ್ಳೆಯವರು" ರಾಶಿ ಮುಗುಳ್ನಕ್ಕಳು.

"ನಾವಿಬ್ರೂ ಕ್ಲಾಸ್‌ಮೇಟ್ಸ್... ಇಬ್ಬರೂ ಫ್ರೆಂಡ್ಸ್... ಫ್ರೆಂಡ್ಲೀಯಾಗಿರೋಣ. ಏಕವಚನದಲ್ಲಿ ಮಾತನಾಡೋಣ" ಇಬ್ಬರೂ ಮಾತನಾಡುತ್ತಾ ಕಾರಿಡಾರಿನಲ್ಲಿ ನಡೆದರು.

* * *

2

"ಬಾಸ್ ಕರೀತಿದಾರೆ, ಬರ್ಬೇಕಂತೆ" ಅಟೆಂಡರ್ ಎದುರಿಗೆ ನಿಂತು ಹೇಳಿದಾಗ ಕ್ಷೀರಾ ಬೆಚ್ಚಿದಳು. ಕತ್ತೆತ್ತಿ ಅವನನ್ನೇ ಸುಮ್ಮನೇ ನೋಡಿದಳು. "ನಿಮಗೇ ಹೇಳಿದ್ದು ಮೇಡಂ ಬಾಸ್ ಕರೀತಿದಾರೆ... ಹೋಗಿ... ಅಯ್ಯೋ ರಾಮ...." ಅಟೆಂಡರ್ ತನ್ನ ಗಂಟು ಕಳೆದು ಹೋದವನಂತೆ, ಕೆಟ್ಟ ಮುಖ ಮಾಡಿ ಮತ್ತೊಮ್ಮೆ ನುಡಿದಾಗ ಕ್ಷೀರಾ ಎದ್ದು ನಿಂತು ತನ್ನ ಉಡುಗೆಯನ್ನು ಸರಿಪಡಿಸಿಕೊಂಡು ತನ್ನ ಅಕ್ಕ ಪಕ್ಕದಲ್ಲಿ ಕುಳಿತಿದ್ದ ಸಹೋದ್ಯೋಗಿಗಳ ಕಡೆ ನೋಡಿದಳು. ಅವರುಗಳು ತಮ್ಮ ತಮ್ಮ ಕೆಲಸಗಳಲ್ಲಿ ತಲ್ಲೀನರಾಗಿರುವುದನ್ನು ಕಂಡು, ಇದ್ದ ಬದ್ದ ಧೈರ್ಯವನ್ನು ಒಂದುಗೂಡಿಸಿ, ಕಾಲುಗಳಿಗೆ ಶಕ್ತಿಯನ್ನು ತುಂಬಿಕೊಳ್ಳುತ್ತಾ ತನ್ನ ಬಾಸ್, ಕಾರ್ತೀಕನ ಛೇಂಬರ್ ಬಳಿಗೆ ಬಂದು ನಿಂತಳು.

"ಯೆಸ್, ಕಮಿನ್..." ಕಾರ್ತೀಕ್ ತಾನೇ ಕರೆದು, ಅವಳನ್ನು ತನ್ನ ಎದುರಿನ ಕುರ್ಚಿಯ ಮೇಲೆ ಕುಳಿತುಕೊಳ್ಳುವಂತೆ ಸಂಜ್ಞೆ ಮಾಡಿದ.

"ಪರವಾಗಿಲ್ಲ ಸಾರ್..." ಕ್ಷೀರಾ ಕ್ಷೀಣವಾದ ದನಿಯಲ್ಲಿ ನುಡಿದಳು.

"ಏನು ಪರವಾಗಿಲ್ಲ? ಕೂತ್ಕೊಳ್ಳಿ ಅಂದ್ಮೇಲೆ ಕೂತ್ಕೋಬೇಕು. ಎಷ್ಟು ಹೊತ್ತು ನಿಂತಿರ್ತೀರಿ? ಕೂತ್ಕೊಳ್ಳಿ" ಧ್ವನಿ ಗಡುಸಾಗಿಲ್ಲದಿದ್ದರೂ ಅವನು ಮತ್ತೆ ಒತ್ತಿ ಹೇಳಿದಾಗ ಅವಳಿಗೆ ಅವಮಾನವಾದಂತಾಗಿತ್ತು. ಮುಖ ಕೆಂಪಾಗಿತ್ತು, ತಲೆತಗ್ಗಿಸಿ ಕುಳಿತಳು.

"ಸಾರೀ... ನಾನು ನಿಮ್ಮ ಮೇಲೆ ರೇಗಲಿಲ್ಲ. ನೀವು ಕೆಲಸಕ್ಕೆ ಸೇರಿ ಎಷ್ಟು ದಿನಗಳಾದವು?"

"ಎರಡು ವಾರಗಳಾಯ್ತು ಸಾರ್"

"ಪ್ಲೀಸ್, ಸ್ವಲ್ಪ ಜೋರಾಗಿ ಮಾತಾಡಿ. ಬೆಳಿಗ್ಗೆ ತಿಂಡಿ ತಿಂದಿದೀರಿ ತಾನೇ?"

"ಇಲ್ಲ ಸಾರ್... ಯಸ್ ಸಾರ್..." ಅವಳು ಗಲಿಬಿಲಿಗೊಂಡು ನುಡಿದಳು. ಅವನು ನಕ್ಕು ನುಡಿದ.

"ತಿಂಡಿ ತಿಂದಿಲ್ವಾ? ವಾಯ್ಸೇ ಇಲ್ವಲ್ರೀ... ಹತ್ತಿರದಲ್ಲಿ ಕ್ಯಾಂಟೀನ್ ಇದೆ. ಏನನ್ನಾದ್ರೂ ತರಿಸ್ಕೊಂಡು ತಿನ್ನಿ"

"ತಿಂಡಿ ಆಗಿದೆ ಸಾರ್"

"ಓ...ಕೇ... ಏನು ತಿಂಡಿ ತಿಂದ್ರಿ ಅಂತ ನಾನು ಕೇಳೋಲ್ಲ. ಎನಿವೇ, ಈ ಹದಿನೈದು ದಿನಗಳಲ್ಲಿ ಏನೇನು ಕೆಲಸ ಕಲಿತಿದೀರಿ?"

"ಏನೂ ಇಲ್ಲ..."

"ನಂಗೊತ್ತು, ನೀವು ಏನನ್ನೂ ಕಲಿತಿಲ್ಲ. ನನಗೆ ಎಲ್ಲಾ ರಿಪೋರ್ಟ್ಸ್ ಬರುತ್ತೆ. ಏನೂ ಕೆಲಸ ಬರದೇ ಇರೋರನ್ನ ಯಾಕೆ ಇಟ್ಕೊಂಡಿದೀರಿ ಅಂತ ಕೇಳ್ತಾರೆ. ನಿಮಗೆ ಎಕ್ಸ್‌ಪೀರಿಯನ್ಸ್ ಏನೂ ಇಲ್ಲ ಅಂತ ತಿಳಿದೂ, ನಿಮಗೆ ಕೆಲಸವನ್ನು ಕೊಟ್ಟಿದೀನಿ. ಯಾಕೆ ಹೇಳಿ...? ಅವನು ಕೈಯಲ್ಲಿದ್ದ ಪೆನ್ನನ್ನು ತಿರುಗಿಸುತ್ತಾ ಕೇಳಿದ.

"ನಂಗೊತ್ತಿಲ್ಲ ಸಾರ್..." ಅಷ್ಟರಲ್ಲಿ ಅವನ ಟೇಬಲ್ ಮೇಲಿದ್ದ ಟೆಲಿಫೋನ್ ರಿಂಗಾಗಿತ್ತು. ಅವನು ಎತ್ತಲಿಲ್ಲ.

"ಓ...ಕೇ... ನೀವಿನ್ನು ಹೋಗಬಹುದು. ನಿಮ್ಮ ಪಕ್ಕದ ಟೇಬಲ್ ಪಂಕಜನ್ನ ಕೇಳಿ. ಅವರು ಕೆಲಸವನ್ನು ಹೇಳಿಕೊಡ್ತಾರೆ. ಇನ್ನು ಎರಡು ವಾರದೊಳಗೆ ನೀವು ಕೆಲವು ಕೆಲಸವನ್ನಾದರೂ ಕಲಿತಿರಬೇಕು... ನೀವು ಅವರಲ್ಲಿ ಯಾರ ಹತ್ತಿರವೂ ಮಾತನಾಡಿಲ್ಲವಂತೆ. ಅವರನ್ನ ಕೇಳಿದ್ರೆ ಹೇಳಿಕೊಟ್ಟಿರುತ್ತಿದ್ದರು..."

"ಏನೋ ಗೊತ್ತಾಗ್ಲಿಲ್ಲ ಸಾರ್"

"ಎಲ್ಲಾದಕ್ಕೂ ಗೊತ್ತಿಲ್ಲ ಅಂತ ಒಂದು ಉತ್ತರ ಹೇಳ್ತೀರಿ... ಹೋಗ್ಲೀ... ನಿಮ್ಮ ಮನೇಲಿ ಯಾರ್‍ಯಾರಿದೀರಿ... ಹೇಳ್ತೀರಾ?" ಅವನು ತಮಾಷೆ ಮಾಡುತ್ತಿರಬಹುದೆಂದು ಕೊಂಡು ಅವನ ಕಡೆ ನೋಡಿದಳು. ಆದರೆ ಹಾಗೆನಿಸಲಿಲ್ಲ.

"ನಾವು ಮೂರು ಜನ ಸಿಸ್ಟರ್ಸ್... ಮತ್ತೆ ನಮ್ಮ ತಂದೆ..."

"ನಿಮ್ಮ ತಂದೆ ಏನ್ಮಾಡ್ತಾರೆ?"

"ಏನೂ ಇಲ್ಲ" ಎಂದು ಹೇಳುವಷ್ಟರಲ್ಲಿ ಅವಳ ಗಂಟಲುಬ್ಬಿ ಬಂದಿತ್ತು. ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು. ಅವನು ಮುಜುಗರಗೊಂಡ.

"ಅಂದ್ರೇ... ನಿಮ್ಮ ತಂದೆಗೆ ಕೆಲಸ ಇಲ್ವಾ?..."

"ಇಲ್ಲ ಸಾರ್... ಅದು ಹಾಗಲ್ಲ... ಅವರಿಗೆ ಹುಷಾರಿಲ್ಲ..." ಅವಳು ಬಿಕ್ಕಿದಾಗ ಅವನು ಗಾಬರಿಗೊಂಡ. ತನ್ನ ತನಿಖೆ ಜಾಸ್ತಿಯಾಯಿತೆಂದುಕೊಂಡ.

"ಸಾರೀ, ನನ್ನ ಮಾತ್ನಿಂದ ನಿಮಗೆ ಬೇಸರವಾಗಿರಬಹುದು. ಲೆಟಸ್ ಛೇಂಜ್ ದಿ ಟಾಪಿಕ್. ನಿಮಗೆ ಕೆಲಸದ ಅಗತ್ಯ ತುಂಬಾ ಇದೆ ಅಂತ. ಅನಂತರಾಮು ಹೇಳಿದ್ದರಿಂದ ಕೆಲಸ ಕೊಟ್ಟಿದೀನಿ. ಆದಷ್ಟು ಬೇಗ ಕೆಲಸಗಳನ್ನು ಕಲಿತ್ಕೊಳ್ಳಿ... ಎಲ್ಲರ ಜೊತೆಯಲ್ಲಿ ಬೆರೆಯಿರಿ. ಒಬ್ರೇ ಇದ್ರೆ ಡಿಪ್ರೆಷನ್ ಆಗುತ್ತೆ. ನೀವು ಹೀಗೆ ಸಪ್ಪೆ ಮುಖ ಹಾಕ್ಕೊಂಡು ಕೂತ್ರೆ ಆಫೀಸ್‌ಗೇ ಮಂಕುತನದ ಕಳೆ ಬಂದು ಬಿಡುತ್ತೆ. ಪ್ಲೀಸ್ ಚೀರ್‌ಫುಲ್ ಆಗಿರಿ, ಅರ್ಥ ಆಯ್ತಾ?" ಮೀಸೆಯಡಿ ಅವನ ತುಟಿಗಳು ನಕ್ಕವು.

"ಯೆಸ್ ಸಾರ್..."

"ಯೂ ಮೇ ಗೋ ನೌ" ಅವಳು ಹೊರಬಂದು ತನ್ನ ಟೇಬಲ್ ಮೇಲೆ ಇದ್ದ ಫೈಲುಗಳ ಮೇಲೆ ಕಣ್ಣು ಹಾಯಿಸಿದಳು. ಅವುಗಳ ಬಗ್ಗೆ ಏನೂ ಅರಿವಿರಲಿಲ್ಲ. ಇದುವರೆಗೂ, ಅವಳು ಏನು ಕೆಲಸ ಮಾಡಬೇಕೆಂದು ಯಾರೂ ಹೇಳಿರಲಿಲ್ಲ, ತಿಳಿಸಿ ಕೊಟ್ಟಿರಲಿಲ್ಲ. ಬಾಸ್ ಕರೆದು ಎಚ್ಚರಿಕೆ ಕೊಟ್ಟಿದ್ದು ಅಭಿಮಾನಕ್ಕೆ ಬರೆ ಎಳೆದಂತಾಗಿತ್ತು. ತನ್ನ ಕುರ್ಚಿಯ ಮೇಲೆ ಕುಳಿತು ಶಬ್ದವಾಗದಂತೆ ಕಣ್ಣೀರು ಸುರಿಸಿದಳು.

"ಯಾಕ್ರೀ ಅಳ್ತಿದೀರಾ?... ಏನಾಯ್ತು? ಬಾಸ್ ಏನಾದ್ರೂ ಅಂದ್ರಾ?" ಪಂಕಜ ಎದುರಿಗೆ ನಿಂತು ಕೇಳಿದಾಗ, ಕ್ಷೀರಾ ಕಣ್ಣೀರನ್ನು ಓರೆಸಿಕೊಂಡಳು.

"ಏನೂ ಇಲ್ಲ..."

"ಏನೋ ಬೇಸರ ಆಗಿದೆ... ಬನ್ನಿ ಕ್ಯಾಂಟೀನಿಗೆ ಹೋಗೋಣ, ಲಂಚ್ ಟೈಂ ಆಗಿದೆ"

"ಪರವಾಗಿಲ್ಲ, ನಾನು ಡಬ್ಬಿ ತಂದಿದೀನಿ"

"ಏನು ತಂದಿದೀರಿ? ಇಡ್ಲೀನಾ? ದೋಸೇನಾ?... ತೋರ್ಸಿ"

"ಬ್ರೆಡ್ಡು..." ಅವಳು ಕತ್ತು ಬಗ್ಗಿಸಿ ಉತ್ತರಿಸಿದ್ದಳು.

"ಯಾಕೆ? ನಿಮಗೆ ಹುಶಾರಿಲ್ವಾ?"

"ಹುಶಾರಾಗಿದೀನಿ... ಯಾಕೆ ಹೀಗೆ ಕೇಳಿದ್ರಿ?"

"ಅಳ್ತಿದೀರಿ... ಬ್ರೆಡ್ ತಂದಿದೀರಿ... ಅದಕ್ಕೇ ಕೇಳ್ದೆ. ಏಳಿ... ನಮ್ಮ ಜೊತೆಯಲ್ಲಿ ಬನ್ನಿ. ನಿಮ್ಮ ಬೇಸರವೂ ಕಳೆಯುತ್ತೆ. ನಮ್ಮ ಬಾಸ್‌ನ ಆರ್ಡರ್ ಆಗಿದೆ"

"ಅಂದ್ರೇ..." ಕ್ಷೀರಾ ಕಣ್ಣರಳಿಸಿದಳು.

"ನಿಮಗೆ ಎಲ್ಲಾ ತರಹದ ಟ್ರೈನಿಂಗ್ ಕೊಡ್ಬೇಕು. ಮೊದಲು ನಿಮ್ಮನ್ನು ಸ್ಮಾರ್ಟ್ ಮಾಡ್ಬೇಕು. ಬೋಲ್ಡ್ ಮಾಡ್ಬೇಕು. ಇಲ್ದಿದ್ರೆ ಆಫೀಸ್‌ನ ಕೆಲಸ ಹುಡುಗಿಯರಿಗೆ ಕಷ್ಟ ಆಗುತ್ತೆ. ಬಾಸ್ ತುಂಬಾ ಒಳ್ಳೆಯವರು. ಎಲ್ಲರನ್ನು ಅಡ್ಜಸ್ಟ್ ಮಾಡ್ಕೊಂಡು ಹೋಗ್ತಾರೆ. ಮಾತಿನಲ್ಲಿ ಸ್ವಲ್ಪ ಒರಟರು. ಆದರೆ ಹೃದಯ ತುಂಬಾ ಒಳ್ಳೆಯದು" ಅವಳು ಮುಗುಳ್ನಗುತ್ತಾ ಧೈರ್ಯವನ್ನು ತುಂಬುವವಳಂತೆ ಹೇಳಿದಾಗ ಸ್ವಲ್ಪ ಗೆಲುವಾದಳು. ಇದನ್ನೆಲ್ಲ ಅವನೇ ಹೇಳಿರಬಹುದು ಎಂಬ ಅನುಮಾನ ಮೂಡಿತು. ತನ್ನನ್ನು ಕರೆಸಿ ಮಾತನಾಡಿದ ನಂತರ, ತಾನು ಹಾಗೆ ಮಾತನಾಡಬಾರದಾಗಿತ್ತು ಅಂತ ಅನ್ನಿಸಿರಬೇಕು. ಅದಕ್ಕೇ ಇವಳ ಹತ್ರ, ತನಗೆ ತರಬೇತಿ ಕೊಡಲು ಹೇಳಿದ್ದಾನೆಂದುಕೊಂಡಳು. ಅಡ್ಡಾದಿಡ್ಡಿಯಾಗಿ ಬಿದ್ದಿದ್ದ ಫೈಲುಗಳನ್ನು ಸರಿಯಾಗಿ ಜೋಡಿಸಿಟ್ಟು, ಪಂಕಜಳೊಡನೆ ಕ್ಯಾಂಟೀನಿಗೆ ಹೊರಟಳು.

* * *

3

"ಸಾಕ್ಷಿ ಡಾರ್ಲಿಂಗ್... ಹೀಗೇ ಇನ್ನು ಎಷ್ಟು ದಿನಗಳು ಅಂತಾ?... ನಂಗೆ ದಿನಾ ಮಧ್ಯಾಹ್ನ ನಿಮ್ಮ ಮನೆಗೆ ಊಟಕ್ಕೆ ಬರೋಕೆ ಮುಜುಗರ ಆಗುತ್ತೆ... ಏನು ಯೋಚಿಸ್ತಿದೀಯಾ ಚಿನ್ನಾ...? ನಾನು ನಿಂಗೇ ಹೇಳ್ತಿರೋದು ನೀನಿಲ್ಲಿ... ನಾನಲ್ಲಿ ಇದೇನು ಚೆನ್ನ... ನೀನೇ ಹೇಳು ಡಿಯರ್...?"

"ನಾನೇನ್ಮಾಡ್ಲೀ?... ನನ್ನ ಡೆಲಿವರಿ ಆಗೋವರ್ಗ್ಗೂ ನಾನು ಇಲ್ಲಿ ಇರ್ತೀನಿ. ಆಮೇಲೆ ನಿಮ್ಮ ಮನೇಲೇ ಇರ್ಬೇಕಲ್ಲ..." ಮುಖವನ್ನು ಸಪ್ಪಗೆ ಮಾಡಿದಳು.

"ನೀನು ಇಲ್ಲಿ ಒದ್ದಾಡೋದನ್ನ ನೋಡಿದ್ರೆ, ನಂಗೆ ಕಷ್ಟ ಆಗುತ್ತೆ ಸಾಕ್ಷೀ. ನಿನ್ನ ಹೆಲ್ತ್ ಗತಿ ಏನಾಗ್ಬೇಕು?"

"ಏನೂ ಆಗೋಲ್ಲ, ಡೋಂಟ್ ವರಿ. ನಾನು ಇಲ್ಲಿ ಆರಾಮವಾಗಿದೀನಿ. ಕೆಲಸದವಳಿದಾಳೆ, ಅಡಿಗೆಯವರಿದಾರೆ. ನನಗೆ ಮಾಡೋಕೆ ಕೆಲಸಗಳೇ ಇಲ್ಲ. ನಾನು ಇಲ್ಲಿ ಹಾಯಾಗಿದೀನಿ" ಚುಡಾಯಿಸುವವಳಂತೆ ನುಡಿದಳು.

"ಅಮ್ಮಂಗೆ ಹೆಲ್ಪ್ ಮಾಡಿದರೆ, ಅದು ಮಹಾ ದೊಡ್ಡ ಕೆಲಸಾನಾ? ಮುಂಚೆ ನಿಮ್ಮ ತಾಯಿ ನಿನಗೆ ಏನೂ ಕೆಲಸವನ್ನೇ ಹೇಳ್ತಿರಲಿಲ್ವಾ?"

"ಆ ವಿಷಯ ಈಗ ಬೇಡ. ಅಪ್ಪಂಗೋಸ್ಕರ ಇಲ್ಲಿದೀನಿ. ರಾಶಿ ಕಾಲೇಜಿಗೆ ಹೋಗ್ತಾಳೆ. ಕ್ಷೀರಾ ಕೆಲಸಕ್ಕೆ ಹೋಗ್ತಾಳೆ. ಅಪ್ಪನ ಜೊತೆಗೆ ಯಾರಿದಾರೆ?"

"ನಿನಗೆ, ನಿಮ್ಮಪ್ಪನ ಚಿಂತೆ. ನನಗೆ, ನಿನ್ನ ಚಿಂತೆ. ನಿನ್ನ ಆರೋಗ್ಯಾನೂ ಮುಖ್ಯ ಅಲ್ವಾ ಚಿನ್ನಾ? ಇಲ್ಲಿ ನಿನಗೆ ಆರೈಕೆ ಮಾಡೋರು ಯಾರಿದಾರೆ? ಅಮ್ಮಾನೂ ಅದನ್ನೇ ಹೇಳ್ತಾಳೆ"

"ನಿಮ್ಮಮ್ಮಂಗೆ ನನ್ನ ಚಿಂತೆ ಅಲ್ಲ; ಹುಟ್ಟಲಿರುವ ಮೊಮ್ಮಗನ ಚಿಂತೆ. ಎಲ್ಲಿ ಕಾಷ್ಠದ ಥರ ಹುಟ್ಟಿ ಬಿಡುತ್ತೋ ಅಂತ. ಹಾಗೇನೂ ಆಗುಲ್ಲ ಅಂತ ನಿಮ್ಮ ಅಮ್ಮಂಗೆ ಹೇಳಿ. ಮಗು ಚೆನ್ನಾಗಿಯೇ ಬೆಳೆದಿದೆ. ನನ್ನ ಹೊಟ್ಟೇನ ನೋಡಿ" ಅವಳು ತನ್ನ ಒಡಲ ಮೇಲೆ ಕೈಯಿರಿಸಿಕೊಂಡಳು.

"ಡಾಕ್ಟರ್ ಹತ್ರ ಮತ್ತೆ ಹೋಗಿದ್ಯಾ?"

"ಹ್ಞೂಂ... ಎಲ್ಲಾ ನಾರ್ಮಲ್ ಆಗಿದೆ. ವರಿ ಮಾಡ್ಕೋಬೇಡಿ ಅಂತಂದ್ರು"

"ಆದ್ರೂ ನಂಗೆ ನಾನೊಬ್ನೇ ಇರೋಕೆ ಬೇಜಾರಾಗುತ್ತೆ ಸಾಕ್ಷಿ. ಅದಕ್ಕೇ ಈ ಊಟದ ನೆಪದಲ್ಲಿ ಇಲ್ಲಿಗೆ ಬರ್ತೀನಿ. ಆದರೆ ರಾತ್ರಿಯ ಹೊತ್ತು ಊಟಾನೇ ಸೇರುಲ್ಲ; ನಿದ್ದೇನೂ ಬರುಲ್ಲ" ಓರೆಗಣ್ಣಿನಿಂದ ಅವಳನ್ನು ನೋಡಿದ.

"ಸಾಕು ಈ ಬಿಂಕ ಬಿನ್ನಾಣ. ನಿಮ್ಮಮ್ಮನ ಕೈಯ ಅಡಿಗೆಯೇ ಸೇರುಲ್ಲ ಅಂತಂದ್ರೆ ನಾನು ನಂಬೋಲ್ಲ. ನಿದ್ದೆ ಬರೋಲ್ಲ ಅಂತಂದ್ರ ಅದಕ್ಕೆ ನಾನೇನು ಮಾಡ್ಲೀ...? ರಾತ್ರಿ ಇಲ್ಲಿಗೇ ಬಂದ್ಬಿಡೀ" ಮುಗುಳ್ನಗುತ್ತಾ ಸಲಹೆಯನ್ನು ನೀಡಿದಳು.

"ನಂಗೇನೋ ಬರೋಕೆ ಇಷ್ಟಾನೇ. ಆದ್ರೆ ಇಲ್ಲಿ ಮನೆ ಚಿಕ್ಕದು. ನಿನ್ನ ತಂಗೀರು ಇನ್ನು ಚಿಕ್ಕವರು, ಅಡಿಗೆಯವರು, ನರ್ಸು, ಎಲ್ರೂ ಓಡಾಡ್ತಾನೇ ಇರ್ತಾರೆ. ಪ್ರೈವೆಸಿ ಕಡಿಮೆ"

"ಆಹಹಾ... ಮದುವೆಯಾಗಿ ಎರಡು ವರ್ಷ ಆಯ್ತು. ನಿಮಗೆ ಇನ್ನೂ ಪ್ರೈವೆಸಿ ಬೇಕಾ?" ಅವಳು ತುಂಟತನದಿಂದ ಕೇಳಿದಳು.

"ಯಾಕೆ? ಎರಡು ವರ್ಷಕ್ಕೆ ನಾವು ಮುದುಕರಾಗಿ ಬಿಟ್ಟೆವಾ?"

"ನೀವು ತಂದೆ ಆಗ್ತಿದೀರಿ. ನಿಮ್ಮ ಜವಾಬ್ದಾರಿ ಹೆಚ್ಚಾಗ್ತಿದೆ ತಿಳಿದಿರಲಿ"

"ಯೆಸ್ ಐ ನೋ... ಇಲ್ಲಿ ಫ್ರೀಯಾಗಿ ಮಾತನಾಡೋಕೆ ಆಗುಲ್ಲ. ನಿನ್ನ ಅನುಭವಗಳನ್ನು ನನ್ನೊಂದಿಗೆ ಹೇಳ್ಕೋಬೇಕು ಅಂತ ನಿಂಗೆ ಅನ್ನಿಸೋಲ್ವಾ ಸಾಕ್ಷೀ?"

"ಅನ್ಸುತ್ತೆ, ಆದ್ರೆ ನಾನೇನ್ಮಾಡ್ಲೀ? ಊಟ ಮಾಡಿದ್ಕೂಡ್ಲೇ, ಹೊತ್ತಾಯ್ತು ಅಂತ, ಬುರ್ ಅಂತ ಹೊರಟು ಹೋಗ್ತೀರಿ. ರಾತ್ರಿಗೆ ಇಲ್ಲಿಗೇ ಬನ್ನಿ ಅಂತಂದ್ರೆ ಬರೋಲ್ಲ" ಅರೆ ಮುನಿಸಿನಿಂದ ಹೇಳಿದಳು.

"ಅಮ್ಮ ಏನಂದ್ಕೊಳ್ತಾಳೆ ನೀನೇ ಹೇಳು"

"ನಾನು ನಿಮ್ಮ ಹೆಂಡ್ತೀ ಸಂಜೂ... ಯಾರೋ ಥರ್ಡ್ ಪರ್ಸನ್ ಅಲ್ಲ" ಉದ್ವೇಗದಿಂದ ನುಡಿದಳು.

"ಓ...ಕೇ... ಓ...ಕೇ... ಎಕ್ಸೈಟ್ ಆಗ್ಬೇಡ. ಈಗ ಎಲ್ಲಾದ್ರೂ ಹೊರಗೆ ಹೋಗಿ ತಿರುಗಾಡಿಕೊಂಡು ಬರೋಣ ಬರ್ತೀಯಾ?"

"ಈ ಬಿಸಿಲ್ನಲ್ಲಿ? ಬೇಡ. ನಂಗೆ ನಿದ್ದೆ ಬರ್ತಿದೆ. ಫ್ಯಾನ್ ಕೆಳಗೆ ಹಾಯಾಗಿ ಮಲಗ್ತೀನಿ. ನೀವು ಇನ್ನು ಹೊರಡಿ" ಅವಳು ಆಕಳಿಸಿದಳು.

"ನನ್ನನ್ನ ಕಳಿಸೋಕೆ ನೋಡ್ತಿದೀಯಾ? ನನ್ನ ಮಗ ಬರಲಿ, ನೀನು ಎಷ್ಟು ಸ್ವಾರ್ಥಿ ಅಂತ ಹೇಳ್ತೀನಿ"

"ಹೂಂ, ಹೇಳಿ. ಅವನು ನಿಮಗಿಂತ ಹೆಚ್ಚಾಗಿ ನನ್ನ ಮಗ. ನಿಮ್ಮ ಮಾತನ್ನು ನಂಬುಲ್ಲ. ಅವನ ಅಮ್ಮನನ್ನು ಎಷ್ಟು ಗೋಳು ಹೋಯ್ದುಕೊಂಡಿದೀರಿ ಅಂತ ಅವನಿಗೂ ಗೊತ್ತು" ಅವಳು ಮುಸಿ ಮುಸಿ ನಕ್ಕು ತುಂಟ ನೋಟವನ್ನು ಬೀರಿದಳು.

"ನಿನ್ನ ಈ ನಗು, ತುಂಟತನ ಎಲ್ಲಾ ಮರೆತು ಹೋಗಿತ್ತು ನನಗೆ" ಎನ್ನುತ್ತಾ ಸರಸರನೆ ತಟ್ಟೆಯಲ್ಲೇ ಕೈ ತೊಳೆದು, ಅವಳ ಮುಖವನ್ನು ತನ್ನ ಕೈಗಳಲ್ಲಿ ಹಿಡಿದು ತನ್ನೆಡೆಗೆ ಎಳೆದುಕೊಂಡು ಬಾಗಿದ.

"ಥೂ... ಥೂ... ಇದೇನಿದು? ಎಂಜಲು ಬಾಯಿ... ಯಾರಾದ್ರೂ ನೋಡಿದ್ರೆ? ಅವಳು ತುಟಿಗಳನ್ನು ಒರೆಸಿಕೊಂಡಳು. ಮುಖ ಕೆಂಪಾಗಿತ್ತು.

"ಈಗ ಇಲ್ಲಿ ಯಾರಿದಾರೆ ನೋಡೋಕೆ? ಇಷ್ಟರ ಮೇಲೆ ನೋಡಿದ್ರೆ ನೋಡ್ಲಿ ನನ್ನ ಹೆಂಡ್ತೀನ ತಾನೇ ನಾನು ಮುದ್ದಿಸ್ತಿರೋದು..." ಮತ್ತೆ ಬಾಗಿದ. ಅವಳು ತಳ್ಳಿದಳು.

"ಇದೇ ಮಾತನ್ನು ನಿಮ್ಮ ತಾಯಿಗೆ ಹೇಳಿ..."

"ಆ ಏನಂದೆ?..." ಅವಳ ಕೆನ್ನೆಯನ್ನು ಚಿವುಟಿದ.

"ಇದು ರೋಮಾನ್ಸ್‌ಗೆ ಸಮಯವಲ್ಲ..." ಹಿಂದಕ್ಕೆ ಸರಿದಳು.

"ನೀನು ನನ್ನ ಕೈಗೆ ಸಿಗೋದು ಈ ಸಮಯದಲ್ಲೇ ತಾನೇ? ನಾಳೆ ಮಧ್ಯಾಹ್ನ ನಾನು ಬರೋವರೆಗೂ, ಈ ಸಿಹಿ ನೆನಪೇ ನನಗೆ ಸಂಗಾತಿ..." ಅವಳನ್ನು ಹಿಡಿದ.

"ಗಿರಿಜಮ್ಮ ಏನ್ಬೇಕಾಗಿತ್ತು?" ಸಂಜಯ್ ತನ್ನ ಹಿಡಿತವನ್ನು ಸಡಿಲಗೊಳಿಸಿ ಅವಳಿಂದ ದೂರ ಸರಿದು ನಿಂತ. ಅವಳು ಕಿಲಕಿಲನೆ ನಕ್ಕಳು. ಅವನಿಗೆ ಅರ್ಥವಾಗಿತ್ತು.

"ಸಾಕ್ಷೀ... ಇದು ತೀರಾ ಮೋಸ. ನಾನು ನಿನ್ನ ಗಂಡ ಕಣೇ..."

"ಅದಕ್ಕೇ... ನಾನೇ ನಿಂತು ಬಡಿಸೋದು. ಊಟ ಮುಗೀತಲ್ಲ ಏಳಿ... ಆಫೀಸ್ಗೆ ಹೊತ್ತಾಗುತ್ತೆ. ಸಾಯಂಕಾಲ ಬರೋವಾಗ, ಮಲ್ಲಿಗೆ ಹೂವಿನ ದಂಡೆಯನ್ನು ತನ್ನಿ. ಮುಡ್ಕೋಬೇಕು ಅಂತ ಆಸೆ ಆಗ್ತಿದೆ" ತನ್ನ ಜಡೆಯನ್ನು ಮುಂದಕ್ಕೆ ಎಳೆದುಕೊಂಡು ಹೇಳಿದಳು.

"ನೀನು ಹೂವು ಅನ್ನುತ್ಲು ನೆನೆಪಿಗೆ ಬಂತು ನೋಡು... ಅಮ್ಮ ನಿಂಗೆ ಬಳೆ ತೊಡಿಸಿದ ಆರತಿ ಇಟ್ಕೋಬೇಕು ಅಂತ ಹೇಳ್ತಿದ್ಲು. ಅಮ್ಮ ನಿಂಗೆ ಫೋನು ಮಾಡ್ಬಹುದು"

"ಒಂದು ದಿನವಾದ್ರೂ ಅವರು ಬಂದು ನನ್ನನ್ನು ನೋಡಿ, ಮಾತಾಡಿಸ್ಕೊಂಡು ಹೋಗಿದಾರಾ? ನನಗೆ ಆರತಿ ಕೀರುತಿ ಯಾವುದೂ ಬೇಡ. ಅಮ್ಮನೇ ಇಲ್ಲದಿದ್ದ ಮೇಲೆ ಅದೆಲ್ಲಾ ಯಾಕೆ?"

"ನಿನಗೆ ಹಾಗೆನ್ನಿಸಬಹುದು. ಆದರೆ ಅಮ್ಮಂಗೆ? ಮೊದಲ ಮೊಮ್ಮಗು ಹುಟ್ಟಿ ಬರುತ್ತಿರುವ ಸಂಭ್ರಮ ಅವಳಿಗೆ. ಅಲ್ಲದೇ ಮಗು ಏನು ತಪ್ಪು ಮಾಡಿದೆ? ಉತ್ಸಾಹ, ಸಂಭ್ರಮ ಯಾವುದೂ ಇಲ್ಲ ಅಂತ ನಿನ್ನ ಮೇಲೆ ಕೋಪ ಮಾಡ್ಕೊಂಡ್ರೆ?"

"ನಂಗೆಲ್ಲಾ ಗೊತ್ತು. ಜಾಣನ ಥರ ಬ್ಲ್ಯಾಕ್ ಮೇಲ್ ಮಾಡ್ಬೇಡಿ. ನೋಡೋಣ, ಈಗ ಹೊರಡಿ" ಸಂಜಯ್ ಬಾಗಿಲಾಚೆ ಬಂದು, ಕೈ ಎತ್ತಿ ಟಾಟಾ ಮಾಡಿ, ಬೈಕ್ ಹತ್ತಿದ.

* * *

4

"ನೀನಾ? ಅದೇನು ಇಷ್ಟು ಬೇಗ ಬಂದ್ಬಿಟ್ಟಿದೀಯಾ? ಇವತ್ತು ಯಾವ ಮೀಟಿಂಗೂ ಇರ್ಲಿಲ್ವಾ?... ಯಾವ ಸ್ನೇಹಿತರೂ ಸಿಗಲಿಲ್ವಾ?" ಮೃದುಲಾ ಕೇಳಿದಳು.

"ಇಲ್ಲ, ಇವತ್ತು ಯಾಕೋ ಸ್ವಲ್ಪ ಮೂಡ್ ಅಪ್ಸೇಟ್ ಆಗಿತ್ತು. ಆಫೀಸ್ನಿಂದ ಸೀದಾ ಮನೆಗೇ ಬಂದ್ಬಿಟ್ಟೆ... ಸಣ್ಣಗೆ ತಲೆ ಬೇರೆ ನೋಯ್ತಿದೆ"

"ಕಾಫೀ ಕುಡೀತೀಯಾ? ಈಗ್ತಾನೇ ಬೆರೆಸಿದ್ದೆ ಫ್ಲಾಸ್ಕಿನಲ್ಲಿದೆ"

"ಹುಂ" ಎಂದು ಹೇಳಿ, ಫ್ಲಾಸ್ಕಿನಿಂದ ಕಪ್‌ಗೆ ಕಾಫಿಯನ್ನು ಬಗ್ಗಿಸಿಕೊಂಡು ಅಲ್ಲೇ ಕುರ್ಚಿಯ ಮೇಲೆ ಕುಳಿತು, ನಿಧಾನವಾಗಿ ಹೀರಲಾರಂಭಿಸಿದ.

"ಏನೋ ಟೆನ್ಷನ್‌ನಲ್ಲಿರುವಂತಿದೆ. ಯಾರ ಹತ್ರಾನಾದ್ರೂ ಜಗಳ ಆಯ್ತಾ?"

"ಇಲ್ಲ, ನಮ್ಮ ಆಫೀಸ್ಗೆ ಒಬ್ಬಳು, ಹೊಸ್ದಾಗಿ ಕೆಲಸಕ್ಕೆ ಸೇರ್‍ಕೊಂಡಿದಾಳೆ. ಆಫೀಸ್ ಕೆಲಸ ಗೊತ್ತಿಲ್ಲ. ಕಲಿಯೋಕೆ ಪ್ರಯತ್ನಾನೂ ಮಾಡಿಲ್ಲ. ಛೇಂಬರ್‌ಗೆ ಕರೆಸಿ ಒರಟಾಗಿ ಮಾತಾಡ್ಬಿಟ್ಟೆ... ಆ ಹುಡುಗಿಗೆ ಬೇಜಾರು ಮಾಡ್ಬಿಟ್ಟೆ"

"ಅಷ್ಟಕ್ಯಾಕೆ ಅಪ್ಸೆಟ್ ಆಗ್ತೀಯ? ನೀನು ಬಾಸ್, ನೀನು ಮಾತಾಡಲೇ ಬೇಕು. ನನಗಂತೂ ದಿನಕ್ಕೆ ಇಂಥ ಹತ್ತಾರು ಅನುಭವಗಳಾಗುತ್ತಿರುತ್ವೆ. ಈಗಿನ ಕಾಲದ ಹುಡುಗೀರು, ಅದರಲ್ಲೂ ಕೆಲಸಕ್ಕೆ ಬರೋರು ಬಹಳ ಜೋರು, ತಲೆಹರಟೆಗಳು. ಕಂಟ್ರೋಲ್ ಮಾಡೋದೇ ಕಷ್ಟ" ಕಾರ್ತಿಕ್‌ಗೆ ಅವಳ ಮಾತಿನ ಮೇಲೆ ಗಮನವಿರಲಿಲ್ಲ. ಅಪ್ಸೆಟ್ ಆಗಿದ್ದ ಕ್ಷೀರಾಳ ಕೆಂಪಾದ ಮುಖ ಅವನ ಕಣ್ಣ ಮುಂದೆ ಬಂದು ನಿಂತಿತ್ತು.

"ಯಾಕೋ ಮನಸ್ಸಿಗೆ ತೀರಾ ಹಚ್ಚಿಕೊಂಡ ಹಾಗೆ ಕಾಣುತ್ತೆ. ನಾಳೆ ಮತ್ತೆ ಕರೆದು ಸಾರೀ ಕೇಳಿ ಬಿಡು" ತಮಾಷೆ ಎಂಬಂತೆ ಹೇಳಿದಳು.

"ಸಾರಿ ಹೇಗೆ ಕೇಳೋಕ್ಕಾಗುತ್ತೆ?" ತಲೆ ಕೊಡವಿದ.

"ಸರಿ, ಸುಮ್ಮನಿದ್ದು ಬಿಡು. ಕೊರಗೋದು ಯಾಕೆ ಅಂತ?"

"ನನ್ನ ಅಸಿಸ್ಟೆಂಟ್ ಅನಂತರಾಮು ಹೇಳೀದ. ಆ ಹುಡುಗಿಗೆ ತಾಯಿ ಇಲ್ಲವಂತೆ. ತಂದೆ ಬೆಡ್‌ರಿಡನ್. ಪಾಪ, ಸಂಪಾದನೆಗೋಸ್ಕರ ಕೆಲಸ ಮಾಡಬೇಕಾದ ಅನಿವಾರ್ಯ. ನಾನು ರಫ್ ಆಗಿ ಮಾತನಾಡಬಾರ್‍ದಾಗಿತ್ತು"

"ಸರಿ, ನಾಳೆಯಿಂದ ಫ್ರೆಂಡ್ಲಿಯಾಗಿ ಮಾತನಾಡಿಸು. ಮೆಚ್ಚುಗೆಯ ಮಾತುಗಳನ್ನಾಡು. ಹುಡುಗೀರ್‍ಗೆ ಅವುಗಳೆಲ್ಲ ಇಷ್ಟವಾಗುತ್ತೆ" ನಗುತ್ತಾ ನುಡಿದಳು.

"ಹುಡುಗೀರ ಸೈಕಾಲಜೀನ ಇದು?" ಅವನೂ ನಗುತ್ತಾ ಕೇಳಿದ.

"ಹಾಗೇ ಅಂತ ಅಂದ್ಕೋ" ಇದ್ದಕ್ಕಿದ್ದಂತೆ ಅವಳು ಮೌನಿಯಾದಳು.

"ಈಗ ನಿಮಗೇನಾಯ್ತು? ಮೂಡ್ ಆಫ್ ಆಗೋಕೆ?" ಅವನು ಕೆಣಕಿದ.

"ಏನೋ ನೆನಪಿಗೆ ಬಂತು..."

"ಫ್ಲಾಷ್ ಬ್ಯಾಕಾ? ಬ್ಲ್ಯಾಕ್ ಅಂಡ್ ವೈಟೋ... ಕಲ್ಲರ್ರೋ...?"

"ಏನೋ ಒಂದು, ನನ್ನ ಫ್ರೆಂಡ್ ಮಾಲಾ ಅಂತ ಒಬ್ಬಳಿದ್ಲು, ತುಂಬಾ ಚೆನ್ನಾಗಿದ್ಲು. ಸೆಕೆಂಡ್ ಪಿ.ಯು.ನಲ್ಲಿ ಓದ್ತಾ ಇರೋ ಹುಡುಗೀನ ನೋಡಿದಾಗಲೆಲ್ಲಾ

ನನಗೆ ಅವಳ ನೆನಪು ಬರುತ್ತೆ. ಈಗ ಎಲ್ಲಿದಾಳೋ? ಹೇಗಿದಾಳೋ ನಿಟ್ಟುಸಿರು ಬಂತು.

"ಫ್ರೆಂಡ್ ಜೊತೆ ಕಾಂಟ್ಯಾಕ್ಟ್ ಇಲ್ವಾ?"

"ಇಲ್ಲ, ಇಪ್ಪತ್ತೈದು ವರ್ಷಗಳ ಹಿಂದೆಯೇ ನನ್ನ ಅವಳ ಸ್ನೇಹ ಮುರಿದು ಹೋಯ್ತು. ಈಗ ಈ ಹುಡುಗೀನ ಕಂಡಾಗ ಆ ನೆನಪು ಮರುಕಳಿಸಿತು. ಅಲ್ಲದೇ... ಅವಳಿಗೆ ತಂದೆ ತಾಯಿ ಇರಲಿಲ್ಲ. ಡಿಗ್ರಿ ಮುಗೀತಿದ್ದ ಹಾಗೇ ಕೆಲಸಕ್ಕೆ ಸೇರಿಕೊಂಡಿದ್ದಳು. ನಿನ್ನ ಆಫೀಸಿನ ಹುಡುಗಿಯಂತೆ, ಕೆಲಸಕ್ಕೆ ಹೋಗುವುದು ಅವಳಿಗೆ ಅನಿವಾರ್ಯವಾಗಿತ್ತು" ಮತ್ತೆ ನಿಡಿದಾದ ಉಸಿರನ್ನು ಹೊರಚೆಲ್ಲಿದಳು.

"ನನಗೆ ಚೀರ್ ಅಪ್ ಹೇಳಿ ನೀವೇ ಮೂಡ್ ಕೆಡಿಸಿಕೊಂಡ್ರಲ್ಲ ಆಂಟೀ..."

"ಹೋಗ್ಲಿ ಬಿಡು... ನಿಮ್ಮಮ್ಮ ಫೋನ್ ಮಾಡಿದ್ಲಾ? ಎಲ್ಲಾ ಹೇಗಿದಾರಂತೆ?"

"ಸಿಕ್ಕಾಬಟ್ಟೆ ಬಿಸಿಲು, ಸೆಕೆ. ಫ್ಯಾನು ಹಾಕಿಸ್ಬೇಕು ಅಂತಂದ್ಲು"

"ಈಗಂತೂ ಎಲ್ಲಾ ಊರ್ನಲ್ಲೂ ಶೆಕೆ. ಫ್ರಿಜ್‌ನಲ್ಲಿ ಜ್ಯೂಸ್ ಇದೆ ಕುಡೀತೀಯಾ?"

"ಬೇಡ, ಈಗ್ತಾನೇ ಕಾಫಿ ಕುಡಿದ್ನಲ್ಲ. ನೀವು ಬೇಕಾದ್ರೆ ಕುಡೀರಿ, ಕೊಡ್ಲಾ?"

"ಹೂಂ, ಕೊಡು. ಹಾಗೇ ಆ ಮ್ಯಾಗ್ಸೈನ್‌ನ ಇತ್ಲಾಗೆ ಕೊಟ್ಟು ಹೋಗು"

ಕಾರ್ತಿಕ್, ಮೃದುಲಾಳಿಗೆ ಜ್ಯೂಸ್ ಗ್ಲಾಸ್‌ನ್ನು ತಂದುಕೊಟ್ಟು, ಮ್ಯಾಗ್ಸೈನ್‌ನ್ನು ಕೊಟ್ಟು, ತಾನು ಬಾಲ್ಕನಿಗೆ ಬಂದು ನಿಂತ. ಅಲ್ಲೇ ಇರಲು ಬೇಸರವೆನಿಸಿತ್ತು. ಕಣ್ಣ ಮುಂದೆ ಕ್ಷೀರಾ ಬಂದು ನಿಂತಳು. "ಬ್ಯೂಟಿಫುಲ್ ಗರ್ಲ್, ಲವ್ಲೀ ನೇಮ್" ತನ್ನಲ್ಲೇ ಹೇಳಿಕೊಂಡು ಉಯ್ಯಾಲೆಯ ಮೇಲೆ ಕುಳಿತ. ಹಿಂದಿ ಸಿನಿಮಾ ಹಾಡೊಂದನ್ನು ಗುನುಗುನಿಸಿದ.

* * *

5

"ನಾನು ಒಂದು ಫಂಕ್ಷನ್‌ಗೆ ಹೋಗ್ಬೇಕಾಗಿದೆ. ನನ್ನ ಜೊತೆಗೆ ಬರ್ತೀಯಾ?" ಮೃದುಲಾ ಕಾರ್ತೀಕನನ್ನು ಕೇಳಿದಳು.

"ನಾನಾ? ಫಂಕ್ಷನ್‌ಗೆ ನನ್ನನ್ನು ಕರ್ದಿದಾರಾ?" ಆಶ್ಚರ್ಯದಿಂದ ಕೇಳಿದ.

"ನನ್ನ ಜೊತೆ ಬಾ. ಇಷ್ಟು ಹೊತ್ನಲ್ಲಿ, ಅಷ್ಟು ದೂರ ನಾನೊಬ್ಬೇ ಕಾರ್‌ನ ಡ್ರೈವ್ ಮಾಡ್ಲಾರೆ. ನೀನು ಡ್ರೈವ್ ಮಾಡ್ಬೇಕು"

"ಏನು ಫಂಕ್ಷನ್? ಯಾರ ಮನೇಲಿ?"

"ಫಂಕ್ಷನ್ ಏನೂಂತ ನಂಗೂ ಸರಿಯಾಗಿ ಗೊತ್ತಿಲ್ಲ. ನನ್ನ ಸ್ಟೂಡೆಂಟ್ ಬನ್ನಿ ಅಂತ ರಿಕ್ವೆಸ್ಟ್ ಮಾಡ್ಕೊಂಡ್ಲು. ನಂಗೆ ಇಲ್ಲ ಅನ್ನೋಕ್ಕಾಗ್ಲಿಲ್ಲ"

"ನಾನು ಬಂದ್ರೆ ಆಕ್ವರ್ಡ್ ಅಂತ ಅನ್ನಿಸೋಲ್ವಾ?"

"ಹಾಗಾದ್ರೆ ಹೋಗ್ಲಿ ಬಿಡು. ಹೋಗೋದೇ ಬೇಡ"

"ಇಲ್ಲ ಹೋಗಿ ಬರೋಣ. ಅಪರೂಪಕ್ಕೆ ನೀವು ಫೇವರ್ ಕೇಳ್ತಿರುವಾಗ ನಾನ್ಯಾಕೆ ತಪ್ಪಿಸಲಿ? ನಾನು ಒಳಕ್ಕೆ ಬರುಲ್ಲ. ಕಾರ್ನಲ್ಲೇ ಕೂತಿರ್ತೀನಿ. ನೀವು ಬೇಗ ಬಂದು ಬಿಡಬೇಕು"

"ಹೊರಡೋಕ್ಮುಂಚೇನೇ ಕಂಡೀಷನ್ ಹಾಕ್ತೀಯಲ್ಲ... ನಡೀ ಆಗ್ಲೀ..."

ಇಬ್ಬರೂ ಸಿದ್ಧರಾಗಿ ಹೊರಟರು. ಮೃದುಲಾ ತನಗೆ ಹೊಂದುವಂತಹ ಸರಳವಾದ ಸೀರೆಯನ್ನುಟ್ಟಿದ್ದಳು. ಕಾರ್ತೀಕ್, ಜೀನ್ಸ್ ಪ್ಯಾಂಟ್, ಟೀ ಷರ್ಟ್‌ನ್ನು ತೊಟ್ಟಿದ್ದ. ಮೃದುಲಾ ಅವನ ಕೈಗೆ, ರಾಶಿ ಬರೆದುಕೊಟ್ಟಿದ್ದ, ವಿಳಾಸವನ್ನು ಕೊಟ್ಟಳು. ಕಾರ್ತೀಕ್ ವಿಳಾಸವನ್ನು ನೋಡಿ ಹುಬ್ಬೇರಿಸಿದ. "ತುಂಬಾ ದೂರ ಅಲ್ವಾ?" ಕೇಳಿದ.

"ಹೌದು, ಅದಕ್ಕೇ ನಿನ್ನನ್ನು ಹೊರಡಿಸಿದ್ದು" ಎಂದಳು. ಇಬ್ಬರೂ ಕಾರನ್ನೇರಿದರು. ಕಾರ್ತೀಕ್ ಕಾರನ್ನು ಓಡಿಸಿದ. ಅರ್ಧಗಂಟೆಯೊಳಗೆ, ರಾಶಿ ಕೊಟ್ಟ ವಿಳಾಸವನ್ನು ತಲುಪಿದರು. ಮನೆಯ ಮುಂದೆ ಹೆಚ್ಚಿನ ಸಂಭ್ರಮವೇನೂ ಕಂಡು ಬರಲಿಲ್ಲ. ಮನೆಯ ಮುಂದೆ ಒಂದು ಕಾರು, ಒಂದೆರಡು ಬೈಕುಗಳು ನಿಂತಿದ್ದವು.

"ಅಡ್ರೆಸ್ ಸರಿಯಾಗಿದೆಯಾ ಆಂಟಿ? ಫಂಕ್ಷನ್ ಅಂತ ಅಂದ್ರೀ... ಏನೂ ಗಲಾಟೆಯೇ ಕೇಳಿಸ್ತಿಲ್ಲ" ಕಾರ್ತೀಕ್ ಅನುಮಾನವನ್ನು ವ್ಯಕ್ತಪಡಿಸಿದ.

"ನಂಗೂ ಯಾಕೋ ಅನುಮಾನ ಆಗ್ತಿದೆ. ತಡಿ... ಹೋಗಿ ನೋಡ್ತೀನಿ"

"ನಾನೇ ಹೋಗಿ ನೋಡ್ಕೊಂಡು ಬರ್ತೀನಿ. ನೀವು ಇಲ್ಲೇ ಕೂತಿರಿ" ಎಂದು ಹೇಳಿ ಕಾರಿನಿಂದ ಇಳಿದು ಮನೆಯ ಮುಂಬಾಗಿಲನ್ನು ತಲುಪಿದ. ಒಳಗಡೆಯಿಂದ ನಾಲ್ಕಾರು ಹೆಂಗಸರ ಮಾತುಕತೆಗಳು ಕೇಳಿ ಬಂದವು. ಒಂದು ಗಳಿಗೆ ನಿಧಾನಿಸಿ, ಕಾಲಿಂಗ್ ಬೆಲ್‌ನ್ನು ಒತ್ತಿದ. ಬಾಗಿಲ ಬಳಿಗೆ ಬಂದ ಕ್ಷೀರಾಳನ್ನು ಕಂಡು ಕಣ್ಣುಗಳನ್ನು ಅರಳಿಸಿದ. ತುಟಿಗಳು ಬಿರಿದವು.

"ನೀವು...? ಇಲ್ಲಿ?" ಆಶ್ಚರ್ಯವನ್ನು ತುಳುಕಿಸಿ ಅವಳು ಕೇಳಿದಳು.

"ಹೌದು... ನೀವು... ಇಲ್ಲಿ... ಹೇಗೆ?" ಅವಳು ಮುಗುಳ್ನಕ್ಕಳು. ಅವನೇ ಮತ್ತೆ ಪ್ರಶ್ನಿಸಿದ "ರಾಶಿ ಅನ್ನೋರು ಇದಾರಾ? ಅವರ ಮನೆ ಇದೇ ತಾನೇ?"

"ಹೌದು... ರಾಶಿ ನಿಮಗೆ ಹೇಗೆ ಪರಿಚಯ?" ಸಂಶಯದಿಂದ ಕೇಳಿದಳು.

"ಅವರು ಇದ್ದರೆ ಕರೀತೀರಾ? ನನ್ನ ಕಸಿನ್ ಕರೀತಿದಾರೆ..."

"ನಿಮ್ಮ ಕಸಿನ್ನಾ? ಯಾರವರು? ರಾಶಿಯ ಹತ್ರ ಅವರಿಗೇನು ಕೆಲಸ?"

"ನೀವು ತುಂಬಾ ಪ್ರಶ್ನೆಗಳನ್ನು ಕೇಳ್ತಿದೀರಿ... ನನ್ನ ಕಸಿನ್ ಮೃದುಲಾ ರಾಶಿ ಅನ್ನೋರಿಗೆ ಮೇಡಂ... ಮೇಡಂ ಮೃದುಲಾ ಬಂದಿದಾರೆ ಅಂತ ಅವರಿಗೆ ಹೇಳಿ ಕ್ಷೀರಾ... ಪ್ಲೀಸ್..." ಕ್ಷೀರಾ ಗೊಂದಲಕ್ಕೊಳಗಾಗಿದ್ದಳು.

"ಒಂದ್ನಿಮಿಷ... ಕರೀತೀನಿ" ಎಂದು ಹೇಳಿ, ಎರಡು ಹೆಜ್ಜೆ ಹಿಂದೆ ಸರಿದು ರಾಶೀ... ರಾಶೀ... ಅಂತ ಕೂಗಿದಳು. ರಾಶಿ ಒಳಗಿನಿಂದ ಸಿಡುಕುತ್ತಾ ಬಂದವಳು, ಬಾಗಿಲ ಬಳಿ ನಿಂತಿದ್ದ ಯುವಕನನ್ನು ಕಂಡು ಹಾಗೇ ನಿಂತು, ಅವನನ್ನೇ ಮಿಕಿ ಮಿಕಿ ಅಂತ ನೋಡಿದಳು. ಅವನು ಮುಗುಳ್ನಕ್ಕು,

"ನಿಮ್ಮ ಮೇಡಂ ಬಂದಿದಾರೆ... ಕಾರ್ನಲ್ಲಿ ಕೂತಿದಾರೆ" ಅಂತಂದ. ರಾಶಿ ಸಡಗರದಿಂದ ಅವನನ್ನು ಹಾದುಕೊಂಡೇ ಕಾರಿನ ಬಳಿಗೆ ಓಡಿದಳು. ಕಾರ್ತೀಕ್ ಕ್ಷೀರಾಳ ಕಡೆಗೊಮ್ಮೆ ನೋಡಿ, ತಾನೂ ಕಾರಿನ ಬಳಿಗೆ ನಡೆದ.

"ನಮಸ್ಕಾರ ಮೇಡಂ... ಬನ್ನಿ... ಬನ್ನಿ..." ರಾಶಿ ಮೃದುಲಾಳನ್ನು ಆದರದಿಂದ ಸ್ವಾಗತಿಸಿದಳು. ಮೃದುಲಾ ಕಾರಿನಿಂದ ಇಳಿದಳು.

"ನಾನು ಕಾರ್ನಲ್ಲಿ ಕೂತಿರ್ತೀನಿ. ನೀವು ಬೇಗ ಬಂದು ಬಿಡಿ" ಕಾರ್ತೀಕ್ ಕಾರಿನೊಳಗೆ, ತನ್ನ ಜಾಗದಲ್ಲಿ ಕುಳಿತ. ಮೃದುಲಾ ರಾಶಿಯೊಡನೆ ಮನೆಯೊಳಕ್ಕೆ ಹೋದಳು. ಮುಂಬಾಗಿಲಿನಲ್ಲೇ ನಿಂತಿದ್ದ ಕ್ಷೀರಾಳಿಗೆ ತನ್ನ ಮೇಡಂನನ್ನು ಪರಿಚಯಿಸಿದಳು.

"ಇವರು ನನ್ನ ಇಂಗ್ಲೀಷ್ ಮೇಡಂ... ಮೃದುಲಾ ಅಂತ" ಕ್ಷೀರಾ ಕೈ ಮುಗಿದು ನಮಸ್ಕಾರ ಎಂದಳು. ಮೃದುಲಾ ಅವಳನ್ನೇ ಎವೆಯಿಕ್ಕದೇ ನೋಡಿದಳು.

"ಮೇಡಂ... ಇವಳು ನನ್ನ ಸಿಸ್ಟರ್ ಕ್ಷೀರಾ ಅಂತ..."

"ಕ್ಷೀರಾ... ನೈಸ್ ನೇಮ್" ಮೃದುಲಾ ತಲೆ ದೂಗಿದಳು.

"ಒಳಗೆ ಬನ್ನಿ ಮೇಡಂ" ಮೃದುಲಾ ಅವರಿಬ್ಬರ ಹಿಂದೆ ಹಿಂದೆ ನಡೆದಳು. "ರಾಶೀ... ಮೇಡಂನ ಒಳಗೆ ಕೂರಿಸು. ನಾನು ಈಗ್ಬಂದೆ" ಎಂದು ಹೇಳಿದ ಕ್ಷೀರಾ ಬಾಗಿಲಾಚೆಗೆ ಬಂದಳು. ಒಂದು ಗಳಿಗೆ ಅನುಮಾನಿಸಿದರೂ, ಕಾರಿನ ಬಳಿಗೆ ಬಂದಳು. ಸ್ಟೀರಿಂಗ್ ಹಿಡಿದು ಕೂತಿದ್ದವನು, ಹೆಜ್ಜೆಯ ಸದ್ದನ್ನು ಕೇಳಿ ಇತ್ತ ತಿರುಗಿದ. ಎದುರಿಗೆ ಕ್ಷೀರಾ ನಿಂತಿದ್ದಳು. ಸ್ನೇಹದ ನಗೆಯನ್ನು ಹೊರಸೂಸಿದ. ಕಾರಿನಿಂದ ಇಳಿದು ನಿಂತ.

"ಒಳಗಡೆಗೆ ಬನ್ನಿ ಸಾರ್... ಇಲ್ಲೇ ಯಾಕೆ ನಿಂತಿದೀರಿ?"

"ನಾನಾ?... ಪರವಾಗಿಲ್ಲ ಇಲ್ಲೇ ಇರ್ತೀನಿ. ನಾನು ನನ್ನ ಕಸಿನ್‌ಗೆ ಡ್ರೈವರ್ ಅಷ್ಟೇ..." ಎಂದ ಮುಗುಳ್ನಗುತ್ತಾ.

"ಪರವಾಗಿಲ್ಲ ಬನ್ನಿ ಸಾರ್... ಮೇಡಂ ನಿಮ್ಮ ಕಸಿನ್ ಅಂತ ನಮಗೆ ಗೊತ್ತಿರಲಿಲ್ಲ. ನಾನು ಅವರನ್ನು ನೋಡಿದ್ದು ಇದೇ ಮೊದಲು. ಅಲ್ದೇ... ರಾಶಿ ಅವಳ ಮೇಡಂನ ಇನ್ವೈಟ್ ಮಾಡಿದೀನಿ ಅಂತ ಹೇಳಿರಲೇ ಇಲ್ಲ..."

"ರಾಶೀ.. ರಾಶಿ ಯಾರು?"

"ರಾಶಿ ನನ್ನ ಸಿಸ್ಟರ್... ನಿಮ್ಮ ಕಸಿನ್ ಅವಳ ಮೇಡಂ..."

"ರಾಶೀ ನಿಮ್ಮ ಸಿಸ್ಟರ್ರಾ... ಅಪರೂಪದ ಹೆಸರು.. ಅಂದ್ಹಾಗೇ ಏನು ಫಂಕ್ಷನ್?... ಎಂಗೇಜ್‌ಮೆಂಟ್?"

"ಅಲ್ಲ..." ಒಂದು ಗಳಿಗೆ ತಡೆದಳು. ನನ್ನ ಅಕ್ಕ ಪ್ರೆಗ್ನೆಂಟ್... ಅವಳಿಗೆ ಆರತಿ... ಅದೇ ಫಂಕ್ಷನ್" ಸಂಕೋಚ ಹಾಗೂ ನಾಚಿಕೆಯಿಂದ ನುಡಿದಳು.

ಅವನೂ ಮುಜುಗರಗೊಂಡ. ಆದರೂ ನುಡಿದ "ಐ.ಸೀ. ಹಾಗಾದ್ರೆ ಬರೀ ಲೇಡೀಸ್ ಅಫೇರ್... ನಾನು ಬಂದು ಅಲ್ಲಿ ಮಾಡೋದು ಏನಿದೆ? ಇಲ್ಲೇ ಇರ್ತೀನಿ ಬಿಡಿ" ಕಾರಿಗೊರಗಿ ನಿಂತ.

"ಪರವಾಗಿಲ್ಲ ಬನ್ನಿ ಸಾರ್. ನಮ್ಮ ಭಾವ ಇದಾರೆ. ಅವರಿಗೆ ನಿಮ್ಮ ಪರಿಚಯ ಮಾಡಿಸಿಕೊಡ್ತೀನಿ... ಬನ್ನಿ" ಅವಳು ಮತ್ತೆ ಕರೆದಾಗ ಇಲ್ಲ ಎನ್ನಲಾಗದೇ ಅವಳೊಂದಿಗೆ ಹೆಜ್ಜೆ ಹಾಕಿದ.

"ಓ...ಕೇ... ಒಬ್ಬರಾದ್ರೂ ಗಂಡಸರಿದ್ರೆ ಒಳಗೆ ಬರಬಹುದು. ನೋ ಪ್ರಾಬ್ಲಂ... ನಿಮ್ಮ ಭಾವ ಏನು ಮಾಡ್ತಾರೆ?" ಇಬ್ಬರೂ ಮನೆಯೊಳಕ್ಕೆ ಬಂದರು.

"ಅವರದ್ದೇ ಸ್ವಂತ ಬಿಸಿನೆಸ್ ಇದೆ ಕೂತ್ಕೊಳ್ಳಿ. ಭಾವನ್ನ ಕರೀತೀನಿ" ಅವಳು ಒಳಕ್ಕೆ ಹೋದಳು. ಕಾರ್ತೀಕ್ ವೆರಾಂಡದಲ್ಲಿದ್ದ ಕುರ್ಚಿಯ ಮೇಲೆ ಕುಳಿತು ಅತ್ತಿತ್ತ ಕಣ್ಣು ಹಾಯಿಸಿದ. ಕ್ಷೀರಾ ತನ್ನ ಭಾವನೊಂದಿಗೆ ಬಂದಳು.

"ಭಾವ... ಇವರು ನನ್ನ ಬಾಸ್... ಕಾರ್ತೀಕ್ ಅಂತ... ಇವರ ಕಸಿನ್ ಮೃದುಲಾ, ರಾಶಿಗೆ ಮೇಡಂ" ಕಾರ್ತಿಕ್ ಎದ್ದು ನಿಂತು ಸಂಜಯನ ಕೈ ಕುಲುಕಿ, ಹಲೋ... ನೈಸ್ ಮೀಟಿಂಗ್ ಯೂ..." ಎಂದ.

"ನಾನು ಸಂಜಯ್..." ಸಂಜಯ ತನ್ನ ಪರಿಚಯವನ್ನು ಹೇಳಿಕೊಂಡು ಮತ್ತೊಂದು ಕುರ್ಚಿಯ ಮೇಲೆ ಕುಳಿತ. ಇಬ್ಬರೂ ಮಾತಿಗೆ ಪ್ರಾರಂಭಿಸಿದರು. ಕ್ಷೀರಾ ಒಳಕ್ಕೆ ಸರಿದಿದ್ದಳು. ರಾಶಿ ಮೃದುಲಾಳನ್ನು ತನ್ನ ಅಕ್ಕನ ಬಳಿ ಕರೆದೊಯ್ದಳು.

ಇವರು ನನ್ನ ಮೇಡಂ... ಮೇಡಂ ಮೃದುಲಾ..." ಇವಳು ನನ್ನ ಹಿರಿಯಕ್ಕ ಸಾಕ್ಷೀ... ಪರಸ್ಪರ ಪರಿಚಯ ಮಾಡಿಕೊಟ್ಟಳು.

"ನಮಸ್ಕಾರ ಮೇಡಂ" ಸಾಕ್ಷಿ ವಿನಯ ಪೂರ್ವಕವಾಗಿ ಕೈ ಮುಗಿದಳು.

"ಸಾಕ್ಷೀ... ನೈಸ್ ನೈಮ್" ಎಂದು ಹೇಳಿ, ಅವಳನ್ನೇ ಮೆಚ್ಚುಗೆಯಿಂದ ದಿಟ್ಟಿಸಿದಳು. ಹಸಿರು ಬಣ್ಣದ ಕ್ರೇಪ್ ಸೀರೆ, ಅದಕ್ಕೆ ಒಪ್ಪುವ ಹಸಿರು ಬಣ್ಣದ ರವಿಕೆ ತೊಟ್ಟ ಸಾಕ್ಷೀ ಭವ್ಯವಾಗಿ ಕಾಣುತ್ತಿದ್ದಳು. ಉಡುಗೆಗೆ ಹೊಂದುವಂತಹ ಪಚ್ಚೆ ಕಲ್ಲಿನ ನೆಕ್ಲೇಸ್, ಕಿವಿಯ ಓಲೆಗಳು, ಕೈಗಳಿಗೆ ತೊಟ್ಟ ಪಚ್ಚೆ ಕಲ್ಲಿನ ಬಳೆಗಳೊಂದಿಗೆ ಇದ್ದ ಹಸಿರು ಬಣ್ಣದ ಗಾಜಿನ ಬಳೆಗಳು... ಎಲ್ಲವನ್ನು ಗಮನಿಸಿದಳು. ಮೈಯ ತೂಕವಾದ ಭಾವ ಅವಳು ಗರ್ಭಿಣಿಯೆಂದು ಸಾರಿ ಹೇಳಿತ್ತು. ಬಸುರಿ ಹುಡುಗಿಗೆ ಬಳೆ ತೊಡಿಸಿದ ಆರತಿ... ತಾನು ಇವಳಿಗಾಗಿ ಏನನ್ನೂ ತಂದಿಲ್ಲ ಬರೀ ಕೈಯಲ್ಲಿ ಬಂದಿರುವೆನೆಂದು ಅರಿವಾದಾಗ ಅವಳಿಗೆ ಪಿಚ್ಚೆನ್ನಿಸಿತ್ತು. ಆದರೂ ನಗುಮೊಗದ ಮುಖವಾಡವನ್ನು ಧರಿಸಿ, ಹಾರ್ದಿಕವಾಗಿ ಶುಭಾಶಯಗಳನ್ನು ಕೋರುತ್ತಾ ಪೆಚ್ಚಾಗಿ. ಅತ್ತಿತ್ತ ನೋಡುವಾಗ,

ಗೋಡೆಯ ಮೇಲಿದ್ದ ಫೋಟೋದ ಕಡೆ ಅವಳ ಗಮನ ಹರಿಯಿತು. ಅದನ್ನು ಸಮೀಪಿಸಿದಳು. ಫೋಟೋದಲ್ಲಿದ್ದ ವ್ಯಕ್ತಿಯನ್ನು ಗುರುತಿಸಿದಳು. ಮನಸ್ಸು ಅಸ್ತವ್ಯಸ್ತಗೊಂಡಿತು.

"ಇವರು ನಮ್ಮ ತಾಯಿ... ಅವರೀಗ ಇಲ್ಲ" ಅವಳ ಹಿಂದೆಯೇ ಬಂದು ನಿಂತಿದ್ದ ರಾಶಿ ವ್ಯಥೆಯಿಂದ ನುಡಿದಾಗ, ಇತ್ತ ತಿರುಗಿದಳು.

"ಐ ಆಮ್ ಸಾರೀ ರಾಶೀ... ನನಗೆ ಈ ವಿಷಯ ಗೊತ್ತಿರಲಿಲ್ಲ" ಎಂದು ಹೇಳಿ ಅಲ್ಲಿದ್ದ ಸೋಫಾದ ಮೇಲೆ ಕುಳಿತಳು. ಕಲಕಿದ ಮನ ಅವಳನ್ನು ಸುಮ್ಮನೆ ಕುಳಿತಿರಲು ಬಿಡಲಿಲ್ಲ. ಆದಷ್ಟು ಬೇಗ ಅಲ್ಲಿಂದ ಹೋಗಬೇಕೆನ್ನಿಸಿತ್ತು. ಚಡಪಡಿಕೆ ಪ್ರಾರಂಭವಾಗಿತ್ತು.

ಸಾಕ್ಷಿಯ ಅತ್ತೆ, ಬಂದಿದ್ದ ಒಂದಿಬ್ಬರು ಹೆಂಗಳೆಯರನ್ನು ಕರೆದು, ಸೊಸೆಯ ಮಡಿಲನ್ನು ತುಂಬಿಸಿ ಆರತಿಯನ್ನು ಎತ್ತಿಸಿ, ದೃಷ್ಟಿಯನ್ನು ನೀವಾಳಿಸಿದಳು. ಮಗನನ್ನು ಕರೆದು, ಫೋಟೋ ತೆಗೆಯುವಂತೆ ಆದೇಶವಿತ್ತಳು. ಸಂಜಯ್ ತಾನೂ ಕೆಲವು ಫೋಟ್ಟೋಗಳನ್ನು ತೆಗೆದು, ಕಾರ್ತಿಕನನ್ನು ಕರೆದು ಅವನ ಕೈಗೆ ಕ್ಯಾಮೆರಾವನ್ನಿತ್ತ. ಹೆಂಡತಿಯ ಬಗಲಲ್ಲಿ ನಿಂತು ವಿವಿಧ ಭಂಗಿಗಳ ಫೋಟೋ ತೆಗೆಸಿಕೊಂಡ. ಕಾರ್ತೀಕನಿಗೆ ಥ್ಯಾಂಕ್ಸ್ ಹೇಳಿದ. ಬಂದಿದ್ದ ಅತಿಥಿಗಳಿಗೆ ಗಿರಿಜಮ್ಮ ಹಾಗೂ ಅವಳ ಸೊಸೆ, ತಿಂಡಿ, ಕಾಫಿಯನ್ನು ತಂದುಕೊಟ್ಟರು. ಮೃದುಲಾ ಮುಜುಗರದಿಂದ ತಿಂಡಿಯನ್ನು ತಿಂದಳು. ಅವಳ ಅನ್ಯಮನಸ್ಕತೆಯನ್ನು, ಬಲು ಉತ್ಸಾಹದಲ್ಲಿದ್ದ ಕಾರ್ತೀಕ ಗಮನಿಸಲಿಲ್ಲ. ಅವನ ದೃಷ್ಟಿ ಕ್ಷೀರಾಳ ಹಿಂದೆ ಮುಂದೆ ಸುತ್ತುತ್ತಿತ್ತು.

ಕ್ಷೀರಾ, ರಾಶಿ ಹೆಂಗಸರುಗಳಿಗೆ ಅರಿಶಿನ ಕುಂಕುಮವನ್ನು ತಾಂಬೂಲದೊಂದಿಗೆ ಹಣ್ಣು ಹಾಗೂ ಉಂಡೆ ಚಕ್ಕುಲಿಯ ಬಾಗಿನವನ್ನು ಕೊಟ್ಟರು. ಮೃದುಲಾ ಕಾರ್ತಿಕನನ್ನು ಸಂಜ್ಞೆಯಿಂದ ಕರೆದು "ಹೊರಡೋಣ" ಎಂದಳು. ಅವನು ನಸುನಕ್ಕ. ಅವಳು ಅಕ್ಕ ತಂಗಿಯರಿಗೆ 'ಬರ್ತೀನಿ' ಎಂದು ಹೇಳಿದಾಗ, ರಾಶಿ ಏನನ್ನೋ ನೆನಪಿಸಿಕೊಂಡವಳಂತೆ, ಅವಳನ್ನು ತನ್ನ ತಂದೆಯ ರೂಮಿಗೆ ಕರೆದೊಯ್ದಳು.

ರೂಮಿನ ಬಾಗಿಲ ಹೊರಗೇ ನಿಂತಳು. ಅವಳ ಕಾಲುಗಳು ಚಲಿಸಲಿಲ್ಲ. ಒಳಗೆ ಹೋಗುವ ಮನಸ್ಸಾಗಲಿಲ್ಲ. ಮನ ಕಲಕಿದ ಕೊಳವಾಗಿತ್ತು. ರಾಶಿ ಒಳ ಬಾಗಿಲಲ್ಲಿ ನಿಂತು "ಅಪ್ಪಾ" ಎಂದು ಕರೆದಳು. ಆತ ಇತ್ತ ತಿರುಗಿರಲಿಲ್ಲ.

"ಪರವಾಗಿಲ್ಲ ಬಿಡು ರಾಶೀ.. ಮಲಗಿದಾರೋ ಏನೋ..." ಬಹಳ ಕಷ್ಟಪಟ್ಟು ನುಡಿದಳು.

"ಅವರಿಗೆ ಹುಶಾರಿಲ್ಲ... ಸ್ಟ್ರೋಕ್..." ರಾಶಿ ಹೇಳುತ್ತಿದ್ದಂತೆಯೇ ಇವಳ ಮೈ ಶಕ್ತಿಯೆಲ್ಲಾ ಕಳಚಿ ಹೋದಂತಾಗಿ, ಕುಸಿಯುವಂತಾಗಿತ್ತು. ಗೋಡೆಯನ್ನು ಆಧರಿಸಿ, ಮಂಚಕ್ಕೆ ಬೆನ್ನು ಮಾಡಿ ನಿಂತಳು. ಎದೆಯ ಬಡಿತ ತೀವ್ರವಾಗಿದೆ ಎಂದೆನಿಸಿತ್ತು. ಮಂಚದ ಬಳಿಗೆ ಹೋಗಿ ಬಂದ ರಾಶಿ, ಅಪ್ಪ ಮಲಗಿ ಬಿಟ್ಟಿದಾರೆ ಅಂತ ಹೇಳಿದಾಗ, ಮೃದುಲಾ ಉತ್ತರಿಸಲಿಲ್ಲ. ಆದರೆ ಸ್ವಲ್ಪ ನಿರಾಳವೆನಿಸಿತ್ತು. ಬೆಪ್ಪಳಂತೆ ಅವಳನ್ನೇ ನೋಡಿದಳು.

"ಮೇಡಂ... ನಿಮ್ಮ ಕಸಿನ್ ನಿಮ್ಮನ್ನು ಕರೀತಾ ಇದಾರೆ" ಅಂತ ಕ್ಷೀರಾ ಹೇಳಿದಾಗ, ಮೃದುಲಾಳಿಗೆ ಉಸಿರಾಡುವಂತಾಗಿತ್ತು. ಅಲ್ಲಿಂದ ದುಡು ದುಡು ಅಂತ ವೆರಾಂಡಕ್ಕೆ ಬಂದಳು. ಕಾರ್ತೀಕ ಸಂಜಯನಿಗೆ ಮೃದುಲಾಳನ್ನು ಪರಿಚಯಿಸಿದ. ಸಂಜಯ 'ಹಲೋ ಮೇಡಂ' ಎಂದಾಗ, ಅವಳು 'ನಮಸ್ಕಾರ' ಎಂದು ಹೇಳಿ ಕೈ ಮುಗಿದಿದ್ದಳು. ಅವಳು ಅವಸರದಲ್ಲಿರುವಂತೆ ತೋರಿದಾಗ, ತುಟಿ ಸೊಟ್ಟ ಮಾಡಿ ನಕ್ಕ. ಮೃದುಲಾ ತಾನೇ ಮುಂದಾಗಿ ನಡೆದು ಕಾರಿನ ಬಳಿಗೆ ಬಂದು, ಕಾರಿನ ಬಾಗಿಲನ್ನು ತೆರೆದು ಕುಳಿತಳು. ಕಾರ್ತೀಕ ನಗುನಗುತ್ತಾ ಎಲ್ಲರಿಗೂ ಬೈ ಬೈ ಹೇಳಿ, ಕ್ಷೀರಾಳ ಕಡೆ ನೋಡಿ ಮತ್ತೊಮ್ಮೆ ಬರ್ತೀನಿ ಎಂದು ಹೇಳಿ ಕಾರಿನ ಬಳಿಗೆ ಬಂದ. ಹಾಡೊಂದನ್ನು ಗುನುಗುತ್ತಾ ತನ್ನ ಸೀಟನ್ನೇರಿ ಕಾರನ್ನು ಸ್ಟಾರ್ಟ್ ಮಾಡಿದ. ಮೃದುಲಾಳ ಕಡೆ ತಿರುಗಿ 'ಹೊರಡೋಣ್ವಾ' ಎಂದ. ಅವಳು 'ಹೂಂ' ಎಂದಷ್ಟೇ ಹೇಳಿದಳು. ಕತ್ತಲಾಗಿದ್ದುದರಿಂದ ಅವಳ ಗಂಭೀರವದನ ಇವನಿಗೆ ಕಾಣಲಿಲ್ಲ. ಕಾರು ಚಲಿಸಿತು.

ಕಾರು ರಸ್ತೆಗೆ ಇಳಿದದ್ದನ್ನು ಕಂಡ ಕೂಡಲೇ ಕ್ಷೀರಾ ರಾಶಿಯ ಕಡೆ ತಿರುಗಿದಳು. "ನಿನ್ನ ಮೇಡಂನ ಕರ್ದಿದೀನಿ, ಅಂತ ಮೊದ್ಲೇ ಹೇಳ್ಬಾರ್ದಾಗಿತ್ತಾ?" ಆಕ್ಷೇಪಿಸಿದಳು.

"ಏನಾಯ್ತೀಗ?" ರಾಶಿ ತಣ್ಣಗೆ ಮರು ಸವಾಲನ್ನೆಸೆದಳು.

"ಏನಾಯ್ತು ಅಂತ ಕೇಳ್ತಿಯಲ್ಲ ರಾಶೀ.. ಇದು ಮನೆ ಫಂಕ್ಷನ್. ಅವರೆಲ್ಲಾ ಯಾಕೆ ಬೇಕಾಗಿತ್ತು? ನಿಂಗಂತೂ ತಿಳುವಳಿಕೇನೇ ಇಲ್ಲ" ಸಾಕ್ಷಿಯೂ ದನಿಗೂಡಿಸಿದಳು.

"ಮೇಡಂನ ಕರೆದ್ರೆ, ಅವರ ಕಸಿನ್ ಸಹ ಬರ್ತಾನೆ ಅಂತ ನಂಗೇನು ಗೊತ್ತಿತ್ತು? ಅವನನ್ನು ಒಳಕ್ಕೆ ಕರೆತಂದವಳು ಈ ಕ್ಷೀರಾ..."

"ಮತ್ತಿನ್ನೇನು? ಅವನು ನನ್ನ ಬಾಸ್. ಗೊತ್ತಿದ್ದೂ ಅವನನ್ನು ಒಳಕ್ಕೆ ಕರೆಯದಿದ್ರೆ ಚೆನ್ನಾಗಿರುತ್ತಾ?"

"ಹೋಗ್ಲಿ ಬಿಡ್ರೇ... ನೀವಿಬ್ರೂ ಯಾಕೆ ಜಗಳ ಆಡ್ತೀರಿ? ಫೋಟೋ ತೆಗೆಯೋಕೆ ಒಬ್ಬ ಕ್ಯಾಮರಾಮ್ಯಾನ್ ಸಿಕ್ಕಂತಾಯಿತು. ಇಲ್ದಿದ್ರೆ ನಾನು, ಸಂಜೂ ಇಬ್ರೂ ಒಟ್ಟಿಗೇ ಇರೋ ಫೋಟೋನ ಯಾರು ತೆಗೀತಿದ್ರು?" ಸಂಜಯ, ಅಕ್ಕತಂಗಿಯರ ವಾದವನ್ನೇ ಕುತೂಹಲದಿಂದ ನೋಡುತ್ತಿದ್ದ. ಅವನ ತಾಯಿ, ಸೊಸೆಗೆ ಕೆಲವು ಆದೇಶಗಳನ್ನಿತ್ತು ಹೊರಟಳು. ಅವನ ಚಿಕ್ಕಮ್ಮ, ಸೋದರತ್ತೆ ಸಹ ಹೊರಟರು. ಅವರುಗಳನ್ನು ಕಳುಹಿಸಿ ಬರಲು ಅವನು ಆಚೆ ಹೊರಟ. ಗಿರಿಜಮ್ಮ ಎಲ್ಲರನ್ನೂ ಊಟಕ್ಕೆ ಎಬ್ಬಿಸಿದಳು.

* * *

7

"ಏನು ಯೋಚಿಸ್ತಿದೀರಾ?... ಇದ್ದಕ್ಕಿದ್ದ ಹಾಗೇ ಬಹಳ ಸೀರಿಯಸ್ ಆಗಿ ಬಿಟ್ಟಿದೀರಿ?" ಮನೆಯೊಳಗೆ ಬಂದು ಕುಳಿತ ನಂತರ ಕಾರ್ತಿಕ ಕೇಳಿದ.

"ಏನೂ ಇಲ್ಲಪ್ಪಾ, ಆ ಹುಡುಗಿ ಬಗ್ಗೆ ಯೋಚಿಸ್ತಿದ್ದೆ" ಮೃದುಲಾ ಎಂದಳು.

"ಯಾವ ಹುಡುಗಿ?" ಕುತೂಹಲದಿಂದ ಕೇಳಿದ.

"ರಾಶೀ... ಅವಳನ್ನು ನಮ್ಮ ಮನೆಗೆ ಕರ್‍ಕೊಂಡು ಬಂದು ಇಟ್ಕೊಂಡ್ರೆ ಹೇಗೆ ಅಂತ ಯೋಚಿಸ್ತಿದ್ದೆ..."

"ಏನು? ರಾಶೀನ? ಅವಳೇನೂ ಚಿಕ್ಕ ಮಗುವಲ್ಲ... ನಿಮ್ಮ ಮನೇಲಿ ಕರ್‍ಕೊಂಡು ಬಂದು ಇಟ್ಕೋಳ್ಳೋಕೆ..." ಅವಳ ಮಾತು ತಮಾಷೆಯಾಗಿ ಕಂಡಿತ್ತು.

"ಗೊತ್ತು... ಅವಳು ಬೆಳೆದ ಹುಡುಗಿ... ಆದರೆ, ತಾಯಿಯಿಲ್ಲದ ಹುಡುಗಿ ಅವಳ ವಿದ್ಯಾಭ್ಯಾಸ ಮುಗಿದಿಲ್ಲ. ಅವರ ಮನೆಯ ವಾತಾವರಣ ಸಧ್ಯಕ್ಕೆ ಸರಿ ಇಲ್ಲ. ಅವಳ ಓದಿಗೆ ತಕ್ಕ ಅನುಕೂಲಗಳಿಲ್ಲ"

"ಇದ್ದಕ್ಕಿದ್ದ ಹಾಗೆ ಅವರ ಮನೆಯ ಚಿಂತೆ ನಿಮಗೆ ಹೇಗೆ, ಯಾಕೆ ಬಂತು?"

"ಏನೋ ಅನ್ನಿಸ್ತು ಹೇಳ್ದೆ. ನಾನು ಒಂಟಿಯಾಗಿರಬಾರದು ಅಂತ. ಅತ್ತೆ ನಿನ್ನನ್ನ ನನ್ನ ಬಳಿ ಬಿಟ್ಟರು. ಈಗ ನೀನು ಬೆಳೆದು ದೊಡ್ಡವನಾಗಿದೀಯ... ಈಗ ನಂಗೂ ವಯಸ್ಸಾಗ್ತಾ ಬಂತು. ನೀನೂ ಬಿಸಿಯಾಗಿರ್ತೀಯ. ನನ್ನ ಜೊತೆಗೆ ಒಬ್ಬಳು ಹುಡುಗಿ ಇರಲಿ ಅಂತ ಆಸೆ ಆಗ್ತಿದೆ" ಕಾರ್ತೀಕನಿಗೆ ಅವಳ ತರ್ಕ ಸರಿ ಎನಿಸಲಿಲ್ಲ.

"ಅವಳು ಬಂದಿರಲು ಒಪ್ಕೋತಾಳಾ? ಅವರ ಮನೆಯವರು ಒಪ್ತಾರಾ?"

"ಒಂದು ಮಾತು ಕೇಳಿ ನೋಡ್ತೀನಿ. ಆ ಹುಡುಗಿಗೆ ನನ್ನ ಮೇಲೆ ಅತಿ ಗೌರವ. ಒಪ್ಪಿದರೂ ಒಪ್ಪಬಹುದು, ನೀನೇನಂತೀಯ?"

"ಆ ಮೇಲೆ ನನ್ನ ಗತಿ? ಆ ಹುಡುಗಿ ಜತೆ, ನಾನು ಇಲ್ಲಿರೋಕೆ ಆಗುಲ್ಲ. ಬೇರೆ ಮನೆ ಮಾಡ್ಕೊಂಡು ಹೊರಟು ಹೋಗ್ತೀನಿ ಅಷ್ಟೇ..."

"ಅದಕ್ಕೂ ಒಂದು ಉಪಾಯಾನ ಹುಡುಕಿದೀನಿ. ಅವಳಿಗೆ ಹದಿನೆಂಟು ವರ್ಷ ಆಗ್ತಿದ್ದ ಹಾಗೇ ಅವಳಿಗೆ ಮದುವೆ ಮಾಡ್ತೀನಿ. ಆಗ ಏನೂ ಪ್ರಾಬ್ಲಂ ಆಗುಲ್ಲ"

"ವಿಚಿತ್ರವಾಗಿದೆ ನಿಮ್ಮ ಮಾತು. ಅವಳು ಗಂಡನ ಮನೆಗೆ ಹೊರಟು ಹೋಗ್ತಾಳೆ. ಆಗ ನೀವು ಮತ್ತೆ ಒಂಟಿಯಾಗ್ತೀರಿ... ನಿಮ್ಮ ಮಾತುಗಳೇ ಅರ್ಥವಾಗ್ತಿಲ್ಲ"

"ನೀನು ಒಪ್ಪಿದರೆ ಎಲ್ಲವೂ ಸಾಧ್ಯ ಕಾರ್ತೀಕ್... ಅವಳು ನಿನಗೆ ತಕ್ಕವಳು ಅಂತ ನನಗನ್ನಿಸುತ್ತೆ. ಅವಳನ್ನು ನೀನು ಮದುವೆಯಾಗಿ ಬಿಡು. ನಾವೇ ಅವಳನ್ನು ಮುಂದಕ್ಕೆ ಓದಿಸೋಣ" ಕಾರ್ತಿಕ್ ಗೊಂದಲಕ್ಕೊಳಗಾದ.

"ಇಲ್ಲ, ಮೃದುಲಾ. ನನಗೆ ಈಗಲೇ ಮದುವೆ ಬೇಡ" ಎಂದ.

"ನೀನು ಚಿಕ್ಕವನೇನಲ್ಲ. ಮದುವೆ ವಯಸ್ಸಾಗಿದೆ. ಆ ಹುಡುಗಿಗೆ ಒಂದು ಆಸರೆ ಆಗುತ್ತೆ. ರಾಶಿಗೆ ತಾಯಿ ಇಲ್ಲ. ತಂದೆಗೆ ಆರೋಗ್ಯ ಚೆನ್ನಾಗಿಲ್ಲ. ಅಕ್ಕಂದಿರು ಮದುವೆಯಾಗಿ ಅವರವರ ಗಂಡಂದಿರ ಮನೆಗೆ ಹೊರಟು ಹೋಗ್ತಾರೆ..."

"ಎಲ್ಲಾ ಸರಿ, ನಿಮಗ್ಯಾಕೆ ಇಂಥಾ ಐಡಿಯಾಗಳು ಬರುತ್ತಿವೆಯೋ ನಂಗಂತೂ ಅರ್ಥವಾಗ್ತಿಲ್ಲ... ರಾಶೀ ತುಂಬಾ ಚಿಕ್ಕವಳು... ನನಗೆ ತಕ್ಕವಳಲ್ಲ"

"ಒಂದೇ ಥರದ ಈ ಲೈಫ್ ಬೋರ್ ಅಂತ ಅನ್ನಿಸ್ತಿದೆ. ಅದಕ್ಕೆ ಬೇರೆ ಥರದ ಬಣ್ಣ ಹಚ್ಚೋಣ ಅಂತ. ಈಚೀಚೆಗೆ ನಾನು ತುಂಬಾ ಒಂಟಿ ಅಂತ ತುಂಬಾ ಅನ್ನಿಸತೊಡಗಿದೆ. ನನ್ನ ಆಪ್ತರು ಒಬ್ಬರು ನನ್ನೊಂದಿಗೇ ಇರಲಿ ಅಂತ ಮನಸ್ಸು ಬಯಸ್ತಿದೆ"

"ಹಾಗಾದ್ರೆ ರಿಟೈರ್ ಆಗಿ ಬಿಡಿ. ಅಮ್ಮನ ಜೊತೆಯಲ್ಲಿ ಇದ್ದು ಬಿಡಿ"

"ಇಷ್ಟು ವರ್ಷಗಳೇ ನಾನು ಯಾರ ಮನೆಯಲ್ಲೂ ಇರಲಿಲ್ಲ... ಅದಕ್ಕೆ ನಾನು ಈಗಲೇ ಸಿದ್ಧಳಾಗಿಲ್ಲ. ನೀನು ನನ್ನ ಮಾತಿಗೆ ಒಪ್ತೀಯ ಅಂತ ಅಂದ್ಕೊಂಡಿದ್ದೆ. ನೀನು ನನಗೆ ನಿರಾಸೆ ಮಾಡ್ದೆ... ನಿನ್ನನ್ನು ಸಾಕಿ ಬೆಳೆಸಿರಬಹುದು... ಆಗ ಹದಿನೈದು ಹದಿನಾರು ವರ್ಷದ ಹುಡುಗ ನೀನು... ನನ್ನನ್ನು ತಾಯಿಯಂತೆ ನೋಡಲೇ ಇಲ್ಲ... ನಾನು ನಿನ್ನ ದೊಡ್ಡ ಕಸಿನ್ ಆಗಿಯೇ ಉಳಿದು ಬಿಟ್ಟೆ" ಮಾತುಗಳಲ್ಲಿ ನೋವು ಅಡಗಿತ್ತು.

"ಆದರೆ ನಾನೆಂದೂ ನಿಮ್ಮೊಡನೆ ಅಗೌರವವಾಗಿ ನಡೆದುಕೊಂಡಿಲ್ಲ... ನಿಮ್ಮ ಮಾತುಗಳನ್ನು ವಿರೋಧಿಸಿಲ್ಲ. ಆದರೆ ಈ ವಿಷಯದಲ್ಲಿ ಮಾತ್ರ ನನ್ನನ್ನು ಬಿಟ್ಟು ಬಿಡಿ ಪ್ಲೀಸ್..." ಅವನು ಎದ್ದು ಕಿಟಕಿಯ ಬಳಿ ಹೋಗಿ ನಿಂತ.

"ಸರಿ, ಹಾಗಾದ್ರೆ ಈ ಮಾತುಗಳು ಇಷ್ಟಕ್ಕೆ ಸಾಕು" ಕಾರ್ತಿಕ ಅವಳ ಕಡೆ ತಿರುಗಿದ.

"ಸಾರೀ ನಾನು ನಿಮ್ಮ ಮನಸ್ಸಿಗೆ ನೋವನ್ನುಂಟು ಮಾಡಿದೆ ಅಂತ ಕಾಣುತ್ತೆ. ನಾನೂ ನಿಮಗೆ ಒಂದು ವಿಷಯವನ್ನು ಹೇಳ್ಬೇಕು ಅಂತ ಅಂದ್ಕೊಂಡಿದ್ದೆ, ಹೋಗ್ಲಿ ಬಿಡಿ... ಇವತ್ತು ಬೇಡ... ಇನ್ನೆಂದಾದ್ರೂ ಹೇಳ್ತೀನಿ"

"ಅದೇನು ಹೇಳು ಪರವಾಗಿಲ್ಲ..." ಒತ್ತಾಯ ಮಾಡಿದಳು.

"ನಾನು ಒಬ್ಬ ಹುಡುಗೀನ ಇಷ್ಟ ಪಟ್ಟಿದೀನಿ. ಅವಳನ್ನೇ ಮದುವೆಯಾಗ್ಬೇಕು ಅಂತ ಅಂದ್ಕೊಂಡಿದೀನಿ..."

"ಹೂಂ... ನಂಗೆ ಮೊದಲೇ ಅನುಮಾನ ಬಂದಿತ್ತು..."

"ಹೌದಾ? ನಿಮಗೆ ಯಾಕೆ ಹಾಗೆ ಅನ್ನಿಸ್ತು?..."

"ಅದೆಲ್ಲಾ... ಹೆಂಗಸರಿಗೆ ಸುಲಭವಾಗಿ ಗೊತ್ತಾಗುತ್ತೆ ಕಣಪ್ಪಾ"

"ಹಾಗಾದ್ರೆ, ಆ ಹುಡುಗಿ ಯಾರು ಅಂತ ಸಹ ಗೊತ್ತಾಗಿರಬಹುದು ಅಲ್ವಾ?"

"ಊಹಿಸಿದೀನಿ, ಆದರೂ ನೀನೇ ಹೇಳು... ನಿನ್ನ ಬಾಯಿಂದ್ಲೇ ಬರಲಿ"

"ಕ್ಷೀರಾ... ಅದೇ ನನ್ನ ಆಫೀಸ್ನಲ್ಲಿ ಕೆಲಸ ಮಾಡ್ತಾಳಲ್ಲ... ಅವಳು" ಅವನ ಉತ್ಸಾಹವನ್ನು ಗಮನಿಸಿದಳು.

"ರಾಶಿಯ ಅಕ್ಕ... ನೋಡೋಕೆ ತುಂಬಾನೇ ಚೆನ್ನಾಗಿದಾಳೆ. ಹೆಸರಿಗೆ ತಕ್ಕ ಹಾಗೆ ಚೆನ್ನಾಗಿದಾಳೆ ಅಲ್ವಾ?"

"ತುಂಬಾ ಒಳ್ಳೆಯ ನೇಚರ್. ಅವತ್ತೇ ಅವಳ ಬಗ್ಗೆ ಹೇಳಿದ್ನಲ್ಲ"

"ರಫ್ ಆಗಿ ಮಾತನ್ನಾಡಿ, ಅವಳ ಮನಸ್ಸಿಗೆ ಬೇಸರ ಮಾಡಿ... ಆನಂತರ ಸಾರಿ ಕೇಳ್ಕೊಂಡು ಸ್ನೇಹ ಬೆಳೆಸಿಕೊಂಡು... ಈಗ... ಪ್ರೀತಿ... ಮದುವೆ... ಹೂಂ..."

"ಹಾಗೇನೂ ಇಲ್ಲ, ಅವಳಿಗೆ ತಾಯಿಯಿಲ್ಲ. ತಂದೆ ಬೆಡ್ ರಿಡನ್, ಅಂತ ತಿಳಿದಾಗ ಅವಳ ಬಗ್ಗೆ ಅನುಕಂಪ ಹುಟ್ತು. ಅವಳನ್ನು ಮದುವೆಯಾಗಿ ಅವಳಿಗೆ ಒಂದು ನೆಲೆಯಾಗೋಣ ಅಂತ ಅನ್ನಿಸ್ತು..."

"ಈಗ ಸ್ವಲ್ಪ ಹೊತ್ನಲ್ಲಿ ಹೇಳ್ದೆ... ಸಧ್ಯಕ್ಕೆ ಮದುವೆ ಬೇಡ ಅಂತ"

"ಈಗ್ಲೂ ಅದನ್ನೇ ಹೇಳ್ತೀನಿ... ನಿಧಾನವಾಗಿ ಮದುವೆ ಆಗ್ತೀನಿ... ನೀವು ರಾಶೀನ ಪ್ರಪ್ಲೋಸ್ ಮಾಡಿದ್ರಲ್ಲ... ಅದರಿಂದ ಹೇಳಬೇಕಾಯ್ತು... ನಾನು ಅವಳ ಅಕ್ಕನ್ನ ಪ್ರೀತಿಸ್ತಿದೀನಿ. ಅವಳನ್ನು ಹೇಗೆ ಮದುವೆಯಾಗ್ಲೀ...?"

"ನಿನ್ನ ಮನಸ್ನಲ್ಲಿ ಏನಿದೆ ಅಂತ ಇದರಿಂದ ತಿಳೀತು... ಇಲ್ದಿದ್ರೆ ನಂಗೆ ಹೇಳ್ತಿದ್ಯೋ ಇಲ್ವೋ...?"

"ನಿಮಗೆ ಹೇಳ್ದೇ ಇರ್ತಿದ್ನಾ? ಮೊದಲು ಅವಳ ಮನಸ್ನಲ್ಲಿ ಏನಿದೆ ಅಂತ ತಿಳ್ಕೋಬೇಕು. ಅವಳ ಹತ್ರ ಈ ವಿಷಯವನ್ನು ಎತ್ತೇ ಇಲ್ಲ. ಕೇಳೋದು ಹೇಗೆ ಅಂತ ಸುಮ್ಮನಿದೀನಿ"

ಪ್ರೀತಿಯಲ್ಲಿ ತಡ ಇರಬಾರದು. ನಿಧಾನಿಸುವುದು ಒಳ್ಳೇದಲ್ಲ. ಆದಷ್ಟು ಬೇಗ ಅವಳ ಜೊತೆ ಮಾತನಾಡು. ಹೊರಗೆ ಎಲ್ಲಾದ್ರೂ ಕರ್ಕೊಂಡು ಹೋಗಿ, ಉಪಾಯವಾಗಿ ಅವಳ ಮನಸ್ನಲ್ಲಿ ಏನಿದೆ ಅಂತ ತಿಳ್ಕೋ..." ಕಾರ್ತೀಕ ಅವಳನ್ನೇ ವಿಸ್ಮಯದಿಂದ ನೋಡಿದ.

"ನಾನು ಅವಳ ಬಾಸ್... ಅವಳು ನನ್ನ ಸಬಾರ್ಡಿನೇಟ್.. ನಾನು ಅವಳ ಜೊತೆ ಹೇಗೆ ಸುತ್ತಾಡಲಿ?"

"ಇವತ್ತು ಅವಳ ಮನೆಗೆ ಬಂದಿದ್ದೆಯಲ್ಲಾ... ನಿಂಗೆ ಗೊತ್ತಿತ್ತು ಅಲ್ವಾ?"

"ಇಲ್ಲ, ನನಗೆ ಖಂಡಿತಾ ಗೊತ್ತಿರಲಿಲ್ಲ. ಅವಳು ನಿಮ್ಮ ಸ್ಟೂಡೆಂಟ್‌ಗೆ ಅಕ್ಕ ಅಂತ ತಿಳಿದದ್ದು ಇವತ್ತೇ... ಅದೂ ಅಲ್ಲಿ ಅವಳನ್ನು ನೋಡಿದಾಗ..."

"ನಾನು ನಿನ್ನನ್ನು ನಂಬ್ತೀನಿ... ನೀನು, ನಾನು ಬೆಳೆಸಿರೋ ಹುಡುಗ. ನಿನ್ನ ಮನಸ್ನಲ್ಲಿ ಏನಿದೆ ಅಂತ ತಿಳ್ಕೊಳ್ಳೋಕೆ ನಾನು ಈ ವಿಷಯವನ್ನು ಎತ್ತಿದ್ದು... ಓ...ಕೇ... ನೀನು. ಆದಷ್ಟು ಬೇಗ ಕ್ಷೀರಾಳ ಹತ್ರ ಮಾತನ್ನಾಡಿ. ಅವಳ ಮನಸ್ಸಲ್ಲಿ ಏನಿದೆ ಅಂತ ತಿಳ್ಕೋ... ಹಾಗೆ ನಿನ್ನ ತಂದೆ ತಾಯಿ ಹತ್ರಾನೂ ಮಾತ್ನಾಡು. ಅವರು ಈ ಸಂಬಂಧಾನ ಇಷ್ಟ ಪಡ್ತಾರಾ ಅಂತ ಗೊತ್ತಾಗ್ಬೇಕಲ್ಲ"

"ಈ ವಿಷಯದಲ್ಲಿ ನೀವು ನನಗೆ ಹೆಲ್ಪ್ ಮಾಡ್ಬೇಕು. ಅಮ್ಮನ್ನ ನೀವು ಒಪ್ಪಿಸ್ಬೇಕು. ಅಪ್ಪ ಒಪ್ತಾರೆ ಅನ್ನೋ ನಂಬಿಕೆ ನನಗಿದೆ"

"ಇದಕ್ಕೆ ನನ್ನನ್ನು ಎಳೀಬೇಡಪ್ಪಾ. ಈ ಮದುವೆ ವಿಷಯದಲ್ಲಿ ನನಗೆ ತಿಳುವಳಿಕೆ, ಅನುಭವ ಎರಡೂ ಕಡಿಮೆ"

"ನಾನೊಂದು ಮಾತು ಕೇಳ್ಲಾ? ತಪ್ಪು ತಿಳ್ಕೋಬಾರ್ದು. ನೀವ್ಯಾಕೆ ಮತ್ತೆ ಮದುವೆಯಾಗ್ಲಿಲ್ಲ?"

"ಆಗ್ಬೇಕು ಅಂತ ಅನ್ನಿಸ್ಲಿಲ್ಲ, ಆಗ್ಲಿಲ್ಲ. ನನ್ನ ವಿಷಯ ಈಗ್ಯಾಕೆ ಬಿಡು" ಹಾಗೆ ಬಾಯಿ ಹೇಳಿದರೂ ಮನಸ್ಸು ಅದೇ ವಿಷಯವನ್ನು ಕುರಿತು ಯೋಚಿಸಿತ್ತು.

* * *

8

"ಮೃದುಲಾ ಮೇಡಂ ಕರೀತಿದಾರೆ. ರಾಶೀ ಅನ್ನೋರು ಬರ್ಬೇಕಂತೆ" ಅಟೆಂಡರ್ ಲೇಡೀಸ್ ರೂಂಗೆ ಬಂದು ಹೇಳಿದ. ರಾಶಿ ಕೀರ್ತಿಯ ಕಡೆ ನೋಡಿದಳು. ಹುಡುಗಿಯರು ತಮ್ಮ ತಮ್ಮಲ್ಲೇ ಮಾತನಾಡಿಕೊಂಡರು. ಕೀರ್ತಿ ನಗುತ್ತಾ ಕೇಳಿದಳು.

"ಅದೇನೇ ರಾಶೀ... ಮೃದುಲಾ ಮೇಡಂ ನಿನ್ನನ್ನ ಕರೆದೂ ಕರೆದೂ ಮಾತನ್ನಾಡಿಸ್ತಾರಲ್ಲಾ... ನೀನು ಅವರ ರಿಲೇಟಿವ್ವಾ?"

"ಇಲ್ಲಪ್ಪಾ.. ಏನೂ ರಿಲೇಷನ್ಇಲ್ಲ. ಇಲ್ಲೇ ಕಾಲೇಜ್ನಲ್ಲೇ ಅವರನ್ನು ಮೊದಲು ನೋಡಿದ್ದು. ಈಗೇನು ಮಾಡ್ಲೀ?" ಹೋಗ್ಲೋ ಬೇಡ್ವೋ?"

"ಬುಲಾವಾ ಆಯಾ ಹೈ ಜಾನಾ ಹೀ ಪಡೇಗಾ..." ಹಿಂದಿನಿಂದ ರಶ್ಮಿ ಮುಖ ಸೊಟ್ಟ ಮಾಡಿ ಹೇಳಿದಾಗ, ರಾಶಿ ಅಸಹಾಯಕತೆಯಿಂದ ನೋಡಿದಳು.

"ಕರೆದಾಗಲೆಲ್ಲಾ ಹೋಗಿದೀಯ. ಈಗ ಮಳ್ಳಿ ಹಾಗೆ ಮುಖ ಮಾಡಿ ಪ್ರಶ್ನೆ ಕೇಳ್ಬೇಡ." ಸ್ಮಿತಾ ತಿವಿದು ನುಡಿದಳು.

"ಸುಮ್ಮನೇ ಹೋಗ್ಬಾ ರಾಶಿ... ಹೀಗೇ ನಿಂತಿದ್ರೆ ಇವರೆಲ್ಲಾ ಚುಡಾಯಿಸ್ತಾನೇ ಇತ್ತಾರೆ. ಯಾವುದೋ ಸ್ಕಾಲರ್‌ಷಿಪ್‌ಗೆ ಅಪ್ಲೈ ಮಾಡಿಸಬಹುದು. ನಿನ್ನ ಬಗ್ಗೆ ಅವರಿಗೆ ಕೇರ್ ಜಾಸ್ತಿ."

"ಅದೇ ಯಾಕೇ ಅಂತ... ನೋಡೋಕೆ ಲವ್ಲೀ ಯಾಗಿದಾಳೆ ಅಂತಲೋ ಇನ್ನೊಸೆಂಟ್ ಆಗಿದಾಳೆ ಅಂತ್ಲೋ" ಮೈತ್ರಿ ವ್ಯೆಯಾರದಿಂದ ಕೇಳಿದಳು.

"ಪ್ಲೀಸ್...ಮೈತ್ರೀ ನೀನು ಹೀಗೆಲ್ಲಾ ಮಾತಾಡ್ಬೇಡ. ನಂಗೆ ಇಷ್ಟವಿಲ್ಲ. "

"ಮತ್ತೆ ಹೇಗೆ ಮಾತಾಡಿದ್ರೆ ನಿಂಗೆ ಇಷ್ಟವಾಗುತ್ತೆ ಅಂತ ಹೇಳ್ತೀಯಾ?"

ಮೈತ್ರಿ ಅವಳ ಗಲ್ಲವನ್ನಾ ಚಿವುಟಿದಳು. "ಏನ್ಮಾಡ್ತೀಯ? ಮೇಡಂಗೆ ಚಾಡಿ ಹೇಳ್ತೀಯಾ?"

ಏಯ್ ಬಿಡ್ರೇ ಅವಳನ್ಯಾಕೆ ಹಾಗೆ ಗೋಳು ಹೊಯ್ದುಕೊಳ್ತೀರಿ.....ಬೇರೆ ಊರ್ನಿಂದ ಬಂದೋಳು ಅಂತ ರ್‍ಯಾಗಿಂಗ್ ಮಾಡಿದ್ದೇ ಮಾಡಿದ್ದು. ಮೇಡಂನ ಸಪೋರ್ಟ್

ಇಲ್ದೇ ಇದ್ದಿದ್ರೇ. ಅವಳು ಇಷ್ಟು ಹೊತ್ಗೆ ಸೂಯಿಸೈಡ್ ಮಾಡಿಕೊಂಡಿರೋಳು.."ಶ್ವೇತಾ ನುಡಿದಾಗ, ರಾಶಿಯ ಕಣ್ಣುಗಳು ನೀರಾಡಿದ್ದವು.

"ಅಂಥಾದ್ದೇನಾಗಿದೆ ಇವಳಿಗೆ! ವಿಲನ್ ಇದ್ದ ಹಾಗಿದ್ದಾಳೆ. ಬಂದಾಗ ಕುರಿ ಮರಿ ಥರ ಇದ್ಲು. ಮೇಡಂ ಸಪೋರ್ಟ್ ಸಿಕ್ಕ ಮೇಲೆ ಸಿಂಹದ ಮರಿ ಆಗಿದಾಳೆ. ಒಂದಿಷ್ಟು ಚುಡಾಯಿಸಿದರೆ ನಿಮ್ಮ ಗಂಟೇನು ಹೋಗುತ್ತೆ?" ಎಲ್ಲರೂ ನಕ್ಕರು.

"ನಡೀ ರಾಶೀ.. ಇನ್ನು ಇಲ್ಲೇ ನಿಂತಿದ್ರೆ ನಿನ್ನನ್ನು ತಿಂದೇ ಹಾಕಿಬಿಡ್ತಾರೆ. ಕೀರ್ತಿ ಅವಳನ್ನು ಎಳೆದುಕೊಂಡು ಹೊರಬಂದಳು. ರಾಶಿ ಕಣ್ಣುಗಳನ್ನೊರೆಸಿಕೊಂಡಳು. ಒಳಗಿನಿಂದ ಹುಡುಗಿಯರ ಜೋರು ನಗೆ ಕೇಳಿಸಿತ್ತು.

"ಇವರೆಲ್ಲಾ ನನ್ನನ್ಯಾಕೆ ಹೀಗೆ ಸತಾಯಿಸಾರ್ತೆ? ನಾನೇನು ಮಾಡ್ದೆ?"

"ಅವರಿಗೆಲ್ಲಾ ಮಾಡುಕ್ಕೆ ಕೆಲಸವಿಲ್ಲ. ಟೈಂ ಪಾಸ್ ಮಾಡೋಕೆ ಕಾಲೇಜಿಗೆ ಬರ್ತಾರೆ. ಆಡಿ ಆಡಿ ಬೇಜಾರಾಗಿ ಅವರೇ ಸುಮ್ಮನಾಗ್ತಾರೆ. ನೀನು ಸುಮ್ಮನಿದ್ದು ಬಿಡು ಮಾತನಾಡಲೇ ಬೇಡ" ಕೀರ್ತಿ ಸಲಹೆಯನ್ನಿತ್ತಳು. ಮೃದುಲಾಳ ಸ್ಟಾಫ್‌ರೂಂ ಮಹಡಿಯ ಮೇಲಿತ್ತು. ಇಬ್ಬರೂ ಮೆಟ್ಟಿಲು ಹತ್ತಿದರು.

* * *

9

"ಮೇ ಐ ಕಮಿನ್ ಸಾರ್" ಛೇಂಬರ್ ಬಾಗಿಲ ಬಳಿ ನಿಂತು, ಬಾಗಿಲನ್ನು ಸ್ವಲ್ಪವೇ ಸರಿಸಿ ಕ್ಷೀರಾ ಕೇಳಿದಳು.

"ಯೆಸ್ ಕಮಿನ್" ಕಾರ್ತಿಕ ತಲೆ ಎತ್ತಿ ಅವಳನ್ನು ನೋಡಿ ಮಂದಹಾಸವನ್ನು ಬೀರಿ ಕೇಳಿದ. "ಏನು ಬೇಕಾಗಿತ್ತು ಕ್ಷೀರಾ?" ಅವಳು ಒಳಗೆ ಬಂದಳು.

"ನನಗೆ ಅರ್ಧ ದಿನ ರಜ ಬೇಕಾಗಿತ್ತು ಸಾರ್..." ವಿನೀತಳಾಗಿ ಕೇಳಿದಳು.

"ರಜ ಬೇಕಾಗಿತ್ತಾ? ಓ.. ಕೇ.. ಪಂಕಜಾಗೆ ಹೇಳ್ಬಿಟ್ಟು ಹೋಗ್ಬಹುದಾಗಿತ್ತು. ಅದಕ್ಕೆ ನನ್ನನ್ನು ಕೇಳುವ ಅಗತ್ಯವಿರಲಿಲ್ಲ" ಅವಳು ಪೆಚ್ಚಾದಳು.

"ಹೌದು, ಸಾರ್. ಆದರೆ ಈ ಲೆಟರ್‌ನ ನಿಮಗೆ ಕೊಡಬೇಕಾಗಿತ್ತು. ಅದಕ್ಕೆ ನಾನೇ ಬಂದೆ. ಆಮೇಲೆ, ನಾನು ಹೋದ್ಮೇಲೆ ಓದಿ ಸಾರ್" ಅವನ ಕೈಗೆ, ಅಂಟಿಸಿದ್ದ ಒಂದು ಕವರನ್ನು ಕೊಟ್ಟಳು. ಅವನು ಕೈಗೆ ತೆಗೆದುಕೊಂಡು ತಿರುಗಿಸಿ ನೋಡಿದ.

"ಏನು ಲೆಟರ್? ರೆಸಿಗ್ನೇಷನ್ನಾ?" ಮುಗುಳ್ನಕ್ಕ.

"ಬೇರೆ ಕೆಲಸ ಸಿಗುವವರೆಗೂ, ರೆಸಿಗ್ನೇಷನ್ ಕೊಟ್ಟು ಮನೆಯಲ್ಲೇ ಕೂತಿರುವ ಪರಿಸ್ಥಿತಿಯಲ್ಲಿ ನಾನಿಲ್ಲ ಸಾರ್" ಅವಳು ಗಂಭೀರವಾಗಿದ್ದಳು. ಅವಳನ್ನು ನೋಡಿ ಅಯ್ಯೋ ಎನಿಸಿತ್ತು. ಮಾತನಾಡಬೇಕೆನ್ನಿಸಿತ್ತು.

"ಓ.. ಕೆ.. ಒಂದ್ನಿಮಿಷ ಕೂತ್ಕೊಳ್ಳಿ. ನಾನು ಏನನ್ನೋ ಕೇಳ್ಬೇಕಾಗಿತ್ತು" ಅವನೆಂದ. ಅವಳ ಎದೆ ಸಣ್ಣದಾಗಿ ಹೊಡೆದುಕೊಂಡಿತ್ತು. ಕರವಸ್ತ್ರದಿಂದ ಮುಖವನ್ನು

ಒರೆಸಿಕೊಳ್ಳುತ್ತಾ, ಅವನ ಎದುರಿನ ಕುರ್ಚಿಯ ಮೇಲೆ ಕುಳಿತಳು. "ನೀರು ಬೇಕಾ?" ಕೇಳಿದ. ಬೇಡ ಎನ್ನುವಂತೆ ತಲೆಯಾಡಿಸಿದಳು.

"ನಿಮ್ಮ ತಂಗಿ ಮುಂದೆ ಏನ್ಮಾಡ್ಬೇಕು ಅಂತ ಅಂದ್ಕೊಂಡಿದಾರೆ?"

"ಯಾಕೆ?" ಹುಬ್ಬುಗಂಟಿಕ್ಕಿದಳು. ಮಾತು ಒರಟಾಗಿತ್ತು.

"ಸುಮ್ಮನೇ ಕೇಳಿದೆ. ಅವರ ಮೇಡಂಗೆ ಅವರನ್ನ ಕಂಡ್ರೆ ಬಹಳ ಅಕ್ಕರೆ. ಮೆಚ್ಚುಗೆ. ರಾಶಿ ಬಗ್ಗೆ ಏನಾದ್ರೂ ಹೇಳ್ತಾನೇ ಇರ್ತಾರೆ.. ಅದಕ್ಕೆ ಕೇಳಿದೆ"

"ಅದಕ್ಕೇ.. ನಿಮಗೂ ರಾಶಿ ಬಗ್ಗೆ ಕುತೂಹಲಾನಾ?"

"ಕುತೂಹಲ ಏನಿಲ್ಲ. ಸ್ವಲ್ಪ ಅಸೂಯೆ ಆಯ್ತು" ಒಂಥರಾ ನಕ್ಕ.

"ಅಸೂಯೇನಾ?... ಯಾಕೆ? ಹುಡುಗಿ ಚೆನ್ನಾಗಿದಾಳೆ. ಚಿಕ್ಕವಳು ಅಂತಲಾ?"

"ಹಾಗೇನಿಲ್ಲ." ಎಂದ. ಅವಳಿಗಿಂತ ನೀವು ಚೆನ್ನಾಗಿದ್ದೀರಿ ಎಂದು ಹೇಳ ಬೇಕೆಂದುಕೊಂಡವನು ಅವಳ ಸಿಡುಕು ಮುಖವನ್ನು ಕಂಡು ಮಾತನ್ನಾ ನಿಲ್ಲಿಸಿದ.

"ರಾಶಿಯ ಬಗ್ಗೆ ಏನೇನೋ ಆಸೆಗಳನ್ನು ಇಟ್ಕೋ ಬೇಡಿ. ಹಾಗಂತ ನಿಮ್ಮ ಮೇಡಂಗೂ ಹೇಳ್ಬಿಡಿ"

"ಏನು!..." ರಾಶೀ ಬಗ್ಗೆ ನನಗೆ... ಏನು ಆಸೆ? ಅವಳು ನಮ್ಮ ತಂಗಿ ಅನ್ನೋ ಆಸಕ್ತಿ ಇದೆ ಅಷ್ಟೇ. ಮೃದುಲಾ ಮನಸ್ನಲ್ಲಿ ಏನಿದೆಯೋ ನಂಗೇನು ಗೊತ್ತು?

"ಅಂದ್ರೇ.... ನಿಮಗೇನೂ ಗೊತ್ತಿಲ್ವಾ? ರಾಶೀನ ಕಾರ್ನಲ್ಲಿ ಕೂರಿಸ್ಕೊಂಡು ಎಲ್ಲೆಲ್ಲೋ ಸುತ್ತಾಡಿಸ್ತಾರಲ್ಲ.. ಅದಕ್ಕೆ ಏನು ಅರ್ಥ ಅಂತ ನಿಮಗೂ ಗೊತ್ತಿಲ್ವಾ?"

"ಪ್ಲೀಸ್... ಏನೇನೋ ಅಪಾರ್ಥವನ್ನು ಕಲ್ಪಿಸಬೇಡಿ. ರಾಶಿ ನಿಮಗೆ ಹೇಗೆ ತಂಗಿಯೋ ನನಗೂ ಹಾಗೇ ತಂಗಿಯ ಸಮಾನ" ಅವನೂ ಸ್ವಲ್ಪ ಖಾರವಾಗಿ ನುಡಿದ. ಅವಳ ಮುಖ ಕಪ್ಪಿಟ್ಟಿತು, ಅವಮಾನವಾದಂತಾಗಿತ್ತು. ಅವಳ ಕಡೆ ನೋಡಿ ಸ್ವಲ್ಪ ತಗ್ಗಿದ. ನಿಮ್ಮ ಮನಸ್ನಲ್ಲಿ ಏನಾದ್ರೂ ಕೆಟ್ಟ ಆಲೋಚನೆ ಇದ್ರೆ, ಈಗಲೇ ತೆಗೆದು ಹಾಕಿಬಿಡಿ. ಪ್ಲೀಸ್... ಇನ್ನು ನೀವು ಹೋಗಿ"

"ಸಾರೀ... ಸಾರ್... ನಿಮ್ಮ ಮನಸ್ಸಿಗೆ ಬೇಸರ ಮಾಡುವ ಉದ್ದೇಶ ಇರಲಿಲ್ಲ"

"ಓ.ಕೇ. ನಿಮ್ಮ ಪರಿಸ್ಥಿತಿ ಏನೂಂತ ನಂಗೂ ಅರ್ಥವಾಗುತ್ತೆ. ರಾಶಿ ಚಿಕ್ಕ ಹುಡುಗಿ. ಅವಳ ಜವಾಬ್ದಾರಿ ನಿಮ್ಮ ಮೇಲಿದೆ. ಏನೋ ಅವ್ಯಕ್ತ ಭಯ ಕಾಡುತ್ತೆ, ಸಹಜ"

"ಸಾರೀ ಸಾರ್..." ಎಂದು ಮತ್ತೊಮ್ಮೆ ಹೇಳುತ್ತಾ, ಟೇಬಲ್ ಮೇಲಿದ್ದ ಕವರನ್ನು ಮೆಲ್ಲಗೆ ತೆಗೆದಿಟ್ಟುಕೊಂಡಳು. ಅವನು ಅದನ್ನು ಗಮನಿಸಿದರೂ ಸುಮ್ಮನಿದ್ದ.

"ನಿಮ್ಮ ಭಾವ ನಿಮ್ಮ ಹತ್ರ ಮಾತ್ನಾಡಿದರೆ, ನಿಮ್ಮ ಅಕ್ಕ ಸಂಶಯದಿಂದ ನೋಡ್ತಾರಾ?... ಅಂದ್ರೇ ಅವರು ಅಪಾರ್ಥ ಮಾಡ್ಕೋತಾರಾ?"

"ಇಲ್ಲ, ನಮ್ಮ ಭಾವನೇ ನಮ್ಮ ಮನೆಗೆ ಹಿರಿಯ ಮಗನಂತೆ. ನಮ್ಮಿಬ್ಬರಿಗೂ ಅಣ್ಣನಿದ್ದ ಹಾಗೆ"

"ಹಾಗೇ... ನಾನೂ ನಿಮ್ಮ ರಾಶಿಗೆ ಅಣ್ಣನ ಥರ. ನನಗೆ ಅವರ ಬಗ್ಗೆ ಬೇರೆ ಯಾವ ಭಾವನೆಯೂ ಇಲ್ಲ. ನೀವಿನ್ನು ಹೋಗಬಹುದು" ಅವಳು ಹಾಗೇ ಕೂತಿದ್ದಳು.

"ಈ ವಿಷಯವನ್ನು ನಿಮ್ಮ ಕಸಿನ್‌ಗೆ ಹೇಳ್ಬೇಡಿ"

"ಇಲ್ಲ, ಹೇಳುಲ್ಲ. ಆದರೆ ಒಂದ್ಮಾತು ಕೇಳ್ಲಾ?"

"ಹುಂ, ಕೇಳಿ..."

"ರಾಶಿಯ ಬಗ್ಗೆ ನೀವು ಯೋಚಿಸುವ ಹಾಗೆ, ನಿಮ್ಮ ಅಕ್ಕ ಸಾಕ್ಷೀ. ನಿಮ್ಮ ಬಗ್ಗೆ ಯೋಚಿಸುಲ್ವಾ?"

"ಏನೋ ಗೊತ್ತಿಲ್ಲ, ಅಲ್ಲದೇ ನಾನು ರಾಶಿಯ ಥರ ಏನೂ ಅರಿಯದ ಹುಡುಗಿಯಲ್ಲ. ನಂಗೆ ಜವಾಬ್ದಾರಿಗಳಿವೆ"

"ಯೆಸ್, ಐ ನೋ. ಅದಕ್ಕೇ ನಾನು ನಿಮ್ಮನ್ನು ಇಷ್ಟಪಡ್ತೀನಿ" ಅವಳು ಸುಮ್ಮನೇ ಮಿಕಿ ಮಿಕಿ ಅವನನ್ನೇ ನೋಡಿದಳು.

"ಯೆಸ್ ಕ್ಷೀರಾ... ನಾನು ನಿಮ್ಮನ್ನು ಲೈಕ್ ಮಾಡ್ತೀನಿ"

"ಸಾರ್... ನೀವು ನನ್ನ ಬಾಸ್. ನೀವು ಹೀಗೆಲ್ಲಾ ಮಾತನಾಡಬಾರದು" ಆದರೂ ಅವಳಿಗೆ ಒಳಗೊಳಗೇ ಖುಷಿಯಾಗಿತ್ತು.

"ನನ್ನ ಮನಸ್ನಲ್ಲಿ ಇರೋದನ್ನ ಹೇಳ್ದೆ. ನಿಮಗೆ ಒಪ್ಪಿಗೆ ಇದ್ದರೆ ನಾನು ನಿಮ್ಮನ್ನು ಮದುವೆ ಆಗ್ತೀನಿ" ಅವಳ ಮುಖ ನಾಚಿಕೆಯಿಂದ ಕೆಂಪಾಗಿತ್ತು.

"ಕೋಪಾನಾ? ಅಥವಾ ನಾಚಿಕೇನಾ?... ಕುಂಕುಮ ಕೇಸರಿಯನ್ನು ಹಾಕಿ ಕದರಿದ ಹಾಲಿನಂತಾಗಿದೆ ನಿಮ್ಮ ಮುಖ" ಅವನು ಮೆಚ್ಚುಗೆಯ ನುಡಿಗಳನ್ನಾಡಿದ. ಅವಳು ಮುಜುಗರದಿಂದ ಎದ್ದು ನಿಂತಳು.

"ನನ್ನ ಕಾಂಪ್ಲಿಮೆಂಟ್ಸ್‌ಗೆ ಥ್ಯಾಂಕ್ಸ್ ಹೇಳೋದನ್ನು ಬಿಟ್ಟು ಕೋಪಗೊಂಡು ಉರಿದು ಹೋಗ್ತಿದೀರಲ್ಲ. ನಾನು ನಿಮ್ಮನ್ನು ಮೆಚ್ಚಿದೀನಿ. ನೀವೂ ನನ್ನನ್ನು ಮೆಚ್ಚಲೇ ಬೇಕು ಅಂತೇನಿಲ್ಲ. ನಾನು ಬಲವಂತ ಮಾಡುವುದಿಲ್ಲ. ನಿಧಾನವಾಗಿ ಯೋಚಿಸಿ ನಿಮ್ಮ ನಿರ್ಧಾರವನ್ನು ತಿಳಿಸಿ. ನನಗೆ ಯಾವ ಅವಾಂತರವೂ ಇಲ್ಲ" ತಾನು ಹೇಳಬೇಕಾದುದನ್ನು ಹೇಳಿಯಾಯ್ತೆಂಬ ನೆಮ್ಮದಿ ಅವನ ಮುಖದ ಮೇಲಿತ್ತು. ಅವನ ಕಡೆ ನೋಡದೇ ಅವನ ಛೇಂಬರ್‌ನಿಂದ ಹೊರಬಂದಳು. ಅವನು ಅವಳ ಹಿಂದೆ ತುಂಟತನದಿಂದ ನಗುತ್ತಿರಬಹುದೇನೋ ಅಂತೆನ್ನಿಸಿ ಅವಳ ಮುಜುಗರ ಮತ್ತೂ ಹೆಚ್ಚಾಗಿತ್ತು. ತನ್ನಲ್ಲಿದ್ದ ಕವರನ್ನು ಒಳಗಿನ ಕಾಗದದ ಸಮೇತ ಚೂರು ಚೂರಾಗಿ ಹರಿದು ಕಸದ ಬುಟ್ಟಿಗೆ ಎಸೆದಳು. ಮನದ ಮೂಲೆಯಲ್ಲಿದ್ದ ಸಂಶಯ ನಿವಾರಣೆ ಆಗಿತ್ತು.

* * *

10

"ಯಾಕೇ ಇಷ್ಟು ಲೇಟು ಕ್ಷೀರಾ?... ಆಫೀಸ್ಗೆ ಫೋನು ಮಾಡಿದ್ದೆ... ನೀನು ಅರ್ಧ ದಿನ ರಜ ಹಾಕಿ ಮನೆಗೆ ಹೊರಟು ಹೋದೆ ಅಂತ ಹೇಳಿದ್ರು" ಸಾಕ್ಷೀ ಪ್ರಶ್ನಿಸಿದಾಗ ಕ್ಷೀರಾ ಅಸಹನೆಯಿಂದ ಅಕ್ಕನ ಕಡೆಗೆ ತಿರುಗಿದಳು.

"ನನ್ನ ಫ್ರೆಂಡ್ ಮನೆಗೆ ಹೋಗಿದ್ದೆ. ಅಂಥ ಅರ್ಜೆಂಟೇನಿತ್ತು ನಿನಗೆ?" ಸಿಡುಕಿದಳು.

"ಅದೇ... ರಾಜೀ ಅಂತ ನನ್ನ ಕ್ಲಾಸ್‌ಮೇಟ್ ಇದ್ದಲ್ಲ, ಅವಳು ನಮ್ಮ ಮನೆಗೆ ಬಂದಿದ್ಲು. ಅವಳ ತಂದೆಗೂ, ಅಪ್ಪಂಗೆ ಆಗಿರುವ ಹಾಗೇ ಆಗಿತ್ತಂತೆ. ಚನ್ನಪಟ್ಟಣದ ಹತ್ರ ಯಾರೋ ವೈದ್ಯರಿದಾರಂತೆ. ಅವಳು ನನ್ನನ್ನು ತನ್ನ ಮನೆಗೆ ಕರ್ಕೊಂಡು ಹೋಗಿದ್ಲು. ಅವಳ ತಂದೇನ ನೋಡಿ ಮಾತನಾಡಿಸ್ಕೊಂಡು ಹಾಗೇ ಅವಳು ಕೊಟ್ಟ ಅಡ್ರೆಸ್‌ನೂ ತಗೊಂಡು ಬಂದೆ. ಈಗ ಅವರ ತಂದೆಗೆ ಎಷ್ಟೋ ಇಂಪ್ರೂವ್ ಆಗಿದೆ ಅಂತ ರಾಜಿ ಹೇಳಿದ್ಲು"

"ಫೋನು ಮಾಡಿ ಹೇಳ್ಬಾರ್ದಾಗಿತ್ತಾ? ನಿನ್ನ ಭಾವ ನಿನ್ಹತ್ರ ಏನೋ ಮಾತನಾಡ್ಬೇಕೂಂತ ಕಾದೂ ಕಾದೂ ಸಾಕಾಗಿ, ಈಗ್ತಾನೇ ಮನೆಗೆ ಹೋದ್ರು"

"ಭಾವಂಗೆ ನನ್ಹತ್ರ ಏನಿರುತ್ತೆ ಮಾತು? ನೀವಿಬ್ರೂ ಮತ್ತೆ ಜಗಳ ಆಡಿದ್ರಾ?"

"ಹೂಂ, ನಮಗಿನ್ನೇನೂ ಬೇರೆ ಕೆಲ್ಸ ಇಲ್ವಲ್ಲಾ" ಸಾಕ್ಷಿ ನಸುನಕ್ಕಳು.

"ಹೂಂ, ನೋಡಿದ್ರೆ ಹಾಗೇ ಅನ್ನಿಸುತ್ತೆ ನನಗೆ"

"ನೀನೂ ರಾಶೀ ಥರಾನೇ ಮಾತಾಡ್ತೀಯ. ಅವಳಿಗಂತೂ ತಿಳುವಳಿಕೆ ಸಾಲದು. ನಿಂಗೆ ಜವಾಬ್ದಾರಿ, ತಿಳುವಳಿಕೆ ಎರಡೂ ಇದೆ ಅಂತ ಅಂದ್ಕೊಂಡಿದೀನಿ"

"ಹೂಂ, ಏನು ರಾಜಕಾರ್ಯ ಇತ್ತೂಂತ ಹೇಳು. ಬೈದಿದ್ದೆಲ್ಲಾ ಮುಗಿದಿದ್ರೆ..." ಕ್ಷೀರಾ ಅಕ್ಕನ ಮುಂದೆ ಕುಳಿತು ಕೇಳಿದಳು.

"ನಾನು ಮಾತಾಡಿದ್ರೆ ಬೈದ ಹಾಗಿರುತ್ತೆ ಅಲ್ವಾ? ಹಿರಿಯ ಅಕ್ಕನಾಗಿ ಹುಟ್ಟದೇ ಇದ್ದಿದ್ರೆ, ನಾನು ಈ ದಿನ ನಮ್ಮ ಅತ್ತೆ ಮನೇಲೇ ಇರ್ತಿದ್ದೆ, ನಿಮ್ಮ ಪಾಡು ನಿಮಗೇ ಇರಲಿ ಅಂತ. ನಿಮ್ಮ ಭಾವಂಗೆ ಬುದ್ಧಿ ಇಲ್ಲ. ನಿಮ್ಮನ್ನೆಲ್ಲ ಉದ್ಧಾರ ಮಾಡೋಕೆ ಹೊರಟಿದಾರೆ. ನಂಗೇನಂತೆ? ಅವರೇ ಬಂದು ಹೇಳಲಿ. ನಾನು ಇನ್ನು ಮಾತಾಡೋಲ್ಲ" ಸಾಕ್ಷೀ ಮುಖವನ್ನು ಊದಿಸಿಕೊಂಡು ಕುಳಿತಳು.

"ಸಾಕು ಬಿಡೇ... ಈ ಬಿಂಕ ಬಿನ್ನಾಣವನ್ನೆಲ್ಲಾ ಭಾವನ ಹತ್ರ ಇಟ್ಕೋ. ಸಿಟ್ಟು ಇಳಿದಿದ್ರೆ ಅದೇನು ವಿಷಯ ಅಂತ ಹೇಳ್ಬಿಡು. ಕೇಳಿಸ್ಕೊಂಡೇ ಒಳಕ್ಕೆ ಹೋಗ್ತೀನಿ" ಸಾಕ್ಷಿಯ ಭುಜದ ಮೇಲೆ ಕೈಯನ್ನಿಟ್ಟಳು.

"ಅದ್ಯಾವನೋ ನಿನ್ನ ಭಾವನ ಫ್ರೆಂಡ್ ಅಮೆರಿಕಾದಿಂದ ಬಂದಿದಾನಂತೆ. ನಿನ್ನನ್ನ ನೋಡೋಕೆ, ನಾಳೆ ಅಥವಾ ನಾಡಿದ್ದು ನಮ್ಮ ಮನೆಗೆ ಬರ್ತಾನಂತೆ. ನಿನಗೆ

ತಿಳಿಸಿರು ಅಂತ ನಿನ್ನ ಭಾವ ಹೇಳಿದಾರೆ" ಇದಕ್ಕೂ ತನಗೂ ಏನೂ ಸಂಬಂಧವಿಲ್ಲ ಎನ್ನುವಂತೆ ನುಡಿದಳು. ಕ್ಷೀರಾ ಗೊಳ್ಳನೆ ನಕ್ಕಳು.

"ಇಷ್ಟು ಹೇಳೋಕ್ಯಾಕೆ ಅಷ್ಟು ಇರುಸು ಮುರುಸು? ಅವನು ನನ್ನನ್ನು ನೋಡೋಕೆ ಬರ್ತಿದಾನೆ ಅಂತ ನಿನಗ್ಯಾಕೆ ಇಷ್ಟು ಸಂಕಟ?"

"ನನಗ್ಯಾಕೆ ಸಂಕಟ ಆಗ್ಬೇಕು...? ಸುಮ್ನಿರು"

"ನಿನಗೂ ಅಮೆರಿಕಾದಲ್ಲಿರೋ ಗಂಡನ್ನ ಮದುವೆಯಾಗ್ಬೇಕು ಅಂತ ಆಸೆ ಇತ್ತಲ್ವಾ? ಈ ವಿಷಯ ಭಾವಂಗೆ ಗೊತ್ತಾ?"

"ಆಸೆ ಇತ್ತು ನಿಜ, ಆಗ ಸಿಗಲಿಲ್ಲ ನನ್ನತ್ತೆ ಅಡ್ಡ ಬಂದ್ರು. ಇಲ್ದಿದ್ರೆ ನಿಮ್ಮ ಭಾವನೇ ಫಾರಿನ್ನಿಗೆ ಹೋಗಿರುತಿದ್ರು... ಎಂಥಾ ತಾಯೀನೋ... ಮಗನ ಆಸೆಗೆ ಕಲ್ಲು ಹಾಕಿಬಿಟ್ರು" ಕಹಿಯನ್ನು ಉಗುಳುತ್ತಾ ನುಡಿದಳು.

"ನಿನ್ನ ಮಗನ್ನ ಚೆನ್ನಾಗಿ ಓದಿಸಿ, ಫಾರಿನ್ನಿಗೆ ಕಳಿಸಿ ಬಿಡು. ನಿನ್ನನ್ನ ಕರೆಸ್ಕೋತಾನೆ. ನಿನ್ನ ಆಸೆಯೂ ತೀರುತ್ತೆ"

"ಅದಕ್ಕಿನ್ನು ಬೇಕಾದಷ್ಟು ಸಮಯವಿದೆ. ಈಗ ನಿನ್ನ ವಿಷಯಕ್ಕೆ ಬಾ"

"ಇಲ್ಲ ಕಣೇ ಸಾಕ್ಷೀ, ನಾನೀಗ್ಲೇ ಮದುವೆ ಆಗುಲ್ಲ. ಹಾಗಂತ ಭಾವಂಗೆ ನೀನೇ ಹೇಳ್ಬಿಡು"

"ಅವಕಾಶ ಬಂದಾಗ ಕಳ್ಕೋಬೇಡ ಕ್ಷೀರಾ. ಹುಡುಗ ಇಂಜನಿಯರ್ರಂತೆ. ನೋಡೋಕೂ ಸ್ಮಾರ್ಟ್ ಆಗಿದಾನಂತೆ. ಎಲ್ಲಾ ವಿಷಯದಲ್ಲೂ ನಿನಗೆ ತಕ್ಕವನಾಗಿದಾನೆ ಅಂತ ನಿನ್ನ ಭಾವ ಹೇಳಿದ್ರು. ಇಬ್ಬರೂ ಒಬ್ಬರನ್ನೊಬ್ಬರು ಒಪ್ಕೊಂಡ್ರೆ ಎಂಟು ಹತ್ತು ದಿನಗಳಲ್ಲಿ ನಿಮ್ಮಿಬ್ಬರಿಗೂ ಮದುವೆ. ಎರಡು ಮೂರು ತಿಂಗಳೊಳಗೆ ನೀನು ಅಮೆರಿಕಾಕ್ಕೆ ಹಾರಿ ಹೋಗಿರ್ತೀಯಾ..." ಆಸೆಯನ್ನು ತುಂಬುವಂತೆ ನುಡಿದಳು.

"ಸರಿ, ನಂಗೆ ಯೋಚಿಸೋಕೆ ಟೈಂ ಬೇಕು"

"ಹುಂ, ಯೋಚಿಸು. ಆದರೆ ಆದಷ್ಟು ಬೇಗ ನಿನ್ನ ನಿರ್ಧಾರವನ್ನು ತಿಳಿಸಬೇಕು. ನಿನ್ನ ಭಾವ ಆತುರದಲ್ಲಿದಾರೆ" ಕ್ಷೀರಾ ಏನನ್ನಾದರೂ ಆಡುವ ಮೊದಲೇ ರಾಶಿ ಪ್ರತ್ಯಕ್ಷಳಾದಳು.

"ಏನು ವಿಷಯ ಮಾತಾಡ್ತಿದ್ರಿ?" ಒಳ ಬಂದು ಕೇಳಿದಳು.

"ನಿಂಗ್ಯಾಕೇ ! ಏನೋ ವಿಷಯ ಸುಮ್ಮನೇ ಹೋಗು" ಕ್ಷೀರಾ ರೇಗಿದಳು.

"ಹೇಳಿದ್ರೆ ನಿನ್ನ ಗಂಟೇನು ಹೊರಟು ಹೋಗುತ್ತೆ? ನೀನಾದ್ರೂ ಹೇಳೇ ಅಕ್ಕಾ..." ರಾಶಿ ಅಕ್ಕನನ್ನು ಮುದ್ದಿಸುತ್ತಾ ಕೇಳಿದಳು.

"ಏನಿಲ್ಲ, ನಿಮ್ಮ ಭಾವ ಕ್ಷೀರಂಗೆ ಅಂತ ಒಂದು ಗಂಡನ್ನು ವಿಚಾರಿಸಿದಾರೆ. ಅದೇ ವಿಷಯಾನ ಚರ್ಚೆ ಮಾಡ್ತಿದ್ವಿ" ಹುಡುಗನ ಬಗ್ಗೆ ತಿಳಿಸಿದಳು.

"ಅಯ್ಯೋ... ಅದರಲ್ಲಿ ಚರ್ಚೆ ಮಾಡುವಂಥದ್ದು ಏನಿದೆ? ಸುಮ್ನೇ ಒಪ್ಕೋ 'ಜುಂ' ಅಂತ ಅಮೆರಿಕಾಕ್ಕೆ ಹಾರಿ ಹೋಗು" ರಾಶಿ ಕ್ಷೀರಾಳ ಗಲ್ಲವನ್ನು ಚಿವುಟಿದಳು. ಕ್ಷೀರಾ ಅವಳ ಕೈಯನ್ನು ಜೋರಾಗಿ ತಳ್ಳಿದಳು.

"ನೀನೇ ಅವನನ್ನು ಮದುವೆ ಮಾಡ್ಕೊಂಡು ಹಾರಿ ಹೋಗು. ನಂಗೆ ಬೇಕಿಲ್ಲ"

"ರಾಶೀ.. ನೀನು ಸುಮ್ನೆ ಒಳಕ್ಕೆ ಹೋಗು. ಯಾಕೋ ಇವತ್ತು ಅವಳ ಮೂಡ್ ಚೆನ್ನಾಗಿಲ್ಲ" ಸಾಕ್ಷಿ ಕಣ್ಣು ಸಂಜ್ಞೆ ಮಾಡಿದಳು. ರಾಶಿ, ಕ್ಷೀರಾಳನ್ನು ಅಣಗಿಸಿ ಕೈ ಬೀಸುತ್ತಾ ಒಳಗೆ ನಡೆದಳು.

* * *

11

"ಕ್ಷೀರಾ... ಏನು ಯೋಚನೆ ಮಾಡ್ದೆ? ನನ್ನ ಸ್ನೇಹಿತಂಗೆ ಏನು ಹೇಳ್ಲಿ?" ಸಂಜಯ ನಾದಿನಿಯನ್ನು ಊಟಕ್ಕೆ ಕುಳಿತ ಸಮಯದಲ್ಲಿ ಕೇಳಿದ.

"ಭಾವ... ನಂಗೆ ಈಗ್ಲೇ ಮದುವೆ ಬೇಡ..."

"ನಿಮ್ಮ ಅಕ್ಕನೂ ಮದುವೆಗೆ ಮುಂಚೆ ಹೀಗೇ ಹೇಳಿದ್ಲಂತೆ. ಆದರೆ ನನ್ನನ್ನ ನೋಡಿದ ಕೂಡ್ಲೇ ಒಪ್ಪಿಕೊಂಡು ಬಿಟ್ಲು" ಸಾಕ್ಷಿಯ ಕಡೆ ನೋಡಿ ನಸು ನಕ್ಕ.

"ಅದು ಎರಡು ವರ್ಷದ ಕೆಳಗಿನ ಕಥೆ. ಈಗೇನಾದ್ರೂ ನಾನು ನಿಮ್ಮನ್ನು ನೋಡಿದ್ದಿದ್ರೇ..." ಅವಳೂ ಗೇಲಿ ಮಾಡಿ ನಕ್ಕಳು.

"ನಾನು ಈಗ್ಲೂ ಹಾಗೇ ಇದೀನಿ. ನೀನೇ ಡುಮ್ಮಿ ಆಗಿರೋದು"

ಸಾಕ್ಷಿ ಗಂಡನ ಮೇಲೆ ಹುಸಿಕೋಪವನ್ನು ನಟಿಸಿದಳು. "ನಿಮ್ಮನ್ನ ಆಮೇಲೆ ವಿಚಾರಿಸಿಕೊಳ್ತೀನಿ..." ಕೆಳದನಿಯಲ್ಲಿ ನುಡಿದು ತಂಗಿಯ ಕಡೆ ನೋಡಿದಳು.

"ಸಾರೀ ಸಾಕ್ಷಿ ಮಧ್ಯೆ ಮಧ್ಯೆ ಮಾತನ್ನಾಡಿ ನೀನು ರೇಗಿಸಿ ಬಿಡ್ತೀಯ. ಇರಲಿ, ಕ್ಷೀರಾ ನೋಡಮ್ಮಾ... ಈ ಮನೆಗೆ ಹಿರಿ ಅಳಿಯನಾಗಿ, ನನಗೂ ಕೆಲವು ಜವಾಬ್ದಾರಿಗಳಿವೆ. ನೀನು ಸುಖವಾಗಿರಬೇಕೆಂಬುದೇ ನಮ್ಮೆಲ್ಲರ ಆಸೆ. ಯಾವುದೇ ಹೆಚ್ಚು ಖರ್ಚು ವೆಚ್ಚಗಳಿಲ್ಲದೇ ಮದುವೆಯೂ ನೆರವೇರುತ್ತೆ. ದೂರದ ದೇಶದಲ್ಲಿ ನಿನ್ನ ಪಾಡಿಗೆ ನೀನು ಅತ್ತೆಯ ಕಾಟವಿಲ್ಲದೇ ಹಾಯಾಗಿರಬಹುದು" ಸಾಕ್ಷಿ ಅವನ ಕಾಲನ್ನು ಜೋರಾಗಿ ತುಳಿದಳು. ಅವನು 'ಹ್ಲಾಂ' ಎಂದ. ರಾಶಿ ನಕ್ಕಳು.

"ಸೀರಿಯಸ್ ಆಗಿ ಮಾತ್ನಾಡಿ ಸಂಜಯ್"

"ನಾನು ಮಾತಾಡೋದೇ ಹೀಗೆ. ನಿನ್ನ ತಂಗೀನ ಒಪ್ಪಿಸೋದು ನಿನ್ನ ಕೆಲಸ" ಅವನು ತಟ್ಟೆಯಲ್ಲೇ ಕೈ ತೊಳೆದು ಎದ್ದ.

"ಭಾವ... ಹುಡುಗ ಯಾವಾಗ ಬರ್ತಾನೆ ಅಂತಂದ್ರಿ?" ಕ್ಷೀರಾ ಕೇಳಿದಳು.

"ನೀನು ಯಾವಾಗ ಹೇಳಿದರೆ ಆವಾಗ. ನಾನು ಫೋನು ಮಾಡಿದರೆ ಸಾಕು"

"ಸರಿ, ಹಾಗಾದ್ರೆ, ನಾಡಿದ್ದು ಸಾಯಂಕಾಲ ಬರೋಕೆ ಹೇಳಿ..." ರಾಶಿ, ಸಾಕ್ಷಿ ಇಬ್ಬರೂ ಮುಖ ಮುಖ ನೋಡಿಕೊಂಡರು. ಸಂಜಯ್ ಮುಗುಳ್ನಕ್ಕು, ಹೆಂಡತಿಯ ಕಡೆಗೊಮ್ಮೆ ನೋಡಿ ಅಲ್ಲಿಂದ ಹೋಗಿದ್ದ. ಸಾಕ್ಷಿ ಅವನ ಹಿಂದೆ ನಡೆದಳು.

"ಏನೇ ಭಾವ ಹೇಳಿದ್ಕೂಡ್ಲೇ ಒಪ್ಕೊಂಡು ಬಿಟ್ಟಲ್ಲಾ?" ರಾಶಿ ಕೇಳಿದಳು.

"ಭಾವಂಗೆ ಬೇಸರವಾಗಬಾರದು ಅಂತ ಅವರ ಸಮಾಧಾನಕ್ಕೆ ಹೂಂ ಅಂತ ಹೇಳಿದೆ. ಅಲ್ಲದೇ ನೋಡಿದ ಮಾತ್ರಕ್ಕೆ ಮದುವೆ ಆಗಿ ಬಿಡುತ್ತಾ? ನಾನು ಒಪ್ಪಬೇಕು ತಾನೇ...?" ಸಾಕ್ಷಿ ಅಲ್ಲಿ ಇಲ್ಲದ್ದನ್ನು ಗಮನಿಸಿ ಹೇಳಿದಳು.

"ಅಂದ್ರೇ... ಅವನು ಚೆನ್ನಾಗಿದ್ರೂ ಒಪ್ಕೊಳುಲ್ವಾ?"

"ನಿಂಗೇ ಅರ್ಥವಾಗಿದೆಯಲ್ಲ, ಅಕ್ಕಂಗೆ ಹೇಳ್ಬೇಡ ಅಷ್ಟೇ"

"ಪರವಾಗಿಲ್ಲ ಕಣೇ... ನೀನೂ ಖಿಲಾಡಿ" ಅವಳ ಬೆನ್ನ ಮೇಲೆ ಗುದ್ದಿದಳು. ಕ್ಷೀರ ಸುಮ್ಮನೆ ಮುಗುಳ್ನಕ್ಕಳು.

* * *

12

ಟೇಬಲ್ ಮೇಲಿದ್ದ ಒಂದೆರಡು ಫೈಲ್‌ಗಳನ್ನು ಹಿಡಿದು, ಕ್ಷೀರಾ ತನ್ನ ಬಾಸ್‌ನ ಛೇಂಬರ್‌ಗೆ ಬಂದಳು.

"ಯೆಸ್... ಏನಾಗ್ಬೇಕಾಗಿತ್ತು?" ಕಾರ್ತೀಕ ಕೇಳಿದ.

"ನಿಮ್ಮ ಸಿಗ್ನೇಚರ್ ಆಗ್ಬೇಕಾಗಿತ್ತು ಸಾರ್..."

"ಯಾಕೆ? ಅಟೆಂಡರ್ ರಾಮಯ್ಯ ಬಂದಿಲ್ವಾ?" ಹಾಳೆಗಳನ್ನು ತಿರುಗಿಸಿದ.

"ಬಂದಿದಾರೆ, ಕಾಫಿಗೆ ಹೋಗಿರಬಹುದೇನೋ. ನಾನು ನಿಮ್ಹತ್ರ ಸ್ವಲ್ಪ ಪರ್ಸನಲ್ ಆಗಿ ಮಾತ್ನಾಡಬೇಕಾಗಿತ್ತು ಸಾರ್"

"ಹುಂ, ಹೇಳಿ. ಅಡ್ವಾನ್ಸ್ ಏನಾದ್ರೂ ಬೇಕಾಗಿತ್ತಾ?"

"ಅಲ್ಲ, ವಿಷಯ ಬೇರೆ" ಅನುಮಾನಿಸಿದಳು.

"ಹುಂ, ಹೇಳಿ. ಯಾಕೆ ಅನುಮಾನಿಸ್ತಾ ಇದೀರಾ?"

"ಹೇಗೆ ಹೇಳೋದು ಅಂತ ಗೊತ್ತಾಗ್ತಿಲ್ಲ. ಮುಜುಗರ ಆಗ್ತಿದೆ ಸಾರ್"

"ನಿಮ್ಮ ಮದುವೆ ಸೆಟ್ಲ್ ಆಯ್ತಾ?" ತಮಾಷೆಯಿಂದ ಕೇಳಿದ.

"ಇಲ್ಲ ಸಾರ್, ಅದೇ ವಿಷಯವನ್ನು ಮಾತ್ನಾಡಬೇಕಾಗಿತ್ತು"

"ಈ ವಿಷಯದಲ್ಲಿ ನಾನೇನು ಹೇಳ್ಲಿ? ಅದು ನಿಮ್ಮ ಪರ್ಸನಲ್ ವಿಷಯ"

"ಈಗ ನನಗೆ ನಿಮ್ಮಿಂದ ಒಂದು ಹೆಲ್ಪ್ ಬೇಕಾಗಿದೆ ಸಾರ್" ತಮಾಷೆಯಿಂದ ಅವಳ ಮಾತನ್ನು ಆಲಿಸುತ್ತಿದ್ದವನು ನೆಟ್ಟಗೆ ಕೂತ.

"ಏನು ವಿಷಯ ಅಂತ ಸರಿಯಾಗಿ ಹೇಳಿ, ನನಗೆ ಗೊತ್ತಾಗ್ತಿಲ್ಲ"

"ನಮ್ಮ ಭಾವ, ಅಮೆರಿಕಾದ ವರನೊಬ್ಬನ ಜತೆ ನನ್ನ ಮದುವೆಯ ಮಾತುಗಳನ್ನಾಡಿದಾರೆ. ಆದರೆ ನನಗೆ ಈ ಮದುವೆ ಇಷ್ಟವಿಲ್ಲ. ನೀವು ಬಂದು ನನ್ನ ಭಾವನ ಹತ್ರ ಮಾತ್ನಾಡಬೇಕು"

"ನಾನು ಹೇಗೆ ಮಾತ್ನಾಡೋಕೆ ಆಗುತ್ತೆ ಕ್ಷೀರಾ... ನಾನು ಹೊರಗಿನವನು. ನನಗೆ ಯಾವ ಅಧಿಕಾರವಿಲ್ಲವಲ್ಲ"

"ನಾನು ನಿಮಗೆ ಆ ಅಧಿಕಾರವನ್ನೂ ಕೊಡ್ತೀನಿ ಸಾರ್. ನೀವು, ನನ್ನನ್ನು ಲೈಕ್ ಮಾಡುತ್ತಿರುವ ವಿಷಯವನ್ನು ನಮ್ಮ ಭಾವಂಗೆ ಹೇಳಬೇಕು"

"ನಾನು ಹೀಗೆ ಹೇಳಿ, ಈ ಮದುವೆಯನ್ನು ನಿಲ್ಲಿಸಿದರೆ ನನಗೇನು ಲಾಭ ಮಿಸ್ ಕ್ಷೀರಾ?" ಅರ್ಥವಾಗದವನಂತೆ ಪ್ರಶ್ನಿಸಿದ.

"ನಾನು ನಿಮ್ಮನ್ನು ಮದುವೆಯಾಗ್ತೀನಿ ಸಾರ್..." ದೃಷ್ಟಿಯನ್ನು ಕೆಳ ಮಾಡಿ ನುಡಿದಳು. ಅವನು ನಂಬದವನಂತೆ ಅಗಲವಾಗಿ ಬಾಯನ್ನು ತೆರೆದ.

"ಆಂ... ಏನಂದ್ರಿ? ಇನ್ನೊಂದು ಸಾರಿ ಹೇಳಿ..." ನಗುತ್ತಾ ಪ್ರಶ್ನಿಸಿದ.

"ನಾನು, ನಿಮ್ಮನ್ನು ಮದುವೆಯಾಗಲು ತಯಾರಾಗಿದೀನಿ ಸಾರ್..." ನಾಚುತ್ತಾ ನುಡಿದಳು. ಅವನು ಎದ್ದು ನಿಂತ.

"ನಿಜ ಹೇಳ್ತಿದೀರಾ? ಜೋಕ್ ಮಾಡ್ತಿಲ್ಲ ತಾನೇ..."

"ಇಲ್ಲ ಸಾರ್... ಜೋಕ್ ಅಲ್ಲ, ನಿಜಾನೇ..."

"ಥ್ಯಾಂಕ್ಸ್ ಕ್ಷೀರಾ... ಅವತ್ತು ಆ ಕಾಗದದಲ್ಲಿ ಏನು ಬರೆದಿದ್ರಿ ಅಂತ ಹೇಳ್ತೀರಾ?"

"ಏನೂ ಇಲ್ಲ" ಅವಳು ನಾಚಿಕೆಯಿಂದ ತಲೆತಗ್ಗಿಸಿ ನುಡಿದಾಗ, ಅವನು ಅತ್ತಿತ್ತ ನೋಡಿ, ಅವಳ ಕೈಯನ್ನು ಮುಟ್ಟಿದ. ಅವಳು ಸರ್ರನೆ ಹಿಂದಕ್ಕೆಳೆದುಕೊಂಡಳು.

"ಓ...ಕೇ... ಐ ಆಮ್ ಹ್ಯಾಪೀ... ಲೆಟಸ್ ಸೆಲೆಬ್ರೇಟ್ ದಿಸ್ ಮುಮೆಂಟ್ ಬರ್ತೀರಾ ಹೊರಗೆಲ್ಲಾದ್ರೂ ಲಂಚ್‌ಗೆ ಹೋಗೋಣ"

"ಇವತ್ತು ಬೇಡ ಸಾರ್... ನಾನು ಲಂಚ್ ಬಾಕ್ಸ್ ತಂದಿದೀನಿ..." ಕಾರ್ತೀಕ ಗೊಳ್ಳನೆ ನಕ್ಕ.

"ಏನು ತಂದಿದೀರಿ...?"

"ಪ್ಲೀಸ್ ನಗ್ಬೇಡಿ ಸಾರ್... ಪುಳಿಯೋಗರೆ ತಂದಿದೀನಿ. ವೇಸ್ಟ್ ಆಗುತ್ತೆ ಅಂತ"

"ಓ...ಕೇ... ಸಾಯಂಕಾಲ, ನಮ್ಮ ಮನೆಗೆ ಕರ್‍ಕೊಂಡು ಹೋಗ್ತೀನಿ... ಬನ್ನಿ"

"ಇವತ್ತು ಬೇಡ ಸಾರ್... ಮನೇಲಿ ಗಾಬರಿಯಾಗ್ತಾರೆ..."

"ಸರಿ ನಾನೇ ನಿಮ್ಮ ಜತೇಲಿ ನಿಮ್ಮ ಮನೆಗೆ ಬರ್ತೀನಿ... ಓ..ಕೇ.."

"ಇವತ್ತು ಬೇಡ ಸಾರ್..."

“ಏನ್ರೀ ಎಲ್ಲಾದಕ್ಕೂ ಇವತ್ತು ಬೇಡ... ಇವತ್ತು ಬೇಡ... ಅಂತ ಹೇಳ್ತಿದೀರಲ್ಲ. ಯಾಕೆ ಇವತ್ತು ಮುಹೂರ್ತ ಚೆನ್ನಾಗಿಲ್ವಾ?” ಗೇಲಿ ಮಾಡಿದ.

“ಹಾಗಲ್ಲ ಸಾರ್... ನನ್ನ ಮೂಡ್ ಚೆನ್ನಾಗಿಲ್ಲ. ನಂಗೆ ಏನೋ ಒಂಥರಾ ಭಯ ಆಗ್ತಿದೆ...” ಅಷ್ಟರಲ್ಲಿ ಫೋನು ರಿಂಗಾಗಿತ್ತು.

“ಓ...ಕೇ... ರಿಲಾಕ್ಸ್... ಈಗ ನಿಮ್ಮ ಸೀಟಿಗೆ ಹೋಗಿ...” ಅವಳು “ಥ್ಯಾಂಕ್ಸ್ ಯೂ ಸಾರ್” ಎಂದು ಹೇಳಿ ಛೇಂಬರ್‌ನಿಂದ ಹೊರಬಂದಳು. ಯಾಕೋ ಏನೋ ಮನಸ್ಸು ಉಲ್ಲಾಸಗೊಂಡಿರಲಿಲ್ಲ. ಭಾವ ಏನಂದುಕೊಳ್ಳುವರೋ ಎಂಬ ಆತಂಕ ಒಂದು ಕಡೆ, ಕಾರ್ತೀಕ್ ತನ್ನ ಬಗ್ಗೆ ಏನಂದುಕೊಳ್ಳಬಹುದು ಎಂಬ ಮುಜುಗರ ಮತ್ತೊಂದು ಕಡೆ. ಕೆಲಸ ಮಾಡುವ ಮನಸ್ಸಾಗಲಿಲ್ಲ. ಪಕ್ಕದ ಟೇಬಲ್‌ನ ಪಂಕಜಂಗೆ ತಲೆ ನೋವು ಎಂದು ಹೇಳಿ ಪರ್ಮಿಷನ್ ಕೇಳಿದಳು.

“ಯಾಕ್ರೀ... ಬಾಸ್ ಏನಾದ್ರೂ ಅಂದ್ರಾ?”

“ಇಲ್ಲ ಪಂಕಜಾ... ನಮ್ಮ ತಂದೆಗೆ ಹುಶಾರಿಲ್ಲ. ನಮ್ಮ ಅಕ್ಕ ಪ್ರೆಗ್ನೆಂಟ್... ಯಾಕೋ ಏನೋ ಈ ನಡುವೆ ಮನಸ್ಸಿನ ಚಡಪಡಿಕೆ ಜಾಸ್ತಿ ಆಗಿದೆ” ಎಂದಳು.

“ಓ...ಕೇ... ನೀವು ಮನೆಗೆ ಹೋಗಿ, ರೆಸ್ಟ್ ತಗೊಳ್ಳಿ ಪರವಾಗಿಲ್ಲ’ ಅವಳು ಪರ್ಮಿಷನ್ ಕೊಟ್ಟ ಕೂಡಲೇ ಕ್ಷೀರಾ ಆಫೀಸಿನಿಂದ ಹೊರಬಿದ್ದಳು.

* * *

13

“ಅದೇನಪ್ಪಾ ಅದು? ಎಂದೂ ಇಲ್ಲದ್ದು? ನನಗಿಂತ ಮುಂಚೇನೇ ಮನೆಗೆ ಬಂದು ಬಿಟ್ಟಿದೀಯ... ಏನು ವಿಷಯ?” ಮೃದುಲಾ ಕೇಳಿದಳು.

“ನೀವೊಬ್ರೇ ಒಂಟಿಯಾಗಿರ್ತೀರಲ್ಲ, ಬೇಗ ಒಂದು ದಿನವಾದ್ರೂ ಬಂದು ನಿಮಗೆ ಕಂಪೆನಿ ಕೊಡೋಣ ಅಂತ ಅನ್ನಿಸ್ತು. ಅದಕ್ಕೇ ಬಂದೆ...” ನಗುತ್ತಾ ನುಡಿದ.

“ಇದಪ್ಪ ಸುಳ್ಳು ಅಂತಂದ್ರೆ. ನಾನು ನಂಬ್ತೀನಾ? ನಿಜ ಹೇಳು”

“ರಾಶಿಯ ಅಕ್ಕ ಕ್ಷೀರಾ ಇದಾಳಲ್ಲ, ಅವಳನ್ನು ಮೆಚ್ಚಿದೀನಿ ಅಂತ ಅವತ್ತೇ ಹೇಳ್ದೆ. ಈಗ ಆದಷ್ಟು ಬೇಗ ಮದುವೆಯಾಗಿ ಬಿಡೋಣ ಅಂತ ತೀರ್ಮಾನಿಸಿದೀನಿ”

“ಧಾರಾಳವಾಗಿ ಆಗು.. ನನ್ನ ಒಪ್ಪಿಗೆ ಕೇಳ್ಬೇಕಾ ನೀನು?”

“ಹಾಗಲ್ಲ...”

“ನಿಮ್ಮಮ್ಮನ ಹತ್ರ ಮಾತಾಡ್ಬೇಕಾ? ಆಡ್ತೀನಿ, ಡೋಂಟ್ ವರಿ”

“ಅದಲ್ಲ...”

“ಹಾಗಲ್ಲ ಅದಲ್ಲ, ಹಾಗಾದ್ರೆ ಬೇರೆ ಏನು? ಅವಳು ನಿನ್ನನ್ನು ಒಪ್ಪಿದಾಳೆ ತಾನೇ? ಅವಳ ಹತ್ರ ಮಾತನಾಡಿದೀಯ?”

"ಹೂಂ, ಅವಳ ಒಪ್ಪಿಗೇನೂ ಇದೆ. ಆದ್ರೂ ಸ್ವಲ್ಪ ಅನುಮಾನ. ಅವಳು ನನ್ನನ್ನು ಪರೀಕ್ಷಿಸುತ್ತಿರಬಹುದಾ ಅಂತ. ಅಮೆರಿಕಾದ ಒಬ್ಬ ಗಂಡು ಬರ್ತಿದಾನಂತೆ. ಅವನು, ಇವಳನ್ನು ನೋಡುವ ಮೊದಲು, ನಾನು ಇವಳ ಭಾವನ ಹತ್ರ ಮಾತನಾಡಬೇಕಂತೆ. ಫನ್ನಿಯಾಗಿದೆ ಅಲ್ವಾ? ಅವರು ಮಿಸ್ಟೇಕ್ ಮಾಡಿಕೊಳ್ಳಲ್ವಾ?"

"ನೀನೇನಂದೆ?"

"ಆಗ್ಲೀ ಇವತ್ತೇ ಮಾತಾಡ್ತೀನಿ ಅಂತಂದೆ. ಅದಕ್ಕೆ ಇವತ್ತು ಬೇಡಾ ಅಂತ ಅಂದು ಬಿಟ್ಟಳು... ಯಾಕೋ ಮೂಡೇ ಕೆಟ್ಟು ಹೋಯ್ತು. ಮನೆಗೆ ಬಂದ್ಬಿಟ್ಟೆ..." ನಾನು ಭಾವನ ಹತ್ರ ಮಾತನಾಡಿದರೆ ಸರಿ ಅಂತ ಅನ್ನಿಸುತ್ತಾ?"

"ಭಾವ ಎಷ್ಟೇ ಆಗಲಿ ಹೊರಗಿನವರು 'ಅಳಿಯ ಮಗನಲ್ಲ" ಅಂತ ಹೇಳುವ ಹಾಗೆ, ಭಾವ ಅಣ್ಣನಾಗಲು ಸಾಧ್ಯವಿಲ್ಲ. ಅವನ ಸ್ವಾರ್ಥ ಏನಿದೆಯೊ? ಅಸಹಾಯಕ ಸ್ಥಿತಿಯಲ್ಲಿರುವ ನಾದಿನಿಗೆ ತಾನು ಉಪಕಾರ ಮಾಡುತ್ತಿದೇನೆಂಬ ಭ್ರಮೆಯಲ್ಲಿ ಕ್ಷೀರಾನ ಒಂದು ಮಾತು ಕೇಳದೇನೂ ಇರಬಹುದು. ಮೊದಲೇ ತಾಯಿಯನ್ನು ಕಳೆದುಕೊಂಡಿದಾರೆ. ತಂದೆ ನೋಡಿದರೆ ಹಾಗೆ, ಭಾವನ್ನ ಎದುರು ಹಾಕಿಕೊಳ್ಳಲಾಗದೇ, ನಿನ್ನ ಫೇವರ್ ಕೇಳಿರಬಹುದು. ನಿನಗೂ ಅದೇ ತಾನೇ ಬೇಕಾಗಿರುವುದು? ನೀನು ಹೋಗಿ ಮಾತನಾಡು... ಏನೂ ಪರವಾಗಿಲ್ಲ"

"ಒಂದು ವೇಳೆ ನಾನು ಹೋಗಿ ಮಾತನಾಡಿ, ಫೂಲ್ ಆದರೆ? ಅದಕ್ಕೆ ಮುಂಚೆ ನಿಜಾಂಶ ಏನೂಂತ ತಿಳ್ಕೋಬೇಕು, ಸರಿಯಾಗಿ ಪ್ರಿಪೇರ್ ಆಗ್ಬೇಕು"

"ಸರಿ, ಹಾಗೇ ಮಾಡು, ಅದಕ್ಕೆ ಈಗ ನಾನೇನು ಮಾಡಬೇಕು?"

"ರಾಶಿಯ ಹತ್ರ ಈ ವಿಷಯ ಮಾತನಾಡಿ, ನಿಜಾನ ತಿಳ್ಕೋಬೇಕಲ್ಲ"

"ಈಗ ಅವಳನ್ನು ಕರೆಸೋದು ಹೇಗೆ...?"

"ಫೋನ್ನಲ್ಲಿ ಮಾತಾಡಿದ್ರೆ?... ನೀವು ಅವಳ ಫೇವರೇಟ್ ಮೇಡಂ. ನಿಮ್ಮೊಡನೆ ಅವಳು ಸುಳ್ಳು ಹೇಳುಲ್ಲ. ಹಾಗೇನಾದ್ರೂ, ಕ್ಷೀರಾಗೆ ನಿಜವಾಗಿಯೂ ತೊಂದರೆ ಏನಾದ್ರೂ ಇದ್ದರೆ, ನಾನು ಅವಳನ್ನು ಆದಷ್ಟು ಬೇಗ ಮದುವೆಯಾಗಿ ಬಿಡ್ತೀನಿ"

"ಆಲ್ ದಿ ಬೆಸ್ಟ್" ನನ್ನ ಸಹಕಾರ ನಿನಗಿದೆ. ಒಂದು ಮಾತನ್ನು ಸದಾ ನೆನಪಿನಲ್ಲಿಟ್ಕೋ ಕಾರ್ತೀಕ್. ನೀನು ಮನಸಾರೆ ಪ್ರೀತಿಸಿದ್ದರೆ, ಎಂದಿಗೂ ನೀನವಳ ಕೈ ಬಿಡಬಾರದು. ಏನೇ ಕಷ್ಟ ಬಂದರೂ, ಅವಳ ಜೊತೆಯಲ್ಲಿರಬೇಕು. ಆಗ ಅದು ನಿಜವಾದ ಪ್ರೀತಿ. ಬೇರೆ ಯಾರ ಮಾತಿಗೂ ನೀನು ಬೆಲೆ ಕೊಡಬಾರದು. ಯಾವುದೇ ಕಾರಣಕ್ಕೂ ಅಗಲಿರಬಾರದು. ಹಾಗಂತ ಮನದಲ್ಲೇ ಪ್ರತಿಜ್ಞೆ ಮಾಡು" ಉದ್ವೇಗದಿಂದ ಒಂದೇ ಉಸುರಿನಲ್ಲಿ ನುಡಿದಳು.

ಕಾರ್ತೀಕ್ ಅವಳನ್ನೇ ವಿಸ್ಮಯದಿಂದ ನೋಡಿದ. ಅವಳೆಂದೂ ಹೀಗೆ ಭಾವೋದ್ವೇಗಕ್ಕೊಳಗಾಗಿ ಮಾತನಾಡಿದವಳಲ್ಲ. ಆದರೆ, ಕ್ಲಾಸ್‌ನಲ್ಲಿ ಹೀಗೇ ನಿರರ್ಗಳವಾಗಿ

ಮಾತನಾಡಿ ಅಭ್ಯಾಸ. ಅದೇ ರೀತಿ ಮಾತನಾಡಿದಾಳೆ ಅಂತಂದುಕೊಂಡ. ಆದರೂ ಅವಳ ಮೂಡ್ ಸ್ವಲ್ಪ ವ್ಯತ್ಯಾಸವಾಗಿದೆ ಎಂದು ಅರಿತ. ಮೃದುಲಾ ಕೆಲವೇ ನಿಮಿಷಗಳೊಳಗೆ ತನ್ನನ್ನು ತಾನೇ ಸರಿ ಮಾಡಿಕೊಂಡಳು. ರಾಶಿಗೆ ಫೋನು ಮಾಡಿದಳು. ರಿಸೀವರ್‌ನೆತ್ತಿಕೊಂಡವಳು ಕ್ಷೀರಾ "ಹಲೋ" ಎಂದಳು.

"ನಾನು, ಮೃದುಲಾ ಮೇಡಂ, ಮಾತಾಡ್ತಿರೋದು. ರಾಶೀನ ಸ್ವಲ್ಪ ಕರೀತೀರಾ?"

ಇಷ್ಟು ಹೊತ್ನಲ್ಲಿ ಈ ಮೇಡಂಗೆ ರಾಶಿಯ ಹತ್ರ ಏನು ಕೆಲಸ ಅಂತಂದುಕೊಂಡ್ರೂ ಹೋಗಿ ಕರೆದಳು. "ನಿನ್ನ ಮೇಡಂ ನಿಂಗೆ ಫೋನು ಮಾಡಿದಾರೆ... ಬೇಗ ಬಂದು ಮಾತ್ನಾಡು"

"ಯಾಕಂತೆ?" ಅವಳು ಅಲುಗಾಡದೇ ಪ್ರಶ್ನಿಸಿದಳು.

"ನಂಗೇನ್ಗೊತ್ತು? ನಾನು ಕೇಳಲಿಲ್ಲ" ತಂಗಿಯ ಮೇಲೆ ರೇಗಿದಳು. ರಾಶಿ ಎದ್ದು ಬಂದು ರಿಸೀವರ್‌ನೆತ್ತಿಕೊಂಡಳು.

"ರಾಶೀ... ನಿಮ್ಮಕ್ಕ ಮಲಗಿದಾರಾ?"

"ಹುಂ... ಯಾಕೆ?..."

"ಸುಮ್ಮನೇ ಕೇಳ್ದೆ. ಕ್ಷೀರಾ ಇನ್ನೂ ಎದ್ದಿದಾಳಲ್ಲ. ನೀನು ಬರ್‍ಕೋತಿದ್ಯಾ?"

"ಹುಂ... ಅಕ್ಕ ಭಾವ, ರೂಮ್ನಲ್ಲಿ ಮಲಗಿದಾರೆ. ಕ್ಷೀರಾ, ಟಿ.ವಿ. ನೋಡ್ತಿದಾಳೆ. ನಾನು ಯಾವುದೋ ಪ್ರಾಬ್ಲಂ ಸಾಲ್ವ್ ಮಾಡ್ತಿದ್ದೆ. ಏನು ವಿಷಯ ಮೇಡಂ? ಇಷ್ಟು ಹೊತ್ನಲ್ಲಿ ಕಾಲ್ ಮಾಡಿದೀರಲ್ಲ"

"ಏನಿಲ್ಲ ರಾಶೀ... ಗಾಬರಿಯಾಗ್ಬೇಡ. ನಿಮ್ಮ ತಂದೆ ಮಲಗಿದಾರಾ?"

"ಹುಂ, ನಿದ್ದೆ ಬಂದಿರಬಹುದು. ರೂಮಿನ ಬಾಗಿಲನ್ನು ಹಾಕಿದೆ. ಏನು ವಿಷಯ ಅಂತ ಬೇಗ ಹೇಳಿ ಮೇಡಂ. ನಂಗೆ ಒಂಥರಾ ಆಗ್ತಿದೆ"

"ಏನೂ ಇಲ್ಲ, ಬೆಳಿಗ್ಗೆ ನೀನು ಕಾಲೇಜಿಗೆ ಹೋಗುವ ಮೊದಲು ನಮ್ಮ ಮನೆಗೆ ಬಂದು ಹೋಗೋಕೆ ಆಗುತ್ತಾ? ಒಂದು ಮುಖ್ಯವಾದ ವಿಷಯವನ್ನು ಕೇಳಬೇಕಾಗಿತ್ತು. ಆಮೇಲೆ, ನಾನು ನೀನು ಇಲ್ಲಿಂದಲೇ ಒಟ್ಟಿಗೇ ಕಾಲೇಜಿಗೆ ಹೋಗೋಣ"

"ಆಯ್ತು ಮೇಡಂ.. ಬರ್ತೀನಿ" ರಾಶಿ ರಿಸೀವರ್‌ನ್ನಿಟ್ಟು, ಕ್ಷೀರಾಳ ಕಡೆ ನೋಡಿದಳು. ಅವಳು ಯಾವುದೋ ಕಾರ್ಯಕ್ರಮವನ್ನು ಗಮನವಿಟ್ಟು ನೋಡುತ್ತಿದ್ದಳು. ಮೇಡಂ ಯಾಕೆ ಕರೆದಿರಬಹುದು? ಅದೇ ಚಿಂತೆ ಅವಳನ್ನು ಕಾಡತೊಡಗಿತು. ಪುಸ್ತಕಗಳನ್ನು ಎತ್ತಿಟ್ಟು, ತನ್ನ ಹಾಸಿಗೆಯ ಮೇಲೆ ಉರುಳಿಕೊಂಡಳು. ಕ್ಷೀರಾ ಟಿ.ವಿ.ಯನ್ನು ಆರಿಸಿ, ಮಲಗಲು ಬಂದಾಗ, ಇವಳು ನಿದ್ದೆಯನ್ನು ನಟಿಸಿದಳು. ಕ್ಷೀರಾ ತಂಗಿಯ ಕಡೆಗೆ ಒಮ್ಮೆ ನೋಡಿ ದೀಪವನ್ನು ಆರಿಸಿದಳು. ರಾಶಿ ಮಗ್ಗುಲು ಬದಲಾಯಿಸಿದಳು.

* * *

14

ನಿತ್ಯಕ್ಕಿಂತ ಸ್ವಲ್ಪ ಮುಂಚೆಯೇ ಎದ್ದು ರಾಶಿ, ಕಾಲೇಜಿಗೆ ಹೊರಡಲು ಸಿದ್ಧಳಾದಳು. "ಗಿರಿಜಮ್ಮ... ನಂಗೆ ಬೇಗ ತಿಂಡಿ ಕೊಟ್ಬಿಡಿ. ಈವತ್ತು ಸ್ಪೆಷಲ್ ಕ್ಲಾಸಿದೆ ಬೇಗ ಹೋಗ್ಬೇಕು" ಎಂದಳು.

"ಎಂಥಾ ಸ್ಪೆಷಲ್ ಕ್ಲಾಸೇ?.. ಪಾಠಾನೇ ಯಾರೂ ಸರಿಯಾಗಿ ಮಾಡುಲ್ಲ ಅಂತ ಹೇಳ್ದೆ. ಸ್ಪೆಷಲ್ ಕ್ಲಾಸ್ ಮಾಡ್ತಾರಾ?" ಸಾಕ್ಷೀ ಕೇಳಿದಳು.

"ಅದಕ್ಕೇ ಸ್ಪೆಷಲ್ ಕ್ಲಾಸ್ ಮಾಡೋದು... ಇಯರ್ ಎಂಡ್‌ನ ಹೊತ್ಗೆ ಪೋರ್ಷನ್ ಮುಗಿಸಿರಬೇಕಲ್ಲ..." ಕ್ಷೀರಾ ನಗುತ್ತಾ ನುಡಿದಳು. ರಾಶಿ ಇಬ್ಬರ ಕಡೆಗೂ ನೋಡಲಿಲ್ಲ. ಗಂಭೀರಳಾಗಿದ್ದಳು. ಹೊರಡುವ ಆತುರದಲ್ಲಿದ್ದಳು.

"ರಾಶೀ ಎಷ್ಟು ಸೀರಿಯಸ್ ಆಗಿ ಬಿಟ್ಟಿದಾಳಲ್ಲ" ಸಂಜಯ ತಮಾಷೆ ಮಾಡಿದ. ಅಕ್ಕ ತಂಗಿಯರು ಮುಖ ಮುಖ ನೋಡಿಕೊಂಡರು. ಕ್ರೀಂ ಕಲರಿನ ಚೂಡಿದಾರ್ ತೊಟ್ಟು, ಹೈ ಹೀಲ್ಡ್ ಚಪ್ಪಲಿ ಧರಿಸಿ, ಕೈಯಲ್ಲಿ ಪುಸ್ತಕಗಳನ್ನು ಹಿಡಿದು ಪರ್ಸು ಹಿಡಿದು ಹೊರಗೆ ಅಡಿ ಇಟ್ಟವಳನ್ನೇ ಸಂಜಯ ವಿಸ್ಮಯದಿಂದ ನೋಡಿದ. ನಮ್ಮ ಮದುವೇಲಿ, ಚಿಕ್ಕ ಹುಡುಗಿ ತರ ಆಟ ಆಡ್ಕೊಂಡು ಓಡಾಡ್ತಿದ್ಲು. ಈಗ ಎಷ್ಟು ಬೆಳೆದು ಬಿಟ್ಟಿದಾಳೆ ಅಲ್ವಾ?" ಕೇಳಿದ.

"ಉದ್ದಕ್ಕೆ ಬೆಳೆದಿದಾಳೆ ಅಷ್ಟೇ. ಬುದ್ಧಿ ಮಾತ್ರ ಆಟ ಆಡುವ ವಯಸ್ನೋರದ್ದೇ... ಈಗ್ಲೂ..." ಸಂಜಯ ನಕ್ಕು ತಿಂಡಿ ಮುಗಿಸಿ, ಕೈ ತೊಳೆದು ಎದ್ದ. ಅವನ ಹಿಂದೆ ಸಾಕ್ಷಿಯೂ ಮಂದಗತಿಯಲ್ಲಿ ನಡೆದು ಹೋದಳು. ಕ್ಷೀರಾ, ಹಿಂದಿನ ರಾತ್ರಿ ಮೃದುಲಾ ಫೋನು ಮಾಡಿದ್ದ ವಿಷಯವನ್ನು ಅಕ್ಕನಿಗೆ ಹೇಳುವುದೋ ಬೇಡವೋ ಎಂದು ಚಿಂತಿಸುತ್ತಾ, ತಾನೂ ಆಫೀಸಿಗೆ ಹೊರಡುವುದಕ್ಕೆ ಸಿದ್ಧಳಾಗತೊಡಗಿದಳು. ಎಷ್ಟು ಹೊತ್ತಾದರೂ, ಸಂಜಯ ಸಾಕ್ಷಿ ರೂಮಿನಿಂದ ಹೊರಬಾರದಿದ್ದಾಗ ಕ್ಷೀರ ತಂದೆಯ ರೂಮಿಗೆ ಹೋಗಿ ಅವರನ್ನು ಮಾತನಾಡಿಸಿಕೊಂಡು ಹೊರಬಂದಳು.

ಸಂಜಯ ಸಿದ್ಧನಾಗಿ ಆಫೀಸಿಗೆ ಹೊರಟಿದ್ದ. ಅವನ ಹಿಂದೆಯೇ ಬಂದ ಸಾಕ್ಷಿ ಅಲ್ಲೇ ಸೋಫಾದ ಮೇಲೆ ಕುಳಿತಿದ್ದ ಕ್ಷೀರಳನ್ನು ಕಂಡಳು. ಗಂಡನ ಮೊಣಕೈ ತಿವಿದು ಸಂಜ್ಞೆ ಮಾಡಿದಳು. ಅವನು ತಪ್ಪು ಮಾಡಿದವನಂತೆ ಅವಳನ್ನೇ ನೋಡಿದ. ಸಾಕ್ಷಿ ಕ್ಷೀರಳ ಬಳಿಗೆ ಬಂದಳು.

"ಕ್ಷೀರಾ ಆಫೀಸ್ಗೆ ಹೊತ್ತಾಗ್ಲಿಲ್ವಾ? ಕೂತೇ ಇದೀಯಲ್ಲ"

"ಹೂಂ, ಹೊರಡ್ತೀನಿ..."

"ಬರ್ತೀಯಾ ಕ್ಷೀರಾ... ನಾನು ಡ್ರಾಪ್ ಕೊಡ್ತೀನಿ..."

"ಇಲ್ಲ ಭಾವ... ನೀವು ಹೋಗಿ ನಾನು ಸ್ವಲ್ಪ ಲೇಟಾಗಿ ಹೋಗ್ತೀನಿ..." ಎಂದಳು. ಸಂಜಯ ಹೊರಟು ಬಿಟ್ಟ.

"ಯಾಕೆ ಕ್ಷೀರಾ... ಏನಾದ್ರೂ ಪ್ರಾಬ್ಲಂ ಏನೆ?... ಸಪ್ಪಗಿದೀಯಲ್ಲ..."

"ರಾತ್ರಿ ಹತ್ತೂವರೆಯ ಹೊತ್ತಿಗೆ ಮೇಡಂ ರಾಶಿಗೆ ಫೋನು ಮಾಡಿದ್ರು..."

"ಹೌದಾ ! ಯಾಕಂತೆ? ರಾಶಿ ಏನು ಹೇಳಿದ್ಲು..."

"ಏನೂಂತ ಗೊತ್ತಾಗ್ಲಿಲ್ಲ. ಅವಳೂ ಹೇಳಲಿಲ್ಲ"

"ನೀನು ಕೇಳಬೇಕಾಗಿತ್ತು. ಇದು ಸ್ವಲ್ಪ ಪೆದ್ದು... ಮೇಡಂ ಹೇಳಿದ್ದಕ್ಕೆಲ್ಲಾ ತಲೆ ಆಡಿಸುತ್ತೆ... ಅವಳ ಬಗ್ಗೆ ಯಾಕೆ ಅಷ್ಟು ಆಸಕ್ತಿ ಅವರಿಗೆ?"

"ನಂಗೂ ಗೊತ್ತಿಲ್ಲ, ಸ್ವಲ್ಪ ಅತಿ ಅನ್ನಿಸುತ್ತೆ. ಇವತ್ತು ಅವಳು ಕಾಲೇಜ್ನಿಂದ ಬಂದ್ಮೇಲೆ ಸ್ವಲ್ಪ ವಿಚಾರಿಸು... ನಾನೇನಾದ್ರೂ ಕೇಳಿದ್ರೆ ಜಗಳ ಆಡ್ತಾಳೆ"

"ನನ್ನ ಹತ್ರಾನೂ ಜಗಳ ಆಡ್ತಾಳೆ. ನನಗೂ ಆ ಟೆನ್ಷನ್‌ನ್ನೆಲ್ಲಾ ತಡಕೊಳ್ಳೋಕೇ ಆಗ್ತಿಲ್ಲ... ಸಂಜಯ್‌ಗೆ, ನಾನು ಇಲ್ಲೇ ಇದೀನಿ ಅಂತ ಕೋಪ, ಅವರ ಅಮ್ಮನಿಗೆ ಅದೇ ಅಸಮಾಧಾನ. ಈ ರಾಶೀನ ನೋಡಿದ್ರೆ ಹೀಗೇ... ಅಮ್ಮ ಅಂತೂ ಇಲ್ಲ, ಅಪ್ಪಾನಾದ್ರೂ ಸರಿಯಾಗಿ ಇರಬಾರ್ದಾಗಿತ್ತಾ? ನಮ್ಮ ಹಣೇಬರಹವೇ ಚೆನ್ನಾಗಿಲ್ಲ. ನಿನ್ನ ಮದುವೆ ಆಗ್ತಿದ್ದ ಹಾಗೇ ರಾಶೀಗೂ ಮದುವೆ ಮಾಡಿ ಬಿಡೋಣ... ಅವಳ ಜವಾಬ್ದಾರಿ ಸ್ವಲ್ಪ ಜಾಸ್ತೀನೇ..."

"ನಾವಿಬ್ರೂ ನಿನಗೆ ಅಷ್ಟು ಭಾರ ಅಂತ ಅನ್ನಿಸುತ್ತಾ ಸಾಕ್ಷೀ...?

"ಹಾಗಲ್ವೇ.. ಭಾರ ಅಂತಲ್ಲ, ಜವಾಬ್ದಾರಿ ಅಂತಂದೆ. ನಾನು ತಾನೇ ಎಷ್ಟು ದಿನ ಇಲ್ಲಿ ಇರುಕ್ಕೆ ಆಗುತ್ತೆ ಹೇಳು"

"ಅದಕ್ಕೇ ಹೇಳಿದ್ದು ಭಾವಂಗೆ ಹೇಳಿ ಬಿಡು. ನನಗೆ ಈಗಲೇ ಮದುವೆ ಬೇಡ. ಹೇಗೂ ಕೆಲಸ ಇದೆ. ರಾಶಿಯ ಜವಾಬ್ದಾರಿ ನನಗಿರಲಿ"

"ಬಹಳ ಚೆನ್ನಾಗಿ ಹೇಳ್ತೀಯ ಕ್ಷೀರಾ? ನೋಡಿದೋರು ಆಡಿಕೊಳ್ತಾರೆ. ಸಂಜೂಗೆ ನಿಮ್ಮಿಬ್ಬರದ್ದೇ ಚಿಂತೆ... ನಿಮ್ಮಿಬ್ಬರಿಗೂ ಮದುವೆ ಮಾಡಿ, ಅಪ್ಪನ್ನ ನಮ್ಮ ಮನೆಗೆ ಕರ್‍ಕೊಂಡು ಹೋಗಿ ಇಟ್ಕೊಳ್ತೀನಿ"

"ಭಾವ, ನಿಮ್ಮತ್ತೆ ಒಪ್ತಾರೇನೆ?"

"ಒಪ್ಪಿಸ್ತೀನಿ... ಇಲ್ದಿದ್ರೆ ನಾನು ಇಲ್ಲೇ ಇರ್ತೀನಿ ಅಂತ ಹಠ ಮಾಡ್ತೀನಿ"

"ಅಮ್ಮ ಇದ್ದಿದ್ರೆ, ಈ ರಗಳೆ ಎಲ್ಲಾ ಇರ್ತಿರಲಿಲ್ಲ... ಅಲ್ವಾ?..."

"ಹೂಂ, ಅಮ್ಮ ಇದ್ದಿದ್ರೆ ಅಂತ, ಈಗ ಅಮ್ಮನ್ನ ನೆನೆಸಿಕೊಳ್ತೀವಿ. ನಾವೂ ಅಮ್ಮನ್ನ ಎಷ್ಟು ಗೋಳು ಹೋಯ್ದು ಕೊಳ್ತಿದ್ವು ಅಲ್ವಾ?... ನಾನಂತೂ ರಾಶಿಯ ಥರಾನೇ ಆಡ್ತಿದ್ದೆ... ಅತ್ತೆ ಮನೆಗೆ ಹೋದ್ಮೇಲೆ ಮೆತ್ತಗಾದೆ. ರಾಶಿಗೂ ಅತ್ತೆ ಮಾವ ಇರೋ ಮನೇನ ಹುಡುಕೋಣ, ಮೆತ್ತಗಾಗ್ತಾಳೆ" ಇಬ್ಬರಿಗೂ ನಗು ಬಂದಿತ್ತು.

"ಯಾಕೋ ಇವತ್ತು ಆಫೀಸ್ಗೆ ಹೋಗೋಕೆ ಬೇಜಾರಾಗ್ತಿದೆ. ಅಪ್ಪ ಯಾಕೋ ಡಲ್ ಆಗಿದಾರೆ ಅಂತ ಅನ್ನಿಸ್ತು..."

"ಹೌದೇನೇ? ಈಗ ಹೇಳ್ತಿದೀಯಲ್ಲ. ಡಾಕ್ಟರಿಗೆ ಫೋನು ಮಾಡು. ಬಂದು ಚೆಕಪ್ ಮಾಡ್ಲೀ... ನಂಗಂತೂ ಬೇಗ ಡೆಲಿವರಿ ಆದರೆ ಸಾಕು ಅಂತ ಅನ್ನಿಸ್ತಿದೆ. ನಾನು ಸ್ವಲ್ಪ ಹೊತ್ತು ರೆಸ್ಟ್ ತಗೋತೀನಿ" ಎಂದು ಹೇಳಿ ತನ್ನ ರೂಮಿಗೆ ಹೊರಟು ಹೋದಳು. ಕ್ಷೀರಾ ಡಾಕ್ಟರಿಗೆ ಫೋನು ಮಾಡಿದಳು.

* * *

15

ರಾಶಿ ಮೇಡಂ ಮೃದುಲಾಳ ಮನೆಯನ್ನು ತಲುಪಿದಳು. ಮನೆಯಿಂದ ಹೊರಟಾಗಲಿಂದ ಮೇಡಂ ಯಾಕೆ ಬರಹೇಳಿರಬಹುದು ಎಂಬ ಕುತೂಹಲ, ಆತಂಕ ಗಳಿಗೆ ಗಳಿಗೆಗೂ ಹೆಚ್ಚಾಗುತ್ತಿತ್ತು. ಮೃದುಲಾ ಇವಳಿಗಾಗಿಯೇ ಕಾಯುತ್ತಾ ಇದ್ದಳೆಂದು ಅವಳ ಮುಖದಲ್ಲೇ ವ್ಯಕ್ತವಾಗುತ್ತಿತ್ತು.

"ನಮಸ್ಕಾರ ಮೇಡಂ" ಎಂದಳು.

"ಬಾ... ರಾಶಿ... ನೀನೆಲ್ಲಿ ಬರೋಲ್ವೋ ಅಂತ ಅಂದ್ಕೊಂಡಿದ್ದೆ" ಎಂದು ಹೇಳಿ, ಅವಳ ಕೈ ಹಿಡಿದು ಒಳಕ್ಕೆ ಕರೆದುಕೊಂಡು ಹೋದಳು. ಅಲ್ಲಿ ಸೋಫಾದ ಮೇಲೆ ಕಾರ್ತೀಕ ಕುಳಿತಿದ್ದ. ಇವಳನ್ನು ಕಂಡು ಮುಗುಳ್ನಕ್ಕು "ಹಲೋ" ಎಂದಿದ್ದ. ಇವಳು ಮುಜುಗರಗೊಂಡಿದ್ದಳು. ರಾಶಿ ಕುಳಿತಳು.

"ನೀವಿಬ್ರೂ ಮಾತಾಡ್ತಾ ಇರಿ, ನಾನು ನಿಮ್ಮಿಬ್ಬರಿಗೂ ತಿಂಡಿ ತರ್ತೀನಿ" ಎಂದು ಅವಳು ಒಳಗೆ ಹೋದಾಗ "ನನ್ನ ತಿಂಡಿ ಆಗಿದೆ ನನಗೆ ಬೇಡ" ಎಂದು ಹೇಳಲೂ ಆಗದಂತೆ ಸುಮ್ಮನಾಗಿದ್ದಳು.

"ಬನ್ನಿ... ಅಲ್ಲೇ ಊಟದ ಮನೇಗೇ ಹೋಗೋಣ" ಕಾರ್ತೀಕ ಎದ್ದ.

ರಾಶಿ ಅವನನ್ನು ಹಿಂಬಾಲಿಸಿದಳು. ಮೃದುಲಾ ಮೂವರಿಗೂ ತಿಂಡಿಯನ್ನು ಹಾಕಿ ಡೈನಿಂಗ್ ಟೇಬಲ್ ಮೇಲೆ ತಂದಿಟ್ಟಳು. ತರಕಾರಿಗಳನ್ನು ಹಾಕಿ ಮಾಡಿದ್ದ ರವೆ ಬಾತ್ ಘಮ ಘಮ ಎನ್ನುತ್ತಿತ್ತು.

"ತಗೊಳ್ಳಿ" ಎಂದು ಹೇಳಿ, ಕಾರ್ತೀಕ ತಾನು ಚಮಚದಿಂದ ತಿನ್ನಲು ಆರಂಭಿಸಿದ. ರಾಶಿಯೂ ಚಮಚವನ್ನು ಎತ್ತಿಕೊಂಡಳು. ಅವಳ ಪಕ್ಕದಲ್ಲೇ ಕುಳಿತ ಮೃದುಲಾ ಮಾತಿಗಾರಂಭಿಸಿದಳು.

"ನಿಮ್ಮ ಅಕ್ಕ, ಕ್ಷೀರಾಗೆ, ಯಾವುದಾದರೂ ಗಂಡುಗಳನ್ನು ನೋಡ್ತಾ ಇದಾರಾ? ಅವಳ ವಯಸ್ಸೆಷ್ಟು?"

"ಯಾಕೆ ಮೇಡಂ?" ಅವಳ ಕಣ್ಣುಗಳು ಕಾರ್ತೀಕನ ಕಡೆ ತಿರುಗಿದವು. ಅವನ ಮುಖದಲ್ಲಿ ಮಂದಹಾಸ ಮಿನುಗಿತ್ತು.

"ನಮ್ಮ ಕಡೆ ಸಂಬಂಧದ ಹುಡುಗ ಒಬ್ಬ ಇದಾನೆ. ಇಂಜನಿಯರ್‍ರು ಫಾರಿನ್ನಿನಲ್ಲಿದಾನೆ. ಸಧ್ಯದಲ್ಲೇ ಇಂಡಿಯಾಗೆ ಬರ್ತಿದಾನೆ. ನೋಡ್ಡೋಕೆ ತುಂಬಾ ಚೆನ್ನಾಗಿದಾನೆ" ಕಾರ್ತೀಕ ಹುಬ್ಬೇರಿಸಿ ಮೃದುಲಾಳ ಕಡೆ ನೋಡಿದ.

"ಕ್ಷೀರಾ, ಅಮೆರಿಕಾದ ಹುಡುಗನ್ನ ಖಂಡಿತಾ ಮದುವೆಯಾಗುಲ್ಲ ಮೇಡಂ"

"ಯಾಕೆ?..." ರಾಶಿ ಮತ್ತೆ ಕಾರ್ತೀಕನ ಕಡೆ ನೋಡಿದಳು.

"ಅವಳಿಗೆ ಇಷ್ಟವಿಲ್ಲ"

"ನಿಂಗೆ ಹೇಗೆ ಗೊತ್ತು? ಹಾಗಂತ ಹೇಳಿದಾಳಾ?"

"ನಮ್ಮ ಭಾವನ ಫ್ರೆಂಡ್ ಒಬ್ಬರು ಅಮೆರಿಕಾದಿಂದ ಬರ್ತಿದಾರೆ... ಅವನು ಮದುವೆಗೆ ಇದಾನೆ ಅಂತ ಭಾವ ಹೇಳಿದ್ರು. ಆದರೆ ಕ್ಷೀರಂಗೆ ಸುತರಾಂ ಇಷ್ಟವಿಲ್ಲ. ಸಧ್ಯಕ್ಕೆ ಮದುವೇನೇ ಬೇಡ ಅಂತ ಹಠ ಮಾಡ್ತಿದಾಳೆ. ಮನೇಲಿ ದಿನಾ ಅದೇ ಚರ್ಚೆ..." ಕಾರ್ತೀಕ ಒಳಗೊಳಗೇ ನಗುತ್ತಿದ್ದ.

"ಎಷ್ಟು ವರ್ಷ ಮದುವೇನೇ ಇಲ್ಲದೆ ಹೇಗೆ ಇರ್ತಾಳೆ. ಅವಳು ಬೇಗ ಮದುವೆಯಾದರೆ, ನಿನ್ನ ಮದುವೇನೂ ಬೇಗ ಮಾಡಬಹುದು"

ರಾಶಿ ನಾಚಿದಳು. ಅವಳ ಮುಖ ಕೆಂಪಾಗಿತ್ತು... "ಅವಳ, ನನ್ನ ಮದುವೆ ಆದ್ಮೇಲೆ, ಅವಳು ಮದುವೆ ಆಗ್ತಾಳಂತೆ" ಮೃದುಲಾ ಮತ್ತು ಕಾರ್ತೀಕ ಇಬ್ಬರೂ ಒಟ್ಟಿಗೇ ಗೊಳ್ ಅಂತ ನಕ್ಕು ಬಿಟ್ಟರು.

"ಮೇಡಂ....' ರಾಶಿ ರಾಗ ಎಳೆದಳು.

"ನೀನೂ ನಕ್ಕು ಬಿಡು ರಾಶೀ... ನಿನ್ನ ಮದುವೆಗೆ ಇನ್ನು ಬೇಕಾದಷ್ಟು ವರ್ಷಗಳು ಬಾಕಿ ಇವೆ. ಅಲ್ಲೀವರ್ಗೂ ಕಾಯಬೇಕಲ್ಲ" ಕಾರ್ತೀಕ ರಾಶಿಯ ಮುಖವನ್ನೇ ನೋಡುತ್ತಾ ಕಾಫಿಯನ್ನು ಕುಡಿದು ಮುಗಿಸಿದ. ಅವಳು ಕೆಂಗುಲಾಬಿ ಯಂತಾಗಿದ್ದಳು. ಕ್ಷೀರಂಗಿಂತ ಇವಳು ಭಿನ್ನ. ಆದರೆ ಕ್ಷೀರ ಇವಳಿಗಿಂತ ಚೆನ್ನ... ಹೆಸರಿಗೆ ತಕ್ಕಂತೆ ಹಾಲಿನ ಮೈ ಬಣ್ಣ... ಬರೀ ಹಾಲಿನಂತಲ್ಲ. ಕೇಸರಿ ಹಾಕಿದ ಹಾಲಿ ನಂತಹ ಮೈ ಬಣ್ಣ... ಅವನು ಅವಳ ಮುಖ ಸೌಂದರ್ಯವನ್ನು ಮೆಲಕು ಹಾಕುತ್ತಿದ್ದ. ಮೃದುಲಾಳ ಧ್ವನಿ ಅವನನ್ನು ಎಚ್ಚರಿಸಿತು.

"ಕಾರ್ತೀಕ್...ಏನು ಯೋಚಿಸ್ತದೀಯೋ... ನೀನು ಎಷ್ಟು ಹೊತ್ತಿಗೆ ಹೊರಡ್ತಿದೀಯ?... ನಾವಿಬ್ಬರೂ ಇನ್ನಾ ಸ್ವಲ್ಪ ಹೊತ್ತು ಬಿಟ್ಟು ಹೊರಡ್ತೀವಿ."

"ನಾನು ಹೊರಟೆ..." ಎನ್ನುತ್ತಾ ಎದ್ದ. "ಬೈ ರಾಶೀ" ಎಂದು ಹೇಳಿ ಹೊರನಡೆದ. ಮೃದುಲಾ ಇತ್ತ ತಿರುಗಿದಳು..

"ರಾಶೀ.. ನಮ್ಮ ಕಾರ್ತೀಕ್‌ನ ನೋಡಿದ್ರೆ ನಿಂಗೇನನ್ನಿಸುತ್ತೆ?...."

"ಚೆನ್ನಾಗಿದಾರೆ. ಹ್ಯಾಂಡ್ಸಮ್... ಸ್ಮಾರ್ಟ್... ಯಾಕೆ ಕೇಳ್ತಿದೀರಿ ಮೇಡಂ..."

"ಸುಮ್ಮನೇ ಕೇಳಿದೆ. ಅವನು ನೀವು ಮೂರು ಜನರನ್ನು ಸದಾ ಹೊಗಳ್ತಾ ಇರ್ತಾನೆ. ನೀವು ಮೂವರು ನೋಡೋಕೆ ಚೆನ್ನಾಗಿದೀರ. ನಿಮ್ಮ ಹೆಸರುಗಳೂ ತುಂಬಾ ಚೆನ್ನಾಗಿವೆ. ಯಾರ ಸೆಲೆಕ್ಷನ್..?"

"ಅಮ್ಮಂದು ಅಂತ ಸಾಕ್ಷೀ ಹೇಳ್ತಾನೇ ಇರ್ತಾಳೆ.. ಸಾಕ್ಷೀ ತುಂಬಾ ಚೆನ್ನಾಗಿದ್ಲು ಮೇಡಂ. ಮದುವೆಯಾದ್ಮೇಲೆ ಅವಳಿಗೆ ಹೀಗೆ ಮೈ ಬಂದಿದೆ."

"ಪ್ರೆಗ್ನೆಂಟ್ ಅಲ್ವಾ? ಡೆಲಿವರಿ ಆದ್ಮೇಲೆ ಸರಿ ಹೋಗ್ತಾರೆ. ಯಾವಾಗ ಡ್ಯೂ ಡೇಟ್.. ನಿಂಗೆ ಗೊತ್ತಾ?"

"ಇಲ್ಲ, ನಂಗೊತ್ತಿಲ್ಲ ಮೇಡಂ. ನಾನು ಕೇಳಿಲ್ಲ. ನಾನು ಅದನ್ನೆಲ್ಲ ಕೇಳಿದ್ರೆ ನಿಂಗ್ಯಾಕೆ ಅದೆಲ್ಲಾ.. ನೀನಿನ್ನು ಚಿಕ್ಕೋಳು ಅಂತ ಇಬ್ರೂ ರೇಗ್ತಾರೆ. ನಂಗೆ ಇಬ್ಬರ ಮೇಲೂ ಸಿಟ್ಟು ಬರುತ್ತೆ. ನಾನು ಇಬ್ಬರ ಹತ್ರಾನೂ ಜಗಳ ಆಡ್ತೀನಿ."

"ಅದು ತಪ್ಪು ರಾಶೀ... ಅಕ್ಕಂದಿರಿಗೆ ನಿನ್ಮೇಲೆ ತುಂಬಾ ಪ್ರೀತಿ.. ಅದಕ್ಕೇ ನಿನ್ನನ್ನ ಚಿಕ್ಕೋಳ ಥರಾ ನೋಡ್ಕೋತಾರೆ. ಇಬ್ಬರೂ ಕೇರ್ ತಗೋತಾರೆ..."

"ನಾನು ಚಿಕ್ಕೋಳೇನಲ್ಲ ಮೇಡಂ... ನಾನೂ ಕಾಲೇಜಿನಲ್ಲಿ ಓದುತ್ತಿಲ್ವಾ?"

"ಮನೇಲಿ ನೀನು ಎಲ್ಲರಿಗಿಂತ ಚಿಕ್ಕೋಳಲ್ವಾ... ಅವರಿಬ್ಬರಿಗೂ ನೀನು ಚಿಕ್ಕವಳೇ... ನಿನ್ನ ಈ ಡ್ರೆಸ್ ತುಂಬಾ ಚೆನ್ನಾಗಿದೆ. ನೀನು ಸೀರೆ ಉಡುಲ್ವಾ?"

"ಇಲ್ಲ ಮೇಡಂ... ನಂಗೆ ಸೀರೇನ ಉಡೋಕೆ ಸರಿಯಾಗಿ ಬರುಲ್ಲ. ಅಲ್ಲದೇ ಮ್ಯಾನೇಜ್ ಮಾಡೋಕೆ ಕಷ್ಟ. ನಂಗೆ ಜೀನ್ಸ್ ಪ್ಯಾಂಟ್, ಟಾಪ್ ಹಾಕ್ಕೋಬೇಕು ಅಂತ ಆಸೆ... ಆದರೆ ಅಕ್ಕಂದಿರು ಬೇಡ ಅಂತಾರೆ..." ಮೃದುಲಾ ಮುಗುಳ್ನಗೆಯನ್ನು ನಕ್ಕಳು.

"ನಿನ್ನ ಅಕ್ಕಂದಿರು ಹೇಳಿದ ಹಾಗೆ ಕೇಳಿ ಬಿಡು ರಾಶೀ... ಆಗ ಯಾವ ಬೇಸರವೂ ಇರುಲ್ಲ. ಈಗ ನಿನ್ನ ಗಮನವೆಲ್ಲಾ ಓದಿನ ಮೇಲಿರಬೇಕು. ಮುಂದೆ ಏನು ಓದಬೇಕು ಅಂತ ಆಸೆ...?"

"ನನಗೂ ನಿಮ್ಮ ಹಾಗೆ ಲೆಕ್ಚರರ್ ಆಗಬೇಕು ಅಂತ ಆಸೆ ಮೇಡಂ. ಇಂಗ್ಲೀಷ್‌ನಲ್ಲಿ ಎಂ.ಎ. ಮಾಡ್ತೀನಿ"

"ನನ್ನನ್ನು ನೋಡೋಕೆ ಮುಂಚೆಯಿಂದ್ಲೂ ಈ ಆಸೆ ಇತ್ತಾ? ಇರಲಿಲ್ಲ ಅಲ್ವಾ?..."

"ಇಂಜನಿಯರಿಂಗ್ ಓದ್ಬೇಕು ಅಂತ ಆಸೆ ಇತ್ತು ಮೇಡಂ... ಆದರೆ... ನನ್ನನ್ಯಾರು ಓದಿಸ್ತಾರೆ ಮೇಡಂ? ಅಮ್ಮ ಇಲ್ಲ, ಅಪ್ಪಂಗೆ ಹುಶಾರಿಲ್ಲ..."

"ಈಗ್ಲಿಂದ ಯೋಚ್ನೆ ಮಾಡ್ಬೇಡ ರಾಶೀ... ಅಷ್ಟು ಹೊತ್ತಿಗೆ ಏನಾದರೂ ಒಂದು ದಾರಿ ಸಿಕ್ಕೇ ಸಿಗುತ್ತೆ. ನಿನಗೆ ಏನು ಇಷ್ಟವೋ ಅದನ್ನೇ ಓದೂವಂತೆ... ಈಗ, ಈ ವರ್ಷದ ಪರೀಕ್ಷೆಗೆ ಮಾತ್ರ ಚೆನ್ನಾಗಿ ತಯಾರಿಯಾಗ್ಬೇಕು. ನಿಂಗೇನು ಬೇಕಾದ್ರೂ ನನ್ನನ್ನ ಕೇಳು. ನಾನು ನಿಂಗೆ ಹೆಲ್ಪ್ ಮಾಡ್ತೀನಿ"

"ಆಯ್ತು ಮೇಡಂ..." ಮೃದುಲಾ ರಾಶಿಯ ತಲೆಯ ಮೇಲೆ ಕೈಯಾಡಿಸಿದಳು. ರಾಶಿಗೆ ಹಿತವೆನಿಸಿತ್ತು. ನಾನು ನಮ್ಮ ಮಮ್ಮೀನ ತುಂಬಾ ಮಿಸ್ ಮಾಡ್ಕೊಳ್ತಿದೀನಿ ಮೇಡಂ" ಎಂದು ಹೇಳಿದಳು. ಅವಳ ಧ್ವನಿ ಭಾರವಾಗಿತ್ತು. ಮೃದುಲಾ ಅವಳ ತಲೆಯನ್ನು ತನ್ನ ಎದೆಗೆ ಆನಿಸಿಕೊಂಡಳು. ರಾಶಿಗೆ ಧೈರ್ಯ ಬಂದೆಂತೆನಿಸಿತ್ತು. ಸ್ವಲ್ಪ ಹೊತ್ತಿನ ನಂತರ ಇಬ್ಬರೂ ಮನೆಯಿಂದ ಹೊರಟರು.

* * *

16

ತನ್ನ ಛೆಂಬರಿನ ಒಳಗೆ ಹೋಗುವ ಮೊದಲು, ಕಾರ್ತೀಕ ಕ್ಷೀರ ಕುಳಿತುಕೊಳ್ಳುವ ಛೇರ್ ಕಡೆ ನೋಡಿದ. ಅವಳಿನ್ನು ಬಂದಿಲ್ಲ ಎನ್ನುವುದು ಅರಿವಾಯಿತು. ಹತ್ತು ನಿಮಿಷಗಳು ಕಳೆದ ನಂತರ, ಬೆಲ್ ಮಾಡಿ ಅಟೆಂಡರ್‌ನ ಕರೆಸಿದ.

"ಕ್ಷೀರಾ ಮೇಡಂ ಬಂದಿದ್ರೆ, ಬಾಸ್ ಕರೀತಿದಾರೆ ಅಂತ ಹೇಳು" ಎಂದ.

"ಅವರಿನ್ನು ಬಂದಿಲ್ಲ ಸಾರ್..." ಅವನು ತಕ್ಷಣವೇ ನುಡಿದ.

"ಹೌದಾ? ಇನ್ನು ಬಂದಿಲ್ವಾ?" ಎನ್ನುತ್ತಾ ತನ್ನ ಕೈ ಗಡಿಯಾರವನ್ನು ನೋಡಿಕೊಂಡ. "ಪಂಕಜ ಮೇಡಂಗೆ ಬಾಸ್ ಕರೀತಿದಾರೆ ಅಂತ ಹೇಳು" ಅಟೆಂಡರ್‌ನ ಕಳಿಸಿದ. ಕ್ಷೀರಾ ಯಾಕೆ ಇನ್ನು ಬಂದಿಲ್ಲ. ಮನಸ್ಸು ಕಳವಳಗೊಂಡಿತ್ತು. ಅಕ್ಕ ಭಾವನ ಬಲವಂತಕ್ಕೆ ಒಪ್ಪಿ, ಇಂದಿನಿಂದಲೇ ಕೆಲಸಕ್ಕೆ ಬರುವುದನ್ನು ನಿಲ್ಲಿಸಿರಬಹುದೇ ಅಂತಂದುಕೊಂಡಾಗ, ಆ ಅನಿಸಿಕೆ ಹಿತವೆನಿಸಲಿಲ್ಲ. ರಾಶಿಯ ಮಾತುಗಳಿಂದ ಅವನ ಹೃದಯ ಅರಳಿತ್ತು. ಈಗ ಆತಂಕದಿಂದ ಮುದುಡಿತ್ತು.

ಅವಳನ್ನು ತನ್ನ ಛೇಂಬರ್‌ಗೆ ಕರೆಸಿ, ಕೀಟಲೆ ಮಾಡಿ, ರೇಗಿಸುವ ಆಸೆಯನ್ನು ಇಟ್ಟುಕೊಂಡಿದ್ದವನಿಗೆ ನಿರಾಸೆ ಆಗಿತ್ತು. ತಡವಾಗಿ ಬಂದರೆ, ಖಂಡಿತಾ ಸುಮ್ಮನಿರುವುದಿಲ್ಲ. ಕರೆದು ಗದರಿ, ಅಳಿಸುತ್ತೇನೆ ಅಂತಂದುಕೊಳ್ಳುವಾಗ, ಅವನ ಪರ್ಸನಲ್ ಫೋನು ರಿಂಗಾಗಿತ್ತು. ರಿಸೀವರ್‌ನೆತ್ತಿ 'ಹಲೋ' ಅಂತಂದ. ಅತ್ತಲಿಂದ ಕ್ಷೀರಾಳ ಧ್ವನಿ ಕೇಳಿತ್ತು. ತಂಗಾಳಿ ಬೀಸಿದಂತಾಗಿತ್ತು.

"ಹಲೋ... ನಾನು ಸಾರ್... ಕ್ಷೀರಾ... ನಮಸ್ಕಾರ ಸಾರ್..."

"ಮನೇಲೆ ಕೂತ್ಕೊಂಡು ಏನ್ಮಾಡ್ತಿದೀರಿ? ಇಷ್ಟು ಹೊತ್ತಾದ್ರೂ ಆಫೀಸ್ಗೆ ಯಾಕೆ ಬಂದಿಲ್ಲ?" ಧ್ವನಿಯನ್ನು ಗಡುಸು ಮಾಡಿಕೊಂಡು ಒರಟಾಗಿ ಕೇಳಿದ.

"ಅದನ್ನು ಹೇಳೋಕೇ ಫೋನು ಮಾಡ್ದೆ ಸಾರ್..." ಉಗುಳು ನುಂಗಿದಳು. ಅವನಿಗೆ ನಗು ಬಂದಿತ್ತು.

"ರಜಾ ಬೇಕು ತಾನೇ? ರಜಾ... ರಜಾ... ರಜಾ... ಹಾಕ್ತಾನೇ ಇರ್ತೀರಲ್ಲ. ಮನೇಲೇ ಇದ್ಬಿಡಿ. ಕೆಲಸ ಯಾಕೆ ನಿಮ್ಮಂಥೋರಿಗೆ?"

"ಸಾರಿ... ಸಾರ್" ಅವಳು ಡಿಸ್‌ಕನೆಕ್ಟ್ ಮಾಡಿದಳು. ರಿಸೀವರ್‌ನ್ನಿಟ್ಟ ಸದ್ದು ಕೇಳಿಸಿದಾಗ ಎಚ್ಚೆತ್ತ. ತನ್ನ ಹುಸಿ ಮುಂಗೋಪ ಸ್ವಲ್ಪ ಅತಿಯಾಯಿತೇನೋ ಅಂತ ಎನಿಸಿತ್ತು. ಅವಳು ಮತ್ತೆ ಫೋನು ಮಾಡಿದರೆ, ತಾನು ರೇಗಬಾರದೆಂದುಕೊಂಡು ಕಾದ. ಆದರೆ ಫೋನು ರಿಂಗಾಗಲಿಲ್ಲ. ಅವನ ಚಡಪಡಿಕೆ ಅವನಿಗೇ ಸಾಕೆನ್ನಿಸಿತ್ತು. ಅವಳ ಮನೆಯ ನಂಬರ್ರಿಗೆ ಡಯಲ್ ಮಾಡಿದ.

ಫೋನನ್ನೆತ್ತಿಕೊಂಡವಳು ಅಡಿಗೆಯ ಗಿರಿಜಮ್ಮ. ಕ್ಷೀರಾ ಮನೆಯಲ್ಲಿಲ್ಲವೆಂದು ತಿಳಿಸಿದಳು. "ರಾಯರಿಗೆ ಸ್ವಲ್ಪ ಹುಶಾರಿರಲಿಲ್ಲ. ಮನೆಗೇ ಡಾಕ್ಟರು ಬಂದು ನೋಡ್ಕೊಂಡು ಹೋದ್ರು. ಕ್ಷೀರಾ ಮೆಡಿಕಲ್ ಸ್ಟೋರ್ಸ್‌ಗೆ ಹೋಗಿದಾಳೆ" ಅಂತ ಆಕೆ ಹೇಳಿದಾಗ ಅವನಿಗೆ ಪೆಚ್ಚಾಯಿತು. ಕ್ಷೀರಾಳ ಅಸಹಾಯಕತೆಯನ್ನು ತಿಳಿದುಕೊಳ್ಳದೇ ತಾನು ತಮಾಷೆ ಮಾಡಿದ್ದು ಸರಿಯಲ್ಲವೆಂದೆನಿಸಿತು.

"ಕ್ಷೀರಾ ಮನೆಗೆ ಬಂದ ತಕ್ಷಣ ಆಫೀಸಿಗೆ, ನನಗೆ ಫೋನ್ ಮಾಡುವಂತೆ ಹೇಳಿ" ಎಂದು ಹೇಳಿದ. ಆದರೆ ಅವಳಿಂದ ಎಷ್ಟು ಹೊತ್ತಾದರೂ ಫೋನು ಬರದಿದ್ದಾಗ ನಿರಾಸೆಯಿಂದ ಚಡಪಡಿಸಿದ. "ತಪ್ಪು ನನ್ನದೇ... ಮತ್ತೆ ಫೋನು ಮಾಡಲು ಭಯ ಇರುತ್ತೆ. ನನ್ನಿಂದ ಬೈಗುಳ ಕೇಳಿಸಿಕೊಳ್ಳುವ ಸಹನೆ ಅವಳಿಗ್ಯಾಕೆ ಇರುತ್ತೆ" ಎಂದುಕೊಂಡ. ಆದರೂ ಫೋನು ಬಂದೀತೆಂಬ ನಿರೀಕ್ಷೆಯಲ್ಲೇ ಮಧ್ಯಾಹ್ನದವರೆಗೂ ಕಾಲ ಕಳೆದ.

ಈ ಹೆಣ್ಣು ಹುಡುಗೀರೇ ಹೀಗೆ ಸ್ವಾರ್ಥಿಗಳು. ನಮ್ಮ ಕಷ್ಟ ಏನೂಂತ, ನಮ್ಮ ಮನಸ್ನಲ್ಲೇನಿದೆ ಅಂತ ಅರ್ಥವೇ ಆಗುಲ್ಲ. ತಮ್ಮ ಕಷ್ಟವನ್ನು ನಮ್ಮ ಮೇಲೆ ಹೇರಿ, ಆರಾಮವಾಗಿರ್ತಾರೆ. ಇದರ ಮೇಲೆ ಕೋಪ ಬೇರೆ. ನಾನೇ ಸಮಾಧಾನ ಮಾಡಬೇಕೇನೋ. ಆಗಲಿ ಇದೂ ಒಂದು ಸೇವೆ. ಮೃದುಲಾ ಹೇಳುವ ಹಾಗೆ ನಾನೇ ಸೋಲಬೇಕು... ಆಯ್ತು ನಾನೇ ಸೋತು ಗೆಲ್ತೀನಿ. ಪ್ರೀತಿಯೆಂಬ ಕಣಕ್ಕೆ ಇಳಿದುದ್ದಾಗಿದೆ ಎಂದುಕೊಂಡು ಮತ್ತೆ ತಾನೇ ಡಯಲ್ ಮಾಡಿದ. ಮತ್ತೆ ರಿಸೀವರ್‌ನೆತ್ತಿಕೊಂಡವಳು ಗಿರಿಜಮ್ಮನೇ. "ಮಲಗಿದಾರೆ ಎಬ್ಬಿಸ್ಲಾ?" ಅಂತ ಕೇಳಿದಾಗ ಹಲ್ಲು ಕಡಿದ.

"ಹುಂ ಎಬ್ಬಿಸಿ... ಪ್ಲೀಸ್... ಅರ್ಜೆಂಟು ಅಂತ ಹೇಳಿ" ಕ್ಷೀರಾ ಎದ್ದು ಬರುವವರೆಗೂ, ಕಾಲುಗಳನ್ನು ಕುಣಿಸಿದ. "ಹಲೋ" ಎಂದಳು.

"ಸಾರೀ... ಮಲಗಿದ್ರಂತೆ... ಡಿಸ್ಟರ್ಬ್ ಆಯ್ತಾ ಕ್ಷೀರಾ?" ಅವನ ವ್ಯಂಗ್ಯ ಅವಳಿಗೆ ತಿಳಿಯಿತು.

"ಹೂಂ, ನಿಮ್ಮ ವರ್ತನೆಯಿಂದ ನನಗೆ ತಲೆನೋವು ಹೆಚ್ಚಾಗಿದೆ" ಎಂದಳು.

"ನಾನೇನ್ಮಾಡ್ದೆ? ಫೋನು ಮಾಡಿ ವಿಚಾರಿಸುವುದೂ ತಪ್ಪಾ?"

"ಮಾತು ಮಾತಿಗೆ ರೇಗ್ತೀರಿ.. ಇದರ ಅರ್ಥ ಏನು?... ಇದಕ್ಕಿಂತ ಬೇರೆ ಏನು ಬೇಕು ತಲೆ ನೋವು ಬರೋಕೆ?"

"ಸಾರೀ ಕ್ಷೀರಾ... ನೀವು ಆಫೀಸ್ಗೆ ಬರ್ಲೇ ಇಲ್ಲ. ನಿಮಗೋಸ್ಕರ ಕಾದೂ ಕಾದೂ ಬೇಸರವಾಯ್ತು. ಅಪ್ಸೆಟ್ ಆಗ್ದೇ ಇರ್ತೀನಾ? ನೆನ್ನೆ ರಾತ್ರಿಯೆಲ್ಲಾ ತಲೆ ಕೆಡಿಸಿಕೊಂಡು, ನಿಮಗೋಸ್ಕರ ಒಂದು ಉಪಾಯಾನ ಹುಡುಕಿದ್ದೆ. ಅದನ್ನು ನಿಮಗೆ ಹೇಳ್ಬೇಕು ಅಂತ ಉತ್ಸಾಹದಿಂದ ಆಫೀಸಿಗೆ ಬಂದರೆ, ನೀವೇ ಚಕ್ಕರ್. ನಿಮ್ಮ ಭಾವ ಮತ್ತೆ ನಿಮ್ಮ ಹತ್ರ ಮಾತಾಡಿದ್ರಾ? ಬಲವಂತ ಮಾಡ್ನಿಲ್ಲ ತಾನೇ?"

"ಬಲವಂತ ಏನೂ ಮಾಡ್ಲಿಲ್ಲ. ಮಧ್ಯಾಹ್ನ ಊಟಕ್ಕೆ ಬಂದ ಭಾವ, ಅನನ್ನು ಕರ್ಕೊಂಡು ಹೋಗಿದಾರೆ. ಅವನು ಸಿಕ್ಕಿದರೆ, ಇವತ್ತೇ ಸಾಯಂಕಾಲಕ್ಕೇ ಬರೋಕೆ ಹೇಳ್ತಾರಂತೆ. ಅದಕ್ಕೇ ನನ್ನ ತಲೆನೋವು ಹೆಚ್ಚಾಗಿದೆ"

"ಮತ್ತೆ ನನ್ನ ಮೇಲೆ ತಪ್ಪು ಹಾಕಿದ್ರಿ..."

"ಮತ್ತೇನು ಮಾಡ್ಲಿ ಸಾರ್?... ಅವನಂತೂ ಯಾರೋ ಹೊರಗಿನವನು... ನೀವು ನನ್ನವರು ಅಂತ ಅನ್ನಿಸ್ಕೊಂಡು... ನನ್ನ ಹತ್ರ ಒಂದು ಸಮಾಧಾನವಾದ ಮಾತು ಕೂಡಾ ಆಡುಕ್ಕೆ ಆಗುಲ್ವಾ?..."

"ಸಾರಿ ಎಗೇನ್ ಕ್ಷೀರಾ... ಅಂಡ್ ಥ್ಯಾಂಕ್ ಯೂ... ನಾನು, ನಿಮ್ಮವನು ಅನ್ನೋ ಅಭಿಮಾನ ಇಟ್ಕೊಂಡಿದೀರಲ್ಲ... ಐ ಆಮ್ ಹ್ಯಾಪೀ... ಈಗ ನಾನು ಬರ್ಲಾ ಯಾರೂ ಇಲ್ಲ ಅಂತೀರಲ್ಲ"

"ಬೇಡಾ ಸಾರ್... ನಾನೇ ಮ್ಯಾನೇಜ್ ಮಾಡ್ತೀನಿ..."

"ಅವರುಗಳು ಬಂದು ಹೋದ್ಮೇಲೆ ಫೋನು ಮಾಡಿ... ನನ್ನ ಮನೆಯ ನಂಬರನ್ನು ಬರೆದುಕೊಳ್ಳಿ..."

"ಬೇಡಾ ಸಾರ್... ನಾಳೆ ತಪ್ಪದೇ ಆಫೀಸಿಗೆ ಬರ್ತೀನಿ. ಆಗ್ಲೇ ಎಲ್ಲಾ ಮಾತಾಡ್ತೀನಿ. ಮನೇಲಿ ಎಲ್ರಿಗೂ ಗೊತ್ತಾಗುತ್ತೆ"

"ಓ..ಕೇ... ನಿಮ್ಮಿಷ್ಟ. ರಾತ್ರಿ ನಾನು ನಿಮ್ಮ ಕನಸ್ನಲ್ಲಿ ಬರ್ಲಾ... ಆಗ ಹೇಳ್ತೀರಾ?"

"ನೋ ಛಾನ್ಸ್... ನಿದ್ದೆ ಬರುತ್ತೋ ಇಲ್ವೋ..." ಅವಳು ನಕ್ಕಾಗ, ಅವನು ಶಾಂತನಾಗಿ ನುಡಿದ.

"ಐ ಲವ್ ಯೂ ಕ್ಷೀರಾ... ಅಂಡ್ ಬೈ" ಇಬ್ಬರ ಮಾತು ಮುಗಿದಿತ್ತು.

* * *

17

ಒಂದಿಷ್ಟು ಸ್ವೀಟ್ಸ್, ಖಾರದ ತಿಂಡಿಯನ್ನು, ಹಣ್ಣುಗಳನ್ನು ತೆಗೆದುಕೊಂಡು ಸಾಕ್ಷಿ ಸಂಜಯ ವಾಪಸ್ಸಾದರು. ಬರುತ್ತಿದ್ದಂತೆ ಸಾಕ್ಷಿ ತಂಗಿಯನ್ನು ಅವಸರಿಸಿದಳು.

"ನಿನ್ನನ್ನ ನೋಡೋಕೆ ಮೋಹನ್ ಇನ್ನು ಸ್ವಲ್ಪ ಹೊತ್ತಿಗೆ ಬರ್ತಾನೆ. ಎದ್ದು ತಲೆ ಬಾಚಿಕೊಂಡು, ಒಳ್ಳೆ ಸೀರೇನ ಉಟ್ಕೋ. ಹೂವು ಇದೆ ಮುಡ್ಕೋ..."

"ಇವತ್ತೇ ಬರ್ತಾನೇನೇ... ಮಧ್ಯಾಹ್ನವೆಲ್ಲಾ ತಲೆ ನೋಯ್ತಿತ್ತು. ಮುಖ ನೋಡು ಹೇಗಿದೆ?"

"ತಣ್ಣೀರ್ನಲ್ಲಿ ಮುಖ ತೊಳ್ಕೋ ಸರಿ ಹೋಗುತ್ತೆ. ಏನೋ ಕೆಲಸಕ್ಕೆ ಬಾರದ ಯೋಚನೆ ಮಾಡ್ತೀಯ ಅದಕ್ಕೇ ತಲೆ ನೋವು. ಮಾತ್ರೆ ತಗೊಂಡ್ಯಾ?"

"ಸರಿ, ಅವನು ನನ್ನನ್ನು ಒಪ್ಪದಿದ್ರೆ, ನೀವಿಬ್ರೂ ನನ್ನನ್ನ ಬೈಯಬಾರದು. ನಂಗಂತೂ ಈ ಇಂಟರ್‌ವ್ಯೂ ಇಷ್ಟವೇ ಇರ್ಲಿಲ್ಲ"

"ನಂಗೊತ್ತು ಮನಸ್ಸಿನಂತೆ ಮಹದೇವ. ಬಂದು ತಿಂಡಿ ತಿಂದು ಹೋಗ್ತಾನೆ ಬಿಡು... ಭಾವ ಯಾಕೆ ಏನಾದ್ರು ಅಂತಾರೆ?" ಎಂದು ಹೇಳಿ ಅವಳು ರೂಮಿಗೆ ಹೊರಟು ಹೋಗಿದ್ದಳು.

ಕ್ಷೀರಾ ಚೆನ್ನಾಗಿ ಮುಖ ತೊಳೆದು, ತಲೆಬಾಚಿ, ಹೂ ಮುಡಿದು ಅಲಂಕರಿಸಿಕೊಂಡಳು. ಸಾಕ್ಷಿಯ ಮದುವೆಯಲ್ಲಿ ಕೊಂಡುಕೊಂಡಿದ್ದ, ಪ್ರಿಂಟೆಡ್ ಸಿಲ್ಕ್ ಸೀರೆಯನ್ನುಟ್ಟಳು. ಅದಕ್ಕೆ ಒಪ್ಪುವ ರವಿಕೆಯನ್ನು ತೊಟ್ಟು ನಿಲುವು ಗನ್ನಡಿಯ ಮುಂದೆ ನಿಂತು ತನ್ನನ್ನೇ ತಾನು ಅವಲೋಕಿಸಿಕೊಂಡಳು. ಆ ಗಳಿಗೆಯಲ್ಲಿ ಅವಳಿಗೆ ನೆನಪಾದವನು ಕಾರ್ತೀಕ್. ಅವನು ತನ್ನ ಹಿಂದೆ ಬಂದು ನಿಂತು ಕಚಗುಳಿ ಇಟ್ಟಂತೆ ಅನುಭವವಾಯಿತು. 'ಕಾರ್ತೀಕ್, ಐ ಲವ್ ಯೂ' ಎಂದು ತನ್ನಲ್ಲೇ ಹೇಳಿಕೊಂಡು, ಹಣೆಗೆ, ಚಿಕ್ಕ ಬಿಂದಿಯನ್ನು ಅಂಟಿಸಿಕೊಂಡಳು. ಅಷ್ಟರಲ್ಲಿ ಗೇಟು ತೆಗೆದ ಸದ್ದಾಗಿತ್ತು. ಕಿಟಕಿಯಿಂದ ಹೊರಕ್ಕೆ ನೋಡಿದಳು. ಮನೆಯ ಮುಂದೆ ಒಂದು ಟ್ಯಾಕ್ಸಿ ನಿಂತಿತ್ತು. ಸಂಜಯ ತನ್ನ ಸ್ನೇಹಿತನನ್ನು ಸ್ವಾಗತಿಸಿದದು ಕೇಳಿಸಿತ್ತು. ಕ್ಷೀರಾ ಅಲ್ಲೇ ಮಂಚದ ಮೇಲೆ ಕುಳಿತಳು.

ಸಾಕ್ಷೀ ಒಳಬಂದು ತಂಗಿಯನ್ನೊಮ್ಮೆ ಮೆಚ್ಚುಗೆಯಿಂದ ನೋಡಿ, ತನ್ನೊಂದಿಗೆ ಕರೆದೊಯ್ದಳು. ಸಂಜಯ ತನ್ನ ಗೆಳೆಯನಿಗೆ ಅವಳನ್ನು ಪರಿಚಯಿಸಿದ.

"ಇವಳು ನನ್ನ ಸಿಸ್ಟರ್-ಇನ್-ಲಾ ಕ್ಷೀರಾ..." ಅವನು ಎದ್ದು ನಿಂತು ಕೈ ಚಾಚಿದ. ಕ್ಷೀರಾ ಅನುಮಾನಿಸಿ, ಕೈ ಮುಗಿದು ನಮಸ್ಕಾರ ಎಂದಿದ್ದಳು. ಅವನು ಸಂಜಯನ ಕಡೆ ನೋಡಿ, ಪೆಚ್ಚುನಗೆ ನಕ್ಕು "ಹಲೋ" ಎಂದಿದ್ದ.

"ಕೂತ್ಕೊಳ್ಳೇ..." ಸಾಕ್ಷಿ ತನ್ನ ಪಕ್ಕದ ಸೀಟನ್ನು ತೋರಿದಳು. ಕ್ಷೀರಾ ಕುಳಿತಳು. ಮೋಹನ, ಅನೇಕ ಬಾರಿ ಅವಳನ್ನು ನೋಡಿದ. ಅವಳು ನಿರ್ಲಿಪ್ತಳಂತೆ ಕುಳಿತಿರುವುದು ಅವನ ಗಮನಕ್ಕೆ ಬಂತು.

"ನಾನು ನಿಮ್ಮ ಸಿಸ್ಟರ್ ಹತ್ರ ಸ್ವಲ್ಪ ಮಾತಾಡ್ಬೇಕು" ಸಾಕ್ಷಿಗೆ ಹೇಳಿದ.

"ಷೂರ್... ಮೇಲೆ ಬಾಲ್ಕನಿಯಲ್ಲಿ ಕುಳಿತು ಮಾತಾಡಬಹುದು" ಸಂಜಯ ಹೇಳಿದ. ಅಷ್ಟರಲ್ಲಿ ರಾಶಿ ಕಾಲೇಜಿನಿಂದ ಬಂದಳು. ಅಲ್ಲಿ ಕುಳಿತಿದ್ದವರ ಕಡೆ ಒಂದು ಬಾರಿ ನೋಡಿದಳು. ಒಳಗೆ ಹೊರಡಲಿದ್ದವಳನ್ನು ಸಂಜಯ ನಿಲ್ಲಿಸಿದ.

"ರಾಶೀ ಬಾ, ಇಲ್ಲಿ..." ಅವಳನ್ನು ಮೋಹನನಿಗೆ ಪರಿಚಯಿಸಿದ.

"ಇವಳು ನನ್ನ ಎರಡನೇ ಸಿಸ್ಟರ್–ಇನ್–ಲಾ... ರಾಶೀ..." ಮೋಹನ ಕಣ್ಣುಗಳನ್ನು ಅರಳಿಸಿ ಅವಳನ್ನೇ ನೋಡಿದ. ಬಾಬ್ ಮಾಡಿದ್ದ ತಲೆಗೂದಲು, ಅಂಕೆಗೆ ಸಿಗದಂತೆ ಹಾರಾಡುತ್ತಿತ್ತು. ಮುಖದ ಮೇಲೆ ಆಯಾಸದ ಕಳೆ ಕಂಡು ಬಂದರೂ, ಅಂದವಾಗಿದಾಳೆಂದೆನಿಸಿತ್ತು. ತೊಟ್ಟಿದ್ದ ಚೂಡಿದಾರ್‌ನ ಬಣ್ಣ, ಅವಳ ಮೈಕಾಂತಿಗೆ ಮೆರುಗನ್ನು ನೀಡಿತ್ತು. ಅಂದವಾದ ಅವಳ ಮೈಕಟ್ಟು, ಏರುತ್ತಿರುವ ಯೌವನ ಅವನು ಬಾಯಿ ಬಿಡುವಂತೆ ಆಗಿತ್ತು. ಅವಳ ಮೈಯ ಮೇಲೆ ಅವನ ದೃಷ್ಟಿ ಅವ್ಯಾಹತವಾಗಿ ಹರಿದಿತ್ತು. ಕಣ್ಣುಗಳು ಮೆಚ್ಚುಗೆಯನ್ನು ಸೂಸಿದವು. ಮುಜುಗರಗೊಂಡ ಅವಳ ಮುಖವನ್ನು ಕಂಡು, ಅವನ ತುಟಿಗಳು ನಕ್ಕಿದ್ದವು. ಸಾಕ್ಷಿ ಗಮನಿಸಿದಳು.

"ರಾಶೀ... ಒಳಗೆ ಹೋಗು..." ತಂಗಿಗೆ ಹೇಳಿದಳು. ರಾಶೀ ಮತ್ತೊಮ್ಮೆ ಅವನ ಕಡೆ ನೋಡಿ ಒಳಗೆ ನಡೆದಿದ್ದಳು.

ಪ್ರಿಂಟೆಡ್ ಸೀರೆ, ಅದಕ್ಕೆ ಒಪ್ಪುವ ತುಂಬು ತೋಳಿನ ರವಿಕೆ, ಸಡಿಲವಾಗಿ ಹೆಣೆದುಕೊಂಡಿದ್ದ ಜಡೆಗೆ ಮುಡಿದಿದ್ದ ಮಲ್ಲಿಗೆ ಹೂವು... ಯಾವುದೇ ಉತ್ಸಾಹವಿಲ್ಲದೇ ಸಪ್ಪಗೆ ಕುಳಿತಿದ್ದ ಸುಂದರಿ, ಕ್ಷೀರಾಳಿಗಿಂತ, ಹಾರಾಡುವ ಮುಂಗೂದಲ ಚೆಲುವೆ ರಾಶಿ, ಅವನಿಗೆ ಪ್ರಿಯಳಾಗಿ ಕಂಡಳು. ಅವಳ ಬೆನ್ನನ್ನೇ ನೋಡಿದ, ನಿರಾಸೆ ಮುಖದಲ್ಲಿ ಕಂಡಿತ್ತು.

ಮುಖ ತೊಳೆದು, ತೆಳುವಾಗಿ ಕ್ರೀಂ ಹಚ್ಚಿ, ಪೌಡರನ್ನು ಹಚ್ಚಿಕೊಂಡು ಫ್ರೆಷ್ ಆಗಿ ರಾಶೀ ಅಡಿಗೆ ಮನೆಗೆ ಬಂದಳು. ಗಿರಿಜಮ್ಮ, ಕಾಫಿ ತಿಂಡಿಯನ್ನು ಸಿದ್ಧ ಮಾಡಿಟ್ಟಿದ್ದಳು. ರಾಶಿಯನ್ನು ಕಂಡು ಗಿರಿಜಮ್ಮ ನುಡಿದಳು.

"ರಾಶೀ... ಎಲ್ಲರಿಗೂ ತಿಂಡಿ ಕೊಡ್ತೀಯೇನಮ್ಮಾ..." ರಾಶಿ ಇಲ್ಲ ಎನ್ನಲಿಲ್ಲ. ಟ್ರೇ ಹಿಡಿದು ಹೊರಗೆ ಬಂದಳು. ಮೋಹನ ಬಿಟ್ಟು ಕಣ್ಣು ಬಿಟ್ಟುಕೊಂಡು ಅವಳನ್ನೇ ನೋಡಿದ.

"ಬನ್ನಿ... ಕೂತ್ಕೊಳ್ಳಿ..." ಎಂದು, ತಾನೇ ಎದ್ದು ಟ್ರೇಯನ್ನು ಕೈಗೆ ತೆಗೆದುಕೊಂಡು ಟೀಪಾಯ್ ಮೇಲಿಟ್ಟ. ರಾಶೀ ನಾಚುತ್ತಾ ಕುಳಿತಳು.

"ರಾಶೀ... ಲವ್ಲೀ ನೇಮ್. ನಿಮ್ಮ ಬಗ್ಗೆ ಸಂಜಯ್ ನನಗೆ ಹೇಳಿರಲೇ ಇಲ್ಲ, ಏನ್ಮಾಡ್ತಿದೀರಿ?" ಆಸಕ್ತಿಯಿಂದ ಕೇಳಿದ.

"ಕಾಲೇಜಿನಲ್ಲಿ ಓದ್ತಾ ಇದೀನಿ" ಎಂದಳು.

"ಮುಂದೆ ಏನ್ಮಾಡ್ಬೇಕು ಅಂತಿದೀರ? ಮೆಡಿಕಲ್ ಕೋರ್ಸ್ ಮಾಡುವ ಆಸೆ ಏನಾದ್ರೂ ಇದೆಯಾ?" ಅವಳೊಂದಿಗೆ ಮಾತನಾಡುತ್ತಾ, ತಿಂಡಿಯ ತಟ್ಟೆಯನ್ನು ಅವಳ ಕೈಗಿತ್ತು, ತಾನೂ ತಿನ್ನಲಾರಂಭಿಸಿದ. ಸಂಜಯ್ ಸ್ವಲ್ಪ ಗೊಂದಲಕ್ಕೊಳಗಾದ. ಸಾಕ್ಷಿಗೆ ಸಂಜ್ಞೆ ಮಾಡಿದ. ಇಬ್ಬರೂ ಒಳಕ್ಕೆ ಎದ್ದು ಹೋಗಿದ್ದರು. ಸಾಕ್ಷಿ, ಅವನಿಗೆ ಕಾಣದಂಗೆ ಬಾಗಿಲ ಹಿಂದೆ ನಿಂತು, ರಾಶಿಯನ್ನು ಸಂಜ್ಞೆ ಮಾಡಿ ಕರೆದಳು.

"ಎಕ್ಸ್‌ಕ್ಯೂಸ್ ಮೀ... ಈಗ ಬರ್ತೀನಿ" ಎಂದು ಹೇಳಿ ರಾಶಿ ತಿಂಡಿ ತಟ್ಟೆಯನ್ನು ಟೀಪಾಯ್ ಮೇಲಿಟ್ಟು ಒಳಕ್ಕೆ ಬಂದಳು. ಸಾಕ್ಷಿ ಅವಳ ಮೇಲೆ ರೇಗಿದಳು.

"ಅಲ್ಲ, ಅವರಿಬ್ಬರ ನಡುವೆ ನಿಂಗೇನೇ ಕೆಲಸ? ಅವನು ಕ್ಷೀರಾಳ ಹತ್ರ ಮಾತಾಡ್ಬೇಕು ಅಂತ ಹೇಳ್ದ"

"ನಂಗೇನು ಗೊತ್ತು? ಅವನೇ ತಾನೇ ನನ್ನನ್ನು ಮಾತನಾಡಿಸಿದ್ದು" ರಾಶಿ ಮುಖವನ್ನು ಊದಿಸಿಕೊಂಡು ಅಡಿಗೆ ಮನೆಗೆ ಹೋಗಿದ್ದಳು.

ಅವನು ಕ್ಷೀರಾಳ ಕಡೆ ನೋಡಿ ಮುಗುಳ್ನಕ್ಕ. ಅವಳು ಮಿಕಿ ಮಿಕಿ ಅವನನ್ನೇ ನೋಡಿದಳು. ನಿಮ್ಮ ಸಿಸ್ಟರ್ ತುಂಬಾ ಲೈವ್ಲೀಯಾಗಿದಾರೆ... ಬಹಳ ಸ್ಮಾರ್ಟ್ ಆಗಿದಾರೆ. ಅವನು ತಂಗಿಯನ್ನು ಪ್ರಶಂಸೆ ಮಾಡಿದ್ದು ಅವಳಿಗೆ ಹಿಡಿಸಲಿಲ್ಲ. ಅವಳನ್ನು ರೇಗಿಸಿತ್ತು.

"ನನ್ಹತ್ರ ಏನೋ ಮಾತಾಡ್ಬೇಕು ಅಂತ ಅಂದ್ರಿ..."

"ಈಗ ಏನೂ ಬೇಡ. ಮೊದಲು ನಾನು ಸಂಜಯ್ ಹತ್ರ ಮಾತಾಡ್ತೀನಿ" ಅವನ ಇಂಗಿತ ಅವಳಿಗೆ ಅರ್ಥವಾಗಿತ್ತು. ಆದರೂ ಸಹನೆಯಿಂದ ಹೇಳಿದಳು.

"ಆದರೆ, ನಾನು ನಿಮ್ಮ ಹತ್ರ ಸ್ವಲ್ಪ ಮಾತಾಡ್ಲೇ ಬೇಕು. ಪ್ಲೀಸ್ ಬನ್ನಿ" ಕ್ಷೀರಾ ಮೆಟ್ಟಿಲನ್ನು ಹತ್ತಿದಳು. ಅವನು ಭುಜಗಳನ್ನು ಕುಣಿಸಿ, ಅವಳ ಹಿಂದೆ ಅವನೂ ಹತ್ತಿದ. ಬಾಲ್ಕನಿಯಲ್ಲಿದ್ದ ಕುರ್ಚಿಗಳ ಮೇಲೆ ಇಬ್ಬರೂ, ಎದುರು ಬದುರಾಗಿ ಕುಳಿತರು. ಕ್ಷೀರಾ ತಕ್ಷಣವೇ ಮಾತಿಗೆ ಪ್ರಾರಂಭಿಸಿದಳು.

"ನನಗೆ ನೀವು ಒಪ್ಪಿಗೆ ಆಗಲಿಲ್ಲ... ಆದರೆ ನನ್ನ ನಿರ್ಧಾರವನ್ನು ನಾನು ಭಾವನಿಗೆ ತಿಳಿಸುವಂತಿಲ್ಲ. ಅವರು ಏನೋ ಭರವಸೆಯನ್ನಿಟ್ಟುಕೊಂಡಿದಾರೆ. ಆದ್ದರಿಂದ ಒಂದು ರಿಕ್ವೆಸ್ಟ್... ನಾನು ನಿಮಗೆ ಒಪ್ಪಿಗೆಯಾಗಲಿಲ್ಲ ಅಂತ ನೀವು ನಮ್ಮ ಭಾವನಿಗೆ ಹೇಳಬೇಕು" ಅವನು ತಬ್ಬಿಬ್ಬುಗೊಂಡ.

"ಯಾಕೆ ಕ್ಷೀರಾ? ನಾನು ನಿಮ್ಮನ್ನು ಒಪ್ಪಿದೀನಿ. ಫೋಟೋ ನೋಡಿಯೇ ನಾನು, ನಿಮ್ಮ ಮನೆಗೆ ಬಂದಿದ್ದು. ಈಗ ಒಪ್ಪಿಗೆ ಇಲ್ಲ ಅಂತ ಹೇಗೆ ಹೇಳ್ಲಿ?"

"ನೀವು ನನ್ನ ತಂಗಿ ರಾಶಿಯನ್ನು ಮೆಚ್ಚಿದೀರಿ. ಅದು ನಿಮ್ಮ ವರ್ತನೆಯಿಂದಲೇ ತಿಳೀತು. ಇದು ಸರಿಯಲ್ಲ, ಅವಳಿನ್ನು ಚಿಕ್ಕವಳು.

"ನಿಮ್ಮ ತಂಗಿಯನ್ನು ಮೆಚ್ಚಿದರೆ, ಅದು ನಿಮಗೆ ಇಷ್ಟ ಆಗ್ಲಿಲ್ವಾ?"

"ತಂಗಿಯೇ ಆಗಲಿ, ಬೇರೆ ಯಾವುದೇ ಹೆಣ್ಣಾಗಲೀ, ಸ್ಪರ್ಧಿಯಾಗಿ ಕಂಡರೆ ಅದು ನನಗೆ ಹಿಡಿಸುವುದಿಲ್ಲ..."

"ಹಾಗಾದ್ರೆ ನನ್ನದೂ ಒಂದ್ಮಾತು. ನಿಮಗೆ ಏನೂ ಬೇಸರವಿಲ್ಲದಿದ್ದರೆ, ನಾನು ನಿಮ್ಮ ತಂಗಿಯನ್ನೇ ಮದುವೆಯಾಗ್ತೀನಿ. ನಿಮ್ಮಿಬ್ಬರಲ್ಲಿ ಒಬ್ಬರು ಯಾರಾದರೂ ಸರಿ"

"ಕ್ಷೀರಾ ದುರುದುರು ಅವನನ್ನೇ ನೋಡಿದಳು. "ನಿಮಗೆ ಬೇಕಾಗಿರುವುದು ನಿಮ್ಮನ್ನ ಪ್ರೀತಿಸುವ ಮಡದಿ ಅಲ್ಲ. ನಿಮ್ಮ ಜೊತೆ ಜೊತೆಯಲ್ಲಿ ತಿರುಗಾಡಲು

ಬೇಕಾಗುವ ಒಬ್ಬ ಸ್ಮಾರ್ಟ್ ಹೆಣ್ಣು. ನೀವು ನನ್ನ ತಂಗಿಯು ಜೊತೆ ಪ್ರಾಮಾಣಿಕವಾಗಿರುತ್ತೀರಿ ಅಂತ ಹೇಗೆ ನಂಬೋದು? ಅವಳಿಗಿಂತ ಸ್ಮಾರ್ಟ್ ಆಗಿರುವ ಹೆಣ್ಣು ಕಂಡೊಡನೆ ಇವಳು ಸಪ್ಪೆ ಎನಿಸಬಹುದು"

"ನೀವು ನನ್ನನ್ನು ತಪ್ಪಾಗಿ ತಿಳಿದುಕೊಂಡಿದೀರಿ ಕ್ಷೀರಾ... ನೀವು ನಿಮ್ಮ ತಂಗಿಗಿಂತ ಪ್ರೆಟ್ಟಿಯಾಗಿದೀರ. ಆದರೆ ಮಾಡರ್ನ್ ಲುಕ್ ಇಲ್ಲ. ನೀವು ಸ್ವಲ್ಪ ಬದಲಾಗಬೇಕು. ಅಲ್ಲಿಯವರೆಗೆ ನಾನು ಅಡ್ಜಸ್ಟ್ ಮಾಡಿಕೊಳ್ತೀನಿ"

"ನೀವೇನ್ರೀ ಅಡ್ಜಸ್ಟ್ ಮಾಡಿಕೊಳ್ಳೋದು. ನನಗೆ ಒಪ್ಪಿಗೆ ಇಲ್ಲ. ನೀವು ನನಗೆ ಇಷ್ಟವಾಗಲಿಲ್ಲ. ನನ್ನ ಭಾವನ ಮಾತಿಗೆ ಬೆಲೆ ಕೊಟ್ಟು, ನಾನು ಈ ಇಂಟರ್‌ವ್ಯೂಗೆ ಒಪ್ಪಿಕೊಂಡಿದ್ದು ತಪ್ಪು ಅಂತ ಅನ್ನಿಸ್ತಿದೆ ನನಗೆ"

"ಹೋಗ್ಲಿ ಬಿಡಿ. ನಿಮಗೆ ನಾನು ಇಷ್ಟವಾಗಲಿಲ್ಲ ಅಂತ ಅಂದ್ಮೇಲೆ ನಾನು ಬಲವಂತ ಮಾಡುವುದಿಲ್ಲ. ನನಗೆ ಬೇಸರವೂ ಇಲ್ಲ. ಆದರೆ, ನಿಮ್ಮ ತಂಗಿಗೆ ನಾನು ಒಪ್ಪಿಗೇನಾ ಅಂತ ಕೇಳಿ... ಅವರನ್ನು ಕರೀರಿ... ನಾನೇ ಮಾತಾಡ್ತೀನಿ"

"ನನ್ನ ತಂಗಿಗೆ ಇನ್ನು ಹದಿನೇಳು ವರ್ಷ ವಯಸ್ಸು. ಅವಳಿನ್ನು ಮೆಜಾರಿಟಿಗೆ ಬಂದಿಲ್ಲ. ನಿಮಗೆ ಈಗಾಗ್ಲೇ ಮೂವತ್ತರ ಮೇಲಾಗಿದೆ ವಯಸ್ಸು. ಅವಳಿಗಿಂತ ತುಂಬಾ ದೊಡ್ಡವರು ನೀವು... ಗೊತ್ತಿದೆ ತಾನೇ?"

ಅದರಲ್ಲಿ ತಪ್ಪೇನು? ಅಮೆರಿಕಾದಲ್ಲಿ ವಯಸ್ಸಿಗೆ ಇಂಪಾರ್ಟೆನ್ಸ್ ಇಲ್ಲ. ಯಾವ ರೂಲ್ಸೂ ಇಲ್ಲ, ಒಬ್ಬರನ್ನೊಬ್ಬರು ಇಷ್ಟ ಪಡುವುದು ಮುಖ್ಯ"

"ಇರಬಹುದು, ಇದು ನಮ್ಮ ಇಷ್ಟ. ಇದರಲ್ಲಿ ಬಲವಂತ ಮಾಡುವ ಅಧಿಕಾರ ನಿಮಗೆ ಇಲ್ಲ"

"ನೀವು ತಪ್ಪು ತಿಳ್ಕೊಂಡಿದೀರಿ ಕ್ಷೀರಾ. ನಿಮ್ಮ ತಂಗಿಯ ಲೈಫ್‌ನ ನೀವು ಹಾಳು ಮಾಡ್ತಿದೀರಿ. ಈ ಅಧಿಕಾರ ನಿಮಗಿಲ್ಲ. ಅವರನ್ನು ಒಂದ್ಮಾತು ಕೇಳಿದರೆ ನೀವು ಏನು ಲಾಸ್ ಮಾಡಿಕೊಳ್ತೀರಿ?"

"ಇದು ನಮ್ಮ ಮನೆಯ ವಿಷಯ. ನಮಗೆ ಅಧಿಕಾರವಿದೆ"

"ಬಹುಶಃ ನಿಮಗೆ ಏನೋ ಕಾಂಪ್ಲೆಕ್ಸ್ ಕಾಡ್ತಿದೆ. ನಿಮ್ಮ ಹತ್ರ ಮಾತನ್ನಾಡಿ ಏನು ಪ್ರಯೋಜನವಿಲ್ಲ. ನಾನು ಸಂಜಯ್ ಹತ್ರ ಮಾತಾಡ್ತೀನಿ" ಎನ್ನುತ್ತಾ ತಾನೇ ಕೆಳಗಿಳಿದು ಬಂದ. ಅವಳು ಅಲ್ಲೇ ಉಳಿದಳು.

"ಸಂಜಯ್... ಸ್ವಲ್ಪ ರಾಶೀನ ಕರೀತೀಯಾ?" ಅವನು ಕೇಳಿದಾಗ, ಗಂಡ ಹೆಂಡತಿ ಇಬ್ಬರೂ ತಬ್ಬಿಬ್ಬುಗೊಂಡರು.

"ಕ್ಷೀರಾ ಎಲ್ಲಿ? ನಾಚ್ಕೊಂಡು ಅಲ್ಲೇ ಉಳ್ಕೊಂಡು ಬಿಟ್ಲಾ?" ಸಾಕ್ಷಿ ಕೇಳಿದಳು.

"ನಾನು ನೇರವಾಗಿ ಮಾತನಾಡುವವನು. ನಂಗೆ ಕ್ಷೀರ ಒಪ್ಪಿಗೆಯಾಗಲಿಲ್ಲ. ರಾಶೀ ನನಗೆ ಬಹಳ ಇಷ್ಟವಾದಳು. ಅವಳಿಗೂ ಒಪ್ಪಿಗೆ ಇದ್ದರೆ ನಾನು ಅವಳನ್ನು ಮದುವೆಯಾಗ್ತೀನಿ" ಈ ಮಾತು ಇಬ್ಬರಿಗೂ ಅನಿರೀಕ್ಷಿತ. ಸಾಕ್ಷಿ ಬೆಚ್ಚಿದಳು.

"ಏನು? ರಾಶೀನಾ? ಈಗ ಅವಳ ಮದುವೆ ಮಾತು ಎಲ್ಲಿಂದ ಬಂತು?" ಸಂಜಯ ಕೇಳಿದ. ಅವನು ಪೆಚ್ಚಾಗಿದ್ದ.

"ಈಗ ನಾನು ಅವರನ್ನು ನೋಡಿದ ತಕ್ಷಣ... ದಿಢೀರನೆ ಈ ಆಲೋಚನೆ ಬಂತು. ಅವರನ್ನು ಮನಸಾರೆ ಮೆಚ್ಚಿದೀನಿ... ಅಂಡ್ ಐ ವಾಂಟ್ ಟು ಮ್ಯಾರಿ ರಾಶೀ"

"ಮೋಹನ್... ಏನು ಹೇಳ್ತಿದೀಯ ನೀನು? ಅವಳು ಇನ್ನು ತುಂಬಾ ಚಿಕ್ಕವಳು. ಪಿ.ಯು.ಸಿ. ಓದ್ತಿದಾಳೆ... ಮದುವೆ ವಯಸ್ಸಲ್ಲ ಅವಳದ್ದು..."

"ನನಗೆ ಅವರ ಏಜು, ಎಜುಕೇಷನ್ ಯಾವುದೂ ಮುಖ್ಯವಲ್ಲ. ಅವರು ಇಷ್ಟವಾಗಿದಾರೆ. ಅವರನ್ನು ಹೊರಕ್ಕೆ ಕರೀರಿ. ನಾನು ಅವರ ಹತ್ರ ಮಾತಾಡ್ತೇನಿ"

"ಬೇಡ, ಮೋಹನ್. ಅವಳಿಗೆ ಏನೂ ತಿಳಿಯದು... ಅವಳಿಗೇನು ಗೊತ್ತು?"

"ಗೊತ್ತಾಗದೇ ಏನು? ಏನನ್ನೂ ತಿಳಿಯದ ಏಜ್ ಏನಲ್ಲ. ಅಮೆರಿಕಾದಲ್ಲಿ ಹನ್ನೊಂದು ಹನ್ನೆರಡು ವಯಸ್ಸಿನ ಹುಡುಗಿಯರೆಲ್ಲಾ ಡೇಟ್ಸ್ ಹೋಗ್ತಾರೆ... ಬಾಯ್ ಫ್ರೆಂಡ್ಸ್ ಜತೇಲಿ. ರಾಶೀ ಏನೂ ಅಷ್ಟು ಚಿಕ್ಕವಳಲ್ಲ. ನಾನು ಮಾತನಾಡಿ ಕನ್ವಿನ್ಸ್ ಮಾಡ್ತೀನಿ. ಅದರಲ್ಲೇನು ತಪ್ಪು?... ನೀನ್ಯಾಕೆ ರೆಸ್ಟ್ರಿಕ್ಟ್ ಮಾಡ್ಬೇಕು... ಅವರಿಗೂ ಫ್ರೀಡಂ ಇದೆ... ಅವರಿಗೇನಾದ್ರೂ ನಾನು ಒಪ್ಪಿಗೆ ಇಲ್ಲ ಅಂತಿದ್ರೆ, ಅದನ್ನು ಅವರೇ ಹೇಳಲಿ ಸಂಜಯ್..."

"ಸರಿ ಸಾಕ್ಷಿ... ಹೋಗು ರಾಶೀನ ಕರ್ಕೊಂಡು ಬಾ"

"ಪ್ಲೀಸ್... ಅವಳ ತಲೇಲಿ ಏನೇನೋ ತುರುಕಬೇಡಿ. ಇನ್ನೊಸೆಂಟ್ ಆಗಿಯೇ ಇರಲಿ. ಐ ಲೈಕ್ ಇನ್ನೊಸೆಂಟ್ ಗರ್ಲ್ಸ್" ಅವನು ಸಾಕ್ಷಿಗೆ ಹೇಳಿದಾಗ, ಸ್ನೇಹಿತನ ವರ್ತನೆ ಅತಿರೇಕವೆನಿಸಿತ್ತು, ಸಂಜಯ್‌ಗೆ ಅವನು ಬೇಗ ಹೋದರೆ ಸಾಕೆನ್ನಿಸಿತ್ತು.

"ರಾಶೀ... ರಾಶೀ..." ನಿಂತಲ್ಲಿಂದಲೇ ಕೂಗು ಹಾಕಿದ. ಸಾಕ್ಷಿ ಕೆಟ್ಟ ಮುಖ ಹಾಕಿ ನಿಂತಿದ್ದಳು.

"ಏನು ಭಾವ? ಕರೆದ್ರಾ?" ಅವಳು ಜಿಂಕೆಮರಿಯಂತೆ ಹಾರಿ ಬಂದಳು.

ಬಾಗಿಲಿಗೆ ಅಡ್ಡವಾಗಿ ನಿಂತಿದ್ದ ಸಾಕ್ಷಿ, ಅವಳ ತೋಳನ್ನು ಚಿವುಟಿ ಕಣ್ಣು ಸಂಜ್ಞೆ ಮಾಡಿದಳು.

"ರಾಶೀ... ಪ್ಲೀಸ್ ಬನ್ನಿ. ಇಲ್ಲಿ ಕೂತ್ಕೊಳ್ಳಿ" ಮೋಹನ ಉತ್ಸಾಹದಿಂದ ಕರೆದಾಗ, ರಾಶಿ ಸಂದೇಹದಿಂದ ಭಾವನ ಕಡೆ ನೋಡಿದಳು.

"ಇವನು ನಿನ್ನ ಹತ್ರ ಏನೋ ಮಾತಾಡ್ಬೇಕಂತೆ ಹೋಗು" ಸಂಜಯ್ ತನ್ನ ಅನುಮತಿಯನ್ನಿತ್ತ. ರಾಶಿ ಇಬ್ಬರ ಮಧ್ಯೆ ನಡೆದು ಬಂದು ಅವನ ಎದುರಿಗೆ ಕೂತಳು.

"ವಿಲ್ ಯೂ ಬೋತ್ ಪ್ಲೀಸ್ ಎಕ್ಸ್ಯೂಸ್ ಅಸ್?" ಮೋಹನ ಗಂಭೀರದಿಂದ ಸಂಜಯ್‌ನ ಕಡೆ ನೋಡಿ ಕೇಳಿದ. ಸಂಜಯ ಸಾಕ್ಷಿಯ ಕೈ ಹಿಡಿದು ಒಳಕ್ಕೆ ಎಳೆದುಕೊಂಡು ಹೋದ.

"ಸಂಜೂ, ಏನಿದು ಇವನ್ಯಾಕೆ ಹೀಗಾಡ್ತಿದಾನೆ? ಕ್ಷೀರಾ ಎಲ್ಲಿ?"

"ಏನೂ ಆಗುಲ್ಲ. ನೀನು ವರಿ ಮಾಡ್ಕೋಬೇಡ. ಇವನನ್ನು ಉಪಾಯವಾಗಿ ಕಳಿಸೋಣ. ನೀನು ಇಲ್ಲೇ ಇರು" ಎಂದು ಹೇಳಿ ಒಳಗೆ ಕೂರಿಸಿ, ತಾನು ಬಾಗಿಲ ಬಳಿ ನಿಂತ.

"ರಾಶೀ ಪ್ಲೀಸ್ ಕೂತ್ಕೊಳ್ಳಿ" ಮೋಹನ ಅವಳನ್ನು ಭುಜ ಹಿಡಿದು ಕೂರಿಸಿದ. ನಾನು ನಿಮ್ಮನ್ನು ಲೈಕ್ ಮಾಡ್ತಿದೀನಿ. ವಿಲ್ ಯೂ ಮ್ಯಾರೀ ಮೀ" ಅವಳ ಮುಂದೆ ಮಂಡಿಯೂರಿ ಕುಳಿತು ಅವಳಿಗೆ ಪ್ರಪೋಸ್ ಮಾಡಿಕೊಂಡ. ಅವಳಿಗೆ ಇದೆಲ್ಲಾ ಹೊಸದು. ಕಕ್ಕಾಬಿಕ್ಕಿಯಾದಳು "ಓ..ಕೇ... ನೀನು ಹೆದರಿ ಬಿಟ್ಟಿದೀಯ... ನೀನಿನ್ನು ಮಗು... ಇದೆಲ್ಲಾ ಗೊತ್ತಿಲ್ಲ. ನನ್ನನ್ನು ಮದುವೆ ಮಾಡ್ಕೊಳ್ತೀಯಾ?..." ರಾಶಿ ನಡಗುವ ಕೈಗಳಿಂದ ಮುಖವನ್ನು ಮುಚ್ಚಿಕೊಂಡಳು. ಅವನು ಅವಳು ಅಳುತ್ತಿರುವಳೆಂದು ತಿಳೀದ.

"ಓ...ಕೇ... ಡೋಂಟ್ ಕ್ರೈ ಬೇಬಿ, ರಿಲಾಕ್ಸ್. ಎಸ್ ಆರ್ ನೋ ಅಪ್ಸೇ" ಅವಳ ಕೈಗಳನ್ನು ಬಿಡಿಸಿ, ಅವಳನ್ನು ತನ್ನ ಭುಜಕ್ಕೆ ಒರಗಿಸಿಕೊಂಡ.

ಅವಳು ಅವನನ್ನು ತಳ್ಳಿ, ಬಿಡಿಸಿಕೊಂಡು, ಅಲ್ಲಿ ನಿಲ್ಲದೇ ಒಳಕ್ಕೆ ಓಡಿ ಹೋಗಿದ್ದಳು. ಸಂಜಯ ಹೊರಕ್ಕೆ ಬಂದ.

"ಏನಾಯ್ತು ಮೋಹನ್? ಏನ್ಮಾಡ್ದೆ ರಾಶಿಗೆ ಅವಳೇಕೆ ಅಳ್ತಿದ್ಲು?"

"ನಾನೇನ್ಮಾಡ್ದೆ? ನಾನು ಏನೂ ಮಾಡಿಲ್ಲ. ನನ್ನ ಪ್ರಶ್ನೆಗೆ ಅವಳು ಉತ್ತರ ಕೊಡಲಿಲ್ಲ. ಎದ್ದು ಓಡಿ ಹೋದಳು.

"ಅವಳಿಗೆ ನೀನು ಇಷ್ಟವಾಗಿಲ್ಲ ಅಂತ. ಅವಳ ವರ್ತನೆಯಿಂದ ನಿನಗೆ ಅರ್ಥವಾಗಿರಬೇಕಲ್ವಾ ! ಪ್ಲೀಸ್... ಇನ್ನು ಯಾವ ಮಾತೂ ಬೇಡ..."

"ನನಗೆ ಅವಳಿಂದ ಉತ್ತರ ಬೇಕು. ಅವಳಿಗೆ ನನ್ನ ಪ್ರಪೋಸ್ ಇಷ್ಟವಿಲ್ಲದಿದ್ದರೆ, ಅವಳೇ ಬಾಯಿ ಬಿಟ್ಟು ಹೇಳಲಿ"

"ಅವಳು ನನ್ನ ನಾದಿನಿ. ಅವಳ ಉತ್ತರ ಏನೂಂತ ನಂಗೆ ಗೊತ್ತು. ಅವಳಿಗೆ ಇಷ್ಟವಿಲ್ಲ. ಇಷ್ಟೆಲ್ಲಾ ಆದ ಮೇಲೆ ಕ್ಷೀರಾ ಸಹ ನಿನ್ನನ್ನು ಒಪ್ಪುಲ್ಲ. ಅವಳಿಗೆ ಏನ್ಮಾಡ್ದೆ? ಅವಳ್ಯಾಕೆ ಕೆಳಗಿಳಿದು ಬಂದಿಲ್ಲ?"

"ನಾನು ಯಾರಿಗೂ ಏನೂ ಮಾಡಿಲ್ಲ ಸಂಜಯ್... ನನ್ನನ್ನು ನಂಬು"

"ಷಟಪ್, ನಿನ್ನ ಬಿಹೇವಿಯರ್, ನಿನ್ನ ಮಾತು ಯಾವುದೂ ಸರಿಯಾಗಿಲ್ಲ. ನಿನ್ನನ್ನ ಕರೆದು ನಾನು ತಪ್ಪು ಮಾಡಿದೆ. ನಿನ್ನನ್ನ ನನ್ನ ಫ್ರೆಂಡ್ ಅಂತ ಸಹ ಹೇಳಿಕೊಳ್ಳೋಕೆ ಹೀನಾಯವಾಗುತ್ತೆ"

"ನೀನು ನನಗೆ ಅವಮಾನ ಮಾಡ್ತಾ ಇದೀಯ..."

"ಇಲ್ಲ, ನಿನಗೆ ತಿಳುವಳಿಕೆಯ, ಎಚ್ಚರಿಕೆಯ ಮಾತುಗಳನ್ನು ಹೇಳ್ತಿದೀನಿ. ಇದು ಮರ್ಯಾದಸ್ಥರ ಮನೆ. ಇಲ್ಲಿ ಗಲಾಟೆ ಮಾಡ್ಬೇಡ... ಪ್ಲೀಸ್ ಈಗ ಹೆಚ್ಚು ಮಾತು ಬೇಡ. ಹೊರಟು ಹೋಗು" ಸಂಜಯ್ ದೈನ್ಯದಿಂದ ಕೇಳಿಕೊಂಡಾಗ ಸಾಕ್ಷಿಗೆ ಅಳುಬರುವಂತಾಗಿತ್ತು.

"ಓ...ಕೇ... ಫ್ರೆಂಡ್. ನನ್ನನ್ನ ನಿನ್ನ ಮನೆಗೆ ಕರೆದು ನನಗೆ ಅವಮಾನ ಮಾಡ್ತಾ ಇರೋನು ನೀನು. ಇಂಡಿಯಾದಲ್ಲಿ ಸುಂದರವಾದ ಹುಡುಗಿಯರಿಗೆ ಬರವಿಲ್ಲ. ನಿಂಗೆ ಫೇವರ್ ಮಾಡೋಕೆ ಹೊರಟಿದ್ದೆ ನಾನು. ಥ್ಯಾಂಕ್ಸ್... ಆದರೆ ನಾನು ನಿನ್ನನ್ನು ಸುಮ್ಮನೇ ಬಿಡುಲ್ಲ. ನಿನಗೂ ಅವಮಾನ ಮಾಡ್ತೀನಿ, ನೋಡ್ತಿರು" ಅವನು ಬೆರಳು ತೋರಿಸಿ ಹೆದರಿಸಿ ಹೊರಟು ಹೋಗಿದ್ದ. ಸಂಜಯ ಪೆಚ್ಚಾದ ಮುಖದಿಂದ ಸಾಕ್ಷಿಯ ಕಡೆ ನೋಡಿದ. ಅವಳೂ ಅಸಹಾಯಕಳಂತೆ ನಿಂತಿದ್ದಳು.

"ಸಾಕ್ಷೀ... ನಾನು ನನ್ನ ಮನೆಗೆ ಹೋಗ್ತೀನಿ. ನೀನು ನಿನ್ನ ತಂಗಿಯರನ್ನು ಕರೆದು ಸಮಾಧಾನ ಹೇಳು. ನನ್ನ ಪರವಾಗಿ ಕ್ಷಮೆ ಕೇಳು. ಹುಶಾರು... ಅವನು ಮತ್ತೆ ಬಂದು ಗಲಾಟೆ ಮಾಡಿಯಾನು"

"ಈಗ ಎಲ್ಲಿಗೂ ಹೋಗ್ಬೇಡಿ ಸಂಜೂ... ನಮಗೂ ಭಯ ಆಗುತ್ತೆ. ಅವನ್ಯಾಕೆ ಹಾಗೆಲ್ಲಾ ಮಾತಾಡ್ದ... ಅವನು ಹೀಗೆ ಅಂತ ನಿಮಗೆ ಗೊತ್ತಿರಲಿಲ್ವಾ?"

"ಇಲ್ಲ ಸಾಕ್ಷೀ... ಅವನು ಮುಂಚೆ ಹೀಗಿರಲಿಲ್ಲ. ಈಗ ಬದಲಾಗಿದಾನೆ. ಅವನನ್ನು ಕರೆದು ನಾನು ತಪ್ಪು ಮಾಡ್ದೆ. ಅಂತ ಅನ್ನಿಸ್ತಿದೆ. ನಿನ್ನ ತಂಗಿಯರಿಗೆ ಮುಖ ತೋರಿಸುಕ್ಕೆ ನಾಚಿಕೆ ಅಂತ ಅನ್ನಿಸುತ್ತೆ... ನಾನು ರಾತ್ರಿಗೆ ಬರ್ತೀನಿ" ಅವನು ಹೊರಟು ಹೋದ. ಕ್ಷೀರ ಕೆಳಗಿಳಿದು ಬಂದಳು. ಆದರೆ ಅಕ್ಕನೊಡನೆ ಮಾತನಾಡ ಬೇಕೆಂದೆನಿಸಲಿಲ್ಲ. ಸಾಕ್ಷಿ ಸೋಫಾದ ಬೆನ್ನಿಗೆ ಒರಗಿ ಕಣ್ಣುಗಳನ್ನು ಮುಚ್ಚಿಕೊಂಡಿದ್ದಳು. ಮನೆಯೊಳಗೆ ಕೆಟ್ಟ ಮೌನ ಆವರಿಸಿಕೊಂಡಿತ್ತು.

* * *

18

"ಯಾಕೋ ಇಲ್ಲಿ ಬಂದು ಮಲಗಿದೀಯ? ರೂಮ್ನಲ್ಲಿ ಶೆಕೆ ಆಗ್ತಿತ್ತಾ? ಸೊಳ್ಳೆ ಕಚ್ಚಿತ್ತಾ?" ಮೃದುಲಾ ಕೇಳಿದಾಗ, ಕಾರ್ತೀಕ ಎಚ್ಚರಗೊಂಡು ಎದ್ದು ಕೂತು ಆಕಳಿಸಿದ.

"ಯಾವುದೋ ಮೂವಿ ನೋಡ್ತಾ ಕೂತಿದ್ದೆ. ಹಾಗೇ ನಿದ್ದೆ ಬಂತು. ಇಲ್ಲೇ ಮಲಗ್ಬಿಟ್ಟೆ"

"ಸುಳ್ಳು ಹೇಳ್ಬೇಡ, ಟಿ.ವಿ.ನ ಆರಿಸಿದೀಯ... ಯಾಕೆ ಏನಾದರೂ ಪ್ರಾಬ್ಲಂ? ಎನಿ ಟೆನ್ಷನ್? ಕ್ಷೀರಾಳ ಹತ್ರ ಮಾತಾಡಿದ್ಯಾ?"

"ಅವಳು ಆಫೀಸ್ಗೇ ಬಂದಿರ್ಲಿಲ್ಲ. ನಾನು ಮಾತಾಡ್ಲಿಲ್ಲ"

"ಇಷ್ಟಕ್ಕೆ ತಲೆ ಕೆಡಿಸ್ಕೊಂಡ್ರೆ ಹೇಗೆ? ಆಫೀಸಿನ ವಿಷಯಕ್ಕೆ ತಲೆ ಕೆಡಿಡ್ಕೋ. ಅವಳಾಗಿಯೇ ಹೇಳಲಿ. ನೀನೇ ಕೇಳಿದ್ರೆ ಚೆನ್ನಾಗಿರುಲ್ಲ"

"ತಮಾಷೆ ಮಾಡ್ತಿದೀರಾ? ಸೋತು ಗೆಲ್ಲಬೇಕು ಅಂತ ನೀವೇ ಹೇಳಿದ್ರಿ"

"ಅಂದ್ರೇ... ಸದಾ ನೀನೇ ಸೋಲ್ತಾ ಇರು ಅಂತ ಅರ್ಥವಲ್ಲ. ಅವಳೂ ಸ್ವಲ್ಪ ಸೋಲಬೇಕು. ಆಗಲೇ ಲೈಫ್‌ನಲ್ಲಿ ಸ್ವಾರಸ್ಯ"

"ಕಾಲೇಜ್ನಲ್ಲಿ ಕ್ಲಾಸು ತಗೊಳ್ಳೋ ಥರ ಮಾತಾಡ್ತೀರಲ್ಲ. ಕಾಫಿ ರೆಡಿ ಇದೆಯಾ?... ಮುಖ ತೊಳ್ಕೊಂಡು ಬರ್ತೀನಿ"

"ಹುಂ, ಬಿಸಿ ನೀರು ಇದೆ. ಹಾಗೇ ಸ್ನಾನಾನು ಮಾಡ್ಕೊಂಡು ಬಾ. ತಿಂಡಿ ಕೂಡಾ ರೆಡಿ ಇದೆ. ಈಗ ಟೈಂ ಎಷ್ಟು ಅಂತ ಗೊತ್ತಾ ನಿಂಗೆ? ಒಂಬತ್ತು ಗಂಟೆ ಆಗ್ತಾ ಬಂದಿದೆ"

"ಆಂ !" ಧಡಕ್ಕನೆ ಎದ್ದ. ಎಬ್ಬಿಸ್ಬಾರ್ದಾಗಿತ್ತಾ ನೀವು?"

"ಈಗ ಎಬ್ಬಿಸಿದ್ದೂ ನಾನೇ. ಬೇಗ ರೆಡಿಯಾಗು. ಒಟ್ಟಿಗೇ ತಿಂಡಿ ತಿನ್ನೋಣ" ಕಾರ್ತೀಕ್ ಬಚ್ಚಲು ಮನೆಯ ಕಡೆಗೆ ಓಡಿದ. ಕಾಲಿಂಗ್ ಬೆಲ್ ಸದ್ದು ಮಾಡಿತು. ಮೃದುಲಾ ಬಾಗಿಲನ್ನು ತೆಗೆದಳು. ಎದುರಿಗೆ ರಾಶಿ ನಿಂತಿದ್ದಳು.

"ಅರೇ ! ರಾಶೀ ನೀನು?... ಈಗ ಈ ಹೊತ್ನಲ್ಲಿ?"

"ಒಳಗೆ ಬರ್ಲಾ ಮೇಡಂ?" ಅವಳ ಧ್ವನಿ ಕಟ್ಟಿದಂತಿತ್ತು, ಅವಳು ಒಳಕ್ಕೆ ಬಂದಳು.

"ಏನಾಯ್ತು ರಾಶೀ? ಯಾಕೋ ಹೆದರಿರುವ ಹಾಗಿದೆ. ರಸ್ತೇಲಿ ಯಾರಾದ್ರೂ ಟೀಸ್ ಮಾಡಿದ್ರಾ?" ಆತಂಕದಿಂದ ಕೇಳಿದಳು.

"ಇಲ್ಲ ಮೇಡಂ... ಅವರು... ಸಾರ್ ಹೊರಟು ಹೋದ್ರಾ?"

"ಇಲ್ಲ, ಸ್ನಾನ ಮಾಡ್ತಿದಾನೆ. ಯಾಕೆ? ಅವನ ಹತ್ರ ಏನಾದ್ರೂ ಮಾತಾಡ್ಬೇಕಾಗಿತ್ತಾ?"

"ಇಲ್ಲ, ಸುಮ್ಮನೆ ಕೇಳ್ದೆ" ಅಷ್ಟರಲ್ಲಿ ಕಾರ್ತೀಕ್ ಸ್ನಾನ ಮುಗಿಸಿ ಈಚೆಗೆ ಬಂದ. ರಾಶಿಯನ್ನು ಕಂಡು ಅವನ ಹುಬ್ಬುಗಳು ಸೇರಿಕೊಂಡವು. ಕ್ಷೀರಾಳೂ ಬಂದಿರಬಹುದೇ ಅಂತಂದುಕೊಂಡರೂ ಕೇಳಲಿಲ್ಲ. ಮೃದುಲಾ ಮೂವರಿಗೂ ತಿಂಡಿಯನ್ನು ಹಾಕಿಟ್ಟು ಕರೆದಳು.

"ನನಗೆ ಬೇಡ ಮೇಡಂ, ನನ್ನ ತಿಂಡಿ ಆಗಿದೆ"

"ಏನು ತಿಂಡಿ ತಿಂದ್ರಿ?" ಕಾರ್ತೀಕ್ ಚಮಚವನ್ನು ಕುಟ್ಟಿ ಕೇಳಿದ.

"ಅವಲಕ್ಕಿ ಒಗ್ಗರಣೆ ಮಾಡಿದ್ರು..."

"ಪರವಾಗಿಲ್ಲ ಸ್ವಲ್ಪ ತಿನ್ನು" ಮೃದುಲಾ ಸ್ವಲ್ಪ ಕಡಿಮೆ ಮಾಡಿಟ್ಟಳು.

"ಮನೇಲಿ ಎಲ್ಲಾ ಹೇಗಿದಾರೆ? ಅಕ್ಕ, ಭಾವ, ನಿಮ್ಮ ತಂದೆ... ಎಲ್ಲಾ ಹೇಗಿದಾರೆ?" ಕಾರ್ತೀಕ್ ಕೇಳಿದ.

"ಎಲ್ಲಾ ಚೆನ್ನಾಗಿದಾರೆ. ಆದರೆ ಇವತ್ತು ಕ್ಷೀರಾ ಆಫೀಸಿಗೆ ಬರುಲ್ಲ"

"ಯಾಕೇ? ಇನ್ನು ಅವರ ತಲೆ ನೋವು ವಾಸಿ ಆಗಿಲ್ವಾ?" ಮೃದುಲಾ ಅವನನ್ನೇ ಚೂಪಾಗಿ ನೋಡಿ ಕಣ್ಣಿನಲ್ಲೇ ಗದರಿದಳು.

"ತಲೆ ನೋವಾ?... ನಿಮಗೆ ಹೇಗೆ ತಿಳೀತು?... ನೆನ್ನೆ ನಮ್ಮೆಲ್ಲರ ಮೂಡ್ ಕೆಟ್ಟು ಹೋಯ್ತು ! ನನಗೂ ಇವತ್ತು ಕಾಲೇಜಿಗೆ ಬರೋ ಮೂಡ್ ಇರಲಿಲ್ಲ. ಭಾವ ಬಸ್‌ಸ್ಟ್ಯಾಂಡ್ ತನಕ ಬೈಕ್‌ನಲ್ಲಿ ಡ್ರಾಪ್ ಕೊಟ್ರು"

"ಏನಾಯ್ತು ರಾಶಿ? ನಿಮ್ಮಕ್ಕ ಸಾಕ್ಷೀ ಹುಶಾರಾಗಿದಾರೆ ತಾನೇ?"

"ಹುಂ, ಹುಶಾರಾಗಿದಾರೆ. ಆದರೆ, ಎಲ್ಲಾ ಆದದ್ದು ಈ ಅಕ್ಕಭಾವನಿಂದಲೇ" ಮೂತಿ ಉದ್ದ ಮಾಡಿ ನುಡಿದಳು.

"ಏನಾಯ್ತು? ಏನಾದ್ರೂ ಜಗಳ ಆಯ್ತಾ?"

"ಇಲ್ಲ, ಅದಕ್ಕಿಂತ ಕೆಟ್ಟ ಘಟನೆ ನಡೆಯಿತು" ಎನ್ನುತ್ತಾ ಹಿಂದಿನ ಸಾಯಂಕಾಲ ನಡೆದುದನ್ನು ವಿವರಿಸಿ ಹೇಳಿದಳು. ಈಗ್ಲೂ ನನಗೆ ನೆನೆಸಿಕೊಂಡ್ರೆ ಭಯ ಆಗುತ್ತೆ. ಅಂಥೋರು ಇರ್ತಾರಾ ಅಂತ ಅನುಮಾನ ಬರ್ತಿದೆ" ಕಾರ್ತೀಕ್‌ಗೆ ಒಂಥರಾ ಒಳಗೊಳಗೇ ಸಮಾಧಾನ ಆಗಿತ್ತು. ಆದರೂ "ವೆರಿ ಡೇಂಜರಸ್ ಮ್ಯಾನ್" ಅಂತ ತನ್ನಲ್ಲೇ ಹೇಳಿಕೊಂಡ.

"ಈಗ ಕಾಲೇಜಿಗೆ ಹೋಗೋಣ ಏಳು. ಈಗಾಗ್ಲೇ ಹೊತ್ತಾಗಿದೆ. ಈ ಬಗ್ಗೆ ನಿಧಾನವಾಗಿ ಮಾತನಾಡೋಣ" ರಾಶಿಯನ್ನು ಎಬ್ಬಿಸಿದಳು.

"ನೀವಿಬ್ರೂ ಹೊರಡಿ. ನಾನು ಇನ್ನು ಹತ್ತು ನಿಮಿಷ ಬಿಟ್ಟು ಹೊರಡ್ತೀನಿ" ಅಂತಂದ. ಅವರಿಬ್ರೂ ಹೊಸ್ತಿಲು ದಾಟಿದೊಡನೆ, ಅವನು ಫೋನಿನ ರಿಸೀವರ್‌ನೆತ್ತಿಕೊಂಡ. ಕ್ಷೀರಾಳ ಮನೆಯ ನಂಬರಿಗೆ ಡಯಲ್ ಮಾಡಿದ. ಫೋನು ರಿಂಗಾಗುತ್ತಿತ್ತು. "ಕ್ಷೀರಾ... ಕ್ಷೀರಾ... ಬೇಗ ಎತ್ತು..." ತನ್ನಲ್ಲೇ ಹೇಳಿಕೊಂಡ.

ರಿಸೀವರ್‌ನೆತ್ತಿದವಳು ಸಾಕ್ಷಿ. "ಹಲೋ... ಯಾರು?" ಎಂದು ಕೇಳಿದಳು.

"ನಾನು ಕಾರ್ತೀಕ್ ಅಂತ ಕ್ಷೀರಾ ಇದಾರಾ?"

"ಹೂಂ, ಇದಾಳೆ. ಕರೀತೀನಿ. ಲೈನ್‌ನಲ್ಲೇ ಇರಿ" ಕ್ಷೀರಾ ಲೈನಿಗೆ ಬಂದಳು.

"ಕ್ಷೀರಾ... ನಾನು ಕಾರ್ತೀಕ್. ಇವತ್ತು ಆಫೀಸಿಗೆ ಬರ್ತಿದೀರಿ ತಾನೇ?"

"ಇಲ್ಲ ಸಾರ್, ಒಂದು ವಾರ ನಾನು ಆಫೀಸಿಗೆ ಬರೋಕ್ಕಾಗುಲ್ಲ"

"ಯಾಕೆ? ಏನಾಯ್ತು ಕ್ಷೀರಾ? ಎನಿ ಪ್ರಾಬ್ಲಂ?"

"ಯೆಸ್... ನಂಗೆ ಒಂದು ವಾರ ರಜ ಬೇಕು ಸಾರ್"

"ಓ...ಕೇ... ನಿಮ್ಮ ಭಾವ ಮನೇಲಿ ಇದಾರಾ?"

"ಇಲ್ಲ, ಆಫೀಸ್ಗೆ ಹೋಗಿದಾರೆ. ಊಟದ ಹೊತ್ತಿಗೆ ಬರಬಹುದು"

"ಹಾಗಾದ್ರೆ ನಾನು ಈಗ್ಲೇ ನಿಮ್ಮ ಮನೆಗೆ ಬರ್ತಿದೀನಿ" ಅವಳು ಉತ್ತರಿಸುವ ಮೊದಲೇ ಅವನು ರಿಸೀವರ್‌ನ್ನಿಟ್ಟಿದ್ದ. ಅರ್ಧಗಂಟೆಯೊಳಗೆ ಅವರ ಮನೆಯನ್ನು ಸಮೀಪಿಸಿದ್ದ. ಮನೆಯ ಮುಂದೆ ಕಾರು ನಿಂತ ಸದ್ದು ಕೇಳಿ, ಕ್ಷೀರಾ ಮುಂಬಾಗಿಲನ್ನು ತೆರೆದಳು. ಅವಳ ಹಿಂದೆ ಸಾಕ್ಷಿಯೂ ಬಂದಳು.

"ಯಾರೇ ಅದು ಕ್ಷೀರಾ? ಹೊರಕ್ಕೆ ಹೋಗ್ಬೇಡ ತಡಿ..."

"ಅವರು ನನ್ನ ಬಾಸ್... ಯಾವುದೋ ಫೈಲ್ ಬಗ್ಗೆ ಕೇಳೋಕೆ ಬಂದಿರಬಹುದೋ ಏನೋ ನೋಡ್ತೀನಿ ತಡಿ" ಅವಳೇ ಕಾರು ನಿಲ್ಲಿಸಿದ್ದ ಕಡೆಗೆ ಬಂದಳು. ಒಳಗೆ ಬನ್ನಿ ಸಾರ್. ಹೊರಗೆ ನಿಂತು ಮಾತಾಡೋದು ಬೇಡ"

"ನಿಮ್ಮ ಅಕ್ಕ ನಮ್ಮಿಬ್ಬರನ್ನೇ ನೋಡ್ತಿದಾರೆ. ಅವರ ಎದುರಿಗೆ ಫ್ರೀಯಾಗಿ ಮಾತನಾಡೋಕೆ ಆಗುಲ್ಲ. ನನ್ನ ಜತೆಯಲ್ಲಿ ಬನ್ನಿ. ಹೊರಗೆಲ್ಲಾದ್ರೂ ಹೋಗಿ ಬರೋಣ"

"ನಮ್ಮ ಭಾವಂಗೆ ಗೊತ್ತಾದ್ರೆ ಕೋಪ ಮಾಡ್ಕೋತಾರೆ. ಅಕ್ಕ ಬೈತಾಳೆ"

"ನಿಮ್ಮ ಭಾವ ಬರುವ ಹೊತ್ತಿಗೆ ವಾಪಸ್ಸು ಕರ್ಕೊಂಡು ಬಂದು ಬಿಡ್ತೀನಿ. ನಿಮ್ಮ ಅಕ್ಕಂಗೆ ಏನಾದ್ರೂ ನೆವ ಹೇಳಿ ಬಂದ್ಬಿಡಿ"

"ಸರಿ, ಒಂದ್ನಿಮಿಷ ಹೇಳಿ ಬರ್ತೀನಿ" ಅವಳು ಹಿಂದೆ ಬಂದಳು.

"ಈಗ್ಲೇ ಹೋಗ್ತಿದೀಯಾ ನಿನ್ನ ಬಾಸ್ ಜತೆ? ಈಗ್ಯಾಕೆ ಹೋಗ್ಬೇಕು?"

"ನಾನು ಅದನ್ನೆಲ್ಲ ಕೇಳೋಕೆ ಆಗುತ್ತಾ ಸಾಕ್ಷಿ.... ಆಫೀಸ್ಗೆ, ಅರ್ಜೆಂಟು ಅಂತ ಕರ್ಕೊಂಡು ಹೋಗ್ತಾ ಇದಾರೆ. ಭಾವ ಬರುವ ಹೊತ್ತಿಗೆ ಬಂದು ಬಿಡ್ತೀನಿ"

"ನೀವೂ ಬೈಸಿ ಕೊಳ್ತೀರಿ, ನನ್ನನ್ನು ಬೈಸ್ತೀರಿ. ಏನಾದ್ರೂ ಮಾಡ್ಕೊಳ್ಳಿ"

"ಪ್ಲೀಸ್ ಸಾಕ್ಷೀ... ಅವರೇ ಮನೇತನಕ ಬಂದಿರುವಾಗ ನಾನು ಬರುಲ್ಲ ಅಂತ ಹೇಳುಕ್ಕಾಗುತ್ತಾ ನೀನೇ ಹೇಳು"

"ಇಂಥಾ ಬಾಸ್‌ನ ನಾನೆಲ್ಲೂ ಕಂಡಿರಲಿಲ್ಲ. ಆ ಮೇಡಂಗೆ ತಕ್ಕ ಹಾಗಿದಾನೆ. ಹುಶಾರು ಕಣೇ... ಬೇಗ ಬಂದ್ಬಿಡು"

"ನೀನೇನೂ ಯೋಚನೆ ಮಾಡ್ಬೇಡ" ಹ್ಯಾಂಡ್‌ಬ್ಯಾಗ್ ಹಿಡಿದು, ಚಪ್ಪಲಿ ಮೆಟ್ಟಿ ಹೊರಟವಳನ್ನೇ ಪ್ರಶ್ನಾರ್ಥಕವಾಗಿ ನೋಡಿದಳು ಸಾಕ್ಷಿ. ಕಾರ್ತೀಕ್ ಅವಳು ಸಮೀಪಿಸಿದೊಡನೆ, ಕಾರಿನ ಮುಂದಿನ ಬಾಗಿಲನ್ನು ತೆಗೆದ. ಅವಳು ಅವನ ಪಕ್ಕದಲ್ಲಿ ಕುಳಿತಿದ್ದನ್ನು ಸಾಕ್ಷಿ ಕಂಡಳು. ಹುಬ್ಬುಗಳು ಮೇಲೇರಿದವು. ಕಾರನ್ನು ಸ್ಟಾರ್ಟ್ ಮಾಡುವ ಮೊದಲು ಕೇಳಿದ.

"ನಿಮ್ಮಕ್ಕ ಒಬ್ಬರೇ ಇದಾರಾ?"

"ಇಲ್ಲ, ಅಡಿಗೆಯವರು, ನರ್ಸು ಇಬ್ಬರೂ ಇದಾರೆ ಯಾಕೆ?"

"ಸರಿ..." ಎಂದು ಹೇಳಿ ಕಾರನ್ನು ತಿರುಗಿಸಿದ. ಸಾಕ್ಷಿ ತವಕದಿಂದ ನಿಮಿಷಗಳನ್ನು ಎಣಿಸಲಾರಂಭಿಸಿದ್ದಳು.

ಅರ್ಧ ಮುಕ್ಕಾಲು ಗಂಟೆಯೊಳಗೆ ಕಾರು ಹಿಂತಿರುಗಿ ಬಂದಿತ್ತು. ಕಾರ್ತೀಕ್ ಕ್ಷೀರಾಳನ್ನು ಮನೆಯ ಬಳೀ ಇಳಿಸಿ, ವಾಪಸ್ಸು ಹೊರಟು ಹೋಗಿದ್ದ. ಒಳ ಬಂದವಳನ್ನೇ ಸಾಕ್ಷಿ ದೀರ್ಘವಾಗಿ ನೋಡಿ ಕೇಳಿದಳು.

"ನಿನ್ನ ಬಾಸ್ ನಿನ್ನನ್ನು ಎಲ್ಲಿಗೆ ಕರ್ಕೊಂಡು ಹೋಗಿದ್ದ?"

"ಆಫೀಸ್ಗೆ, ಅದ್ಯಾಕೆ ಹಾಗೆ ಕೇಳ್ತಿದೀಯಾ? ನಾನು ಹೇಳಿರಲಿಲ್ವಾ?"

"ನಿಜ ಹೇಳು ಕ್ಷೀರಾ... ನಂಗ್ಯಾಕೋ ನಂಬಿಕೆ ಬರ್ತಿಲ್ಲ, ಅನುಮಾನವಾಗ್ತಿದೆ"

"ಅನುಮಾನ ಪಡುವಂಥಾದ್ದು ಏನೂ ಇಲ್ಲ. ಅನುಮಾನ ಯಾಕೆ?"

"ನನಗ್ಯಾಕೋ ದಿಗಿಲಾಗುತ್ತೆ ಕಣೇ ಕ್ಷೀರಾ ! ನಿನ್ನ ಬಾಸ್‌ನ ಸ್ವಭಾವ ಹೇಗೆ?"

"ಒಳ್ಳೆಯವರು.... ಹೀಗೆಲ್ಲಾ ಯಾಕೆ ವಿಚಾರಿಸ್ತಿದೀಯ...?"

"ನೀನು ಮದುವೆ ವಯಸ್ಸಿನ ಹುಡುಗಿ. ಅವನೂ ಯುವಕ. ನೀನು ಅವನ ಆಫೀಸ್ನಲ್ಲಿ ಕೆಲಸ ಮಾಡ್ತಿದೀಯ. ಈ ಕಾಲದಲ್ಲಿ ಯಾರನ್ನು ನಂಬೋದು ಕಷ್ಟ. ಏನಾದ್ರೂ ತೊಂದರೆಗೆ ಸಿಕ್ಕಿ ಬಿದ್ದರೆ?"

"ಹಾಗೆಂದೂ ಆಗುಲ್ಲ, ಡೋಂಟ್ ವರಿ..." ಅವಳು ಸಾಕ್ಷಿಗೆ ಕತ್ತಿಗೆ ಜೋತು ಬಿದ್ದು ಹೇಳಿದಾಗ ಸಾಕ್ಷಿ ಅಚ್ಚರಿಗೊಂಡಳು.

"ಹಾಗಾದ್ರೆ ಅವರನ್ನು ನಿಂಗೆ ವಿಚಾರಿಸೋಣ್ವಾ? ಭಾವನ ಹತ್ರ ಮಾತಾಡ್ಲಾ?"

"ಈಗ್ಲೇ ಬೇಡ... ಸ್ವಲ್ಪ ದಿನಗಳು ಕಳೀಲಿ. ಈಗ ನನ್ನ ಮೈಂಡ್ ಆಫ್ ಆಗಿದೆ"

"ಯಾಕೇ ಈಗ್ಲೇ ಬೇಡ? ಕೆಲವನ್ನು ಬೇಗ ಬೇಗ ಮಾಡಿ ಬಿಡಬೇಕು ಕ್ಷೀರಾ... 'ಶುಭಸ್ಯ ಶೀಘ್ರಂ' " ಅಂತ. ಕ್ಷೀರ ಮಾತಾಡಲಿಲ್ಲ. ಕಾರ್ತೀಕನೊಡನೆ ಮಾತನಾಡಿದ್ದನ್ನು ಮೆಲುಕು ಹಾಕುತ್ತಿದ್ದಳು.

* * *

19

"ಯಾಕೋ ಇಷ್ಟು ಹೊತ್ತಾದ್ರೂ ರಾಶಿ ಮನೆಗೆ ಬಂದಿಲ್ಲವಲ್ಲೇ ಕ್ಷೀರಾ... ನನ್ನ ಎದೆ ಹೊಡೆದು ಕೊಳ್ತಿದೆ. ಕಾಲೇಜ್ನಲ್ಲಿ ಏನಾದ್ರೂ ಫಂಕ್ಷನ್ ಇತ್ತು ಅಂತ ಹೇಳಿದ್ಲಾ?"

"ಇಲ್ಲ. ಹಾಗೇನೂ ಹೇಳಿದಂತೆ ನೆನಪಿಲ್ಲ."

"ಒಂದೆರಡು ದಿನಗಳು ಕಾಲೇಜಿಗೆ ಹೋಗ್ಬೇಡ ಕಣೇ ಅಂತಂದ್ರು ಕೇಳಲಿಲ್ಲ. ನಿನ್ನ ಭಾವನೂ ಸರಿಯಾಗಿದಾರೆ. ತಾನೇ ಹೋಗಿ ಬಸ್‌ಸ್ಟ್ಯಾಂಡ್‌ಗೆ ಬಿಟ್ಟು ಬಂದಿದಾರೆ... ಬಸ್ಸು ಟೈಂಗೆ ಸರಿಯಾಗಿ ಸಿಕ್ತೋ ಇಲ್ವೋ?"

"ಬಸ್ ಬರೋವರ್ಗೂ ಭಾವ ಅಲ್ಲೇ ಇದ್ರಂತಾ?"

"ಏನೋ ಸಂಗೊತ್ತಿಲ್ಲ, ನಾನು ಕೇಳಲಿಲ್ಲ. ನಂಗೆ ಒಂದಲ್ಲ ಒಂದು ಟೆನ್ಷನ್. ಈ ಟೆನ್ಷನ್‌ನಲ್ಲಿ ನಂಗೇನಾಗಿ ಬಿಡುತ್ತೋ ಅನ್ನೋ ಭಯ ಹೆಚ್ಚಾಗ್ತಿದೆ. ಯಾರೋ ಬೆಲ್ ಮಾಡಿದ ಹಾಗಾಯ್ತು. ಸ್ವಲ್ಪ ನೋಡ್ತೀಯಾ?"

"ಗಿರಿಜಮ್ಮ ಸ್ವಲ್ಪ ನೋಡ್ತೀರಾ?" ಆಕೆ ಒಳಗಿನಿಂದ ಬಂದಳು.

"ನಿಂಗೆ ಅಷ್ಟೂ ಮಾಡೋಕೆ ಆಗುಲ್ವಾ? ಅಡಿಗೆ ಮನೆಯಿಂದ ಅವರೇ ಬಂದು ನೋಡ್ಬೇಕಾ?"

"ಅವನು ಭಾವನ ಫ್ರೆಂಡ್ ಏನಾದ್ರೂ ಬಂದಿರಬಹುದಾ ಅಂತ. ನಾವ್ಯಾರೂ ಮನೇಲಿಲ್ಲ ಅಂತ ಗಿರಿಜಮ್ಮ ಹೇಳಲಿ... ಅವನು ವಾಪಸ್ಸು ಹೋಗ್ತಾನೆ" ಗಿರಿಜಮ್ಮ ಹೋಗಿ ಬಾಗಿಲನ್ನು ತೆರೆದರು. ಅವರ ಹಿಂದೆ ರಾಶಿ ಒಳಕ್ಕೆ ಬಂದಿದ್ದಳು.

"ಯಾಕೇ ಇಷ್ಟೊತ್ತು? ನಾವು ಏನಂದುಕೊಳ್ಬೇಕು?" ಅಷ್ಟರಲ್ಲಿ ಒಳ ಬಂದ ಮೃದುಲಾಳನ್ನು ಕಂಡು ಸಾಕ್ಷಿ ಸುಮ್ಮನಾದಳು.

"ನಮಸ್ಕಾರ ಮೇಡಂ... ಬನ್ನಿ" ಕ್ಷೀರಾ ಮೃದುಲಾಳನ್ನು ಒಳಕ್ಕೆ ಕರೆದುಕೂರಿಸಿದಳು. "ಚೆನ್ನಾಗಿದೀರಾ ಮೇಡಂ...? ಕುಡಿಯೋಕೆ ನೀರು ಬೇಕಾ?" ಅಂತ ವಿಚಾರಿಸಿದಳು. ಸಾಕ್ಷಿ ತಂಗಿಯನ್ನೇ ಆಶ್ಚರ್ಯದಿಂದ ನೋಡಿದಳು. ಮೃದುಲಾ ಅಕ್ಕತಂಗಿಯರನ್ನು ಸೂಕ್ಷ್ಮವಾಗಿ ಗಮನಿಸಿದಳು. ಅವಳ ಗಮನ ಗೋಡೆಯ ಮೇಲಿದ್ದ ಫೋಟೋ ಕಡೆ ಹರಿಯಿತು. ಮೃದುಲಾಳನ್ನೇ ಗಮನಿಸುತ್ತಿದ್ದ ಅಕ್ಕತಂಗಿಯರು ಮುಜುಗರಗೊಂಡಿದ್ದರು. ಅವಳೇನು ಕೇಳಿಬಿಡುವಳೋ ಎನ್ನುವಂತೆ ಒಬ್ಬರನ್ನೊಬ್ಬರು ನೋಡಿದರು. ಕಡೆಗೊಮ್ಮೆ ಮೃದುಲಾ ಮುಗುಳ್ನಕ್ಕಳು.

"ಇಲ್ಲೇ ನಮ್ಮ ಪರಿಚಯದವರೊಬ್ಬರನ್ನು ನೋಡೋದಿತ್ತು. ರಾಶೀನೂ ಬನ್ನಿ ಅಂತ ಬಲವಂತ ಮಾಡಿದ್ಲು. ನಿಮ್ಮಗಳನ್ನೆಲ್ಲ ನೋಡಿ ಮಾತನಾಡಿಸ್ಕೊಂಡು ಹೋಗೋಣ ಅಂತ ಬಂದೆ" ಅಕ್ಕಂದಿರಿಬ್ಬರೂ ರಾಶಿಯ ಕಡೆ ನೋಡಿದರು. ಯಾರಿಗೂ ಮಾತುಗಳೇ ಇಲ್ಲವೇನೋ ಎನ್ನುವಂತೆ ಮೌನವಾದರು.

"ರಾಶೀ, ಕಾರ್‌ನಲ್ಲಿ ಹಣ್ಣಿನ ಚೀಲ ಇದೆ. ತಗೊಂಡು ಬಾ" ರಾಶಿ ಹಣ್ಣಿನ ಚೀಲವನ್ನು ತಂದಳು. "ಈಗ ನಿಮ್ಮ ತಂದೆ ಹೇಗಿದಾರೆ?" ಎಂದು ಕಷ್ಟ ಪಟ್ಟು ಕೇಳಿದಳು. ಹಣ್ಣಿನ ಚೀಲವನ್ನು ಸಾಕ್ಷಿಯ ಕೈಗಿತ್ತಳು.

"ನಾವು ದಿನಾ ಅವರನ್ನು ನೋಡ್ತೀವಲ್ಲ. ನಮಗೆ ಗೊತ್ತಾಗುಲ್ಲ. ಡಾಕ್ಟರ್, ಸ್ವಲ್ಪ ಇಂಪ್ರೂವ್‌ಮೆಂಟ್ ಇದೆ ಅಂತ ಹೇಳ್ತಾರೆ" ಮತ್ತೆ ಮಾತುಗಳನ್ನು ಹುಡುಕುವವರಂತೆ ಮೌನವಾದರು. ಆ ಮೌನವನ್ನು ಕದಲಿಸುವವಳಂತೆ, ಒಳಗಿನಿಂದ ರಾಶಿ ಕೆಲವು ಫೋಟೋಗಳನ್ನು ತಂದಿತ್ತಳು.

"ಇವೆಲ್ಲಾ ಅವತ್ತು ಫಂಕ್ಷನ್ ದಿನ ತೆಗೆದದ್ದು" ಎನ್ನುತ್ತಾ ಅವಳ ಮುಂದೆ ಇಟ್ಟಳು. ಆಸಕ್ತಿ ಇಲ್ಲದಿದ್ದರೂ, ಮೃದುಲಾ ಒಂದೊಂದೇ ಫೋಟೋಗಳನ್ನು ನೋಡತೊಡಗಿದಳು. ಕ್ಷೀರಾ ಅಡಿಗೆ ಮನೆಗೆ ಹೋದಳು.

"ನೀವು ಸಿಸ್ಟರ್ಸ್ ಎಲ್ಲಾ ತುಂಬಾ ಚೆನ್ನಾಗಿ ಕಾಣ್ತೀರಿ. ರಾಶಿಯಂತೂ ಥೇಟ್ ಅವಳ ಅಮ್ಮನ ಥರಾ ಅಲ್ವಾ?" ಮೃದುಲಾ ಮತ್ತೆ ಗೋಡೆಯ ಮೇಲಿನ ಫೋಟೋ ಕಡೆ ನೋಡಿದಳು. ಗಿರಿಜಮ್ಮ ಕಾಫಿಯನ್ನು, ಬಿಸ್ಕತ್ತನ್ನು ತಂದಿತ್ತಳು. ಮೃದುಲಾ ಕಪ್‌ನೆತ್ತಿಕೊಂಡು ನಿಧಾನವಾಗಿ ಕಾಫಿಯನ್ನು ಕುಡಿಯತೊಡಗಿದಳು.

"ಕಾರ್ತೀಕ್, ಒಂದ್ನಾಲ್ಕು ದಿನ ಅವನ ಊರಿಗೆ ಹೋಗಿ ಬರ್ತೀನಿ ಅಂತ ಹೊರಟಿದಾನೆ. ಮನೇಲಿ ನಾನು ಒಬ್ಬಳೇ ಆಗಿ ಬಿಡ್ತೀನಿ. ನಂಗೆ ಭಯ ಏನಿಲ್ಲ. ಆದರೂ ಜತೆಗೆ ಒಬ್ಬರು ಇರಲಿ ಅಂತ ಆಸೆ. ರಾಶೀನ ನಾಲ್ಕು ದಿನ ನಮ್ಮ ಮನೇಲಿ ಇಟ್ಕೊಂಡಿರೋಣ ಅಂತ... ಕರ್‍ಕೊಂಡು ಹೋಗ್ಲಾ?" ಅಕ್ಕತಂಗಿಯರಿಗೆ ಈ ಮಾತು ಅನಿರೀಕ್ಷಿತ. ಮುಖ ಮುಖ ನೋಡಿಕೊಂಡರು.

ಕಾರ್ತೀಕ್ ತಾನು ಊರಿಗೆ ಹೋಗಲಿರುವ ವಿಷಯವನ್ನು ತನಗೆ ಹೇಳಿರಲಿಲ್ಲವೆನ್ನುವುದನ್ನು ಕ್ಷೀರಾ ಜ್ಞಾಪಿಸಿಕೊಂಡಳು. ರಾಶಿಯೇ ಈ ಉಪಾಯವನ್ನು ಮಾಡಿರಬಹುದೇ ಎಂದುಕೊಂಡು ಅವಳ ಕಡೆ ನೋಡಿದಳು. ಅವಳು ತಲೆತಗ್ಗಿಸಿ ನಿಂತಿದ್ದಳು.

"ನಿಮಗೆಲ್ಲಾ ಇಷ್ಟವಿಲ್ಲದಿದ್ದರೆ ಬೇಡ" ಮೃದುಲಾ ಮಾತನ್ನು ಸೇರಿಸಿದಳು.

"ಹಾಗೇನಿಲ್ಲ, ಆದರೆ ನನ್ನ ಗಂಡನ್ನ ಒಂದ್ಮಾತು ಕೇಳ್ಬೇಕು. ಅವರ ಒಪ್ಪಿಗೆ ಇಲ್ಲದೇ ನಾವುಗಳು ಯಾವ ನಿರ್ಧಾರವನ್ನು ತೆಗೆಯುಕೊಳ್ಳುವುದಿಲ್ಲ"

"ಓ... ಧಾರಾಳವಾಗಿ ಕೇಳಿ. ಅದೂ ಒಳ್ಳೆಯದೇ ಎಷ್ಟಾಗಲೀ, ಈಗ ಈ ಮನೆಯ ಯಜಮಾನ ಅವರೇ ತಾನೇ?" ಮೃದುಲಾ ಎದ್ದಳು.

"ನಿಮ್ಮ ತಂದೇನ ನಾನು ಕೇಳ್ದೆ ಅಂತ ಹೇಳ್ಬಿಡಿ. ನಾನಿನ್ನು ಬರ್ತೀನಿ" ಮೃದುಲಾ ಹೊರಟಳು. ಅವಳನ್ನು ಕಾರಿನ ತನಕ ಕಳಿಸಿ ಬರಲು ರಾಶಿ, ಕ್ಷೀರಾ ಹೋಗಿದ್ದರು. ಕಾರು ಅತ್ತ ಚಲಿಸಿದ ನಂತರ, ಇಬ್ಬರೂ ಬಾಗಿಲಿಗೆ ಬರುವುದನ್ನೇ ಕಾದಿದ್ದ ಸಾಕ್ಷಿ ರಾಶಿಯನ್ನು ಹಿಡಿದು ನಿಲ್ಲಿಸಿದಳು.

"ಏನೇ ರಾಶೀ, ನಿನ್ನ ಮೇಡಂ ಹತ್ರ, ನೆನ್ನೆ ನಡೆದ ಪ್ರಕರಣಾನ ಏನಾದ್ರೂ ಹೇಳಿದ್ಯಾ?"

"ಇಲ್ಲ ನಾನ್ಯಾಕೆ ಹೇಳ್ಲಿ? ನಂಗೇನು ಅಷ್ಟೂ ಗೊತ್ತಾಗುಲ್ವಾ?" ಕ್ಷೀರಾ ರಾಶಿಯನ್ನೇ ಸಂಶಯದಿಂದ ನೋಡಿದಳು.

"ಸರಿ, ಈಗ ಇದೇನು? ನಿಂಗೆ ಅವರ ಮನೇಲಿ ಹೋಗಿ ಇರಬೇಕು ಅಂತ ಇಷ್ಟ ಇದೆಯಾ?"

"ಇಲ್ಲಪ್ಪ, ನಾನ್ಯಾಕೆ ಹೋಗ್ಲಿ? ನಮ್ಮ ಮನೆಯನ್ನು ಬಿಟ್ಟು ಎಲ್ಲಿಗೂ ಹೋಗಿ ಇರೋಕೆ ನನಗಿಷ್ಟವಿಲ್ಲ"

"ಮತ್ಯಾಕೇ ಸುಮ್ಮನಿದ್ದೆ? ಆಗಲೇ ಹೇಳಿಬಿಡಬೇಕಾಗಿತ್ತು"

"ಭಾವನ್ನ ಕೇಳ್ಬೇಕು ಅಂತ ನೀನೇ ಹೇಳೀದ್ಯಲ್ಲಾ"

"ಸರಿ, ನಿಮ್ಮ ಭಾವಂಗೆ ಒಂದೊಂದಲ್ಲ, ಒಪ್ಕೊಂಡ್ರೂ ಕೆಟ್ಟ ಹೆಸರು, ಒಪ್ಪಿಕೊಳ್ಳದಿದ್ರೂ ಕೆಟ್ಟ ಹೆಸರು. ನಿನಗೆ ಹೋಗೋಕೆ ಇಷ್ಟ ಇದ್ದರೆ ಹೇಳು. ನಾನು ನಿಮ್ಮ ಭಾವನ ಹತ್ರ ಮಾತಾಡ್ತೀನಿ"

"ನಂಗೊತ್ತಿಲ್ಲ, ನೀನು ಏನು ಬೇಕಾದ್ರೂ ಮಾಡ್ಕೋ" ಎಂದು ಹೇಳಿ ಅಲ್ಲಿ ನಿಲ್ಲದೇ ರೂಮಿನೊಳಕ್ಕೆ ಹೋಗಿದ್ದಳು.

* * *

20

"ಏನು ಯೋಚಿಸ್ತಾ ಇದೀಯಾ? ಸರಿಯಾಗಿ ಊಟಾನೇ ಮಾಡ್ಲಿಲ್ಲ. ನೀನು ಆಫೀಸ್ನಲ್ಲಿ ಏನಾದರೂ ಟೆನ್ಷನ್ನಾ?"

"ಏನಿಲ್ಲ, ನಾನು ಕ್ಷೀರಾಳ ಬಗ್ಗೆ ಯೋಚಿಸ್ತಿದ್ದೆ. ರಾಶಿ ಹೇಳಿದ್ದೆಲ್ಲಾ ನಿಜ. ಭಾವನ ಫ್ರೆಂಡ್ ಹೀಗೆ ಬಿಹೇವ್ ಮಾಡ್ತಾನೆ ಅಂತ ನಾವು ಅಂದ್ಕೊಂಡಿರಲಿಲ್ಲ ಅಂತ ಕ್ಷೀರ ಹೇಳಿದ್ಲು"

"ಅವಳು ಆಫೀಸ್ಗೆ ಬಂದಿದ್ಲಾ? ಅವಳಿಗೇನೂ ಭಯ ಇಲ್ವಂತಾ?"

"ಭಯ ಪಟ್ಕೊಂಡು ಮನೇಲೇ ಕೂತಿದ್ರೆ ಆಗುತ್ತಾ ಅಂತ ನನ್ನನ್ನೇ ಕೇಳಿದ್ಲು"

"ಅವಳಿಗೆ, ಒಂದು ವಾರ ರಜಾ ಹಾಕಿ ಮನೇಲೇ ಇದ್ಬಿಡು. ಹೊರಗೆಲ್ಲೂ ತಿರುಗಾಡ್ಬೇಡ ಅಂತ ಹೇಳ್ಬಿಡು" ಕಾರ್ತೀಕ ಅವಳನ್ನೇ ಆಶ್ಚರ್ಯದಿಂದ ನೋಡಿದ.

"ಯಾವಾನ್ಗೋ ಭಯ ಪಟ್ಕೊಂಡು ಮನೇಲೇ ಇರು ಅಂತ ಹೇಳೋದು ಹೇಗೆ? ಅವನಿಗ್ಯಾಕೆ ಹೆದರ್ಬೇಕು?"

"ಅವರ ಮನೆ ಪರಿಸ್ಥಿತಿ ಹಾಗಿದೆ... ತಂದೆ ಸರಿಯಾಗಿದ್ದಿದ್ರೆ ಈ ತೊಂದರೆಯೆಲ್ಲಾ ಏನೂ ಇರ್ತಿರಲಿಲ್ಲ. ಬರೀ ಹುಡುಗೀರು. ಅವರ ಎಚ್ಚರದಲ್ಲಿ ಅವರುಗಳು ಇರಬೇಕು ತಾನೇ...? ಈಗ ನೀನು ಸೀರಿಯಸ್ ಆಗಿ ಯೋಚಿಸ್ಲೇ ಬೇಕು ಕಾರ್ತೀಕ್. ಆದಷ್ಟು ಬೇಗ ಅವರ ಭಾವನ ಹತ್ರ ಮಾತಾಡ್ಬೇಕು. ನಾನು ನಿನ್ನ ಜತೆ ಬರ್ತೀನಿ"

"ಈಗ್ಲೇ ತಕ್ಷಣಕ್ಕೆ ಬೇಡ. ಭಾವನ ಮನಸ್ನಲ್ಲಿ ಏನಿದೆಯೋ ಅಂತ ಹೇಳಿದ್ಲು. ಅಲ್ದೇ ಮೊದಲು ಅಪ್ಪ ಅಮ್ಮನ ಹತ್ರ ಮಾತಾಡ್ಬೇಕು ಅಲ್ವಾ?"

"ಹೂಂ, ಹೌದು. ಅವರಿಗೆ ಮೊದಲು ತಿಳಿಸ್ಲೇ ಬೇಕು. ಬೇಕಾದ್ರೆ ಅವಳನ್ನು ಕರ್ಕೊಂಡು ಹೋಗಿ ತೋರಿಸ್ಕೊಂಡು ಬಾ"

"ಅವಳು ಬರೋಕೆ ಒಪ್ತಾಳೋ ಇಲ್ವೋ?"

"ಒಪ್ಪದೇ ಏನು, ಕೇಳಿ ನೋಡು"

"ಇಲ್ಲ, ಅವಳೊಂದು ಥರಾ ಹುಡುಗಿ. ಅಲ್ದೇ ಅವರ ಅಕ್ಕನ್ನ ಈ ಸ್ಥಿತೀಲಿ ಬಿಟ್ಟು ಬರೋಕೆ ಆಗುತ್ತಾ ನೀವೇ ಹೇಳಿ"

"ಒಂದು ದಿನದ ಮಟ್ಟಿಗಾದರೆ, ಹೇಗಾದ್ರೂ ಮ್ಯಾನೇಜ್ ಮಾಡಬಹುದು ! ಅಡಿಗೆಯವರು, ನರ್ಸು ಇರ್ತಾರಲ್ಲ"

"ಅವರ ಭಾವನ್ನ ಕೇಳದೇ ಅವರುಗಳು ಯಾವ ನಿರ್ಧಾರವನ್ನು ತೆಗೆದುಕೊಳ್ಳುವುದಿಲ್ಲ... ಭಾವ ಹೇಳಿದ ಹಾಗೇ ಕೇಳ್ತಾರೆ" ಕೆಟ್ಟ ನಗೆಯನ್ನು ನಕ್ಕ.

"ಗೊತ್ತಾಯ್ತಲ್ಲ, ಈ ಭಾವನ ಪರಾಕ್ರಮ. ಅಯೋಗ್ಯ ಸ್ನೇಹಿತನ್ನ ಮನೆಗೆ ಕರೆ ತಂದು, ಹುಡುಗೀರನ್ನ ಅವನ ಎದುರಿಗೆ ಕೂರಿಸಿ ಪ್ರದರ್ಶನ ಮಾಡಿಸಿ ಹೆದರಿಸಿದಾನೆ. ಅವನಿಗೆ ಅಷ್ಟೂ ಗೊತ್ತಾಗಬೇಡ್ವಾ? ತಂದೆ ತಾಯಿಯರು ಇರದಿದ್ರೆ ಎಂಥಾ ಸ್ಥಿತಿ ಬರುತ್ತೆ ನೋಡು" ಅವಳು ವ್ಯಥೆಯಿಂದ ನುಡಿದಾಗ, ಅವಳ ಕಡೆಯೇ ನೋಡುತ್ತಾ ಮಾತಾಡಿದ,

"ನಾನೊಂದು ಮಾತು ಕೇಳ್ಲಾ ನಿಮ್ಮನ್ನ?"

"ಹೂಂ, ಕೇಳು"

"ನೀವ್ಯಾಕೆ ಮತ್ತೆ ಮದುವೆಯಾಗಲಿಲ್ಲ?"

"ಆಗ್ಬೇಕು ಅಂತ ಅನ್ನಿಸಲಿಲ್ಲ"

"ನೀವು ಮತ್ತೆ ಮದುವೆ ಆಗಿದ್ದಿದ್ರೆ ಅವರಿಗೆ ಬುದ್ಧಿ ಕಲಿಸಿದಂತಾಗುತ್ತಿತ್ತು"

"ನಾನು ಅವರಿಗೆ ಬುದ್ಧಿ ಕಲಿಸಿದೆ ಅನ್ನೋ ಭ್ರಮೇಲೇ ಇದ್ದೆ. ಆದರೆ ಅದು ತಪ್ಪು ಅಂತ ನನಗೆ ಈಗ ಅನ್ನಿಸ್ತಿದೆ. ಇಷ್ಟು ವರ್ಷಗಳಲ್ಲಿ ನಾನು ಸಾಕಷ್ಟು ಬುದ್ಧಿ ಕಲಿತಿದೀನಿ ಬಿಡು" ದೊಡ್ಡ ಉಸಿರನ್ನು ಬಿಟ್ಟಳು.

"ಸಾರಿ ಮೃದುಲಾ, ನಾನು ನಿಮ್ಮ ಹಳೆಯ ವಿಷಯಗಳನ್ನು ಕೆದಕಿ ನಿಮಗೆ ಬೇಸರ ಮಾಡ್ದೆ"

"ಪರವಾಗಿಲ್ಲ ಬಿಡು, ನಾನೇ ಆಗಾಗ ಈ ಹಳೆಯ ನೆನಪುಗಳನ್ನು ಕೆದಕಿಕೊಂಡು ಬೇಸರ ಪಟ್ಕೊಂಡಿದೀನಿ. ಊಟ ಆಗಿದ್ರೆ ಏಳು. ಇವುಗಳನ್ನೆಲ್ಲಾ ತೆಗೆದಿಟ್ಟು, ಸ್ವಲ್ಪ ನಾಳೆಯ ಕ್ಲಾಸಿಗೆ ಪ್ರಿಪೇರ್ ಆಗ್ಬೇಕು" ಕಾರ್ತೀಕ್ ಕೈತೊಳೆಯಲು ಎದ್ದು ಹೋಗಿದ್ದ. ಟೇಬಲ್ ಮೇಲಿದ್ದ ಪಾತ್ರೆಗಳನ್ನು ತೆಗೆದಿಟ್ಟು, ಒರೆಸಿ ತನ್ನ ರೂಮಿಗೆ ಬಂದಳು. ಕಿಟಕಿಯ ಪರದೆಯನ್ನು ಸರಿಸಿ, ಹೊರಗೆ ಕಣ್ಣು ಹಾಯಿಸಿದಳು. ಆಕಾಶ ಶುಭ್ರವಾಗಿತ್ತು. ನಕ್ಷತ್ರಗಳು ಮಿನುಗುತ್ತಿದ್ದವು. ತಂಗಾಳಿ ಬೀಸುತ್ತಿತ್ತು. ಆದರೆ ಮನದಲ್ಲಿ ತಂಗಾಳಿಯೂ ಇಲ್ಲ; ಬಿರುಗಾಳಿಯೂ ಇಲ್ಲ.

ರಾಶಿಯನ್ನು ಕಳಿಸಿಕೊಡಲು ಅವಳ ಭಾವ ಒಪ್ಪಿದರೆ, ರಾಶಿ ಒಂದು ನಾಲ್ಕೈದು ದಿನಗಳು ಬಂದಿದ್ದು ಮತ್ತೆ ವಾಪಸ್ಸು ಹೊರಟು ಹೋಗುತ್ತಾಳೆ. ಇದರಿಂದ ನನಗೆ ಸಿಗುವುದಾದರೂ ಏನು? ಒಂದೆರಡು ದಿನಗಳ ಅವಳ ಒಡನಾಟ ಮುದವನ್ನು ನೀಡಬಹುದು. ಆದರೆ, ಅವಳು ಹೋದ ಮೇಲೆ, ಮನಸ್ಸಿಗೆ ಬೇಸರವೂ ಆಗಬಹುದು. ಅವಳು ಪರ್ಮನೆಂಟ್ ಆಗಿ ನನ್ನ ಜೊತೆ ಇರಲು ಒಪ್ಪುವಳೆ? ಒಪ್ಪುವಂತೆ ಏನು ಮಾಡಬೇಕು? ಕ್ಷೀರ ಮದುವೆಯಾಗಿ ಇಲ್ಲಿ ಬಂದ್ದು ಇರತೊಡಗಿದ ಮೇಲೆ ಅವಳೂ ಇರಲು ಒಪ್ಪಬಹುದೇನೋ? ಆದಷ್ಟು ಬೇಗ, ಕ್ಷೀರಾ-ಕಾರ್ತೀಕರ ಮದುವೆ ನೆರವೇರಬೇಕು. ಅದೇ ಸರಿ... ಮನಸ್ಸು, ಒಂದು ನಿರ್ಧಾರಕ್ಕೆ ಬಂದ ಮೇಲೆ ಸ್ವಲ್ಪ ಹಗುರವಾಗಿತ್ತು.

ಟೇಬಲ್ ಮೇಲೆ ಇದ್ದ ಪಠ್ಯ ಪುಸ್ತಕವನ್ನು ಕೈಗೆತ್ತಿಕೊಂಡಳು. ಆದರೆ ಕಣ್ಣುಗಳು ಅಕ್ಷರದ ಮೇಲೆ ಓಡುತ್ತಿದ್ದವೇ ಹೊರತು, ತಲೆಗೆ ಓದಿದ್ದು ತಲುಪುತ್ತಿರಲಿಲ್ಲ. ಮತ್ತೆ ಕಿಟಕಿಯ ಬಳಿ ಬಂದು ನಿಂತು, ಕಪ್ಪು ಆಕಾಶವನ್ನು ನೋಡತೊಡಗಿದಳು.

ಹೊರಗಿನ ಕತ್ತಲೆಗೆ, ಈ ಆಕಾಶವೂ ಕಪ್ಪಾಗಿ ಕಾಣುತ್ತದೆ. ಆದ್ದರಿಂದಲೋ ಏನೋ ನಕ್ಷತ್ರಗಳು ಮಿಣ ಮಿಣ ಮಿನುಗುತ್ತವೆ. ಒಂದರ ಪಕ್ಕ ಇನ್ನೊಂದು, ಒಂದರ ಹಿಂದೆ ಇನ್ನೊಂದು, ದೂರದಲ್ಲಿ ಹತ್ತಿರದಲ್ಲಿ ಸಹಸ್ರಾರು ನಕ್ಷತ್ರಗಳು ಮಿನುಗುತ್ತಲೇ ಇವೆ. ಆದರೆ ಎಣಿಕೆ ಮಾಡುವುದು ಯಾರಿಂದಲೂ ಆಗದ ಕೆಲಸ. ನಿರ್ಮಲವಾದ ಆಗಸದಲ್ಲಿ ಎಂತಹ ವಿನ್ಯಾಸ! ನಿರ್ಮಲತೆಯನ್ನು ಎತ್ತಿ ತೋರುವ ಚಮತ್ಕಾರ. ಆದರೆ ಅಷ್ಟೇ ಗೊಂದಲಮಯ. ಗ್ರಹಗಳೋ, ನಕ್ಷತ್ರಗಳೋ ಎಲ್ಲವೂ ಒಂದೇ ಥರ ಕಾಣುತ್ತವೆ ಜನ ಸಾಮಾನ್ಯರಿಗೆ. ವ್ಯತ್ಯಾಸ ತಿಳಿಯಬೇಕಾದರೆ ವಿಜ್ಞಾನದ ಪಾಠವನ್ನು ಓದಬೇಕು. ನಾನೇಕೆ ಸೈನ್ಸ್ ಗ್ರಾಜುಯೇಟ್ ಆಗಲಿಲ್ಲ? ಮೊದಲಿನಿಂದಲೂ ಇಂಗ್ಲೀಷ್ ಸಾಹಿತ್ಯದ ಮೇಲೆ ಒಲವು ಗದ್ಯ ಪದ್ಯ ನಾಟಕ ಪ್ರಬಂಧಗಳು ಎಲ್ಲವೂ ಇಷ್ಟ. ಸಾಹಿತ್ಯದಲ್ಲಿ ಸಾರವಿದೆ. ನವರಸಗಳು ತುಂಬಿ ತುಳುಕುತ್ತವೆ. ಇದನ್ನೆಲ್ಲಾ ಪ್ರೀತಿಸುತ್ತಿದ್ದವನಿಗೆ ಅರ್ಥವಾಗುವಂತೆ, ಉದಾಹರಣೆಗಳ ಮೂಲಕ ಹೇಳಿ, ಅವನನ್ನು ರಂಜಿಸುತ್ತಿದ್ದಳು. ಅದೆಲ್ಲಾ ಆ ಕಾಲದಲ್ಲಿ ! ಈಗ ಎಲ್ಲವೂ ಖಾಲಿ !! ಪಠ್ಯದಲ್ಲಿ ಎಷ್ಟಿದೆಯೋ ಅಷ್ಟನ್ನು ಸ್ವಾರಸ್ಯವಾಗಿ ಹೇಳಿ, ವಿದ್ಯಾರ್ಥಿಗಳಿಗೆ ಅರ್ಥವಾಗುವಂತೆ ಪಾಠ ಮಾಡುವುದು ನನ್ನ ಕರ್ತವ್ಯವಾಗಿದೆ ಅಷ್ಟೇ ಈಗಿನ ಕೆಲಸ.

ತಂದೆ ತಾಯಿಯರಿಗೆ ಒಬ್ಬಳೇ ಮಗಳಾಗಿ, ಪ್ರೀತಿಯ ಪುತ್ಥಳಿಯಾಗಿದ್ದರೂ ಬೆಳೆಯುವಾಗ ಒಮ್ಮೊಮ್ಮೆ ತಾನು ಒಂಟಿ ಅಂತೆನಿಸುತ್ತಿತ್ತು. ಸರಸಕ್ಕೆ, ಜಗಳಕ್ಕೆ ಅಣ್ಣ ತಮ್ಮಂದಿರಾಗಲೀ, ಅಕ್ಕತಂಗಿಯರಾಗಲೀ, ಯಾರಾದರೂ ಒಬ್ಬರಾದರೂ ಇದ್ದಿದ್ದರೆ ಚೆನ್ನಾಗಿರುತ್ತಿತ್ತು ಎಂದೆನಿಸುತ್ತಿತ್ತು. ಒಂಟಿಯಾಗಿ ಬೆಳೆದದ್ದು ಒಂದು ಕೊರತೆಯೇ ಹೊರತು ಇನ್ನಾವುದರಲ್ಲೂ ಕಮ್ಮಿ ಇರಲಿಲ್ಲ. ಯೌವನಕ್ಕೆ ಕಾಲಿಟ್ಟ ನಂತರ, ಆಕಸ್ಮಿಕವಾಗಿ ಅವನ ಪರಿಚಯವಾಯಿತು. ಪರಿಚಯ ಪರಿಣಯಕ್ಕೆ ನಾಂದಿಯಾಯಿತು. ಮುದ್ದಿನ ಮಗಳು ಅವನನ್ನೇ ಮದುವೆಯಾಗುವುದಾಗಿ ಹಠ ಹಿಡಿದಾಗ, ಮಗಳಿಗೆ ಬೇಸರವಾಗಬಾರದೆಂದು ಅದ್ದೂರಿಯಾಗಿ ಮದುವೆ ಮಾಡಿದರು. ಆದರೆ ಅವನೊಡನೆ

ಸುಖವಾಗಿ ಸಂಸಾರ ಮಾಡೆಂದು ಹರಸಿ ಕಳಿಸಿಕೊಡಲಿಲ್ಲ. ಅದೇ ಅವರು ಮಾಡಿದ ಭಾರಿ ತಪ್ಪು ಅಂತ ತನಗೆ ಅರ್ಥವಾದದ್ದು ಬಹಳ ತಡವಾಗಿ.

ಹನಿಮೂನ್‌ಗೆ ಹೋದಷ್ಟೇ ದಿನಗಳು ಅವನೊಡನೆ ಬಾಳ್ವೆ ನಡೆಸಿದ್ದು. ನಂತರದ್ದು ಬರೀ ಮಾತುಗಳು. ಅಪ್ಪ ಅಷ್ಟು ಸ್ವಾರ್ಥಿಯಾಗಬಾರದಾಗಿತ್ತು. ಅವನು ಅಷ್ಟು ಸ್ವಾಭಿಮಾನಿಯಾಗಬಾರದಾಗಿತ್ತು. ಇಬ್ಬರ ಎಳೆದಾಟದಲ್ಲಿ ನಡುವೆ ಅನ್ಯಾಯವಾದದ್ದು ಮಾತ್ರ ತನಗೆ. ಒಂದಲ್ಲ ಒಂದು ದಿನ ತನ್ನ ಬಳಿಗೆ ಬಂದೇ ಬರುತ್ತಾನೆಂಬ ನಿರೀಕ್ಷೆಯಲ್ಲಿದ್ದವಳಿಗೆ ಸಿಕ್ಕಿದ್ದು. ಡೈವೋರ್ಸ್ ಅದನ್ನಾದರೂ ಅಪ್ಪ ತಪ್ಪಿಸಬಹುದಾಗಿತ್ತು. ಆದರೆ ಅವನು ನಿನಗೆ ಲಾಯಖ್ಖಿಲ್ಲ ಎಂದು ಹೇಳಿ ಬಾಯಿ ಮುಚ್ಚಿಸಿದ್ದರು. ಅವನೊಡನೆ ಒಂದೇ ಒಂದು ಬಾರಿಯಾದರೂ ಮಾತನಾಡುವ ಅವಕಾಶವನ್ನು ಕಲ್ಪಿಸಿಕೊಡಲಿಲ್ಲ. ಮರು ಮದುವೆಯ ಪ್ರಯತ್ನಗಳು ನಡೆಯಲೇ ಇಲ್ಲ. ಆದರೆ ತನಗೇ ಯಾವ ಆಸಕ್ತಿಯೂ ಉಳಿದಿರಲಿಲ್ಲ. ಮನಸಾರೆ ಪ್ರೀತಿಸಿದವನೊಬ್ಬನಿಗೇ ತಾನು ಮೀಸಲು ಎಂದು ನಿರ್ಧರಿಸಿ, ಮರು ಮದುವೆಯ ಬಗ್ಗೆ ಯೋಚಿಸಲೇ ಇಲ್ಲ. ಅಲ್ಲದೇ ತನ್ನಿಂದ ತನ್ನ ಗಂಡನಾದವನಿಗೆ ಅನ್ಯಾಯವಾಯಿತು ಎಂಬ ಅಳುಕೂ ಸಹ ಉಳಿದು ಬಿಟ್ಟಿತು. ಆದರೆ ತಂದೆ ತಾಯಿಯನ್ನು ಧಿಕ್ಕರಿಸಿ, ಅವನಲ್ಲಿಗೆ ಹೋಗುವ ಧೈರ್ಯವನ್ನೂ ತಾನು ಮಾಡಲಿಲ್ಲ. ಅಪ್ಪ ಅಮ್ಮನಿಗೆ ಮಗಳಾಗಿ ಅವರೊಡನೆಯೇ ಉಳಿದು ಬಿಟ್ಟೆ. ಗಂಡನಿಂದ ದೂರವಾಗಿಯೇ ನಿಂತು ಬಿಟ್ಟೆ. ಮತ್ತೆ ನನ್ನ ಒಂಟಿ ಜೀವನಕ್ಕೆ ಹೊಂದಿಕೊಂಡೆ. ಸಾಹಿತ್ಯದ ಅಮಲನ್ನು ಮತ್ತೆ ತುಂಬಿಕೊಂಡೆ. ಲೆಕ್ಚರರ್ ಆಗಿ ಕಾಲೇಜಿಗೆ ಸೇರಿಕೊಂಡೆ. ಇದೇ ನನ್ನ ಜೀವನ ಸಂಗಾತಿ ಎಂದು ಅಪ್ಪಿಕೊಂಡೆ.

ತನ್ನ ಸ್ನೇಹಿತೆ ಮಾಲಾಳಿಗೆ ಮದುವೆ ಗೊತ್ತಾಗಿತ್ತು. ಅವಳು ತನಗೆ ಆಹ್ವಾನ ಪತ್ರಿಕೆಯನ್ನು ಕೊಡಲಿಲ್ಲ. ಅದರ ಕಾರಣ ತಿಳಿದಾಗ ಮನಸ್ಸು ಕಹಿಯಾಗಿತ್ತು. ಕಹಿ ಕಪ್ಪಾಗಿತ್ತು. ಕಪ್ಪು ಹೆಪ್ಪುಗಟ್ಟಿತ್ತು. ಈ ಹಾಳು ಮನಸ್ಸು ಆಕಾಶದಂತೆ. ಶುಭ್ರವಾದ ನೀಲಿ ಆಕಾಶವೇ ಆಗಿರಲಿ, ಕಪ್ಪಾಗಿ ಕಾಣುವ ಕಾಳರಾತ್ರಿಯ ಆಕಾಶವಾಗಿರಲಿ, ಅಲ್ಲಿ ಅನಿಸಿಕೆಗಳೆಂಬ ನಕ್ಷತ್ರಗಳಿಲ್ಲದೇ ಇದ್ದರೆ, ಮನಸ್ಸಿಗೆ ಕೆಲಸವೇ ಇಲ್ಲ. ತುಂಬಿಕೊಂಡಿರುವ ಮನಸ್ಸು ಖಾಲಿಯಾಗುವುದೇ ಇಲ್ಲ. ಒಂದನ್ನು ಸರಿಸಿದರೆ, ಮತ್ತೊಂದು ಸೇರಿಕೊಳ್ಳುತ್ತದೆ. ರಾಶಿಯನ್ನು ಕಾಣುವವರೆಗೂ ತನಗೆ ಅವನ ಮೇಲಿದ್ದುದು ಬರೀ ತಿರಸ್ಕಾರ. ಅವನು ತನ್ನನ್ನು ಪ್ರೀತಿಸಲೇ ಇಲ್ಲವೇ ಎಂಬ ಅನುಮಾನದಿಂದ ಕೂಡಿದ ತಿರಸ್ಕಾರ. ಆದರೆ ರಾಶಿಯನ್ನು ಕಂಡ ಮೇಲೆ, ಈಗ ನನ್ನ ಮನಸ್ಸಿನ ಕೆಲಸ ಹೆಚ್ಚಾಗಿದೆ. ಇಷ್ಟಕ್ಕೆಲ್ಲಾ ತಾನೇ ಕಾರಣ ಎಂಬ ಮಂಥನ ಪ್ರಾರಂಭವಾಗಿದೆ. ಇದು ನನ್ನನ್ನು ಕರೆದೊಯ್ಯುವುದು ಎಲ್ಲಿಗೆ?... ಎಲ್ಲಿಗೆ?...

ದೂರದಲ್ಲೆಲ್ಲೋ ನಾಯಿ ಬೊಗುಳಿತು. ಕಿಟಕಿಯನ್ನು ಮುಚ್ಚಿ ಪರದೆಯನ್ನು ಎಳೆದು ಮಲಗಲು ಸಿದ್ಧಳಾದಳು. ನಿದ್ದೆ ಬರಲಾರದು ಅಂತ ತನಗೇ ಅನ್ನಿಸಿದಾಗ, ಒಂದು ನಿದ್ದೆಯ ಮಾತ್ರೆಯನ್ನು ನುಂಗಿ, ಮಂಚದ ಮೇಲೆ ಉರುಳಿದಳು.

* * *

21

ದೂರದಿಂದಲೇ, ಮನೆಯ ಮುಂಬಾಗಿಲು ತೆರೆದಿರುವುದನ್ನು ಕಂಡ ಕ್ಷೀರಾ ರಾಶಿಯ ತೋಳನ್ನು ಹಿಡಿದು ನಿಲ್ಲಿಸಿದಳು. "ಯಾರೋ ಬಂದಿರುವಂತಿದೆ ರಾಶೀ..." ಆತಂಕದಿಂದ ನುಡಿದಳು.

"ನಮ್ಮ ಮೇಡಂ ಬಂದಿದ್ದಾರೆ ಅಂತೆ ಕಾಣುತ್ತೆ. ಅವರ ಕಾರು ನಿಂತಿದೆ ನೋಡು" ಅವರಿಬ್ಬರ ಹಿಂದೆ ನಿಧಾನವಾಗಿ ನಡೆದು ಬರುತ್ತಿದ್ದ ಸಾಕ್ಷಿ ಹಾಗೂ ಸಂಜಯ್, ಬಂದು ಅವರಿಬ್ಬರನ್ನು ಸೇರಿದರು. ಸಾಕ್ಷಿಯೂ ಮುಂಬಾಗಿಲು ತೆರೆದಿರುವುದನ್ನು ಗುರುತಿಸಿದಳು.

"ಸಂಜೂ, ಮನೆಗೆ ಯಾರೋ ಬಂದಂತಿದೆ. ನೀವು ಮುಂದೆ ಹೋಗಿ ನೋಡಿ" ಸಂಜಯ್ ವೇಗವಾಗಿ ಮುಂದೆ ನಡೆದ. ಅಕ್ಕತಂಗಿಯರು ಹಿಂಬಾಲಿಸಿದರು.

ವೆರಾಂಡದಲ್ಲಿ ಕುಳಿತಿದ್ದ ಕಾರ್ತೀಕ್, ಸಂಜಯ್‌ನನ್ನು ಕಂಡು ಎದ್ದು ಕೈಕುಲಕಿ "ಹಲೋ ಸಾರ್..." ಎಂದ.

"ಎಷ್ಟು ಹೊತ್ತಾಯ್ತು ನೀವು ಬಂದು? ನೀವು ಬರ್ತೀರಿ ಅಂತ ಗೊತ್ತಿರಲಿಲ್ಲ. ಇಲ್ಲೇ ಹತ್ತಿರದಲ್ಲಿ ಷಾಪಿಂಗ್ ಹೋಗಿದ್ದೆವು" ಕ್ಷೀರಾ ಅವನ ಕಣ್ಣು ತಪ್ಪಿಸಿ ಒಳಕ್ಕೆ ನುಸುಳಿದ್ದಳು. ಸಾಕ್ಷಿ ಗಂಡನ ಪಕ್ಕದಲ್ಲಿ ನಿಂತಳು. ರಾಶಿ ಹೊರಗೇ ಉಳಿದಳು. ಗಿರಿಜಮ್ಮನೊಡನೆ ಮಾತನಾಡುತ್ತಾ ಕುಳಿತಿದ್ದ ಮೃದುಳಾಳನ್ನು ಕಂಡು, ಕ್ಷೀರಾ ಚಕಿತಳಾದಳು. ಮೃದುಲಾ ಮುಗುಳ್ನಕ್ಕಳು.

"ಎಲ್ಲಾ ಎಲ್ಲೋ ಹೊರಗೆ ಹೋಗಿದ್ರಿ ಅಂತ ಕಾಣುತ್ತೆ"

"ಹೂಂ, ಮಾರ್ಕೆಟ್ಟಿಗೆ ಹೋಗಿದ್ದೆವು. ಭಾವನೂ ಜತೇಲಿ ಇದ್ರು. ಗಿರಿಜಮ್ಮ, ನೀವು ಮೊಬೈಲ್‌ಗೆ ಫೋನು ಮಾಡ್ಬಾರ್ದಾಗಿತ್ತಾ? ಬೇಗ ಬರ್ತಿದ್ವು"

"ನಂಬರ್ರು ಸಿಗಲಿಲ್ಲ, ಬಾಯಿಗೆ ನೆನಪಿಲ್ಲ"

"ಪರವಾಗಿಲ್ಲ, ನಾವು ಇನ್ನು ಇದೇ ತಾನೇ ಬಂದೆವು. ರಾಶೀನ ನಾಲ್ಕು ದಿನಕ್ಕೆ ನಮ್ಮ ಮನೆಗೆ ಕರ್ಕೊಂಡು ಹೋಗೋಣ ಅಂತ ಬಂದಿದೀವಿ. ಅವಳ್ಯಾಕೋ ಇವತ್ತು ಕಾಲೇಜಿಗೆ ಬಂದಿರಲಿಲ್ಲ."

"ಹೌದು, ಮೇಡಂ. ಎರಡೇ ಪಿರೀಡ್ಸ್ ಕ್ಲಾಸ್ ಇದೆ. ನಾನು ಹೋಗುಲ್ಲ ಅಂತ ಹೇಳಿದ್ಲು. ಅವಳು ಮನೇಲಿದಾಳಲ್ಲ ಅಂತ ನಾನೂ ಆಫೀಸಿಗೆ ಹೋಗಲಿಲ್ಲ. ಫೋನು ಮಾಡಿ, ಬರುಕ್ಕಾಗುಲ್ಲ ಅಂತ ಹೇಳಿದ್ದೆ"

"ರಾಶಿ ಎಲ್ಲಿ? ರೆಡಿಯಾಗಿದ್ರೆ ಕರ್ಕೊಂಡು ಹೋಗ್ತೀವಿ"

"ಸಾರಿ, ಮೇಡಂ. ನಮ್ಮ ಭಾವ ಬೇಡ ಅಂತಂದ್ರು"

"ನಾನು ನಿಮ್ಮ ಭಾವನ ಹತ್ರ ಮಾತಾಡ್ಲಾ?"

"ಬೇಡ ಮೇಡಂ, ಅವರು ಒಪ್ಪಲ್ಲ. ನಿಮ್ಮಕ್ಕನಿಗೆ ಟೆನ್ಷನ್ ಆಗುತ್ತೆ. ನೀವಿಬ್ರೂ ಜತೇಲೇ ಇರಿ, ಒಬ್ಬಳನ್ನೇ ಬಿಟ್ಟು ಎಲ್ಲಿಗೂ ಹೋಗ್ಬೇಡಿ ಅಂತ ಹೇಳಿದಾರೆ" ಅಷ್ಟರಲ್ಲಿ ಸಾಕ್ಷಿಯೂ ಒಳಕ್ಕೆ ಬಂದಿದ್ದಳು.

"ನೀವೂ ಬಂದಿದೀರಿ ಅಂತ ಗೊತ್ತಾಗ್ಲಿಲ್ಲ. ಈಗ ಕಾರ್ತೀಕ್ ಹೇಳಿದ್ರು ರಾಶೀ.. ರಾಶೀ... ಬಾರೇ... ನಿಮ್ಮ ಮೇಡಂ ಬಂದಿದಾರೆ. ಅವಳು ಸ್ವಲ್ಪ ಅಪ್ಸೆಟ್ ಆಗಿದಾಳೆ" ಸಾಕ್ಷಿ ಮುಜುಗರ, ಸಂಕೋಚದಿಂದ ಹೇಳಿದಳು.

"ನಾನೇ ಹೋಗಿ ಮಾತನಾಡ್ತೀನಿ. ಎಲ್ಲಿದಾಳೆ ಅವಳು?" ಏಳಲಿದ್ದ ಮೃದುಲಾಳನ್ನು ಸಾಕ್ಷಿ ತಡೆದಳು.

"ಕ್ಷೀರಾ ಹೋಗು, ಅವಳನ್ನು ಕರ್‍ಕೊಂಡು ಬಾ. ನೀವು ಕೂತ್ಕೊಳ್ಳಿ ಮೇಡಂ" ಕ್ಷೀರಾ ಕಾರ್ತೀಕನ ಕಡೆ ಕಳ್ಳನೋಟವನ್ನು ಬೀರುತ್ತಾ ಹೊರಬಂದಳು. ರಾಶಿ ಅಲ್ಲಿ ಎಲ್ಲಿಯೂ ಕಾಣಲಿಲ್ಲ. ಭಯದಿಂದ ಒಳಬಂದಳು.

"ರಾಶಿ ಒಳಗೆ ಬಂದ್ಲಾ ಭಾವ?"

"ಏನೋ ಗೊತ್ತಿಲ್ಲ, ನಿಮ್ಮ ಜತೆ ಒಳಗೆ ಬರ್ಲಿಲ್ವಾ?"

"ಇಲ್ಲ ಭಾವ. ಅವಳು ಒಳಗೆ ಬರಲಿಲ್ಲ. ಹೊರಗೂ ಕಾಣ್ತಿಲ್ಲ"

"ಎಲ್ಲಿ ಹೋಗ್ತಾಳೆ. ಇಲ್ಲೇ ಎಲ್ಲೋ ನಿಂತಿರ್ತಾಳೆ. ಕೂಗಿ ನೋಡು" ಕ್ಷೀರಾಳ ಆತಂಕ ಕಾರ್ತೀಕ್‌ಗೆ ಅರ್ಥವಾಗಿತ್ತು. ಕಣ್ಣಿನಲ್ಲೇ ಧೈರ್ಯ ಹೇಳಿ, ತಾನೂ ಹೊರಗೆ ಬಂದ. ಪಕ್ಕದ ಮನೆಯ ನಾಯಿ ಒಂದೇ ಸಮನೆ ಬೊಗಳುತ್ತಿತ್ತು. ಸಂಜಯ್ ಒಳಗೆ ನೋಡಲು ಹೊರಟು ಹೋಗಿದ್ದ.

"ನಾಯಿ ಬೇರೆ ಬೊಗಳ್ತಿದೆ, ಸಾರ್. ಯಾರಾದ್ರೂ ಹೊರಗಿನೋರು ಬಂದಿರಬಹುದಾ ಅಂತ ಭಯ ಆಗಿದೆ" ಕ್ಷೀರಾ ಹೇಳಿದಳು.

"ಇಲ್ಲ, ಯಾರೂ ಬಂದಿಲ್ಲ. ನಾವೆಲ್ಲಾ ಇಲ್ಲೇ ಇರ್ಲಿಲ್ವಾ? ಪಕ್ಕದ ಮನೆಗೆ ಏನಾದರೂ ಹೋಗಿರಬಹುದು. ಹೆಸರು ಹಿಡಿದು ಕೂಗಿ" ಕಾರ್ತೀಕ್ ಎಂದ.

"ರಾಶೀ... ರಾಶೀ..." ಎಂದು ಕರೆಯುತ್ತಾ ಕ್ಷೀರಾ ಪಕ್ಕದ ಓಣಿಯಲ್ಲಿ ನಡೆದಳು. ಮೂಲೆಯಲ್ಲಿ ಕಾರ್ತೀಕ್ ಹಾಗೇ ನಿಂತಿದ್ದ. ಹಿತ್ತಲಿನಲ್ಲಿದ್ದ ಟಾಯ್ಲೆಟ್‌ನ ಬಾಗಿಲನ್ನು ತೆರೆದು ರಾಶೀ ಹೊರಬಂದಳು.

"ಇಲ್ಲೇನೇ ಮಾಡ್ತಿದೀ ಈ ಕತ್ತಲೇಲಿ?" ಕ್ಷೀರಾ ತಂಗಿಯ ಕೆನ್ನೆಗೆ ಹೊಡೆದಳು. ರಾಶಿ ಕೆನ್ನೆಯ ಮೇಲೆ ಕೈಯನ್ನಿಟ್ಟುಕೊಂಡಳು.

"ಟಾಯ್ಲೆಟ್‌ಸಲ್ಲಿ ಏನ್ಮಾಡ್ತಾರೆ? ಸುಮ್ಸುಮ್ನೆ ಹೊಡೀಬೇಡ ನೀನು"

"ಇಲ್ಲಿ ಕತ್ತಲೆ, ದೀಪ ಹಾಕಿಲ್ಲ. ತಿಂಗಳಾನುಗಟ್ಟಲೆಯಿಂದ ಈ ಟಾಯ್ಲೆಟ್‌ನ ಯೂಸ್ ಮಾಡಿಲ್ಲ. ನಡೀ ಸುಮ್ನೆ. ಅವಿತಿಟ್ಟುಕೊಳ್ಳೋಕೆ ಬೇರೆ ಜಾಗ ಇರ್ಲಿಲ್ವಾ

ನಿಂಗೆ? ಅಂಥಾದ್ದೇನಾಯ್ತು ಈಗ?" ಕ್ಷೀರಾ ರಾಶಿಯ ತೋಳನ್ನು ಹಿಡಿದು ಎಳೆದುಕೊಂಡು ಬಂದಳು.

"ಏನಾಯ್ತು?" ಕಾರ್ತೀಕ್ ಕೇಳುತ್ತಿದ್ದಂತೆಯೇ, ರಾಶಿ ಹಿಡಿತವನ್ನು ಬಿಡಿಸಿಕೊಂಡು ಒಳಕ್ಕೆ ಓಡಿದ್ದಳು. ಕಾರ್ತೀಕ್ ಕ್ಷೀರಳನ್ನು ಹಿಡಿದು ನಿಲ್ಲಿಸಿದ.

"ಇವತ್ತು ನೀವು ಆಫೀಸಿಗೆ ಬರ್ತೀರಿ ಅಂತ ಅಂದ್ಕೊಂಡಿದ್ದೆ ನಾನು"

"ಬರೋಕ್ಕಾಗ್ಲಿಲ್ಲ ಸಾರ್. ಪಂಕಜಾ ಮೇಡಂಗೆ ಫೋನು ಮಾಡಿ ತಿಳಿಸಿದ್ದೆ. ಬನ್ನಿ ಸಾರ್, ಒಳಕ್ಕೆ ಹೋಗೋಣ" ಇಬ್ಬರೂ ಒಳಗೆ ಬಂದರು. ಹಾಲ್‌ನಲ್ಲಿ ರಾಶಿ, ಮೃದುಲಾಳ ಪಕ್ಕದಲ್ಲಿ ಕುಳಿತಿದ್ದಳು. ಅವಳ ಎಡತೋಳು ರಾಶಿಯನ್ನು ಬಳಸಿದ್ದವು. ಕಾರ್ತೀಕನೂ ಅಲ್ಲೇ ಕುಳಿತ. ಮೃದುಲಾ ರಾಶಿಯ ಬೆನ್ನು ತಟ್ಟಿದಳು.

"ರಾಶಿ, ನೀನು ಓದ್ಕೋ ಹೋಗು. ನಾನು ನಿಮ್ಮ ಅಕ್ಕ ಭಾವನ ಹತ್ರ ಒಂದು ಮುಖ್ಯವಾದ ವಿಷಯವನ್ನು ಮಾತಾಡ್ಬೇಕು. ಕ್ಷೀರಾ, ನಿಮ್ಮ ಭಾವ ಎಲ್ಲಿ?"

"ನಾನು ಹಾಸ್ಟೆಲ್ಲಿನಲ್ಲಿರ್ತೀನಿ. ನೀವು ನಮ್ಮ ಭಾವಂಗೆ ಹೇಳ್ತೀರಾ?" ರಾಶಿ ಕೆಳದನಿಯಲ್ಲಿ ಹೇಳಿದರೂ ಸಾಕ್ಷಿಗೆ ಸ್ಪಷ್ಟವಾಗಿ ಕೇಳಿಸಿತ್ತು.

"ರಾಶೀ.. ಹೋಗು ಅಂತಂದ್ರೆ ಸುಮ್ನೆ ಹೋಗು. ನಾವು ದೊಡ್ಡವರು ಮಾತನಾಡಿ ಡಿಸೈಡ್ ಮಾಡ್ತೀವಿ. ಮೊದ್ಲೇ ನಿಮ್ಮ ಭಾವಂಗೆ ಬೇಜಾರಾಗಿದೆ" ಸಾಕ್ಷಿ ಗದರಿದಳು. ಅವಳು ಕೆಟ್ಟ ಮುಖ ಮಾಡಿ ಒಳಕ್ಕೆ ಹೊರಟು ಹೋಗಿದ್ದಳು.

"ರಾಶೀ ದಿನ ದಿನಕ್ಕೂ ವಿಪರೀತ ಸೂಕ್ಷ್ಮ ಆಗ್ತಿದಾಳೆ ಅಂತ ಅನ್ನಿಸ್ತಿದೆ. ಯಾಕೋ ಹೆದರಿದಾಳೆ ಅಂತ ಕಾಣುತ್ತೆ. ಏನೂ ಇಲ್ಲ ಅಂತ ಹೇಳಿದ್ಲು. ಆದರೂ..."

"ಏನೂ ಇಲ್ಲ ಮೇಡಂ, ಅಮ್ಮನ ನೆನಪು ಹೆಚ್ಚಾದಾಗ, ಸ್ವಲ್ಪ ಅಪ್ಸೆಟ್ ಆಗ್ತಾಳೆ" ಸಾಕ್ಷಿ ಕ್ಷೀರಳ ಕಡೆ ನೋಡಿದಳು. ಅವಳೂ ಅಪ್ಸೆಟ್ ಆಗಿರುವಂತೆ ಅನ್ನಿಸಿತ್ತು.

"ನಮ್ಮ ಮನೇಲಿ ನಾಲ್ಕು ದಿನ ಇಟ್ಕೊಂಡು ಕಳಿಸ್ತಿದ್ದೆ. ಅವಳಿಗೂ ಒಂದು ಛೇಂಜ್ ಇರ್ತಿತ್ತು. ಆದರೆ ಸಂಜಯ್ ಒಪ್ಪಲಿಲ್ಲವಂತೆ..."

"ಹೌದು ಮೇಡಂ, ಅಕ್ಕಂದಿರು ನಾವು ಇದೀವಿ. ಅವಳಿನ್ನು ಚಿಕ್ಕವಳು, ನಮ್ಮ ನೆಂಟರಿಷ್ಟರ ಮನೆಗೆ ಕಳಿಸೋಕೇ ಒಪ್ಪಲ್ಲ. ಅವರ ಸ್ವಭಾವವೇ ಹಾಗೇ"

"ಹೋಗ್ಲಿ ಬಿಡಿ, ಅವರಿಗೆ ಭಯ ಇರಬಹುದು. ಏನಾದರೂ ಅಪವಾದ ಆಕ್ಷೇಪಣೆ ಬರಬಹುದು ಅಂತ. ಅದೂ ಸರೀನೇ"

"ರಾಶಿಗೆ ಸ್ವಲ್ಪ ತಿಳುವಳಿಕೆ ಹೇಳ್ಬಿಟ್ಟು ಹೋಗಿ ಮೇಡಂ. ಭಾವನ ಮೇಲೆ ಸಿಟ್ಟು ಹಾಸ್ಟೆಲ್‌ಗೆ ಹೋಗಿ ಸೇರ್ಕೊಳ್ತೀನಿ ಅಂತಿದಾಳೆ. ಹಾಗೇನಾದ್ರೂ ಹೊರಟು ಹೋದ್ರೆ, ಅವಳು ಈಗ್ಲೇ ನಮ್ಮ ಕೈ ಬಿಟ್ಟು ಹೋಗ್ತಾಳೆ"

"ಆಯ್ತು, ನಾಳೆ ಕಾಲೇಜಿಗೆ ಬರ್ತಾಳಲ್ಲ, ಆಗ ಕೂರಿಸ್ಕೊಂಡು ಮಾತಾಡ್ತೀನಿ. ಈಗ ಎಲ್ಲಿ ಅವಳು? ಮಾತಾಡಿಸ್ಬಿಟ್ಟು ಹೋಗ್ತೀನಿ" ಎನ್ನುತ್ತಾ ಅವಳನ್ನು ಹುಡುಕುತ್ತಾ

ಒಳಗಿನ ರೂಮಿಗೆ ಬಂದಳು. ರಾಶಿ ಅಲ್ಲಿರಲಿಲ್ಲ. ಪಕ್ಕದಲ್ಲಿದ್ದ ತನ್ನ ತಂದೆಯ ರೂಮಿನಲ್ಲಿದ್ದಳು. ಮೃದುಲಾ ಬಾಗಿಲ ಬಳಿಯೇ ನಿಂತು, ಮಂಚದ ಮೇಲೆ ಮಲಗಿದ್ದ ವ್ಯಕ್ತಿಯ ಕಡೆ ನೋಡಿದಳು ಯಾವ ಅಲುಗಾಟವೂ ಇದ್ದಂತಿರಲಿಲ್ಲ. ನೆಟ್ಟಗೆ ಮಲಗಿದ್ದವನನ್ನು ಕಂಡು ಮರುಕ ಉಕ್ಕಿತು. ಬಳಿಯಲ್ಲೇ ಕುರ್ಚಿಯ ಮೇಲೊಬ್ಬಳು ನರ್ಸು ಕುಳಿತಿದ್ದಳು. ಎದುರಿಗೆ ಹಾಕಿದ್ದ ಇನ್ನೊಂದು ಮಂಚದ ಮೇಲೆ ರಾಶಿ ಕುಳಿತಿದ್ದಳು.

"ರಾಶೀ... ಬಾಯಿಲ್ಲಿ..." ಕೆಳದನಿಯಲ್ಲಿ ಕರೆದಳು. ಅವಳು ಎದ್ದು ಬರಲಿಲ್ಲ. ಮುನಿಸಿಕೊಂಡು ಕುಳಿತಿದ್ದಳು. ಇವಳೇ ಒಳಗೆ ಅವಳ ಬಳಿಗೆ ಹೋದಳು. ಅವಳ ಭುಜದ ಮೇಲೆ ಕೈಯನ್ನಿಟ್ಟಳು. "ರಾಶೀ... ಇಲ್ಲಿ ಕೇಳು" ಎನ್ನುತ್ತಾ ಅವಳ ಗಲ್ಲವನ್ನು ಹಿಡಿದು ಮುಖವನ್ನೆತ್ತಿದಳು. ನರ್ಸು ಎದ್ದು ಆಚೆಗೆ ಹೋದಳು.

"ಏನ್ ಕೇಳೋದು? ಪ್ಲೀಸ್ ನನ್ನ ಪಾಡಿಗೆ ನನ್ನನ್ನು ಬಿಟ್ಟು ಬಿಡಿ ಮೇಡಂ"

"ನಿನ್ನ ಅಕ್ಕ ಭಾವ ಹೇಳೋದು ನಿನ್ನ ಒಳ್ಳೇದಕ್ಕೇ ತಾನೇ? ನೀನು ಅವರ ಮೇಲೆ ಸಿಟ್ಟು ಮಾಡಿಕೊಂಡ್ರೆ ಹೇಗೆ?"

"ಸಿಟ್ಟು ಬಂದೇ ಬರುತ್ತೆ ಮೇಡಂ. ಅದ್ಯಾವೋನೋ ಲುಚ್ಚಾ ಬಂದು ಕೆಟ್ಟದಾಗಿ ಬಿಹೇವ್ ಮಾಡಿದ್ರೆ ಅದು ನನ್ನ ತಪ್ಪಾ? ನಾನು ಅವನ ಎದುರಿಗೆ ಬಂದದ್ದೇ ತಪ್ಪು ಅಂತ ಇಬ್ರೂ ಬೈತಾರೆ"

"ಅವನು ಮತ್ತೆ ಬಂದು ಗಲಾಟೆ ಮಾಡಿದ್ನಾ?"

"ಇಲ್ಲ, ಆದರೂ ಎಲ್ರಿಗೂ ಅವನ ಭಯ. ಅದಕ್ಕೆ ನನ್ನನ್ನ ಬೈದರೇ?"

"ನಿನ್ನನ್ನು ಏನೂ ಅನ್ಬೇಡಿ ಅಂತ ನಿಮ್ಮಕ್ಕಂಗೆ ನಾನು ಹೇಳ್ತೀನಿ, ಆಯ್ತಾ?" ಅವಳ ತಲೆಯ ಮೇಲೆ ಕೈಯಾಡಿಸಿದಳು. "ನಾನಿನ್ನು ಹೊರಡ್ತೀನಿ, ಹೊತ್ತಾಯ್ತು" ರಾಶಿ ತಲೆಯಾಡಿಸಿದಳು.

ಅವಳು ಸಾಕ್ಷಿಗೆ, ಹೊರಡ್ತೀನಿ ಅಂತ ಹೇಳಿದಾಗ, "ಊಟ ಮಾಡ್ಕೊಂಡು ಹೋಗೋರಂತೆ ಮೇಡಂ. ಅಡಿಗೆ ಆಗಿದೆ" ಎಂದಳು.

"ಊಟಾನಾ?... ಬೇಡ ಪರವಾಗಿಲ್ಲ" ಮೃದುಲಾ ಸಂಕೋಚಗೊಂಡಳು.

"ಪರವಾಗಿಲ್ಲ, ಏಳಿ ಮೇಡಂ..." ಸಂಜಯ್‌ನೂ ದನಿಗೂಡಿಸಿದ.

"ಏನು ಹೇಳ್ತೀಯಪ್ಪಾ?" ಅವಳು ಕಾರ್ತೀಕನ ಕಡೆ ನೋಡಿ ಕೇಳಿದಳು. ಅವನು ಭುಜವನ್ನು ಕುಣಿಸಿ ನಕ್ಕು ಸಮ್ಮತಿಯನ್ನು ಸೂಚಿಸಿದ್ದ.

"ಕ್ಷೀರಾ... ಎಲ್ರಿಗೂ ತಟ್ಟೆ ಹಾಕು" ಸಾಕ್ಷಿ ತಂಗಿಗೆ ಹೇಳಿ, ತಾನು ಹೊರಕ್ಕೆ ಬಂದಳು. ಮೃದುಲಾ ಸಂಜಯ್ ಕಡೆ ತಿರುಗಿದಳು.

"ಕ್ಷೀರಾಗೆ ಯಾವುದಾದ್ರೂ ಸಂಬಂಧ ನೋಡಿದೀರಾ?" ಸಂಜಯ್ ಉತ್ತರಿಸುವ ಬದಲು ಹೆಂಡತಿಯ ಕಡೆ ನೋಡಿದ.

"ಇಲ್ಲ ಸಧ್ಯಕ್ಕೆ ಮದುವೆ ಬೇಡ ಅಂತಿದ್ದಾಳೆ" ಸಾಕ್ಷಿ ನುಡಿದಳು.

"ನಾನು ನೇರವಾಗಿ ಕೇಳಿ ಬಿಡ್ತೀನಿ. ಕಾರ್ತೀಕ್ ಕ್ಷೀರಾಳನ್ನು ಮೆಚ್ಚಿದಾನೆ. ನಿಮ್ಮೆಲ್ಲರಿಗೂ ಒಪ್ಪಿಗೆ ಇದ್ದರೆ, ಕ್ಷೀರಳಿಗೆ ಇಷ್ಟವಾದರೆ, ಮದುವೆಯ ಮಾತುಗಳನ್ನಾಡಬಹುದು" ಸಂಜಯ್ ಚಕಿತಗೊಂಡು ಕಾರ್ತೀಕನ ಕಡೆ ತಿರುಗಿದ.

"ಯೆಸ್, ನಾನು ಕ್ಷೀರಾಳನ್ನು ಇಷ್ಟಪಟ್ಟಿದೀನಿ. ಮದುವೆಯಾಗ್ಬೇಕೂಂತ ಇದೀನಿ. ನಿಮ್ಮ ಅಭಿಪ್ರಾಯ ಏನೂಂತ ತಿಳಿಸಿ, ಪ್ಲೀಸ್"

"ತಕ್ಷಣಕ್ಕೆ ಹೇಗೆ ಹೇಳೋದು? ಕ್ಷೀರಾಳನ್ನು ಒಂದ್ಮಾತು ಕೇಳ್ಬೇಕಲ್ಲ"

"ಕ್ಷೀರಾ ನನ್ನನ್ನ ಕೆಲವಾರು ತಿಂಗಳುಗಳಿಂದ ನೋಡಿದಾರೆ. ನನ್ನ ಸ್ವಭಾವವೂ ಗೊತ್ತಾಗಿರಬಹುದು. ಈಗಲೇ ನಿಮ್ಮಗಳ ಎದುರಿಗೇ ಬೇಕಾದ್ರೆ ಕೇಳ್ತೀನಿ"

"ಈಗ... ಹೀಗೆ ದಿಢೀರನೇ ಕೇಳಿದರೆ? ಯೋಚಿಸುಕ್ಕೆ ಸಮಯ ಬೇಡ್ವೆ?"

"ಓ... ಷೂರ್, ಈಗ್ಲೇ ಒಪ್ಪಿಗೆ ತಿಳಿಸ್ಬೇಕು ಅಂತೇನಿಲ್ಲ. ನಾವು ನಾಳೆ ಮತ್ತೆ ಬರ್ತೀವಿ. ಆಗ ಹೇಳಿದ್ರು ಆಯ್ತು"

"ಸರಿ, ಮೊದಲು ಊಟ ಮಾಡೋಣ. ಆಮೇಲೆ ಕ್ಷೀರಾಳ ಹತ್ರ ಮಾತಾಡಿ"

ಒಳ ಬಾಗಿಲಲ್ಲಿ ನಿಂತು ಅವರುಗಳಾಡುವ ಮಾತುಗಳನ್ನು ಕೇಳಿಸಿಕೊಂಡಿದ್ದ ಕ್ಷೀರಾ ಲಜ್ಜೆಯಿಂದ ಅಡಿಗೆ ಮನೆಗೆ ಓಡಿದಳು. ಕಾಲುಗಳು ಹರ್ಷದಿಂದ ಚಿಗರೆಯ ಕಾಲುಗಳಾಗಿದ್ದವು. ಮನವು ಪುಲಕಗೊಂಡು ತಾವರೆಯಂತೆ ಅರಳಿತ್ತು. ಹೃದಯ ಭಾವೋದ್ವೇಗದಿಂದ ಏರಿಳಿಯುತ್ತಿತ್ತು. ತುಟಿಗಳು ಸುಮಧುರ ಗಾನವನ್ನು ಹಾಡಲು ತವಕಿಸಿದವು. ಮೊಗವು ಕೆಂದಾವರೆಯಾಗಿತ್ತು. ಅಡಿಗೆ ಮನೆಯ ಬಾಗಿಲಿಗೆ ಒರಗಿ ನಿಂತಿದ್ದವಳನ್ನು ಸಾಕ್ಷಿ ಎಚ್ಚರಿಸಿದಳು.

"ತಟ್ಟೆ ಹಾಕಿದ್ದಾಯ್ತಾ?" ಕ್ಷೀರಾ ಬೆಚ್ಚಿ ಬಿದ್ದು ಇತ್ತ ತಿರುಗಿದಳು. ಸಾಕ್ಷಿ ಮುಗುಳ್ನಕ್ಕಳು. "ಎಲ್ಲಾ ಕೇಳಿಸ್ಕೊಂಡ್ಯಾ?" ಕ್ಷೀರಾ 'ಹೂಂ' ಎಂದು ತಲೆಯಾಡಿಸಿ, ಅಕ್ಕನ ಕತ್ತಿಗೆ ಜೋತು ಬಿದ್ದಳು. ಸಾಕ್ಷಿ ಅವಳನ್ನು ಸರಿಸಿದಳು.

"ನಿನ್ನ ಉದ್ವೇಗದ ರಭಸಕ್ಕೆ ನಾನು ಬಿದ್ದೇ ಬಿಡ್ತೀನಿ ಅಷ್ಟೇ... ಓ... ಕೇ... ನಿನ್ನ ಒಪ್ಪಿಗೆ ಇದೆ ಅಂತಾಯ್ತು. ಈಗ ಬಡಿಸುವವರ್‍ಯಾರು?"

"ನಾನು ಎಲ್ಲರಿಗೂ ಬಡಿಸ್ತೀನಿ. ನೀನು ಭಾವನ ಜತೆ ಕೂತ್ಕೊಂಡು ಬಿಡು" ಸಂಜಯ ಇಬ್ಬರನ್ನು ಊಟದ ಮನೆಗೆ ಕರೆತಂದ. ಎಲ್ಲರೂ ಕೈ ತೊಳೆದು ಊಟಕ್ಕೆ ಕುಳಿತರು.

"ರಾಶಿ ಎಲ್ಲಿ? ಅವಳು ಊಟಕ್ಕೆ ಬರುಲ್ವಾ?" ಸಂಜಯ ಕೇಳಿದ.

"ಅವಳು ಕ್ಷೀರಾಳ ಜೊತೇಲಿ ಕೂತ್ಕೋತಾಳೆ"

"ಯಾಕೆ? ಕ್ಷೀರಾ ಈಗ ಕೂತ್ಕೊಳುಲ್ವಾ?"

"ಇಲ್ಲ, ಅವಳು ಗಿರಿಜಮ್ಮನಿಗೆ ಬಡಿಸೋಕೆ ಹೆಲ್ಪ್ ಮಾಡ್ತಾಳೆ"

"ಎಲ್ಲಾ ಹೀಗ್ಹೀಗೇ ಅಂತ ಡಿಸೈಡ್ ಮಾಡ್ಬಿಟ್ಟಿದೀರಿ" ಮೃದುಲಾ ಮುಗುಳ್ನಗುತ್ತಾ ನುಡಿದಳು. ಕ್ಷೀರಾ ನಿಧಾನವಾಗಿ ಬಡಿಸಿದಳು.

"ನಿಮ್ಮ ತಂದೇದು ಊಟ ಆಯ್ತು ಸಾಕ್ಷಿ?" ಮೃದುಲಾ ಕೇಳಿದಳು.

"ಹೂಂ, ಆಗ್ಲೇ ಆಯ್ತು. ಅವರ ಊಟ, ಔಷಧ ಎಲ್ಲಾ ಸಮಯ ಸಮಯಕ್ಕೆ ಆಗ್ಲೇ ಬೇಕು. ಹಾಗಂತ ಡಾಕ್ಟರು ಹೇಳಿದಾರೆ"

"ಈಗ ನಿಮ್ಮ ಫಾದರ್ ಹೇಗಿದಾರೆ?" ಕಾರ್ತೀಕ್ ಸುಮ್ಮನೇ ಎಂಬಂತೆ ಕೇಳಿದ.

"ಇಂಪ್ರೂವ್ ಆಗ್ತಿದಾರೆ ಅಂತ ಡಾಕ್ಟ್ರು ಹೇಳ್ತಾರೆ. ಆದರೆ ನಮಗಂತೂ ಏನೂ ಗೊತ್ತಾಗುಲ್ಲ" ನಿಧಾನವಾಗಿ ಊಟ ಸಾಗಿತು. ಕ್ಷೀರಾ ಎಲ್ಲರಿಗೂ ಕೇಸರಿಭಾತ್‌ನ್ನು ಬಡಿಸಿದಳು. ಕಾರ್ತೀಕ್ ಅವಳ ಮುಖವನ್ನು ನೋಡಿ, ಚೆನ್ನಾಗಿದೆ ಎನ್ನುವಂತೆ ಬೆರಳನ್ನು ಉಂಗುರ ಮಾಡಿ ಹೇಳಿದ. ಕ್ಷೀರ ಮತ್ತಷ್ಟು ಬಡಿಸಿದಳು.

ಊಟ ಮುಗಿಸಿ ಎದ್ದು ಕೈ ತೊಳೆದರು. "ಅಡಿಗೆ ತುಂಬಾ ಚೆನ್ನಾಗಿತ್ತು, ಥ್ಯಾಂಕ್ಸ್" ಕ್ಷೀರಾಳಿಗೆ ಮೃದುಲಾ ಹೇಳಿದಳು.

"ಗಿರಿಜಮ್ಮ ಅಡಿಗೆ ಮಾಡಿದ್ದು" ಅವಳು ಸಂಕೋಚದಿಂದ ನುಡಿದಳು. ಹೊರಟವರನ್ನು ಬೀಳ್ಕೊಡಲು ಕಾರಿನ ತನಕ ಹೋದರು. ಮೃದುಲಾ ಸಂಜಯ ಸಾಕ್ಷಿಯರೊಡನೆ ಮಾತನಾಡುತ್ತಿದ್ದಾಗ, ಕಾರ್ತೀಕ, ಕ್ಷೀರಾಳ ಬಳಿ ನಿಂತ. ಪಿಸುದನಿಯಲ್ಲಿ ಅವಳೊಬ್ಬಳಿಗೆ ಮಾತ್ರ ಕೇಳುವಂತೆ ಉಸುರಿದ. "ಗುಡ್‌ನೈಟ್, ಸ್ವೀಟ್ ಡ್ರೀಮ್ಸ್... ರಾತ್ರಿ ನಿಮ್ಮ ಕನಸಿನಲ್ಲಿ ನಾನು ಬರ್ತೀನಿ" ಕ್ಷೀರಾ ನಾಚಿದಳು. ಅವರಿಬ್ಬರೂ ಕಾರನ್ನು ಹತ್ತಿದರು. ಕಾರು ಹೊರಟಿತು. ಇವರುಗಳು ಒಳಕ್ಕೆ ಬಂದರು.

* * *

22

"ಸಂಜಯ್ ಒಂಥರಾ ಸ್ವಾರ್ಥಿ ಅಂತ ಅನ್ನಿಸ್ತು. ಹೆಂಡತಿಯ ತಂಗಿಯರ ಮೇಲೆ ದಬ್ಬಾಳಿಕೆ ನಡೆಸೋಕೆ ನೋಡ್ತಾನೆ" ಮೃದುಲಾ ಕಾರ್ತೀಕನ ಕಡೆ ನೋಡುತ್ತಾ ಹೇಳಿದಳು.

"ಹೂಂ, ನಂಗೂ ಹಾಗೇ ಅನ್ನಿಸ್ತು. ಅವರ ಅಸಹಾಯಕತೆಯನ್ನು ದುರುಪಯೋಗ ಪಡಿಸಿಕೊಳ್ತಾ ಇರಬಹುದು. ಅವನ ಹೆಂಡತಿ ಇಲ್ಲಿಯೇ ಇವರುಗಳ ಜೊತೇಲಿ ಇದಾಳೆ ಅನ್ನೋ ಅಸಹನೆಯನ್ನು ಅವರ ಮೇಲೆ ತೋರ್ಪಡಿಸಿ ಕೊಳ್ತಾನೆ ಅಂತ ಅನ್ಸುತ್ತೆ"

"ಸಾಕ್ಷಿಯ ಡೆಲಿವರಿಯಾಗಿ, ಬಾಣಂತನ ಮುಗಿಯುವವರೆಗೂ ಇಲ್ಲಿಯೇ ಇದ್ದು ಬಿಡ್ತಾನೋ ಏನೋ?"

"ಏನೋ, ಅದು ಅವರ ಮನೆಯ ವಿಚಾರ ನಮಗ್ಯಾಕೆ?"

"ಅವನು ನಿಮ್ಮಿಬ್ಬರ ಮದುವೆಗೂ ಅಡ್ಡ ಬರಬಹುದು ಅಂತ ಅನ್ಸುತ್ತೆ. ಅವನ ಸ್ನೇಹಿತ ಬೇರೆ ಅವಮಾನ ಮಾಡಿದಾನೆ. ಆ ಅಸಹನೆಯೂ ಇರುತ್ತೆ"

"ಹಾಗೇನಾದ್ರೂ ಅಡ್ಡ ಬಂದರೆ, ಕ್ಷೀರಾಳನ್ನು ಒಪ್ಪಿಸಿ, ನಮ್ಮ ಮನೆಗೆ ಕರೆತಂದು ಮಾಡಿಕೊಳ್ತೀನಿ. ಅಷ್ಟೇ... ವೆರಿ ಸಿಂಪಲ್"

"ಅದೇನೋ ಸರಿ, ಆದರೆ ರಾಶಿಯ ಬಗ್ಗೆ ಯೋಚಿಸಿದರೆ, ಪಾಪ ಅಂತ ಅನ್ನಿಸುತ್ತೆ, ಇನ್ನು ಚಿಕ್ಕದು"

"ಅವಳನ್ನು ನಮ್ಮ ಮನೆಗೇ ಕರೆತಂದಿಟ್ಟು ಕೊಳ್ಳೋಣ. ನಿಮಗೂ ಇಷ್ಟ ಇದೆ ಅಲ್ವಾ?"

"ಆ ಹುಡುಗಿಯೂ ಬಂದು ಬಿಟ್ಟರೆ ಅವರ ಅಪ್ಪನ ಗತಿ?"

"ನಿಮಗೆ ಒಪ್ಪಿಗೆ ಆದರೆ, ಅವರನ್ನು ನಮ್ಮ ಮನೆಗೆ ಕರೆತಂದಿಟ್ಟುಕೊಳ್ಳೋಣ"

"ಬೇಡ, ಅವರು ಬರುವುದು ಬೇಡ" ಅವಳು ಕಟುವಾಗಿ ನುಡಿದಾಗ ಅವನು ಅಚ್ಚರಿಗೊಂಡ.

"ಯಾಕೆ? ಅವರು ಇಲ್ಲಿರೋದ್ರಿಂದ ನಿಮಗೆ ತೊಂದರೆ ಆಗೋದಾದ್ರೆ ನಾನು ಬೇರೆ ಮನೆ ಮಾಡ್ತೀನಿ. ಅಥವಾ, ಕ್ಷೀರನಿಗೂ ಒಪ್ಪಿಗೆ ಇದ್ದರೆ, ಅವರನ್ನು ಯಾವುದಾದ್ರೂ ಹೆಲ್ತ್ ಕೇರ್ ಸೆಂಟರ್‌ಗೆ ಸೇರಿಸೋಣ"

"ಹಾಗೆ ಸೇರಿಸಿದ್ರೆ, ಅವರ ಹೆಲ್ತ್ ಇಂಪ್ರೂವ್ ಆಗುವ ಬದಲು, ಇನ್ನು ಹದಗೆಡುತ್ತೆ ಅಷ್ಟೇ... ಇಂದು ಸಮಸ್ಯೆಗೆ ಪರಿಹಾರವಲ್ಲ. ಬೇರೆ ಏನಾದ್ರೂ ವ್ಯವಸ್ಥೆ ಮಾಡಲೇ ಬೇಕು. ಮೊದಲು ನಿಮ್ಮಿಬ್ಬರ ಮದುವೆ ನೆರವೇರಲಿ. ಕಾರ್ತೀಕ್ ಸುಮ್ಮನೆ ಅವಳ ಮಾತುಗಳನ್ನು ಆಲಿಸಿದ. ಆದರೆ ಒಂದು ಮಾತು ಮಾತ್ರ ನಿಜ ನೀನು ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನಲ್ಲ; ಬೆನ್ನಲ್ಲಿ ಬಿದ್ದ ತಮ್ಮನಲ್ಲ. ಈ ದೊಡ್ಡ ಊರಿನಲ್ಲಿ ಒಂಟಿಯಾಗಿ, ಹೆಂಗಸು ವಾಸ ಮಾಡಬಾರದೆಂದು ನಿನ್ನ ತಾಯಿ, ನಿನ್ನನ್ನು ನನ್ನ ಜೊತೆಗಿರಲಿ ಅಂತ ಇಲ್ಲಿ ಬಿಟ್ಟರು. ನಾನು ಇಟ್ಟುಕೊಂಡೆ. ತಮ್ಮನಂತೆ ನೋಡಿಕೊಂಡೆ. ಮಗನಂತೆ ಬೆಳೆಸಿದೆ. ನೀನು ಇದ್ದುದರಿಂದ ನನ್ನ ಒಂಟಿತನ ನೀಗಿತು. ಆದರೆ, ನೀನೂ ನನ್ನಂತೆ ಒಂಟಿಯಾಗಿರಲಿ ಎಂದು ನಾನು ಎಂದೂ ಭಾವಿಸಿದವಳಲ್ಲ. ಅಷ್ಟು ಸ್ವಾರ್ಥಿ ನಾನಲ್ಲ. ನಾನಾಗಿಯೇ ನಿನ್ನ ಮದುವೆಯ ವಿಷಯವನ್ನು ಎತ್ತಿರಲಿಲ್ಲ ನಿಜ. ಆದರೆ ನೀನು ಕ್ಷೀರಳನ್ನು ಮದುವೆಯಾಗ್ತೀನಿ ಅಂತಂದಾಗ ನಾನು ಬೇಡ ಅನ್ನಲಿಲ್ಲ"

"ಈಗ ಈ ಮಾತೆಲ್ಲಾ ಯಾಕೆ? ನಾನು ಏನಂದೆ?"

"ನೀನು ಏನೂ ಹೇಳಿಲ್ಲ. ನಾನೇ ಹೇಳ್ತಿದೀನಿ ಕೇಳು. ನಿನಗೆ ನೆನಪಿದೆಯಾ? ನೀನು ರಾಶೀನ ಮದುವೆಯಾಗಲಿ ಅನ್ನೋ ಆಸೆ ನನಗಿತ್ತು. ಆಗ ನಾನು ಸ್ವಾರ್ಥಿ ಆಗಿದ್ದೆ. ರಾಶಿಯನ್ನು ಮಗಳಂತೆ, ನಿನ್ನನ್ನು ಮಗನಂತೆ ನನ್ನ ಬಳಿಯೇ ಸದಾ ಕಾಲ

ಇಟ್ಟುಕೊಳ್ಳಬೇಕೆಂಬ ಹಂಬಲ ಇಣುಕಿತ್ತು. ಆದರೆ ಈಗ ಹಾಗೇನೂ ಇಲ್ಲ. ನನ್ನ ಚಿಂತೆ ನಿನಗೆ ಬೇಡ. ನೀನು ಯಾರನ್ನೇ ಮದುವೆ ಮಾಡಿಕೊಂಡರೂ ಬೇರೆ ಮನೆ ಮಾಡಿಕೊಂಡು ಸುಖವಾಗಿರು"

"ಇವತ್ತು ಏನಾಗಿದೆ ನಿಮಗೆ? ಎಂದೂ ನೀವು ಹೀಗೆಲ್ಲಾ ಮಾತಾಡಿರಲಿಲ್ಲ. ನಾನು ಅಷ್ಟು ಹರ್ಟ್ ಆಗುವ ಹಾಗೆ ಮಾತಾಡಿದ್ದರೆ ಸಾರೀ... ನಾನು ಕೆಟ್ಟವನಲ್ಲ. ನನಗೂ ನಿಮ್ಮ ಮೇಲೆ ಗೌರವ ಇದೆ. ಸ್ವಂತ ತಾಯಿಗಿಂತ ಹೆಚ್ಚು ಪ್ರೀತಿ ನಿಮ್ಮ ಮೇಲೆ ಇದೆ. ನನ್ನ ಎಲ್ಲಾ ವಿಷಯಕ್ಕೂ ನೀವು ಬೆಲೆ ಕೊಟ್ಟಿದೀರಿ. ಆ ಸ್ವಾತಂತ್ರ್ಯದಿಂದ, ನನಗೆ ಅನ್ನಿಸಿದ್ದನ್ನು ಹೇಳಿದೆ... ನಿಮಗೆ ಇಷ್ಟು ಬೇಸರ ಆಗುತ್ತೆ ಅಂತ ನಾನು ಅಂದುಕೊಂಡಿರಲಿಲ್ಲ.

"ಇಲ್ಲ ಕಾರ್ತೀಕ್, ಬೇಸರ ಏನೂ ಇಲ್ಲ. ಯಾರಾದರೂ ಒಬ್ಬರು ಮಾತನಾಡಿದರೆ ತಾನೇ ಪರಿಸ್ಥಿತಿಯ ಅರ್ಥ ಆಗೋದು ನಾನು ಬರೀ ನನ್ನ ಮೂಗಿನ ನೇರಕ್ಕೆ ಯೋಚಿಸಿದರೆ ಅದು ಖಂಡಿತಾ ಸರಿ ಅಲ್ಲ..." ಕಾರು ಮನೆಯನ್ನು ಸಮೀಪಿಸಿತು. ಮಾತು ಅಲ್ಲಿಗೆ ಮುಗಿದಿತ್ತು.

* * *

23

ರಾಶಿ ಮೇಡಂಗಾಗಿ, ಮತ್ತು ಕ್ಷೀರಾ ಕಾರ್ತೀಕ್‌ಗಾಗಿ ಕಾಯುತ್ತಿರುವುದು ಸ್ಪಷ್ಟವಾಗಿ ಗೊತ್ತಾಗುವಂತಿತ್ತು. "ನೀನೇನೋ ಸರಿ, ಕಾರ್ತೀಕ್‌ಗೋಸ್ಕರ ಕಾಯ್ತ ಇರೋದು ಸಮಂಜಸ ಅಂತ ಅನ್ಸುತ್ತೆ. ಇವಳ್ಯಾಕೆ ಹೀಗಾಡ್ತಾಳೆ? ಆ ಮೇಡಂನ ಭೂತ ಹೊಕ್ಕಿದೆ ಇವಳಿಗೆ. ಅದಕ್ಕೇ ಸಂಜಯ್ ರೇಗೋದು" ಸಾಕ್ಷಿ ಗೊಣಗಿದಳು.

"ಏನೋ ಅವರು, ಒಂದೆರಡು ಒಳ್ಳೆಯ ಮಾತುಗಳನ್ನಾಡುತ್ತಾರೆ. ಕೇರ್ ತೋರಿಸ್ತಾರೆ. ಅದು ಇವಳಿಗೆ ಪ್ರಿಯವಾಗಿದೆ. ನಾವು ಎಷ್ಟಾಗಲೀ ಮನೆಯವರು, ಆಡಿದ್ದೆಲ್ಲಾ ಬೈಗುಳವಾಗಿ ಕಾಣುತ್ತೆ ಇವಳಿಗೆ"

"ಅದನ್ನೇ ನಾನೂ ಹೇಳೋದು. ಅವರು ಹೊರಗಿನವರು. ಅವರು ನಮ್ಮವರಾಗಲು ಸಾಧ್ಯವಿಲ್ಲ. ಅದು ಇವಳಿಗೆ ಅರ್ಥವಾಗಬೇಕಲ್ಲ. ಹಾಗೇ ಅವರಿಬ್ಬರ ಸಂಬಂಧ ಏನೂಂತ, ಸರಿಯಾಗಿ ಕೇಳಿ ತಿಳ್ಕೋ... ಚಿಕ್ಕವಯಸ್ನಲ್ಲೇ ಮದುವೆ ಆಗಿದ್ರೆ, ಈ ವಯಸ್ಸಿನ ಮಗ ಇರೋ ಸಾಧ್ಯತೆ ಇರುತ್ತೆ. ಆದರೆ ಇವನು ಮಗನಲ್ಲ, ಮದುವೆ ಆಗಿತ್ತೋ ಇಲ್ಲವೋ ಅದು ಸಹ ತಿಳಿಯದು. ಒಂಟಿಯಾಗಿದ್ದು ಕೊಂಡು, ಕಸಿನ್‌ನ ಬೆಳೆಸಿದಾರೆ ಅಂತಂದ್ರೆ, ನಂಬೋಕೆ ಆಗುತ್ತಾ? ನಿಮ್ಮ ಭಾವಂಗೂ ಸಹ ಇದೇ ಅನುಮಾನ ಕಾಡ್ತಿದೆ..."

"ಅಂದ್ರೇ... ಏನೇ ನಿನ್ನ ಮಾತಿನ ಅರ್ಥ?"

"ನಾಳೆ ನಿನ್ನ ಜೀವನದಲ್ಲಿ ಅಪಸ್ವರ ಬರಬಾರದು. ಕಾರ್ತೀಕ್‌ನ ತಂದೆ ತಾಯಿಯರನ್ನು ಒಮ್ಮೆ ನೋಡಿ, ಅವರ ಮನೆ ಮಠ ಎಲ್ಲವನ್ನು ವಿಚಾರಿಸುವುದು ಒಳ್ಳೇದು ಅಂತ ಹೇಳಿದೆ"

"ವಿಚಾರಿಸಿದ್ರಾಯ್ತು. ಬೇಕಾದ್ರೆ ಅವರ ಊರಿಗೆ ಹೋಗಿ ಬಂದ್ರಾಯ್ತು. ಕಾರ್ತೀಕ್ ಸಹ ಹಾಗೇ ಅಂದ್ರು"

"ಹೋಗಿ ಬರೋದು ಅಷ್ಟು ಸುಲಭ ಅಂತ ಅಂದ್ಕೊಂಡ್ಯಾ? ನಿನ್ನ ಜತೆಗೆ ಯಾರು ಬರ್ತಾರೆ? ಇಲ್ಲಿ ಮನೆ ಕಡೆ ಯಾರು ನೋಡ್ಕೋತಾರೆ? ಅವರುಗಳೇ ಬಂದು ಹೋಗಲಿ. ಅವರುಗಳಿಗೂ ನೀನು ಒಪ್ಪಿಗೆಯಾಗ್ಬೇಕು ತಾನೇ?"

"ಕಾರ್ತೀಕ್ ಒಪ್ಪಿದಾರಲ್ಲ ಇನ್ನೇನು? ಬೇಕಾದ್ರೆ ಕಾರ್ತೀಕ್‌ನೇ ನನ್ನನ್ನು ಕರ್ಕೊಂಡು ಹೋಗಿ ಬರ್ತಾರೆ"

"ಗಂಡಿನ ತಂದೆ ತಾಯಿಗಳ ವಿಷಯ ನಿನಗಿನ್ನೂ ತಿಳಿಯದು. ಮಗ ಮದುವೆ ಆಗ್ತಿದಾನೆ. ಹೆಂಡತಿಯ ಕಡೆ ಸರಿಯುತ್ತಿದಾನೆ ಅಂತ ಅನ್ನಿಸುತ್ತಲ್ಲ ಆಗ ಎಲ್ಲವನ್ನು ಮರೆತು ಬಿಡುತ್ತಾರೆ. ಅದರಲ್ಲೂ ತಾಯಿ ಆದೋರು, ತಾನೂ ಹೆಣ್ಣು ಅನ್ನೋದನ್ನ ಮರೆತು ಬಿಡ್ತಾರೆ. ತಾನೂ ಸೊಸೆಯಾಗಿದ್ದೆ, ಹೆಂಡತಿಯಾಗಿದ್ದೆ ಅನ್ನೋದನ್ನ ಭೂತಕಾಲಕ್ಕೆ ಓಡಿಸಿ ಬಿಡ್ತಾರೆ. ಮಗ ತನ್ನವನು ಅನ್ನೋ ಸ್ವಾರ್ಥತನ ಪ್ರಬಲವಾಗುತ್ತೆ. ಅವನ ಸ್ವಾತಂತ್ರ್ಯವನ್ನೆಲ್ಲಾ ಕಿತ್ಕೊಂಡು ಬಿಡ್ತಾರೆ"

ಕ್ಷೀರಾ ಮುಗುಳ್ನಕ್ಕಳು. "ಬಹಳ ಅನುಭವಸ್ಥೆ ತರಹ ಮಾತಾಡ್ತೀಯಲ್ಲ. ಯಾರ್‍ಯಾರ ಹಣೇಲಿ ಏನೇನು ಬರೆದಿರುತ್ತೋ ಅದನ್ನು ತಪ್ಪಿಸೋಕೆ ಆಗುತ್ತಾ? ಕಾರ್ತೀಕ್‌ನ ತಂದೆ ತಾಯಿ ಬಗ್ಗೆ ನನಗೆ ಹಾಗೆನ್ನಿಸುಲ್ಲ. ಈ ಮೊದಲೇ, ಮಗನನ್ನು ಅಣ್ಣನ ಮಗಳ ವಶಕ್ಕೆ ಒಪ್ಪಿಸಿ ಬಿಟ್ಟಿದಾರಲ್ಲ... ಕಾರ್ತೀಕ್ ತಾಯಿ ಹೇಳಿದ ಹಾಗೆ ಕೇಳುವಂತೆ ಅನ್ನಿಸುವುದಿಲ್ಲ. ಹೋಗಿ ನೋಡಿದ್ರೆ ಗೊತ್ತಾಗುತ್ತೆ... ನಾನು ಕಾರ್ತೀಕ್ ಹತ್ರ ಮಾತಾಡ್ಲಾ?"

"ಏನೂ ಬೇಡ... ನಿನ್ನನ್ನ ಒಬ್ಬಳನ್ನೇ ಮದುವೆಗೆ ಮುಂಚೆ ಅವನೊಂದಿಗೆ ಕಳಿಸುವ ಮಾತೇ ಇಲ್ಲ. ಅಲ್ಲದೇ, ನಾವು ವಿಚಾರಿಸದೇ ಖಂಡಿತಾ ಮುಂದುವರೆಯುವುದಿಲ್ಲ. ಅಮ್ಮ ಇಲ್ಲ, ಅಪ್ಪಂಗೆ ಹೀಗೆ... ಹಾಗಂತ ಬೇಕಾಬಿಟ್ಟಿ ಬಿದ್ದಿಲ್ಲವಲ್ಲ..."

"ಸಾಕ್ಷೀ, ಮುಂಚೆ ನೀನು ಹೀಗಿರಲಿಲ್ಲ ಕಣೇ. ಅತ್ತೆ ಮನೆಗೆ ಹೋದ್ಮೇಲೆ ಬಹಳ ಬದಲಾಗಿ ಬಿಟ್ಟಿದೀಯ" ಮನೆಯ ಮುಂದೆ ಕಾರು ನಿಂತ ಸದ್ದು ಕೇಳಿಸಿತು. "ಅವರುಗಳು ಬಂದ್ರು ಅಂತ ಕಾಣುತ್ತೆ. ನಾನು ಒಳಗೆ ಹೋಗಿರ್ತೀನಿ. ನೀನೇ ಮಾತನಾಡಿಸು"

"ಹಳೇ ಕಾಲದ ಗೂಬೆ ಥರ ಆಡ್ಬೇಡ. ಅಲ್ಲದೇ ಅವನೇನು ನಿನಗೆ ಹೊಸಬನಲ್ಲ. ನಿನ್ನ ಬಾಸ್ ಆಗಿದಾನೆ. ಮುಂದೆ ನಿನ್ನ ಗಂಡನಾಗ್ತಾನೆ. ಈಗೆಂಥಾ ನಾಚ್ಕೆ?" ಕೈ ಹಿಡಿದು ನಿಲ್ಲಿಸಿದಳು.

"ನಾಚಿಕೊಂಡ್ರೂ ಅಂತೀಯ, ನಾಚಿಕೊಳ್ಳದಿದ್ರೂ ಅಂತೀಯ. ಕಾಲಿಂಗ್ ಬೆಲ್ ಆಯ್ತು. ನಾನೇ ಬಾಗಿಲನ್ನು ತೆಗೀಲಾ?"

"ತೆಗಿಯಮ್ಮಾ ತೆಗಿ. ಇಷ್ಟು ಹೊತ್ತು ಕಾದೂ ಕಾದೂ ಬೋರ್ ಆಗಿದೆ. ಎದುರ್ಗೊಂಡು, ಸ್ವಾಗತಿಸು ಮಾತನಾಡಿಸು, ಪರ್ವಾಗಿಲ್ಲ. ಯಾರು ಬೇಡಾಂತಾರೆ?" ಕ್ಷೀರ ಏಳುವ ಮುಂಚೆಯೇ, ಎಲ್ಲಿಯೋ ಇದ್ದ ರಾಶಿ, ಓಡಿ ಬಂದು ಬಾಗಿಲನ್ನು ತೆರೆದಳು. ಕ್ಷೀರಾ ಪೆಚ್ಚಾದುದನ್ನು ಕಂಡು ಸಾಕ್ಷಿ ಮುಗುಳ್ನಕ್ಕಳು.

"ಬನ್ನಿ ಮೇಡಂ, ನಾವು ನಿಮಗೋಸ್ಕರವೇ ಕಾಯ್ತಾ ಇದ್ದೆವು" ಮೇಡಂ ಕೈಯಲ್ಲಿದ್ದ ಹೂವು ಹಣ್ಣಿನ ಕೈ ಚೀಲಗಳನ್ನು ತನ್ನ ಕೈಗೆತ್ತಿಕೊಂಡಳು. ಇಬ್ಬರೂ ಒಳಬಂದರು, ಕುಳಿತರು. ಕಾರ್ತೀಕ್ ಅತ್ತಿತ್ತ ನೋಡಿ ಕೇಳಿದ.

"ಸಂಜಯ್ ಇನ್ನು ಆಫೀಸ್ನಿಂದ ಬಂದಿಲ್ಲ ಅಂತ ಕಾಣುತ್ತೆ"

"ಹೌದು, ಸ್ವಲ್ಪ ತಡ ಆಗುತ್ತೆ ಅಂತ ಫೋನು ಮಾಡಿದ್ರು"

"ಹಾಗಾದ್ರೆ, ನಾವಿಬ್ರೂ ಸ್ವಲ್ಪ ಹೊರಗೆ ಸುತ್ತಾಡಿ ಮಾತಾಡ್ಕೊಂಡು ಬರ್ತೀನಿ" ಕಾರ್ತೀಕ್ ಎದ್ದಾಗ, ಕ್ಷೀರಾಳೂ ಅವನ ಹಿಂದೆ ಹೊರಟು ಬಿಟ್ಟಳು. ಸಾಕ್ಷಿಗೆ ಬೇಡ ಎನ್ನಲಾಗಿರಲಿಲ್ಲ. ಅವರಿಬ್ಬರೂ ಹೊರಡುತ್ತಿದ್ದಂತೆಯೇ ಸಂಜಯ್ ಮನೆಗೆ ಬಂದ.

"ನೀವೂ ಇರ್ಲಿಲ್ಲವಲ್ಲ, ಕಾರ್ತೀಕ್ ಕ್ಷೀರಾಳನ್ನು ಹೊರಕ್ಕೆ ಕರೆದುಕೊಂಡು ಹೋಗಿದಾನೆ. ಬೇಗ ಬಂದ್ಬಿಡ್ತಾರೆ" ಮೃದುಲಾ ಹೇಳಿದಾಗ, ಸಂಜಯನ ಮುಖದಲ್ಲಿ ಅಸಹನೆಯ ಗೆರೆಗಳು ಕಂಡೂ ಕಾಣದಂತೆ ಮೂಡಿ ಮಾಯವಾದವು. ಆದರೆ ಬಾಯಿ ಏನನ್ನು ನುಡಿಯಲಿಲ್ಲ. ಅವನು ಅವಳ ಎದುರಿಗೆ ಕುಳಿತ.

"ನಿಮ್ಮ ಮನೇಲಿ, ಮದುವೆಯ ಕೆಲಸಕ್ಕೆ ಓಡಾಡೋರು ಯಾರೂ ಇಲ್ಲ. ನಿಮಗೂ ಕಷ್ಟ ಆಗುತ್ತೆ. ಆದ್ದರಿಂದ ಮದುವೆ ಆದಷ್ಟೂ ಸಿಂಪಲ್ ಆಗಿರಲಿ. ಖರ್ಚು, ವೆಚ್ಚ, ಶ್ರಮ ಯಾವುದೂ ಹೆಚ್ಚಾಗುವುದು ಬೇಡ" ಮೃದುಲಾ ನಿಧಾನವಾಗಿ ನುಡಿದಾಗ ಸಂಜಯ್ ಸಾಕ್ಷಿಯ ಕಡೆ ನೋಡಿದ.

"ನೀವೇ ಹೀಗ್ಯಾಕೆ ಹೇಳ್ತಿದೀರೋ ಗೊತ್ತಿಲ್ಲ. ನಮ್ಮ ಕಡೆಯ ನೆಂಟರಿಷ್ಟರು ಆಡ್ಕೋತಾರೆ ಮೇಡಂ. ಮೊದಲು, ಎಲ್ಲರ ಅಪವಾದಕ್ಕೆ ಗುರಿಯಾಗುವವನು ನಾನೇ. ಕಾರ್ತೀಕ್, ನಿಮ್ಮ ಮಾತಿಗೆ ಒಪ್ಪಬಹುದು. ಆದರೆ ಅವರ ತಂದೆ ತಾಯಿ ಒಪ್ತಾರಾ? ಅವರ ಆಸೆ ಏನಿದೆಯೊ? ಕ್ಷೀರಾ, ಅವರ ಸೊಸೆಯಾಗಿ ಅವರ ಮನೆಯನ್ನು ತುಂಬುವವಳು. ಮುಂದೆ, ಅವರುಗಳಿಂದ ಏನಾದರೂ ಮಾತುಗಳು ಬರದೇ ಇರುತ್ತಾ ಮೇಡಂ. ಮೊದಲು ಅವರುಗಳು ಬಂದು, ಕ್ಷೀರಳನ್ನು ನೋಡಿ, ಒಪ್ಪಿಗೆಯನ್ನು ಕೊಟ್ಟು ನಂತರ ಮದುವೆಯ ಮಾತುಗಳನ್ನಾಡಲಿ. ನಾವು ಅವರುಗಳನ್ನು ನೋಡಬೇಡ್ವೆ? ಎಲ್ಲಿದಾರೆ? ಹೇಗಿದಾರೆ? ಏನು ಮಾಡ್ತಿದಾರೆ... ಒಂದು ಗೊತ್ತಿಲ್ವಲ್ಲಾ..." ಮೃದುಲಾಳಿಗೆ ಅವಮಾನ ಆದಂತಾಗಿತ್ತು. ಮುಖದ ಕಳೆ ಬದಲಾಗಿತ್ತು. ಆದರೂ ನುಡಿದಳು.

"ನೀವು ಕೇಳಲಿಲ್ಲ; ನಾವು ಹೇಳಲಿಲ್ಲ. ಇವರಿಬ್ಬರೂ ಒಬ್ಬರನ್ನೊಬ್ಬರು ಮೆಚ್ಚಿದರು. ಅಷ್ಟು ಸಾಕು ಅಲ್ವಾ? ಆದರೂ ಕಾರ್ತೀಕ್ ತಾಯಿಗೆ ಫೋನು ಮಾಡಿ ವಿಷಯವನ್ನು ತಿಳಿಸಿದಾನೆ. ಇನ್ನೊಂದೆರಡು ದಿನಗಳಲ್ಲಿ ತಂದೆ ತಾಯಿ ಇಬ್ಬರೂ ಬರುತ್ತಿದಾರೆ. ಆದರೆ ಕಾರ್ತೀಕ್ ನನ್ನ ಬಳಿ ಬೆಳೆದವನು. ಮೊದಲ್ನಿಂದಲೂ, ಅವನಿಗೆ ಎಲ್ಲರಿಗಿಂತ ನಾನು ಹೆಚ್ಚು"

"ಹೌದು, ಈ ವಿಷಯ ನಮಗೂ ಗೊತ್ತು. ಅವರು ನಿಮ್ಮ ಸಾಕುಮಗನಂತೆ. ಕಾನೂನು ಪ್ರಕಾರ ನೀವು ದತ್ತು ತೆಗೆದುಕೊಂಡಿದ್ದರೆ, ನೀವು ಹೆಚ್ಚಾಗುತ್ತೀರಿ. ಇಲ್ಲದಿದ್ದರೆ ಅವರ ತಂದೆತಾಯಿಗಳೇ ಮುಖ್ಯರಾಗುತ್ತಾರೆ" ಮೃದುಲಾ ಸಂಜಯನನ್ನು ತೀಕ್ಷ್ಣವಾಗಿ ನೋಡಿದಳು.

"ಇಲ್ಲಿ, ಕ್ಷೀರಾ-ಕಾರ್ತೀಕ್‌ರ ಮದುವೆ ಮುಖ್ಯ ಸಂಜಯ್, ಬೇರೆ ಯಾವ ಸಂಬಂಧಗಳೂ ಮುಖ್ಯ ಅಲ್ಲ"

"ಹಾಗಾದ್ರೆ, ಮದುವೆಯಲ್ಲಿ ಯಾವ ಶಾಸ್ತ್ರ ಸಂಬಂಧಗಳು ಬೇಡ ಅಂತೀರಾ? ಧಾರೆ ಎರೆಸಿಕೊಳ್ಳಲು ಅವರ ತಂದೆ ತಾಯಿ ಹಸೆಮಣೆಯ ಮೇಲೆ ಕುಳಿತುಕೊಳ್ಳೋದಿಲ್ಲವಾ?" ಸಂಜಯ್ ಬಿರುಸಾಗಿ ಕೇಳಿದ.

"ಕೂತ್ಕೋತಾರೆ, ಶಾಸ್ತ್ರೋಕ್ತವಾಗಿ, ಸಾಂಪ್ರದಾಯಿಕವಾಗಿ ಮದುವೆ ನೆರವೇರುತ್ತದೆ. ಆ ಅಧಿಕಾರ ಅವರಿಗಿದೆ"

"ಸರಿ ಮತ್ತೆ, ಮೊದಲು ಅವರುಗಳು ಬರಲಿ. ಮುಹೂರ್ತಕ್ಕೆ ಒಳ್ಳೆಯ ದಿನವನ್ನು ಗೊತ್ತು ಮಾಡಲಿ. ಮದುವೆ ಅಂದ್ರೆ, ತಿಂಗಳಾನುಗಟ್ಟಲೆ ಸಿದ್ಧತೆಯನ್ನು ಮಾಡಿಕೊಳ್ಳುವ ಕೆಲಸ. ಅವಾಂತರದಲ್ಲಿ ಮುಗಿಯುವ ಕೆಲಸವಲ್ಲ"

ಮೃದುಲಾ ತಬ್ಬಿಬ್ಬುಗೊಂಡು ಸಾಕ್ಷಿಯ ಕಡೆ ನೋಡಿದಳು. ಅವಳೂ ಹುಬ್ಬುಗಂಟಿಕ್ಕಿದ್ದಳು. ಸಂಜಯ್‌ನ ಮಾತು, ಅವಳಿಗೆ ಹಿಡಿಸುತ್ತಿಲ್ಲವೆನ್ನುವುದು ಸ್ಪಷ್ಟವಾಗಿತ್ತು.

"ಮೇಡಂ, ಕಾಫಿ, ಟೀ, ಏನು ತಗೋತೀರಿ?" ಮಾತಿನ ಜಾಡನ್ನು ಬದಲಾಯಿಸಿದಳು.

"ಅವರು ಇಬ್ಬರೂ ಬರಲಿ, ಒಟ್ಟಿಗೆ ತಗೊಂಡ್ರಾಯ್ತು" ಅವರಿಬ್ಬರನ್ನೇ ಮಾತಿಗೆ ಬಿಟ್ಟು ಸಂಜಯ್ ಒಳಕ್ಕೆ ಹೋಗಿದ್ದ. ರಾಶಿಯೂ ಹೊರ ಬಂದು ಅವರನ್ನು ಸೇರಿದಳು. ಬೇರೆ ಬೇರೆ ವಿಷಯಗಳ ಬಗ್ಗೆ ಮಾತನಾಡಿದರು.

"ನನಗೆ ಸ್ವಲ್ಪ ಕೆಲಸವಿದೆ. ನಾನು ಹೋಗಿ ಬರ್ತೀನಿ" ಎಂದು ಹೇಳಿ, ಸಂಜಯ್ ತನ್ನ ಮನೆಗೆ ಹೊರಟು ಹೋದ. ಕ್ಷೀರಾ ಕಾರ್ತೀಕ್ ನಗುನಗುತ್ತಾ ವಾಪಸ್ಸಾದರು. ಕಾಫಿ ತಿಂಡಿಯ ನಂತರ, ಮೃದುಲಾ ಅವನನ್ನು ಎಬ್ಬಿಸಿದಳು. ಇಬ್ಬರೂ ಹೊರಟರು.

* * *

24

ಕಾರ್ತೀಕನ ಫೋನಿಗಾಗಿ ಕಾಯುತ್ತಾ ಇದ್ದ ಕ್ಷೀರಾ, ಫೋನು ರಿಂಗಾದೊಡನೆ ಬೇಗ ಬಂದು ರಿಸೀವರ್‌ನೆತ್ತಿಕೊಂಡು 'ಹಲೋ' ಎಂದಳು. ಕಾರ್ತೀಕ ಮಾತಾಡಿದ.

"ನಮ್ಮ ತಂದೆತಾಯಿ ಊರಿನಿಂದ ಬಂದಿದಾರೆ. ಸಾಯಂಕಾಲ ಐದು ಗಂಟೆಯ ಹೊತ್ತಿಗೆ ನಾವೆಲ್ಲಾ ನಿಮ್ಮ ಮನೆಗೆ ಬರ್ತೀದೀವಿ. ಚೆನ್ನಾಗಿ ಡ್ರೆಸ್ ಮಾಡಿಕೊಂಡಿರ್ಬೇಕು. ಮಾರ್ವೆಲಸ್ ಆಗಿ ಕಾಣಬೇಕು... ಎಂಥಾ ಬಣ್ಣದ ಸೀರೆಯನ್ನು ಉಟ್ಕೋತೀರಿ? ಚೂಡಿದಾರ್ ಬೇಡ ಪ್ಲೀಸ್..."

"ಚೂಡಿದಾರ್ ಹಾಕ್ಕೋತೀನಿ ಕಾರ್ತೀಕ್. ಅದು ಕಂಫರ್ಟಬಲ್ ಆಗಿರುತ್ತೆ. ನಿಮ್ಮ ಪೇರೆಂಟ್ಸ್ ಅಷ್ಟೇನೂ ಆರ್ಥೋಡೆಕ್ಸ್ ಅಲ್ಲ ಅಂತ ನೀವೇ ಹೇಳಿದ್ರಿ. ನಿಮಗೆ ನಾನು ಚೂಡಿದಾರ್‌ನಲ್ಲಿ ಚೆನ್ನಾಗಿ ಕಾಣ್ತೀನಿ ಅಂತ ಗೊತ್ತು ಅಲ್ವಾ?"

"ಚೂಡಿದಾರ್‌ಗಿಂತ ನಿಮಗೆ ಸೀರೆ ಚೆನ್ನಾಗಿ ಒಪ್ಪುತ್ತೆ... ಗಾಢವಾದ ಕಲರಿನ ಸೀರೇನ ಉಟ್ಕೊಳ್ಳಿ..."

"ಸೀರೇನ ಮ್ಯಾನೇಜ್ ಮಾಡೋದು ಕಷ್ಟ... ಕಂಫರ್ಟಬಲ್ ಆಗಿರೊಲ್ಲ"

"ನೈಟಿ ಬಹಳ ಕಂಫರ್ಟಬಲ್ ಆಗಿರುತ್ತೆ. ಹಾಗಂತ ಅದನ್ನು ಸದಾ ಹಾಕ್ಕೊಂಡಿದ್ರೆ ಚೆನ್ನಾಗಿರುತ್ತಾ? ನನ್ನ ತಂದೆ ತಾಯಿ ಹಳೇ ಸಂಪ್ರದಾಯದವರು ಅಲ್ಲ ನಿಜ. ಆದರೆ ನಿಮ್ಮನ್ನ ನೋಡೋದು ಮದುಮಗಳ ರೂಪದಲ್ಲಿ. ಕಾಲೇಜ್‌ಗೆ ಹೋಗುವ ಹುಡುಗಿಯ ಥರದಲ್ಲಿ ಅಲ್ಲ... ಸೊಸೆ ಅಂದರೆ ಹೀಗಿರಬೇಕು ಅಂತ ಅವರನ್ನು ಮೆಚ್ಚಿಸುವಂತಿರಬೇಕು... ಓ...ಕೇ..."

"ಓ...ಕೇ... ಬಾಸ್" ಕ್ಷೀರಾ ಕಿಲಕಿಲನೆ ನಕ್ಕಳು.

"ನೀವು ನಗುತ್ತಿರುವುದನ್ನು ನೋಡಿದ್ರೆ ಏನೋ ಕಿತಾಪತಿ ಮಾಡ್ತೀರೇನೋ ಅನ್ನೋ ಅನುಮಾನ ಬರ್ತಿದೆ... ಪ್ಲೀಸ್ ಹಾಗೆ ಮಾಡ್ಬೇಡಿ... ನಮ್ಮ ತಂದೆ ತಾಯಿ ಮೆಚ್ಚುವಂತೆ ಡ್ರೆಸ್ ಮಾಡ್ಕೊಳ್ಳಿ."

"ನಾನ್ಯಾಕೆ ಅವರನ್ನು ಮೆಚ್ಚಿಸ್ಬೇಕು. ನೀವು ಮೆಚ್ಚಿದ್ದಾಗಿದೆಯಲ್ಲ."

"ನನ್ನ ಕ್ಷೀರಾಳಂಥ ಹುಡುಗಿ ಇನ್ನೆಲ್ಲೂ ಇಲ್ಲ ಅಂತ ಅವರು, ನಿಮ್ಮನ್ನು ನೋಡಿ ಹೊಗಳಬೇಕು.ಆಗ ನಂಗೆ ಬಹಳ ಖುಷಿಯಗುತ್ತೆ."

"ನಂಗೆ ಇದೆಲ್ಲಾ ಇಷ್ಟವಾಗುಲ್ಲ ಕಾರ್ತೀಕ್. ಆದರೂ, ನಿಮ್ಮ ಖುಷಿಗೋಸ್ಕರ ನೀವು ಹೇಳಿದ ಹಾಗೇ ಡ್ರೆಸ್ ಮಾಡ್ಕೊಳ್ತೀನಿ. ನನಗೆ ಯಾವ ಬಣ್ಣ ತುಂಬಾ ಚೆನ್ನಾಗಿ ಒಪ್ಪುತ್ತೆ ಅಂತ ಹೇಳ್ತೀರಾ?"

"ಆಗ್ಲೇ ಹೇಳಿದ್ನಲ್ಲ. ಕಲರ್ ಗಾಢವಾಗಿರಲಿ, ಕೆಂಪು, ಪಿಂಕು, ಮೆರೂನ್, ಪರ್ಪಲ್ ಯಾವ್ದಾದ್ರೂ ಸರಿ. ಗ್ರೀನ್ ಮಾತ್ರ ಬೇಡ"

"ಗ್ರೀನ್ ಯಾಕೆಬೇಡ?"

"ಅದನ್ನಾ ಉಡುವ ಕಾಲ ಮುಂದೆ ಬರುತ್ತೆ"

"ಆಂ! ಎಂಥಾ ಮುಂದಾಲೋಚನೆ... ಛೀ..." ನಾಚಿದಳು. ಮಾತನ್ನು ನಿಲ್ಲಿಸಿದಳು. ಅವನು ಕೇಳಿದ.

"ಏನ್ರೀ... ನಾಚಿಕೆ ಆಗ್ತಿದೆಯಾ!... ಅದಕ್ಕೆಲ್ಲಾ ಬೇಕಾದಷ್ಟು ಸಮಯವಿದೆ. ಈಗ ನೀವು ಅರಳಿದ ಕೆಂದಾವರೆಯಂತೆ ಅಲಂಕರಿಸಿಕೊಳ್ಳಬೇಕು. ಅಮ್ಮ ನಿಮ್ಮನ್ನು ನೋಡಿದ ಕೂಡಲೇ ಅವಳ ಮುಖ ಅರಳಬೇಕು."

"ಇದೇನು ಅರಳುವ ಕಾಂಪಿಟೇಷನ್ ನಡೆಸ್ತೀರಾ?..."

"ಕಾಂಪಿಟೇಷನ್ ಇಡಿಸಿದ್ರೆ ಗೆಲ್ಲೋರು ನೀವೇ ನಂಗೊತ್ತು... ಅದು ಸರಿ... ನಾನು ಎಂತಹ ಬಟ್ಟೆ ಹಾಕ್ಕೊಂಡು ಬರ್ಲಿ?... ನಿಮಗೆ ಹೇಗೆ ಇಷ್ಟ ಅಂತ ಹೇಳಿ."

"ನೀವು ನಿಮ್ಮ ಇಷ್ಟದ ಯಾವುದೇ ಬಣ್ಣದ ಬಟ್ಟೆಯನ್ನು ಹಾಕ್ಕೊಳ್ಳಿ. ನಂಗೆ ಅದರಲ್ಲೆಲ್ಲಾ ಆಸಕ್ತಿ ಇಲ್ಲ" ಎಂದು ಬಿಟ್ಟಳು. ಅವನಿಗೆ ಕೋಪ ಬಂತು. ತಕ್ಷಣ ರಿಸೀವರ್‌ನಿಟ್ಟು ಬಿಟ್ಟ. ಅವಳಿಗೆ ನಗು ಬಂತು. ರಿಸೀವರ್‌ನ ಹಿಂದಕ್ಕೆ ಇಟ್ಟು ಸಾಕ್ಷಿಯ ಕೋಣೆಗೆ ಬಂದಳು.

"ಕಾರ್ತೀಕ್ ಫೋನು ಮಾಡಿದ್ರು. ಅವರ ಪೇರೆಂಟ್ಸ್ ಬಂದಿದಾರಂತೆ. ಸಾಯಂಕಾಲ ಎಲ್ಲರೂ ಬರ್ತಿದಾರಂತೆ..."

"ಈಗ ಹೇಳ್ತಾ ಇದೀಯಲ್ಲ ಕ್ಷೀರಾ... ಗಿರಿಜಮ್ಮನಿಗೆ ಹೇಳು ಏನಾದ್ರೂ ತಿಂಡಿ ಮಾಡಲಿ. ನಾನು ಸಂಜೂಗೆ ಫೋನು ಮಾಡ್ತೀನಿ"

"ನಾನು ಯಾವ ಸೀರೇನ ಉಟ್ಟುಕೊಳ್ಳಲಿ? ಸ್ವಲ್ಪ ಹೇಳ್ತೀಯಾ?"

"ಅಮ್ಮಂದು, ನಂದು ಯಾವ ಸೀರೇನ ಬೇಕಾದ್ರೂ ಉಟ್ಕೋ. ನಿಂಗೆ ಎಲ್ಲಾ ಕಲರ್ರೂ ಒಪ್ಪುತ್ತೆ"

ಕ್ಷೀರ ತನ್ನ ಬಳಿ ಇರುವ ಹಾಗೂ ತಾಯಿಯ, ಸಾಕ್ಷಿಯ ಸೀರೆಗಳನ್ನು ಹರಡಿಟ್ಟುಕೊಂಡಳು. ಎಲ್ಲಾ ಸೀರೇನ ಯಾಕೇ ಹೀಗೆ ಕಿತ್ತಾಡಿದೀಯ. ಯಾವುದಾದರೂ ಒಂದು ರೇಶ್ಮೆ ಸೀರೇನ ಉಟ್ಕೋ... ಚೆನ್ನಾಗಿರುತ್ತೆ"

"ರೇಶ್ಮೆ ಸೀರೆ ಬೇಡ ಭಾರ ಆಗುತ್ತೆ"

"ಸರಿ, ನಿನ್ನ ಹತ್ರ ಗ್ರೀನ್ ಕಲರಿನ ಚೈನಾ ಸಿಲ್ಕ್ ಸೀರೆ ಇದೆಯಲ್ಲ..."

"ಗ್ರೀನ್ ಬೇಡ... ಕಾರ್ತೀಕ್‌ಗೆ ಇಷ್ಟ ಆಗುಲ್ಲ" ಎಂದಳು.

"ಈಗ್ಲಿಂದ ಕಾರ್ತೀಕ್ ಹೇಳಿದ ಹಾಗೆ ಕೇಳ್ಬೇಕಾ...? ಮದುವೆ ಆದ್ಮೇಲೆ ಏನೇ ಗತಿ?"

"ಹಾಗಲ್ಲ..."

"ಹಾಗೋ ಹೀಗೋ... ಅವನು ನಿನ್ನನ್ನು ಮೆಚ್ಚಿದ್ದಾಗಿದೆ. ನಿನಗೆ ಯಾವುದು ಇಷ್ಟವೋ ಅದನ್ನೇ ಉಟ್ಕೋ. ಅದಕ್ಯಾಕೆ ಇಷ್ಟು ಒದ್ದಾಟ...?" ಎನ್ನುತ್ತಾ ಸಾಕ್ಷಿ ಅಲ್ಲಿಂದ ಸರಿದಳು. ಕ್ಷೀರಾ ಚಾಕ್ಲೆಟ್ ಕಲರಿನ ಪ್ರಿಂಟೆಡ್ ಸಿಲ್ಕ್ ಸೀರೆಯನ್ನು ತೆಗೆದಿಟ್ಟುಕೊಂಡು, ಉಳಿದ ಸೀರೆಗಳನ್ನು ಬೀರು ಒಳಕ್ಕೆ ತುಂಬಿದಳು.

ಮುಖ ತೊಳೆದು, ಜಡೆ ಹೆಣೆದುಕೊಂಡು, ಸ್ವಲ್ಪವೇ ಹೂವನ್ನು ಮುಡಿದುಕೊಂಡಳು. ಮುಖಕ್ಕೆ ಕ್ರೀಂ ಹಚ್ಚಿ, ತೆಳುವಾಗಿ ಫೇಸ್ ಪೌಡರನ್ನು ಹಚ್ಚಿಕೊಂಡಳು. ಹಣೆಯ ಮಧ್ಯಕ್ಕೆ ಸೀರೆಗೆ ಒಪ್ಪುವಂತಹ ಕುಂಕುಮದ ಬೊಟ್ಟನ್ನು ಇಟ್ಟುಕೊಂಡು ಕನ್ನಡಿಯ ಮುಂದೆ ನಿಂತು ತನ್ನನ್ನು ತಾನೇ ನೋಡಿಕೊಂಡಳು. ಅಲಂಕಾರ ಸ್ವಲ್ಪ ಹೆಚ್ಚಾಯಿತು ಎಂದೆನಿಸಿತು. ಕಾಲೇಜಿಗೆ ಹೋಗುವಾಗ ಅಲಂಕಾರವನ್ನು ಮಾಡಿಕೊಳ್ಳಲು ಸಮಯವೇ ಇರುತ್ತಿರಲಿಲ್ಲ. ಆಫೀಸಿಗೆ ಹೊರಡುವಾಗ, ಯಾವ ಅಲಂಕಾರವನ್ನು ಮಾಡಿಕೊಳ್ಳುವ ಉತ್ಸಾಹವೇ ಇರಲಿಲ್ಲ. ಈಗ ಇದೇನು ಇದ್ದಕ್ಕಿದ್ದ ಹಾಗೆ... ಅಲಂಕಾರದ ಕಡೆ ಗಮನ?... ಕಾರ್ತೀಕ ಹೇಳಿದನೆಂದೋ? ಅಥವಾ ಅವನನ್ನು ಹೆಚ್ಚು ಹೆಚ್ಚು ಮೆಚ್ಚಿಸಲೆಂದೋ... ಮತ್ತೆ ಮತ್ತೆ ನೋಡಿಕೊಂಡಳು, ಹಿತವೆನಿಸಲಿಲ್ಲ. ನಿರುತ್ಸಾಹದಿಂದ ಸೀರೆಯನ್ನು ಉಟ್ಟು, ಅದಕ್ಕೆ ಹೊಂದುವ ಬಣ್ಣದ ರವಿಕೆಯನ್ನು ತೊಟ್ಟಳು. ಒಳಗೆ ಬಂದ ಸಾಕ್ಷಿ ತಂಗಿಯನ್ನು ನೋಡಿ ಕಣ್ಣರಳಿಸಿದಳು.

"ತುಂಬಾ ಚೆನ್ನಾಗಿ ಕಾಣ್ತಿದೀಯ ಕ್ಷೀರಾ... ದಿನಾ ಹೀಗೆ ಡ್ರೆಸ್ ಮಾಡ್ಕೋಬಾರ್ದಾ?... ಗೂಬೆ ತರಹ ಆಫೀಸಿಗೆ ಓಡಿ ಹೋಗ್ತಿದ್ದೆ... ಅಮ್ಮ ಇದ್ದಿದ್ರೆ ಸುಮ್ಮನೆ ಇರ್ತಿದ್ಲಾ?"

"ಗೂಬೆ ತರಹ ಇದ್ದೋಳನ್ನೇ ಕಾರ್ತೀಕ್ ಮೆಚ್ಚಿದಾರೆ. ಈ ಅಲಂಕಾರ, ಅವನ ತಾಯಿಗೋಸ್ಕರ... ನನಗೆ ಸಿಂಪಲ್ ಆಗಿ ಇರೋದೇ ಇಷ್ಟ..."

"ನೀನು ಹೇಗಿದ್ರೂ ಚೆನ್ನಾಗಿ ಕಾಣ್ತೀಯ. ಆದಷ್ಟು ಬೇಗ ರಾಶಿಗೂ ಮದುವೆ ಮಾಡಿ ಬಿಡಬೇಕು. ತೆಂಗಿನ ಮರದ ಥರ ಬೆಳೆದು ಬಿಟ್ಟಿದಾಳೆ..."

"ಯಾರನ್ನ ತೆಂಗಿನ ಮರ ಅಂತ ಅನ್ತಾ ಇರೋದು?" ರಾಶಿ ಕೇಳಿದಳು.

ಇಬ್ಬರೂ ತಿರುಗಿ ನೋಡಿ, ನಕ್ಕರು. ರಾಶಿ ಕ್ಷೀರಳ ಬಳಿಗೆ ಬಂದಳು.

"ಅರೆ ವ್ಹಾ... ಸೂಪರ್ ಆಗಿ ಕಾಣ್ತಿದೀಯ. ಯಾರನ್ನ ಕೊಲ್ಲೋಕೆ ಈ ವೇಷ?" ಅಂತ ಕೇಳಿದಳು.

"ಕೊಲ್ಲೋದು, ಕತ್ತರಿಸೋದು ಏನೂ ಇಲ್ಲ. ನೀನು ಬೇಗ ತಿಂಡಿ ತಿಂದು ಡ್ರೆಸ್ ಮಾಡ್ಕೋ... ಕಾರ್ತೀಕನ ತಂದೆ ತಾಯಿ ಕ್ಷೀರನ್ನ ನೋಡೋಕೆ ಬರ್ತಾರಂತೆ"

"ಹೌದಾ? ಸರಿ, ನಾನು ಮನೇಲೇ ಇರುಲ್ಲ. ಫ್ರೆಂಡ್ ಮನೆಗೆ ಹೋಗ್ತೀನಿ"

"ಯಾಕೋ... ನಿನ್ನ ಮೇಡಂ ಸಹ ಬರ್ತಾರೋ ಏನೋ?"

"ಬೇಡಮ್ಮ ಬೇಡ. ವಧೂ ಪರೀಕ್ಷೆ ಇವಳದ್ದು. ಮಧ್ಯೆ ನಾನೇಕೆ? ಅವತ್ತಿನ ಹಾಗೆ ಒಂದು ಸೀನ್ ಕ್ರಿಯೇಟ್ ಆಗುತ್ತೆ ಅಷ್ಟೇ..."

"ಹಾಗೇನೂ ಆಗುಲ್ಲ. ಅವನೊಬ್ಬ ತರಲೆ... ಅವನು ಸರಿ ಇರಲಿಲ್ಲ. ಇವರುಗಳು ನಿನ್ನ ತಂಗಿ ಎಲ್ಲಿ ಅಂತ ಕೇಳೇ ಕೇಳ್ತಾರೆ..."

"ಸರಿ ನಿಮ್ಮಿಷ್ಟ. ನೀವು ಬಾ ಅಂದ್ರೆ ಬರ್ತೀನಿ. ಇಲ್ಲದಿದ್ರೆ ಒಳಗೇ ಕೂತಿರ್ತೀನಿ... ಅಷ್ಟೇ"

"ಏನು ಬೇಕಾದ್ರೂ ಮಾಡ್ಕೋ..." ಸಾಕ್ಷಿ ಹೇಳಿ, ಅಲ್ಲಿಂದ ಹೊರಟು ಹೋಗಿದ್ದಳು. ರಾಶಿ ಅಕ್ಕನನ್ನೇ ಅಸೂಯೆಯಿಂದ ನೋಡಿದಳು. ಸಾಕ್ಷಿ ಮದುವೆಯಾಗಿ ಖುಷಿಯಾಗಿದ್ದುಕೊಂಡು, ಈಗ ತಾಯಿಯಾಗಲಿದ್ದಾಳೆ. ಕ್ಷೀರಾ ತನ್ನ ಬಾಸ್‌ನೇ ಆಕರ್ಷಿಸಿ, ಅವನನ್ನು ಮೆಚ್ಚಿ ಮದುವೆಯಾಗುತ್ತಿದ್ದಾಳೆ. ತನ್ನ ಸರದಿ ಎಂದಿಗೆ ಬರುತ್ತದೋ ಅಂತೆನ್ನಿಸಿದಾಗ ಮನಸ್ಸು ಮುದುಡಿತು.

"ಹುಟ್ಟಿದರೆ ಮೊದಲನೆಯವಳಾಗಿ ಹುಟ್ಟಬೇಕು ಕಣೇ. ಮೂರನೆಯವಳಾಗಿ ಮಾತ್ರ ಹುಟ್ಟಬಾರದು... ಬರೀ ಮೋಸ..."

"ಯಾಕೇ... ಏನಾಯ್ತೆ? ಯಾರು ಮೋಸ ಮಾಡಿದ್ರೆ?"

"ಏನೂ ಇಲ್ಲ ಬಿಡು... ಹೇಳಿದ್ರೆ, ನಿಂಗೆ ಇಷ್ಟವಾಗುಲ್ಲ..."

"ಹೇಳುಕ್ಕೆ ಇಷ್ಟವಿಲ್ಲದಿದ್ರೆ, ಅರ್ಧಂಬರ್ಧ ಯಾಕೆ ಮಾತಾಡ್ತೀಯ? ಹೋಗು ಸ್ವಲ್ಪ ಕಾಫೀನ ತಗೊಂಡು ಬಾ... ಕುಡೀಬೇಕು ಅಂತ ಅನ್ನಿಸ್ತಿದೆ"

"ಯಾಕೇ... ಮಹಾರಾಣಿ ತರಹ ಆರ್ಡರ್ ಮಾಡ್ತಿದೀಯಲ್ಲ"

"ಇನ್ನೆಷ್ಟು ದಿನ ಮಾಡ್ತೀನಿ...? ಮದುವೆ ಮಾಡ್ಕೊಂಡು ಹೋದ್ಮೇಲೆ ನಾನು ಆರ್ಡರ್ ಮಾಡುಕ್ಕೆ ಆಗುತ್ತಾ?"

"ಕ್ಷೀರಾ.. ನಿನ್ನ ಮದುವೆಗೆ ಏನೇ ಅರ್ಜೆಂಟು?... ನೀನೂ ಮದುವೆ ಮಾಡ್ಕೊಂಡು ಹೊರಟು ಹೋದ್ರೆ ನಾನು ಹೇಗೇ ಇರಲಿ?" ಹೇಳ್ತಾ ಹೇಳ್ತಾ ಅವಳ ಗಂಟಲುಬ್ಬಿ ಬಂತು. ಕ್ಷೀರಾಳನ್ನು ತಬ್ಬಿಕೊಂಡು ಅತ್ತಳು.

"ಏಯ್ ಅಳಬೇಡ್ವೇ?... ನಾನೇನು ಬೇರೆ ಊರಿಗೆ ಹೋಗ್ತೀನಾ? ದಿನಾ ಬಂದು ನೋಡಿಕೊಂಡು ಹೋಗ್ತೀನಿ" ಹಾಗೆ ಹೇಳಿದರೂ, ಅವಳ ಕಣ್ಣುಗಳಲ್ಲಿ ನೀರುಕ್ಕಿತ್ತು.

* * *

25

ಅವರುಗಳೆಲ್ಲರೂ ಸಮಯಕ್ಕೆ ಸರಿಯಾಗಿ ಬಂದರು. ಎಲ್ಲರೂ ಒಳಕ್ಕೆ ಬಂದರು. ಪರಸ್ಪರ ಪರಿಚಯವನ್ನು ಮಾಡಿಕೊಟ್ಟಾಗಿತ್ತು. ಕ್ಷೀರಾ, ಸಾಕ್ಷಿ ಕರೆದೊಡನೆ ಹೊರಬಂದು, ಕೈ ಮುಗಿದು ನಮಸ್ಕಾರ ಎಂದಳು. ಕಾರ್ತೀಕನ ಕಣ್ಣುಗಳು ಹೊಳಪಿನಿಂದ ಮಿಂಚಿದ್ದನ್ನು ಕಂಡು ಕ್ಷೀರಾ ಕಿರುನಗೆ ನಕ್ಕಳು. ಕಾರ್ತೀಕ ತಾಯಿಯ ಕಡೆ ನೋಡಿದ ಅವಳ ಕಣ್ಣುಗಳಲ್ಲಿ ಮೆಚ್ಚುಗೆಯ ನೋಟವನ್ನು ಕಂಡು ಸಂತಸವಾಗಿತ್ತು. ಆದರೆ ಆಕೆ

ಗಂಭೀರವನ್ನು ನಟಿಸಿದ್ದಳು. ವಧೂ ಪರೀಕ್ಷೆಯನ್ನು ಮಾಡಲೆಂದೇ ಬಂದಿರುವವಳಂತೆ, ಕೆಲವು ವಿಷಯಗಳನ್ನು ಮತ್ತೆ ಮತ್ತೆ ಕೇಳಿ ತಿಳಿದುಕೊಂಡಳು. ಕಾರ್ತೀಕ ಅಸಹನೆಯಿಂದ ತಾಯಿಯ ಕಡೆ ನೋಡಿದ. ಮೃದುಲಾ ಮುಖವನ್ನು ಸಿಂಡರಿಸಿದ್ದಳು. ಎಲ್ಲರಿಗೂ ಕಾಫಿ ತಿಂಡಿಯ ಉಪಚಾರವೂ ಮುಗಿಯಿತು.

"ನಾಳೆ ಲಗ್ನಪತ್ರಿಕೆಯ ಶಾಸ್ತ್ರವನ್ನು ಮಾಡಿಬಿಡೋಣ. ನಾಡಿದ್ದು ನಾವು ವಾಪಸ್ಸು ಊರಿಗೆ ಹೋಗಬೇಕು" ಜಲಜ ನುಡಿದಾಗ, ಕಾರ್ತೀಕ್ ಗಲಿಬಿಲಿಗೊಂಡ. ಮೃದುಲಾಳ ಕಡೆ ನೋಡಿದ. ಅವಳು ಅವನ ಸಹಾಯಕ್ಕೆ ಬಂದಳು.

"ಅತ್ತೇ... ಈಗ ಮನೆಗೆ ವಾಪಸ್ಸು ಹೋಗೋಣ. ಆಮೇಲೆ, ಫೋನು ಮಾಡಿ ಮಾತನಾಡೋಣ" ಜಲಜಳ ಮುಖ ದಪ್ಪಗಾಗಿತ್ತು. ಆದರೆ ಮತ್ತೆ ಮಾತನಾಡಿರಲಿಲ್ಲ. ಅವರುಗಳು ಹೊರಟರು. ಕ್ಷೀರಾ ಇಬ್ಬರಿಗೂ ಅರಿಶಿನ ಕುಂಕುಮ, ಹೂವನ್ನೂ ತಾಂಬೂಲದೊಂದಿಗೆ ಹಣ್ಣನ್ನು ಇಟ್ಟು ಕೊಟ್ಟು, ಭಾವೀ ಅತ್ತೆಗೆ ನಮಸ್ಕರಿಸಿದಳು.

ಮನೆಗೆ ತೆರಳಿದ ನಂತರ, ಇದೇ ವಿಷಯವಾಗಿ ಚರ್ಚೆ ನಡೆಯಿತು.

"ಅವರುಗಳು ಹೆಚ್ಚು ಅನುಕೂಲವಂತರಲ್ಲ ಅಷ್ಟೇ... ಅಲ್ಲದೇ ತಂದೆಗೆ ಅನಾರೋಗ್ಯ. ಲಗ್ನಪತ್ರಿಕೆ ಶಾಸ್ತ್ರ ಆಗಲೇಬೇಕಾ? ಒಟ್ಟಿಗೇ ಮದುವೆ ನೆರವೇರಿಸಿದರೆ ಸಾಲದಾ?"

"ಇಲ್ಲ ಮೃದುಲಾ, ಸಂಪ್ರದಾಯದ ಪ್ರಕಾರ ಲಗ್ನಪತ್ರಿಕೆ ಶಾಸ್ತ್ರವಾಗಲೇ ಬೇಕು. ಅದ್ಧೂರಿಯಾಗಿ ಮಾಡ್ಕೊಡಿ ಅಂತ ನಾವೇನು ಕೇಳ್ತಿದೀವಾ? ಸರಳವಾಗಿಯೇ ಮಾಡಿಕೊಡಲಿ..."

ಮದುಲಾ ಸಾಕ್ಷಿಗೆ ಫೋನು ಮಾಡಿ ವಿಷಯವನ್ನು ತಿಳಿಸಿಧಳು. "ಮನೆ ಮಟ್ಟಿಗೆ ಅಷ್ಟೇ. ಯಾವ ನೆಂಟರಿಷ್ಟರನ್ನು ಕರೆಯುವುದು ಬೇಡ. ನಾವೇ ಹಣ್ಣು ಹಂಪಲು ತರ್ತೀವಿ. ಹಾಗೇ ಪುರೋಹಿತರನ್ನು ನಾವೇ ಕರ್ಕೊಂಡು ಬರ್ತೀವಿ" ಮೃದುಲಾ ಸಾಕ್ಷಿಯೊಡನೆ ಮಾತನಾಡಿದ್ದನ್ನು ಕೇಳಿಸಿಕೊಂಡ ಜಲಜ ಆಕ್ಷೇಪಣೆ ಮಾಡಿದಳು.

"ಮದುವೆಗೆ ಮುಂಚೇನೇ ಎಲ್ಲಾ ನಾವೇ ಮಾಡ್ತೀವಿ ಅಂತ ಯಾಕೆ ಹೇಳಬೇಕು? ಅದೆಂಥಾ ಚೆನ್ನ?"

"ಇಲ್ಲ ಅತ್ತೆ, ಅವರ ಮನೇಲಿ ಓಡಾಡೋರು ಯಾರೂ ಇಲ್ಲ. ನೀವೇ ನೋಡಿದ್ರಲ್ಲ. ತಿಳಿದೂ ತಿಳಿದೂ, ನಾವು ಅವರಿಂದ ನಿರೀಕ್ಷೆ ಮಾಡುವುದು ಸರಿಯಲ್ಲ ಅಂತ ನನ್ನ ಭಾವನೆ"

"ಹೌದು ಕಣಮ್ಮಾ... ಮೃದುಲಾ ಹೇಳ್ತಾ ಇರೋದು ಸರಿ. ಇವೆಲ್ಲಾ ಬೇಕಾ?"

"ಇವೆಲ್ಲಾ ಜೀವನದಲ್ಲಿ ಆಗೋದು ಒಂದೇ ಬಾರಿ. ಈಗ ಎಲ್ಲಾ ಆದರೆ ಉಂಟು. ಇಲ್ಲದಿದ್ದರೆ ಆಮೇಲೆ ಬೇಕು ಅಂತ ಅಂದ್ರೂ ಈ ಅವಕಾಶ ಸಿಗುತ್ತಾ? ನನ್ನ ಮಾತಿಗೆ ಬೆಲೆ ಇಲ್ವಾ?"

"ಬೆಲೆ ಇದೆ, ಆದರೆ ನೀನೂ ಅರ್ಥ ಮಾಡ್ಕೋಬೇಕು. ಸಮಯ ಸಂದರ್ಭ ಅಂತ ಇರುಲ್ವೇನಮ್ಮ... ನೀನು ಹೀಗೇ ಮಾತಾಡ್ತಿದ್ರೆ, ನಾನು ರಿಜಿಸ್ಟರ್ಡ್ ಮದುವೆ ಮಾಡ್ಕೋತೀನಿ ಅಷ್ಟೇ..." ಕಾರ್ತೀಕ ಹೇಳಿದಾಗ, ಜಲಜ ಸ್ವಲ್ಪ ಮೆತ್ತಗಾದಳು.

"ಸರಿ, ನಾನು ಇನ್ನು ಮಾತನಾಡುಲ್ಲ. ನಿಮಗೆ ಹೇಗೆ ಬೇಕೋ ಹಾಗೇ ಮಾಡ್ಕೊಳ್ಳಿ" ಆಕೆ ಮುನಿಸಿನಿಂದ ನುಡಿದಾಗ, ಮೃದುಲಾ ಅತ್ತೆಯ ಬಳಿ ಬಂದು ಕುಳಿತಳು.

"ಅತ್ತೇ ಕೋಪಿಸ್ಕೋ ಬೇಡಿ. ಈಗ ಆಗುವ ಕೆಲಸ ಮುಖ್ಯ ಮನೆಗೆ ಹಿರಿಯವರಾಗಿ, ನೀವೇ ಸಿಟ್ಟು ಮಾಡ್ಕೊಂಡ್ರೆ ಹೇಗೆ? ಶಾಸ್ತ್ರ ಸಂಪ್ರದಾಯ ಎಲ್ಲಾ ಮುಖ್ಯ ನಿಜ... ಆದರೆ ಈಗ ಕಾಲ ಬದಲಾಗಿದೆ. ನಿಮ್ಮ ಕಾಲದಂತೆ, ಮೂರು ನಾಲ್ಕು ದಿನಗಳ ಮದುವೆಗೆ ಈಗ ಸಮಯವೂ ಇಲ್ಲ, ಹಣವೂ ಇಲ್ಲ. ಜನ ಸಹಾಯವಂತೂ ಮೊದಲೇ ಇಲ್ಲ. ಕರೆದವರೂ, ಬಸ್ ಛಾರ್ಜು ಖರ್ಚು ಮಾಡಿಕೊಂಡು ಬರ್ತಾರೋ ಇಲ್ವೋ...? ಕ್ಷೀರನ್ನ ನೋಡಿ ಮೆಚ್ಚಿದೀರ.... ಸೊಸೆ ಅಂತ ಸ್ವೀಕರಿಸಿದೀರಿ. ಅದಕ್ಕೆ ಒಂದು ಛಾಪು ಬೇಕು ಅಷ್ಟೇ... ಮದುವೆ ಹೇಗೇ ನಡೆಯಲಿ ಗಂಡ ಹೆಂಡತಿ ಅನ್ಯೋನ್ಯವಾಗಿ ಒಟ್ಟಿಗೇ ಇರುವುದು ಮುಖ್ಯ..." ಮೃದುಲಾ ಹಾಗೆ ಹೇಳಿದಾಗ, ಜಲಜ ಅವಳನ್ನೇ ನೋಡಿದಳು. ಮೃದುಲಾಳ ಮದುವೆಯ ದಿನಗಳು ನೆನಪಿಗೆ ಬಂದವು. ಅವಳ ಸೋದರ, ಒಬ್ಬಳೇ ಮಗಳ ಮದುವೆಯನ್ನು ಅದ್ಧೂರಿಯಾಗಿ ಮಾಡಿದ್ದ. ಆದರೆ ಮೃದುಲಾಳ ಸಾಂಸಾರಿಕ ಜೀವನ ಅಪೂರ್ಣವಾಗಿಯೇ ಉಳಿದು ಹೋಯಿತು. ಆಗ ತಾವುಗಳ್ಯಾರೂ, ಅವಳ ಮನದ ತುಮುಲವನ್ನು ಅರ್ಥ ಮಾಡಿಕೊಳ್ಳಲಿಲ್ಲ. ಆ ನೋವನ್ನು ಈಗ ಹೇಳಿಕೊಳ್ಳುತ್ತಿದ್ದಾಳೆ ಅಂತ ಅನ್ನಿಸಿದಾಗ ಅವಳ ಬಗ್ಗೆ ವ್ಯಥೆಯಾಯಿತು. ತನ್ನ ಬಾಳಿನಲ್ಲಿ ನೆಮ್ಮದಿ ಇರದೇ ಇದ್ದರೂ, ಕಾರ್ತೀಕನ ಸಂಸಾರದ ಬಗ್ಗೆ ಅವಳಿಗೆ ಇರುವ ಮುತುವರ್ಜಿಯನ್ನು ಕಂಡು ಮನಸ್ಸು ಮೆದುವಾಯಿತು. ಕಾರ್ತೀಕನನ್ನು ಇವಳ ಮನೆಗೆ ಕಳಿಸಿದಾಗಿನಿಂದ, ಅವನು ನನಗೆ ದೂರವೇ... ಅವನ ಆಸೆ, ಆಸಕ್ತಿಗಳನ್ನೆಲ್ಲಾ ಹತ್ತಿರದಿಂದ ಕಂಡಿರುವವಳು ಇವಳೇ. ಇವಳು ಹೇಳುವ ಮಾತಿನಲ್ಲೂ ಅರ್ಥವಿದೆ. ಈಗ ನನಗೆ ಕೊಟ್ಟಿರುವ ಗೌರವವನ್ನು ಉಳಿಸಿಕೊಂಡು, ಈ ಮಾತುಗಳಿಂದ ದೂರವಿರುವುದೇ ಒಳ್ಳೆಯದು ಎಂದುಕೊಂಡಳು. ಆಕೆ ಮಾತನ್ನು ಮುಂದುವರೆಸದೇ ಇದ್ದುದನ್ನು ಕಂಡು ಮೃದುಲಾಳೂ ಸುಮ್ಮನಾದಳು.

ಮಾರನೇ ದಿನ ಲಗ್ನಪತ್ರಿಕೆಯ ಶಾಸ್ತ್ರವನ್ನು ಸರಳವಾಗಿ ನೆರವೇರಿಸಿಕೊಂಡು, ಅದೇ ರಾತ್ರಿ ಕಾರ್ತೀಕನ ತಂದೆ ತಾಯಿ ಊರಿಗೆ ವಾಪಸ್ಸು ಹೊರಟು ಬಿಟ್ಟರು. ಮದುವೆಯ ದಿನಕ್ಕೆ ಕೇವಲ ಇಪ್ಪತ್ತೇಳು ದಿನಗಳು ಉಳಿದಿದ್ದವು. ಕಾರ್ತೀಕ್ ಸಂಜಯನೊಡನೆ ಮಾತನಾಡಿದ.

"ಮದುವೆಯ ಖರ್ಚು ವೆಚ್ಚಗಳಲ್ಲಿ ನನಗೂ ಪಾಲು ಇರಲಿ. ಹಾಗೆ ನನಗೂ ಕೆಲವು ಕೆಲಸಗಳನ್ನು ವಹಿಸಿಕೊಡಿ. ನಿಮಗೂ ಬೇರೆ ಸಹಾಯಕರುಗಳಿಲ್ಲ ಅಂತ ನನಗೂ ಗೊತ್ತು" ಎಂದಿದ್ದ.

"ಥ್ಯಾಂಕ್ಸ್ ಕಾರ್ತೀಕ್ ಓಡಾಟದ ಶ್ರಮ ಯಾರಿಗೂ ಇಲ್ಲ. ಎಲ್ಲಾ ಕಾಂಟ್ರಾಕ್ಟ್‌ಗೆ ಕೊಟ್ಟು ಬಿಡ್ತೀವಿ. ಎಲ್ಲಾ ನೆಂಟರಿಷ್ಟರಿಗೂ ಆಹ್ವಾನ ಪತ್ರಿಕೆಯನ್ನು ಪೋಸ್ಟ್ ಮಾಡಿ ಬಿಡ್ತೀವಿ. ಹತ್ತಿರದ ನೆಂಟರನ್ನು ಫೋನಿನಲ್ಲೇ ಕರೆದು ಬಿಡ್ತೀವಿ"

"ನಿಮ್ಮ ನೆಂಟರಿಷ್ಟರು ತಪ್ಪಾಗಿ ಭಾವಿಸುಲ್ಲ ಅಂತ ಅಂದ್ಕೊಂಡಿದೀನಿ"

"ಅಂದುಕೊಂಡ್ರೂ ನಾನೇನು ಮಾಡುಕ್ಕೆ ಆಗುತ್ತೆ ಕಾರ್ತೀಕ್? ಸಾಕ್ಷಿ ಪ್ರೆಗ್ನೆಂಟ್, ಕ್ಷೀರಾ ಮದು ಮಗಳು, ರಾಶಿ ಚಿಕ್ಕವಳು ಅದಂತೂ ನಿಜ ತಾನೇ? ಎಲ್ಲರಿಗೂ ಅರ್ಥ ಆಗ್ಬೇಕು" ನಗುತ್ತಾ ನುಡಿದ.

"ನೀವು ಹೇಳೋದೂ ಸರಿ. ಅದಕ್ಕೆ ಸಿಂಪಲ್ ಆಗಿ ಮದುವೆ, ಒಂದು ರಿಸೆಪ್ಶನ್ ಇಟ್ಟುಕೊಂಡಿದ್ದರೆ ಸಾಕಾಗಿತ್ತು, ಆದರೆ...."

"ನಿಮ್ಮ ಪೇರೆಂಟ್ಸ್, ಅದಕ್ಕೆಲ್ಲ ಒಪ್ಪುಲ್ಲ. ಆ ಅನುಭವ ನನಗಿದೆ. ಅವರುಗಳಿಗೆ ನಮ್ಮ ಭಾವನೆ ಅರ್ಥವಾಗುವುದಿಲ್ಲ. ಅಲ್ಲದೇ ಏನೋ ಒಂಥರಾ ಪೊಸೆಸಿವ್‌ನೆಸ್... ಎನಿವೇ, ಕ್ಷೀರಾ ಲಕ್ಕೀ... ಅವಳಿಗೆ ನಿಮ್ಮಂಥಾ ಪತಿ ಸಿಕ್ಕಿರುವುದು ಅವಳ ಅದೃಷ್ಟ. ಸಾಕ್ಷಿಯ ಜವಾಬ್ದಾರಿ ಕಡಿಮೆ ಆಗುತ್ತೆ. ಈ ಮನೆಗೆ ಹಿರಿಯ ಮಗಳಾಗಿ ಹುಟ್ಟಿ ಅವಳಿಗೆ ಸದಾ ಟೆನ್ಷನ್. ಒಮ್ಮೊಮ್ಮೆ ನಂಗೂ ಭಯ ಆಗುತ್ತೆ. ಮದುವೆಯಾದ ಎರಡು ವರ್ಷಗಳ ನಂತರ, ಪ್ರೆಗ್ನೆಂಟ್ ಆಗಿದಾಳೆ" ಕಾರ್ತೀಕ್ ಸುಮ್ಮನೆ ಮುಗುಳ್ನಕ್ಕ. "ನೀವು ಒಂದು ಫೇವರ್ ಮಾಡ್ತೀರಾ... ಕ್ಷೀರಾಳ ಷಾಪಿಂಗ್‌ಗೆ ಹೆಲ್ಪ್ ಮಾಡಿ. ಅವಳ ಇಷ್ಟದ ಒಡವೆ, ರೇಶ್ಮೆ ಸೀರೆಗಳನ್ನು ಕೊಡಿಸಿ ಬಿಡಿ. ಈ ಷಾಪಿಂಗ್ ಕೆಲಸಕ್ಕೆ ನಂಗೆ ಬಿಡುವಿಲ್ಲ. ಸಾಕ್ಷಿ, ರಾಶಿ ಇಬ್ಬರಿಗೂ ಬರುವುದು ಕಷ್ಟವಾಗುತ್ತೆ.

"ಯೂ ಡೋಂಟ್‌ವರಿ ಸಂಜಯ್... ನಾನು ಕ್ಷೀರಾಳನ್ನ ಷಾಪಿಂಗ್ ಕರ್‍ಕೊಂಡು ಹೋಗ್ತೀನಿ" ಸಂಜಯ್ ನಿರಾಳವಾದ. ಅದೇ ಸಾಯಂಕಾಲ ಕಾರ್ತೀಕ್ ಕ್ಷೀರಾಳನ್ನು ಜವುಳಿ ಅಂಗಡಿಗೆ, ಒಡವೆ ಅಂಗಡಿಗಳಿಗೆ ಕರೆದೊಯ್ದ. ಕ್ಷೀರ, ಸಾಕ್ಷಿ ಕೊಟ್ಟ ಹಣವನ್ನು ಕೆಲವು ಸೂಕ್ತ ಸಲಹೆಗಳನ್ನು ತೆಗೆದುಕೊಂಡಿದ್ದಳು.

ತನಗೆ, ನಾಲ್ಕು ರೇಶ್ಮೆ ಸೀರೆಗಳನ್ನು ಖರೀದಿಸಿದಳು. ಸಾಕ್ಷಿಗೆ ಹಾಗೂ ರಾಶಿಗೆ ಎರಡು ಭಾರಿ ರೇಶ್ಮೆಯ ಸೀರೆಗಳನ್ನು, ಅದಕ್ಕೆ ಹೊಂದುವಂತಹ ರವಿಕೆಯ ಬಟ್ಟೆಗಳನ್ನು ಕೊಂಡುಕೊಂಡಳು. ಎಲ್ಲವಕ್ಕೂ ಕಾರ್ತೀಕ್‌ನೇ ಬಿಲ್ಲಿನ ಹಣವನ್ನು ಕೊಟ್ಟ. ಕ್ಷೀರಾ ಬೇಡ ಎಂದರೂ ಕೇಳಲಿಲ್ಲ. ಅಲ್ಲಿಂದ ಚಿನ್ನ ಬೆಳ್ಳಿಯ ಷೋರೂಂಗೆ ಬಂದರು. ತನಗೆಂದು ಒಂದೆಳೆಯ ಚಿನ್ನದ ಸರವನ್ನು, ಒಂದು ಜೊತೆ ಚಿನ್ನದ ಬಳೆಗಳನ್ನು ಖರೀದಿಸಿದಳು. ಅದಕ್ಕೆ ಒಪ್ಪುವಂತಹ ಒಂದು ಚಿನ್ನದ ಉಂಗುರವನ್ನು ಕಾರ್ತೀಕ ಅವಳಿಗೆ ಕೊಡಿಸಿದ. ಅವಳು ಸಂಕೋಚದಿಂದ ನಿರಾಕರಿಸಿದಳು.

"ಬೇಡ ಎನ್ಬೇಡ ಕ್ಷೀರಾ... ಇದು ನನ್ನ ಪ್ರೀತಿಯ ಕಾಣಿಕೆ" ಎಂದ.

"ನಿಮ್ಮ ಪ್ರೀತಿ ತುಂಬಾ ಹೆವಿ ಆಗ್ತಿದೆ ಕಾರ್ತೀಕ್. ನಾನು ಇದನ್ನೆಲ್ಲಾ ಅಕ್ಸೆಪ್ಟ್ ಮಾಡಿಕೊಳ್ಳೋಕೆ ಮುಜುಗರ ಆಗ್ತಿದೆ. ನಾನು ನಿಮಗೆ ಏನನ್ನು ಕೊಡಿಸ್ತಾ ಇಲ್ಲವಲ್ಲ" ಸಂಕೋಚದಿಂದ ನುಡಿದಳು. ಇಬ್ಬರೂ ಕಾರಿನ ಬಳಿಗೆ ಬಂದರು.

"ಕೊಡೂವಂತೆ, ನಾನು ಎಲ್ಲವನ್ನು ವಸೂಲಿ ಮಾಡ್ತೀನಿ" ಅವನು ಅರ್ಥಗರ್ಭಿತವಾಗಿ ನುಡಿದು, ನಗುತ್ತಾ ಅವಳ ಸೊಂಟವನ್ನು ಎಡಗೈಯಿಂದ ಬಳಸಿದ. ಅವಳು ಹಿಂದೆ ಸರಿದಳು.

"ಹ್ಞಾಂ, ಹ್ಞಾಂ, ಈಗ ನಮ್ಮ ಎಂಗೇಜ್‌ಮೆಂಟ್ ಆಗಿದೆ. ನಿಮ್ಮ ಅಕ್ಕ ಭಾವ ಪರ್ಮಿಷನ್ ಕೊಟ್ಟು ಕಳಿಸಿದ್ದಾರೆ. ಈಗ ನೀನು ತಪ್ಪಿಸಿಕೊಳ್ಳುವಂತಿಲ್ಲ"

"ಇದು ನಡು ರಸ್ತೆ ಕಾರ್ತೀಕ್. ಮೊದಲು ಮನೆಗೆ ಹೋಗೋಣ"

"ಓ...ಕೇ..." ಎಂದು ಹೇಳಿ ಕಾರಿನ ಬಾಗಿಲನ್ನು ತೆರೆದ. ಇಬ್ಬರೂ ಕಾರನ್ನೇರಿದರು. ಹಾಗಾದರೆ ಈಗ ಸೀದಾ ನಮ್ಮ ಮನೆಗೆ ಹೋಗೋಣ. ನಿಮ್ಮ ಮನೆಗೆ ಹೋದರೆ ನೀನು ನನ್ನ ಕೈಗೆ ಎಲ್ಲಿ ಸಿಗ್ತೀಯಾ?" ಎನ್ನುತ್ತಾ ಅವಳ ಸೊಂಟವನ್ನು ನಯವಾಗಿ ಚಿವುಟಿದ. ಅವಳು ಸಣ್ಣಗೆ ಚೀರಿದಳು.

"ಏನ್ಮಾಡ್ತಿದೀರಿ ಕಾರ್ತೀಕ್, ನೋಯುತ್ತೆ" ಎಂದಳು.

"ಹಾಗಾದ್ರೆ ಇನ್ನು ಸ್ವಲ್ಪ ಜೋರಾಗಿ ಚಿವುಟಿದರೆ ಏನ್ಮಾಡ್ತೀಯ?"

"ಜೋರಾಗಿ ಕಿರುಚ್ಕೊಂಡು ಬಿಡ್ತೀನಿ ಅಷ್ಟೇ"

"ಸಧ್ಯ ಹಾಗೇನಾದ್ರೂ ಮಾಡೀಯ ಪುಣ್ಯಾತ್ಗಿತ್ತಿ. ಜನ ಸೇರಿ ಬಿಡ್ತಾರೆ"

"ಹಾಗ್ಬನ್ನಿ ದಾರಿಗೆ. ಸೀದಾ ನಡೀರಿ ಮನೆಗೆ... ನಮ್ಮ ಮನೆಗೆ"

"ಕ್ಷೀರಾ ಇದು ಮೋಸ..." ಎನ್ನುತ್ತಾ ಕಾರನ್ನು ಒಂದು ಕಡೆ ನಿಲ್ಲಿಸಿದ. ಅವಳು ಹೆದರಿದಳು.

"ಪ್ಲೀಸ್ ಕಾರ್ತೀಕ್, ಈಗ ಮನೆಗೆ ಹೋಗೋಣ. ಅಕ್ಕ ಕಾಯ್ತಾ ಇರ್ತಾಳೆ" ಎಂದಳು. ಅವನು ನಕ್ಕು ಕಾರಿನಿಂದ ಇಳಿದ.

"ಒಂದ್ನಿಮಿಷ, ನೀನು ಇಲ್ಲೇ ಕೂತಿರು. ನಾನು ಟೈಲರ್ ಹತ್ತಿರ ಹೋಗಿ ಬರ್ತೀನಿ" ಎಂದು ಹೇಳಿ, ಪಕ್ಕದಲ್ಲೆಲ್ಲೋ ಮರೆಯಾದ. ಅವಳು ಸುಮ್ಮನೇ ಅವನು ಹೋದ ದಿಕ್ಕನ್ನೇ ನೋಡುತ್ತಾ ಕುಳಿತಿದ್ದಳು. ಇದ್ದಕ್ಕಿದ್ದಂತೆ ವ್ಯಕ್ತಿಯೊಬ್ಬ ಕಾರಿನ ಬಳಿ ಬಂದು, ಇವಳ ಕಡೆ ಬಗ್ಗಿ ನೋಡಿದ. ಇವಳು ಬೆಚ್ಚಿ ಸಣ್ಣಗೆ ಚೀರಿದಳು. ದೀಪದ ಬೆಳಕು ಅವನ ಮುಖದ ಮೇಲೆ ಬಿದ್ದಿತು. ತಕ್ಷಣವೇ ಅವನ ಗುರುತು ಸಿಕ್ಕಿತು. ಸ್ವಲ್ಪ ಪಕ್ಕಕ್ಕೆ ಸರಿದಳು. ಆದರೆ ಅವನು ಇವಳನ್ನು ಗುರುತಿಸಿದಂತೆ ಅನ್ನಿಸಲಿಲ್ಲ.

"ಸಾರಿ ಮೇಡಂ... ನನ್ನ ಮಿಸೆಸ್ ಅಂತ ಅಂದ್ಕೊಂಡೆ... ಇದನ್ನು ನಮ್ಮ ಕಾರು ಅಂತ ಅಂದ್ಕೊಂಡೆ... ನಾನು ನನ್ನ ಮಿಸೆಸ್‌ನ ಹುಡುಕ್ತಿದೀನಿ..." ಅವನ ಅಸ್ಪಷ್ಟ ಮಾತಿನಿಂದ ಅವನು ಕುಡಿದಿರಬಹುದೆಂಬ ಅನುಮಾನ ಬಂತು. ಸರ್ರನೆ ಕಿಟಕಿಯ ಗಾಜನ್ನು ಮೇಲಕ್ಕೆ ಏರಿಸಿದಳು. ಭಯದಿಂದ ಅವನ ಕಡೆ ನೋಡಿದಳು. ಮುಂದೆ ನಿಲ್ಲಿಸಿದ್ದ ಕಾರಿನಿಂದ, ಯುವತಿಯೊಬ್ಬಳು ಇಳಿದು ಬಂದು ಅವನ ತೋಳನ್ನು ಹಿಡಿದಳು.

"ನಾನು ಇಲ್ಲೇ ಇದೀನಿ. ನಮ್ಮ ಕಾರು ಇಲ್ಲೇ ಮುಂದೆ ನಿಂತಿದೆ ಮೋಹನ್. ಡ್ರಿಂಕ್ಸ್ ಜಾಸ್ತಿಯಾಗಿದೆ ನಿಮಗೆ... ಬನ್ನಿ ಕೂತ್ಕೊಳ್ಳಿ, ನಾನೇ ಡ್ರೈವ್ ಮಾಡ್ತೀನಿ, ಬನ್ನಿ" ಎಂದು ಹೇಳಿ ಅವನ ಕೈ ಹಿಡಿದು ಕರೆದೊಯ್ದು, ಕಾರಿನ ಬಾಗಿಲನ್ನು ತೆರೆದು ಕೂರಿಸಿದಳು. ತಾನು ಡ್ರೈವಿಂಗ್ ಸೀಟ್‌ನಲ್ಲಿ ಕುಳಿತಳು. ಅವರ ಕಾರು ಚಲಿಸಿತು. ಕ್ಷೀರಾ ಹಾಯಾಗಿ ಉಸಿರಾಡಿದಳು.

"ಅದ್ಯಾರು ಇಲ್ಲಿ ನಿಂತಿದ್ರಲ್ಲ... ಜಗಳ ಆಡ್ತಿದ್ದ ಹಾಗಿತ್ತು. ಆವನು ಈ ಬಾರ್‌ನಿಂದ ಹೊರ ಬಂದದ್ದನ್ನು ನೋಡಿದೆ. ಸಿಕ್ಕಾಬಟ್ಟೆ ಕುಡಿದು ಬಿಟ್ಟಿದ್ದ" ಕ್ಷೀರಾ ಉತ್ತರಿಸಲಿಲ್ಲ. ಕಾರ್ತಿಕ್, ತನ್ನ ಸೀಟಿನಲ್ಲಿ ಕುಳಿತು ಕಾರನ್ನು ಸ್ಟಾರ್ಟ್ ಮಾಡಿದ. ಕ್ಷೀರಾ ಸುಮ್ಮನೇ ಕುಳಿತಿದ್ದಳು. ಅವನು ಕಾರನ್ನು ಮೈನ್ ರೋಡಿನಲ್ಲಿ ಓಡಿಸಿದ. ಆಗಾಗ್ಗೆ ಅವಳ ಕಡೆ ನೋಡುತ್ತಿದ್ದ. ಅವಳ ಮೌನ ಅವನಿಗೆ ತಮಾಷೆಯಾಗಿ ಕಂಡಿತ್ತು.

ಮದುವೆಯ ಸಿದ್ಧತೆಗಳೆಲ್ಲ ಮುಗಿಯುತ್ತಾ ಬಂದಿದ್ದವು. ನೆಂಟರಿಷ್ಟರಿಗೆಲ್ಲ ಆಹ್ವಾನ ಪತ್ರಿಕೆಯನ್ನು ಕಳಿಸಿದ್ದಾಗಿತ್ತು. ಕೆಲವರಿಗೆ ಫೋನು ಮಾಡಿ ಕರೆದಿದ್ದರು. ಕ್ಷೀರ ತನ್ನ ಸಹೋದ್ಯೋಗಿಗಳಿಗೆ ಆಮಂತ್ರಣ ಪತ್ರಿಕೆಯನ್ನು ಕೊಟ್ಟಿದ್ದಳು. ಅವರುಗಳು ಆಶ್ಚರ್ಯವನ್ನು ವ್ಯಕ್ತಪಡಿಸಿ, "ಕಂಗ್ರಾಟ್ಸ್" ತಿಳಿಸಿದ್ದರು. ರಾಶಿ ತನ್ನ ಸಹಪಾಠಿಗಳನ್ನೆಲ್ಲಾ ಕರೆದಿದ್ದಳು.

ಕಾರ್ತೀಕ್ ಎರಡು ದಿನಗಳ ಮೊದಲೇ ತನ್ನ ಊರಿಗೆ ಹೊರಟಿದ್ದ. ಹೊರಡುವ ಮೊದಲು ಕ್ಷೀರಾಳನ್ನು ಭೇಟಿಯಾಗಿದ್ದ.

"ಮತ್ತೆ ನನ್ನ ನಿನ್ನ ಭೇಟಿ, ಮದುವೆ ಮಂಟಪದಲ್ಲಿ, ಮದುಮಗನ ವೇಷದಲ್ಲಿ" ಎಂದಿದ್ದ ನಗೆಯಾಡುತ್ತಾ. ಕ್ಷೀರ ನಗುತ್ತಾ ತಲೆಯಾಡಿಸಿದ್ದಳು. ಈ ಎರಡು ದಿನಗಳು ನಾನು ನಿನ್ನನ್ನು ತುಂಬಾ ತುಂಬಾ ಮಿಸ್ ಮಾಡ್ಕೋತೀನಿ ಕ್ಷೀರಾ..." ಎಂದಿದ್ದ ಅವಳ ಮುಖದ ಬಳಿಗೆ ತನ್ನ ಮುಖವನ್ನು ತಂದು. ಅವಳು ಹಿಂದಕ್ಕೆ ಸರಿದಳು. ಅವನು ತುಂಟತನದಿಂದ, ಕೈಯ ಬೆರಳನ್ನು ಅವಳ ಗಲ್ಲಕ್ಕೆ ತಗುಲಿಸಿದ.

"ಆಯ್ತು, ಮದುವೆಯ ನಂತರ, ನಾನು ನಿನ್ನನ್ನು ಚೆನ್ನಾಗಿ ವಿಚಾರಿಸಿಕೊಳ್ತೀನಿ. ಅಲ್ಲಿಯವರೆಗೂ ಸಿಹಿ ನೆನಪುಗಳು ಬೈ ಬೈ" ಎಂದು ಹೇಳಿ ಹೊರಟು ಹೋಗಿದ್ದ. ಅವನತ್ತ ಹೋದ ಕೂಡಲೇ, ಅವಳಿಗೆ ಎಲ್ಲವೂ ಶೂನ್ಯ ಎನಿಸಿತ್ತು. ಸಾಕ್ಷಿ ಬಂದು ಎಚ್ಚರಿಸುವವರೆಗೂ ಅವಳು ಹಾಗೇ ಬಾಗಿಲಿಗೆ ಒರಗಿ ನಿಂತಿದ್ದಳು.

"ಅವನು ಹೋಗಿ ಅರ್ಧ ಗಂಟೆ ಮೇಲಾಯ್ತು. ಹೀಗಾದ್ರೆ ಮುಗೀತು ನಿನ್ನ ಕತೆ. ಒಳಗೆ ಬಾ ಕ್ಷೀರಾ ಬೇಕಾದಷ್ಟು ಕೆಲಸ ಇದೆ"

"ನಾನು ಮಾಡೋ ಕೆಲಸ ಏನೇ ಇದೆ? ಕಾಂಟ್ರಾಕ್ಟ್ ಕೊಟ್ಟಿದೀವಿ ಅಂತ ಭಾವ ಹೇಳಿದ್ರಲ್ಲ"

"ನಿನ್ನ ಬಟ್ಟೆಗಳನ್ನು ಜೋಡಿಸಿಡುಕ್ಕೆ ಯಾವ ಕಾಂಟ್ರಾಕ್ಟ್ ಕೊಟ್ಟಿಲ್ಲ. ನನ್ಕೈಲಿ ಕೂರುಕ್ಕೆ ಆಗುಲ್ಲ. ಬಗ್ಗುಕ್ಕೆ ಆಗುಲ್ಲ. ರಾಶಿಗೆ ಓದುವುದು ಇದೆ. ಇನ್ಯಾರು ಮಾಡ್ತಾರೆ ಹೇಳು" ಕ್ಷೀರ ಬೇಸರದಿಂದ ಬೀರುವಿನ ಬಾಗಿಲನ್ನು ತೆರೆದಳು.

"ಇದರಲ್ಲಿ ಅಮ್ಮನ ಸೀರೆಗಳೇ ಬೇಕಾದಷ್ಟಿವೆ. ಅದನ್ನೆಲ್ಲಾ ಏನು ಮಾಡೋದು?" ಅಕ್ಕನನ್ನು ಕೇಳಿದಳು.

"ನಿನಗೆ ಯಾವುದು ಇಷ್ಟವೋ ಅದನ್ನು ತೆಗೆದಿಟ್ಟುಕೋ. ಹನಿಮೂನ್‌ಗೆ ಎಲ್ಲಿಗೆ ಹೋಗ್ತಿದೀರಿ? ಕಾರ್ತೀಕ್ ಹೇಳಿದ್ನಾ?"

"ಇಲ್ಲ, ಆ ಮಾತನ್ನೇ ಆಡಿಲ್ಲ. ನಂಗೂ ಆಸಕ್ತಿ ಇಲ್ಲ ಬಿಡು"

"ಏನೇ ಹಾಗಂದ್ರೆ?... ಎಲ್ಲಿಗೂ ಹೋಗದೇ ಮನೇಲಿ ಕೂತಿರ್ತೀರಾ?"

"ನಂಗೊತ್ತಿಲ್ಲ ಸಾಕ್ಷಿ... ಆಮೇಲೂ ಒಂದಿಷ್ಟು ದಿನ ನಾನು ಇಲ್ಲೇ ಇರ್ತೀನಿ. ನಿಂಗೂ ಜೊತೆ ಆಗುತ್ತೆ..."

"ಕಾರ್ತೀಕ್ ಬಿಟ್ಟಿರುತ್ತಾನಾ? ಮೊದಲು ಕೇಳಿ ನೋಡು" ಗೇಲಿ ಮಾಡಿದಳು.

"ಅವನೂ ಬೇಕಾದ್ರೆ ಇಲ್ಲೇ ಬಂದಿರಲಿ"

"ಸರಿ ಹೋಯ್ತು, ಇಲ್ಲಿ ಪ್ರೈವೇಸಿ ಇಲ್ಲ ಅಂತ, ಮದುವೆಯಾದ ಎರಡು ವರ್ಷಗಳ ನಂತರವೂ ನಿಮ್ಮ ಭಾವ ಗೊಣಗ್ತಾರೆ. ಇನ್ನು, ಮದುವೆಯಾದ ಹೊಸದರಲ್ಲಿ ಕಾರ್ತೀಕ್‌ಗೆ ಇಲ್ಲಿ ಸರಿ ಹೋಗುತ್ತಾ? ಅದಕ್ಕೇ ಹೇಳಿದ್ದು ಹನಿಮೂನ್‌ಗೆ ಅಂತ ಹತ್ತು ದಿನಗಳು ಹೋಗಿ ಬಾ, ಮಜವಾಗಿರುತ್ತೆ. ಆಮೇಲೆ ಇದ್ದದ್ದೇ..."

"ನಾನೂ ಹೊರಟು ಹೋದ್ರೆ, ನಿಂಗೆ ಬೇಜಾರಾಗುಲ್ವೇನೆ?"

"ಆಗುತ್ತೆ, ಸಂಜಯ್‌ಗೆ ರಜ ಹಾಕಿ ಅಂತ ಹೇಳ್ತೀನಿ... ಗಿರಿಜಮ್ಮ ಹಾಗೂ ಅವಳ ಸೊಸೆ ಮಾತಿಗೆ ಸಿಗ್ತಾರೆ. ಕಾಲ ಹೋಗುತ್ತೆ... ರಾಶಿ ಇರ್ತಾಳಲ್ಲ"

"ಅವಳು ಮೊನ್ನೆ ಎಷ್ಟು ಅತ್ತು ಬಿಟ್ಲು ಗೊತ್ತಾ? ಅವಳು ನಿನ್ನನ್ನು ಗೋಳು ಹೊಯ್ದುಕೊಂಡರೆ, ನಾಲ್ಕು ಬಿಗಿ ಹದಕ್ಕೆ ಬರ್ತಾಳೆ..."

"ಅವಳನ್ನ ನಿನ್ನ ಮೇಡಂ ಮನೆಗೆ ಕಳಿಸಿ ಬಿಡ್ತೀನಿ. ಅಲ್ಲಿ ಆಕೇನೂ ಒಬ್ಬರೇ ಇರ್ತಾರೆ. ಜೋಡಿ ಸರಿ ಹೋಗುತ್ತೆ" ಇಬ್ಬರೂ ನಕ್ಕರು.

"ಯಾಕ್ರೇ ಇಬ್ಬರೂ ನಗ್ತಿದೀರಿ? ಏನದು ಜೋಕು? ನಂಗೂ ಹೇಳೇ... ಸಾಕ್ಷಿ"

"ನೀನೇ ಒಂದು ಜೋಕು... ನೀನು ನಮ್ಮ ಅತ್ತೆ ಮನೇಲಿರ್ತೀಯೋ? ನಿನ್ನ ಮೇಡಂ ಮನೇಲಿರ್ತೀಯೋ?"

"ಎಲ್ಲೂ ಇರುಲ್ಲ. ನಾನು ಹಾಸ್ಟೆಲ್ಲಿನಲ್ಲಿರ್ತೀನಿ ಅಂತಂದ್ರೆ ಇಬ್ರೂ ಬೈದಿದೀರಿ. ನಾನು ಈ ಮನೇಲೇ ಬಿದ್ದಿರ್ತೀನಿ"

"ನಿಂಗೂ ಬೇಗ ಮದುವೆ ಮಾಡಿ ಬಿಡ್ತೀವಿ..." ಇಬ್ಬರೂ ನಕ್ಕರು.

"ಓ...ಕೇ.. ನಾನು ರೆಡಿ" ರಾಶಿ ನುಡಿದಾಗ ಇಬ್ಬರೂ ಬೆಪ್ಪಾದರು.

"ಮದುವೆ ಅಂದ್ರೆ ಏನೂಂತ ತಿಳ್ಕೊಂಡಿದೀಯೆ ಹುಡ್ಗೀ?" ಕ್ಷೀರಾ ಅವಳ ಕೆನ್ನೆ ಚಿವುಟಿದಳು.

"ಮೊದಲು ನಿಮಗೆ, ಏನನ್ನಿಸುತ್ತಿತ್ತು ಅಂತ ಹೇಳಿ. ನಾನು ಆಮೇಲೆ ಹೇಳ್ತೀನಿ"

"ನಂಗಂತೂ ಏನೂ ಅನ್ನಿಸ್ತಿಲ್ಲ. ಕಾರ್ತೀಕ್ ಪ್ರಪೋಸ್ ಮಾಡಿದ್ರು... ಒಪ್ಕೊಂಡೆ.. ಅಷ್ಟೇ... ಸಾಕ್ಷಿ, ನೀನು ಹೇಳೇ..."

"ನನ್ನ ಕತೆ ಇನ್ನೇನು? ಅಮ್ಮ ಅಲಂಕಾರ ಮಾಡಿ, ಸಂಜಯನ ಮುಂದೆ ಕೂರಿಸಿದಳು. ಅವನು ಒಪ್ಕೊಂಡ, ನಾನು ಹುಂ ಅಂದೆ..." ಕೆಟ್ಟ ಮುಖ ಮಾಡಿದಳು.

"ಇಷ್ಟೇನಾ?... ನನ್ನ ಲವ್ ಸ್ಟೋರಿ ಹೀಗೆ ಇರುಲ್ಲಪ್ಪಾ... ಬೇರೆ ತರಹ..."

"ಲವ್ವು ಗಿವ್ವು ಅಂತ ಯಾವ್ನೋನ ಜತೇಲೇನಾದ್ರೂ ತಿರುಗಾಡಿದ್ರೆ, ನಿನ್ನನ್ನ ನಾನು ಮನೆಗೇ ಸೇರಿಸುಲ್ಲ ಅಷ್ಟೇ..."

"ನಿನ್ನ ಅತ್ತೆ ಮನೆಗೆ ನಾನ್ಯಾಕೆ ಬರಲಿ ಮಹಾರಾಯಿತಿ?" ರಾಶಿ ನಕ್ಕಾಗ ಸಾಕ್ಷಿ ಅವಳ ತಲೆಯ ಮೇಲೆ ಮೊಟಕಿದಳು. ಗಿರಿಜಮ್ಮ ಎಲ್ಲರಿಗೂ ಪುರಿ ಉಂಡೆ, ಚಕ್ಕುಲಿಯನ್ನು ತಂದಿತ್ತಳು.

"ಸರಿಯಾಗಿದೆಯಾ ಅಂತ ತಿಂದು ನೋಡಿ ಹೇಳಿ..."

"ಗಿರಿಜಮ್ಮ ತುಂಬಾ ಚೆನ್ನಾಗಿದೆ" ಎನ್ನುತ್ತಾ ರಾಶಿ ಚಕ್ಕುಲಿಯನ್ನು ತಿನ್ನತೊಡಗಿದಳು. ಅವಳ ಸೊಸೆ ಎಲ್ಲರಿಗೂ ಕಾಫಿಯನ್ನು ತಂದು ಕೊಟ್ಟಳು. ಮೂವರೂ ತಿಂಡಿ, ಕಾಫಿಯ ಕಡೆ ಗಮನವನ್ನು ಹರಿಸಿದರು.

* * *

26

ದೇವರ ಸಮಾರಾಧನೆಯ ಸಮಾರಂಭವೂ ಛತ್ರದಲ್ಲೇ ಇದ್ದುದರಿಂದ ಮನೆಯಲ್ಲಿ ಹೆಚ್ಚಿನ ಕಲಾಪ, ಕೆಲಸಗಳು ಇರಲಿಲ್ಲ. ಹಿಂದಿನ ದಿನವೇ ಮನೆಯ ಮುಂಬಾಗಿಲಿನಲ್ಲಿ ಚಪ್ಪರವನ್ನು ಹಾಕಿಸಿ, ತಳಿರು ತೋರಣಗಳಿಂದ ಅಲಂಕರಿಸಲಾಗಿತ್ತು. ಸೊಗಸಾಗಿ ರಂಗೋಲಿ ಚಿತ್ರವನ್ನು ಬಿಡಿಸಲಾಗಿತ್ತು. ಪುರೋಹಿತರು ಬರುವ ಹೊತ್ತಿಗೆ, ಎಲ್ಲರೂ ಸ್ನಾನ ಮುಗಿಸಿ, ಹೊಸಾ ರೇಶಿಮೆ ಸೀರೆಯನ್ನುಟ್ಟು, ಸಿದ್ಧರಾಗಿದ್ದರು. ಸಂಜಯ ಕಲಾಬತ್ತಿನ ಪಂಚೆ ಉಟ್ಟು ಶಲ್ಯವನ್ನು ಹೊದ್ದುಕೊಂಡಿದ್ದ.

ಗಿರಿಜಮ್ಮನ ಮಗ ಸೊಸೆ ಎಲ್ಲಾ ಸಿದ್ಧತೆಯನ್ನು ಮಾಡಿದ್ದರು. ಪುರೋಹಿತರು ಚಪ್ಪರಕ್ಕೆ ಪೂಜೆಯನ್ನು ಮಾಡಿದರು. ಗಿರಿಜಮ್ಮ ಎಲ್ಲರಿಗೂ ಸಿಹಿ ಸಜ್ಜಿಗೆಯನ್ನು ಬಿಸಿಬಿಸಿ ಇಡ್ಲಿ ಚಟ್ನಿಯನ್ನು ಕೊಟ್ಟರು.

ಛತ್ರಕ್ಕೆ ಹೊರಡುವ ಮೊದಲು, ಹೆಣ್ಣು ಮಕ್ಕಳು ತಂದೆಯ ಬಳಿ ನಿಂತು ಮಾತನ್ನಾಡಿದ್ದರು. ಕ್ಷೀರಾ ಅಪ್ಪನ ಕೈಗಳನ್ನು ಹಿಡಿದು ಕಣ್ಣಿಗೊತ್ತಿಕೊಂಡಳು. ಮದುಮಗಳ ಅಲಂಕಾರದಲ್ಲಿ ನಿಂತಿದ್ದ ಮಗಳನ್ನು ಹೊಗಳಲೂ ಆಗದ ಅಸಹಾಯಕ ಸ್ಥಿತಿಯಲ್ಲಿದ್ದ ಆತನ ಕಣ್ಣಂಚಿನಲ್ಲಿ ನೀರು ಜಿನುಗಿತ್ತು. ಕಾರ್ತೀಕ್ ಎಷ್ಟೋ ಸಾರಿ ಮನೆಗೆ ಬಂದಿದ್ದಾನೆ.

ಆದರೆ ಒಂದು ಸಲವೂ ಅವನನ್ನು ಅಪ್ಪನ ಬಳಿಗೆ ಕರೆ ತಂದು ಪರಿಚಯಿಸಲಿಲ್ಲ ಎಂದು ಪೇಚಾಡಿಕೊಂಡಳು. ಸಾಕ್ಷಿ, ಅಪ್ಪನ ಸ್ಥಿತಿಗೆ ಮರುಗಿದ್ದಳು.

"ಗಿರಿಜಮ್ಮನ ಸಹಾಯವೂ ನಮಗೆ ಬೇಕಾಗುತ್ತದೆ. ಅವರೂ ನಮ್ಮ ಜೊತೆಗೆ ಬರಲಿ. ಒಂದೆರಡು ದಿನಗಳ ಮಟ್ಟಿಗೆ ನಿಮ್ಮ ತಂದೆಯನ್ನು ಯಾವುದಾದರೂ ಹೆಲ್ತ್ ಕೇರ್ ಸೆಂಟರ್‌ಗೆ ಸೇರಿಸೋಣ" ಎಂದಿದ್ದ ಸಂಜಯ್.

"ಬೇಡ ಅಪ್ಪ ಮನೆಯಲ್ಲೇ ಇರಲಿ. ಗಿರಿಜಮ್ಮನೂ ಮನೆಯಲ್ಲೇ ಇರಲಿ. ಅವರ ಮಗ ಸೊಸೆ ಮದುವೆ ಮನೆಗೆ ಬರ್ತಾರೆ. ಅವರಿಬ್ಬರು ಸಾಕು ಎಂದು ಸಾಕ್ಷಿ ಹೇಳಿದಾಗ, ಸಂಜಯ ಮೂತಿ ಸೊಟ್ಟಗೆ ಮಾಡಿದ್ದ.

"ನಿನಗೆ ಅರ್ಥವಾಗುಲ್ಲ ಸಾಕ್ಷಿ. ಇವರುಗಳ ಮೇಲೆ ಮನೆಯನ್ನು ಬಿಟ್ಟು ಬರ್ತೀಯಾ?... ಏನಾದರೂ ಹೆಚ್ಚು ಕಡಿಮೆ ಆದರೆ?"

"ಏನೂ ಆಗುಲ್ಲ. ಆ ನಂಬಿಕೆ ನನಗಿದೆ. ನಮಗೇ ಇಲ್ಲದ ಆತಂಕ ನಿಮಗ್ಯಾಕೆ?" ಎಂದಿದ್ದಳು. ಸಂಜಯ ಸುಮ್ಮನಾಗಿದ್ದ.

ಈ ಸಮಯದಲ್ಲಿ ಸುಮ್ಮನೇ ವಾದ ವಿವಾದಗಳು ಬೇಡ ಅಂತಂದುಕೊಂಡ. ಗಿರಿಜಮ್ಮನ ಮೇಲೆ ಅಪಾರ ನಂಬಿಕೆ. ಏನಾದ್ರೂ ಮಾಡ್ಕೊಳ್ಳಲಿ ಎನಿಸಿತ್ತು. ಅಪ್ಪನ ಕೈ ಹಿಡಿದು ಅಮುಕಿದಳು. ಆತ ಪಿಳಿಪಿಳಿ ನೋಡಿದರು.

ಕ್ಷೀರಾ ತಾಯಿಯ ಭಾವಚಿತ್ರದ ಮುಂದೆ ನಿಂತು ಕೈ ಮುಗಿದು ಕಣ್ಣೀರು ಸುರಿಸಿದಳು. "ಅಮ್ಮಾ... ಈಗ ನಮ್ಮೆಲ್ಲರಿಗೂ ನಿನ್ನ ಅಗತ್ಯ ತುಂಬಾ ಇದೆ... ಅದರಲ್ಲೂ ರಾಶಿಗೆ, ಏನು ಮಾಡಬೇಕು ಅಂತ ನಮಗ್ಯಾರಿಗೂ ಗೊತ್ತಾಗ್ತಿಲ್ಲ. ನೀನೇ ದಾರಿಯನ್ನು ತೋರಬೇಕು" ಎಂದು ಮನದಲ್ಲೇ ಪ್ರಾರ್ಥಿಸಿದಳು. ಹೃದಯ ಭಾರವಾಗಿತ್ತು.

ಸಂಜಯ ಒಂದು ವ್ಯಾನನ್ನು ಗೊತ್ತು ಮಾಡಿದ್ದ. ಅದು ಬರುತ್ತಿದ್ದಂತೆಯೇ ಛತ್ರಕ್ಕೆ ಹೊರಡುವವರೆಲ್ಲಾ ಲಗೇಜುಗಳೊಂದಿಗೆ ವ್ಯಾನನ್ನೇರಿದರು. ವ್ಯಾನು ಛತ್ರದ ದಾರಿಯಲ್ಲಿ ಸಾಗಿತು.

ದೇವರ ಸಮಾರಾಧನೆಯ ಕಲಾಪಗಳು ನೆರವೇರಿದವು. ಹತ್ತಿರದ ಬಳಗದವರು ಛತ್ರಕ್ಕೇ ಸೀದಾ ಬಂದಿಳಿದರು. ಸಂಜಯ ಈ ಮೊದಲೇ ತನ್ನ ತಂದೆ ತಾಯಿಯರನ್ನು ಕರೆತಂದಿದ್ದ.

ಮಧ್ಯಾಹ್ನದ ಊಟ ಆಯಿತು. ಗಿರಿಜಮ್ಮನ ಮಗ, ಭಕ್ಷ್ಯವನ್ನು ಕೆಲವು ಅಡಿಗೆ ಪದಾರ್ಥಗಳನ್ನು ಮನೆಗೆ ಕೊಂಡೊಯ್ದು ಕೊಟ್ಟು ಬಂದಿದ್ದ. ಅವನು ಬಂದೊಡನೆ ಕ್ಷೀರಾ. ಅಪ್ಪನ ಬಗ್ಗೆ ವಿಚಾರಿಸಿದ್ದಳು. ಅವರು ಎಂದಿನಂತೆ ಮಲಗಿದ್ದರು ಎಂದು ತಿಳಿಸಿದ. ಮದುವೆಯಂಥ ಮಂಗಳ ಕಾರ್ಯ ನೆರವೇರುತ್ತಿದೆ. ಅಮ್ಮ ಇಲ್ಲ, ಅಪ್ಪ ಬರುವಂತಿಲ್ಲ... ಅವಳ ದುಃಖ ಹೆಚ್ಚಾಗಿತ್ತು. ಪೆಚ್ಚಾಗಿ ಒಂದು ಕಡೆ ಕುಳಿತಳು.

"ಯಾಕಮ್ಮಾ ಕ್ಷೀರಾ ಹೀಗೆ ಕೂತಿದೀಯ. ಒಂದು ಗಳಿಗೆ ರೆಸ್ಟ್ ತಗೋ. ದಿಬ್ಬಣ ಬರುವ ಹೊತ್ತಿಗೆ ಲವಲವಿಕೆಯಿಂದಿರಬೇಕು" ಅವಳ ಚಿಕ್ಕಮ್ಮ ಹೇಳಿದಾಗ ಕ್ಷೀರಾ ಸುಮ್ಮನೆ ನಕ್ಕು, ರೂಮಿನಲ್ಲಿದ್ದ ಮಂಚದ ಮೇಲೆ ಉರುಳಿಕೊಂಡಳು.

ಸಾಕ್ಷಿಯನ್ನು ಸಂಜಯ ತನ್ನ ಮನೆಗೆ ಕರೆದುಕೊಂಡು ಹೋಗಿದ್ದ. ರಾಶಿ, ಸ್ನೇಹಿತೆಯರೊಡನೆ ಮಾತನಾಡುತ್ತಾ ಕುಳಿತಿದ್ದಳು. ಕಣ್ಣು ಮುಚ್ಚಿ ಮಲಗಿದರೂ ಕ್ಷೀರಾಳಿಗೆ ನಿದ್ದೆ ಹತ್ತಲಿಲ್ಲ. ನೂರೆಂಟು ಆಲೋಚನೆಗಳು 'ತಾನು ಮದುವೆಗೆ ಒಪ್ಪಲೇ ಬಾರದಾಗಿತ್ತು' ಅಂತ ಒಮ್ಮೆ ಅನಿಸಿದರೆ, ಕಾರ್ತೀಕನ ನೆನಪಾದೊಡನೆ ಮನಸ್ಸು ಹರ್ಷಗೊಳ್ಳುತ್ತಿತ್ತು. ಕಾರ್ತೀಕನಂಥ ಪತಿ ತನಗೆ ಸಿಗುತ್ತಿರುವುದು ತನ್ನ ಅದೃಷ್ಟ ಎಂದುಕೊಂಡಳು.

ನಾಳೆ ನಾನು ಕಾರ್ತೀಕನ ಪತ್ನಿಯಾಗುತ್ತೇನೆ. ಆನಂತರದ ಘಳಿಗೆಗಳು ಹೇಗಿರುತ್ತದೋ... ಮೈ ಪುಲಕಗೊಳ್ಳುತ್ತಿತ್ತು. ಅದೇ ಗುಂಗಿನಲ್ಲಿದ್ದವಳನ್ನು ಅಡಿಗೆಯವರು ಬಂದು ಎಚ್ಚರಿಸಿ, ಕಾಫಿಯನ್ನು ಕೊಟ್ಟರು. ಕಾಫಿಯನ್ನು ಕುಡಿದು ಅವಳು ಸಾಕ್ಷಿಗೆ ಫೋನು ಮಾಡಿದಳು. ರಿಸೀವರ್‌ನ ಎತ್ತಿದವರು ಸಾಕ್ಷಿಯ ಅತ್ತೆ.

"ಅವಳು ಮಲಗಿದಾಳಮ್ಮ. ಏನು ವಿಷಯ? ಎಬ್ಬಿಸಲೇ ಬೇಕಾ?" ಅಂತ ಕೇಳಿದ್ದರು. ಇವಳಿಗೆ ರೇಗಿತ್ತು. ರಾಶಿಯನ್ನು ಕರೆಯುವಂತೆ ಗಿರಿಜಮ್ಮನ ಸೊಸೆಗೆ ಹೇಳಿದಳು. ರಾಶಿ ಎಲ್ಲೋ ತಿರುಗಾಡಲು ಹೊರಟು ಹೋಗಿದ್ದಾಳೆಂದು ತಿಳಿಯಿತು.

ನನ್ನ ಸಹಾಯಕ್ಕೆ ಅಕ್ಕನೂ ಇಲ್ಲ; ತಂಗಿಯೂ ಇಲ್ಲ ಎಂದುಕೊಂಡು ಕಾರ್ತೀಕ್‌ನಿಗೆ ಫೋನು ಮಾಡಿದಳು.

"ಏನು ವಿಷಯ ಕ್ಷೀರಾ? ಎನಿ ಪ್ರಾಬ್ಲಂ? ಇನ್ನು ಅರ್ಧ ಮುಕ್ಕಾಲು ಗಂಟೆಯೊಳಗೆ ನಾವು ಅಲ್ಲಿ ಇರ್ತೀವಿ. ನೀನು ರೆಡಿಯಾಗಿದೀಯ ತಾನೇ?.. ಬ್ಯೂಟಿಪಾರ್ಲರ್‌ನಿಂದ ಬ್ಯೂಟಿಷಿಯನ್‌ನ ಕಳಿಸ್ಲಾ?" ಕೇಳಿದ.

"ಏನೂ ಬೇಡ. ನನಗೆ ಅದೆಲ್ಲಾ ಇಷ್ಟವಿಲ್ಲ. ಇಲ್ಲಿ ನಾನೊಬ್ಬಳೇ ಆಗಿ ಬಿಟ್ಟಿದೀನಿ ಕಾರ್ತೀಕ್. ಸಾಕ್ಷಿ, ರಾಶಿ ಇಬ್ಬರೂ ಅವರವರ ಪಾಡಿಗೆ ಅವರು ಹೊರಟು ಹೋಗಿದಾರೆ" ಕಾರ್ತೀಕ ನಕ್ಕ.

"ಒಳ್ಳೇದೇ ಆಯ್ತು... ಅಕ್ಕ, ತಂಗಿಯರು ನಿನಗೆ ಈಗ್ಲೂ ಬೇಕಾ?" ರೇಗಿಸಿದ್ದ.

"ಸರಿ ಬಿಡಿ. ನಿಮಗೆ ನನ್ನ ಪ್ರಾಬ್ಲಂ ಅರ್ಥವಾಗುಲ್ಲ" ಎಂದು ಹೇಳಿ ಮಾತನ್ನು ಕಟ್ ಮಾಡಿದಳು. ಅಷ್ಟು ಹೊತ್ತಿಗೆ ಸಾಕ್ಷಿ, ಸಂಜಯ್ ಹಿಂತಿರುಗಿದರು. "ಸಧ್ಯ ಬಂದೆಯಾ? ಮಲಗಿಬಿಟ್ಟರೆ ನಿನ್ನನ್ನ ಎಬ್ಬಿಸೋದೇ ಕಷ್ಟ. ಕುಂಭಕರ್ಣನ ಥರ ಮಲಗಿ ಬಿಡ್ತೀಯಾ?"

"ನಾನೇನು ಅಷ್ಟು ಜವಾಬ್ದಾರಿ ಇಲ್ಲದವಳಲ್ಲ. ನನಗೂ ರೆಸ್ಟ್ ಬೇಕಾಗಿತ್ತು. ಮಲಗಿದ್ದೆ. ಈಗ ಬಂದ್ನಲ್ಲ. ರಾಶಿ ಎಲ್ಲಿ ಅವಳನ್ನು ಕರಿ. ಕಾರ್ತೀಕನ ಮನೆಯವರು ಬರುವ ಹೊತ್ತಿಗೆ ನಾವು ರೆಡಿಯಾಗಿರಬೇಕು" ಸಾಕ್ಷಿ ಅವಸರಿಸಿದಳು.

* * *

27

ಗಂಡಿನವರು ಕುಳಿತಿದ್ದ ವ್ಯಾನು ಛತ್ರದ ಕಾಂಪೌಂಡನ್ನು ತಲುಪುತ್ತಿದ್ದಂತೆಯೇ ವಾಲಗದವರು ಸಜ್ಜಾಗಿ ವಾಲಗವನ್ನು ಊದುತ್ತಾ ದಿಬ್ಬಣದವರನ್ನು ಎದುರುಗೊಳ್ಳಲು ಹೊರಕ್ಕೆ ಬಂದರು. ಮುತ್ತೈದೆಯರು ಆರತಿಯ ತಟ್ಟೆಯನ್ನು ಸಿದ್ಧಗೊಳಿಸಿಕೊಂಡು ನಿಂತರು.

"ಕ್ಷೀರಾ, ನೀನು ಇಲ್ಲೇ ಇರು" ಎಂದು ಹೇಳಿ ಸಾಕ್ಷಿ ತಾನೂ ಹೊರಟು ಬಿಟ್ಟಳು. ಗಂಡಿನವರನ್ನು ಹಾರ್ದಿಕವಾಗಿ ಸ್ವಾಗತಿಸಿ, ಒಳಕ್ಕೆ ಕರೆತಂದು ಕುಳ್ಳಿರಿಸಿ ಲೋಕಾರೂಢಿಯ ಮಾತುಗಳನ್ನಾಡಿ ಉಪಚರಿಸಿದರು. ಮೊದಲಿಗೆ ಕಾಫಿ ತಿಂಡಿಯನ್ನು ಎಲ್ಲರಿಗೂ ಕೊಟ್ಟಿದ್ದಾಗಿತ್ತು.

ಕಾರ್ತೀಕ, ಯಾಕೋ ಆತಂಕಗೊಂಡಂತಿತ್ತು. ಅವನು ಅವನ ತಾಯಿಯೊಡನೆ ಏನೋ ಚರ್ಚೆ ಮಾಡುತ್ತಿರುವುದನ್ನು ಸಾಕ್ಷಿ ಗಮನಿಸಿದ್ದಳು. ಸಾಕ್ಷಿಯನ್ನು ಕಂಡೊಡನೆ ಕಾರ್ತೀಕ ಹತ್ತಿರ ಬಂದು ಕೆಳದನಿಯಲ್ಲಿ ಕೇಳಿದ್ದ.

"ನಾನು ಸ್ವಲ್ಪ ಕ್ಷೀರಾಳ ಹತ್ರ ಮಾತಾಡ್ಬೇಕಾಗಿತ್ತು, ಕರೀತೀರಾ?" ಅವನ ಗಂಭೀರವಾದ ಮುಖವನ್ನು ಕಂಡು ಸಾಕ್ಷಿ ಇದು ತಮಾಷೆಗೆ ಸಮಯವಲ್ಲ ಎಂದುಕೊಂಡಳು.

"ಅವಳು ಅಲ್ಲಿ ರೂಂನಲ್ಲಿದಾಳೆ. ಅಲ್ಲಿಗೇ ಹೋಗಿ ಮಾತನಾಡಿ" ಎಂದು ಕಳಿಸಿದ್ದಳು. ಕೆಲವರ ಕಣ್ಣು ಕಾರ್ತೀಕನ ಮೇಲೆ ಬಿದ್ದಿತ್ತು. ಅವಳ ಚಿಕ್ಕಮ್ಮ ಕೇಳಿಯೇ ಬಿಟ್ಟಳು.

"ಈಗಲೂ, ಈ ಗಳಿಗೇಲಿ ಏನು ಮಾತು ಇರುತ್ತೆ? ಈಗಿನ ಕಾಲದೋರ ವರ್ತನೇನೇ ಅರ್ಥವಾಗುಲ್ಲ. ನೀನು ಹೂಂ ಅಂದು ಬಿಟ್ಟೆಯಲ್ಲ"

"ಏನು ಮಾಡ್ಲೀ ಚಿಕ್ಕಮ್ಮ, ಅವನು ಮದುಮಗ... ಅವನೇ ಕೋಪಿಸ್ಕೊಂಡು ಬಿಟ್ರೇ..."

"ಅವನ ಅಮ್ಮಂಗಾದ್ರೂ ತಿಳೀಬೇಡ್ವಾ?..." ಅಷ್ಟರಲ್ಲಿ ಕಾರ್ತೀಕ ಹೊರಕ್ಕೆ ಬಂದಿದ್ದ. ಇವರಿಬ್ಬರ ಮಾತುಗಳು ನಿಂತವು. ಸಾಕ್ಷಿ ಒಳಕ್ಕೆ ಹೋದಳು. ಕ್ಷೀರಾ ಆಗ ಕುಳಿತಂತೆಯೇ ಕುಳಿತಿದ್ದಳು.

"ಕಾರ್ತೀಕ್ ಏನು ಹೇಳ್ದ?" ಕೇಳಲೋ ಬೇಡವೋ ಅಂತ ಕೇಳಿದಳು.

"ಮೃದುಲಾ ಏನಾದ್ರೂ ಫೋನು ಮಾಡಿದ್ರಾ? ಅಂತ ಕೇಳ್ದ ಅಷ್ಟೇ..."

"ಹೌದು... ಮೇಡಂ ಯಾಕೋ ಬಂದೇ ಇಲ್ಲ. ರಾಶೀನ ಕೇಳ್ಬೇಕಾಗಿತ್ತು. ಇವರುಗಳ ಜತೇಲಿ ಯಾಕೆ ಬಂದಿಲ್ಲವಂತೆ?"

ಕಾಲೇಜಿಗೆ ಹೋದೋರು, ಇವರುಗಳು ಹೊರಡುವ ವೇಳೆ ಆದರೂ ಬರಲೇ ಇಲ್ಲವಂತೆ. ಫೋನು ಮಾಡಿದಾಗ, ನೀವುಗಳು ಹೋಗಿರಿ, ನಾನು ಕಾಲೇಜ್ನಿಂದ ಸೀದಾ ಛತ್ರಕ್ಕೆ ಬರ್ತೀನಿ ಅಂತ ಅಂದ್ರಂತೆ. ಇಲ್ಲಿಗೂ ಬಂದೇ ಇಲ್ಲ ಅಂತ ಹೇಳಿದ್ರು"

"ಅವರದ್ದೇನು ಕತೆಯೋ ನಮಗ್ಯಾಕೆ ಬಿಡು. ಬರುವ ಮನಸ್ಸಿಲ್ಲ ಅಂತ ಕಾಣುತ್ತೆ... ಏನೋ ಮಾತುಕತೆ ನಡೆದಿರಬಹುದು. ಕಾರ್ತೀಕ ಅವರಮ್ಮನ ಹತ್ರ ಬಿಸಿ ಬಿಸಿಯಾಗಿ ಮಾತಾಡ್ತಿದ್ದ ಹಾಗಿತ್ತು"

"ಆದ್ರೂ ಅವರೇ ಬಂದಿಲ್ಲ ಅಂತಂದ್ರೆ, ಕಾರ್ತೀಕ್‌ಗೆ ಟೆನ್ಷನ್ ಆಗುಲ್ವಾ?"

"ಆ ಹೆಂಗಸು ಹಾಗೇನೇ... ಏನೋ ಆಡಿ, ಎಲ್ಲರ ಮೂಡ್ ಕೆಡಿಸಿರುವ ಸಾಧ್ಯತೆ ಇರುತ್ತೆ. ಅವರು ಬರಲಿಲ್ಲ ಅಂತ ಕಾಯ್ತಾ ಕೂತ್ರೆ ವರಪೂಜೆಗೆ ನಿಧಾನ ಆಗುತ್ತೆ. ನಾನು ಕಾರ್ತೀಕ್ ಹತ್ರ ಮಾತಾಡ್ತೀನಿ" ಸಾಕ್ಷಿ ಕಾರ್ತೀಕನನ್ನು ಕಂಡು ಬರಲು ನಡೆದಳು. ರೂಮಿನ ಬಾಗಿಲ ಬಳಿ ತಾಯಿ ಮಗನ ಮಾತುಗಳು ಕೇಳಿಬಂದವು.

"ನೀನೆಲ್ಲೋ ಬೇಸರವಾಗುವ ಹಾಗೆ ಮಾತನಾಡಿರಬೇಕು, ಅದಕ್ಕೆ ಬಂದಿಲ್ಲ ಎಂದು ಹಂಗಿಸಿ ನುಡಿದು, ನಾನೇ ಹೋಗಿ ಕರ್‍ಕೊಂಡು ಬರ್ತೀನಿ" ಎಂದಿದ್ದ. ಹೊರ ಹೊರಟವನನ್ನು ತಾಯಿ ತಡೆದಳು.

"ನೀನು ಮದುಮಗ. ನೀನು ಛತ್ರದಿಂದ ಹೊರಕ್ಕೆ ಹೋಗುವಂತಿಲ್ಲ. ವರಪೂಜೆಯ ಸಮಯವಾಗ್ತಿದೆ. ಅಷ್ಟರೊಳಗೆ ಬಂದರೂ ಬರಬಹುದು. ಇಷ್ಟರ ಮೇಲೆ ಬರದಿದ್ರೆ ಏನು ಮಾಡೋಕೆ ಆಗುತ್ತೆ? ಏನು ಅಸಮಾಧಾನವೋ? ಏನೋ ನಾಟಕ ಆಡ್ತಿದಾಳೆ"

"ಹಾಗೆಲ್ಲಾ ಏನಿಲ್ಲ. ನಾಟಕ ಆಡೋಕೆ ಏನಿದ? ಅವರನ್ನು ಬಿಟ್ಟು ನಾನು ವರಪೂಜೆಗೆ ಕೂತ್ಕೊಳ್ಳುಲ್ಲ"

"ಚೆನ್ನಾಗಿದೆ ನಿನ್ನ ಮಾತು. ಅವಳಿಗೆ ಜವಾಬ್ದಾರಿ ಬೇಡವಾ? ಅವಳೊಬ್ಬಳಿಗಾಗಿ ಇಲ್ಲಿ ನೆರೆದಿರುವವರನ್ನು ಕಾಯಿಸುವುದು ಸರಿ ಅಲ್ಲ. ನೀನು ಸಿದ್ಧನಾಗು"

"ಕಾರು ಕೆಟ್ಟಿರಬಹುದೋ... ಇನ್ನೇನಾದರೂ ಆಗಿರಬಹುದೋ ಅಂತ ನಂಗೆ ಆತಂಕ ಆಗಿದೆ ಕಣಮ್ಮಾ"

"ಹಾಗೇನಾದ್ರೂ ಇದ್ದಿದ್ರೆ, ಅವಳಿಂದಾಗ್ಲೀ ಬೇರೆ ಯಾರಿಂದಲಾದ್ರೂ ಫೋನು ಬರದೇ ಇರ್ತಿತ್ತಾ... ಇದು ಅವಳು ಬೇಕೂಂತ ಆಡ್ತೀರೋ ನಾಟಕ... ಅವಳು ತಡವಾಗಿ ಬರಬಹುದು ಅಂತ ಅವಳಿಗಾಗಿ ಕಾಯ್ತಾ ಕೂತ್ಕೊಳ್ಳೋದ್ರಲ್ಲಿ ಅರ್ಥವೇ ಇಲ್ಲ. ಅವರೆಲ್ಲಾ ಏನಂದುಕೊಳ್ತಾರೆ? ನಿನಗೆ ಈಗಲೂ ಅವಳೇ ಹೆಚ್ಚಾ? ನನ್ನ ಮಾತಿಗೆ ಬೆಲೆ ಬೇಡ್ವಾ?" ತಾಯಿ ಗೊಗ್ಗರು ಧ್ವನಿಯಲ್ಲಿ ನುಡಿದಾಗ, ಕಾರ್ತೀಕ ಹೊರಬಂದ. ಬಾಗಿಲ ಬಳಿ ನಿಂತಿದ್ದ ಸಾಕ್ಷಿಯನ್ನು ಕಂಡು ಗಲಿಬಿಲಿಗೊಂಡ.

"ರಾಶಿಗೇನಾದ್ರೂ ಮೇಡಂ ಫೋನು ಮಾಡಿರಬಹುದೇನೋ ಕೇಳಿ..." ಅವಳು ನುಡಿದಾಗ ಅವನು ನಕಾರಾತ್ಮಕವಾಗಿ ತಲೆ ಆಡಿಸಿದ.

"ಬೇಡ ಸಾಕ್ಷಿಯವರೇ... ರಾಶೀನ ಕೇಳಿದ್ರೆ ಸುಮ್ಮನೇ ಎಲ್ರಿಗೂ ತಿಳಿದು ಅದೇ ಒಂದು ಮಾತಾಗುತ್ತೆ. ನಾನು ಬೇಗ ರೆಡಿಯಾಗ್ತೀನಿ" ಎಂದ.

ವರಪೂಜೆಯ ಕಲಾಪ ಪ್ರಾರಂಭವಾಯಿತು. ಆತಂಕದ ನಡುವೆಯೂ ಕಾರ್ತೀಕ ಹಸೆಮಣೆಯ ಮೇಲೆ ಕುಳಿತ. ಫ್ಲಾಶ್‌ಗಳು ಬೆಳಕನ್ನು ಚೆಲ್ಲಿದವು. ಕ್ಷೀರಾಳ ಚಿಕ್ಕಪ್ಪ,

ಚಿಕ್ಕಮ್ಮ ವರಪೂಜೆಯನ್ನು ಮಾಡಿದರು. ಕಾರ್ತೀಕನ ತಾಯಿ ಮದುಮಗಳಿಗೆ ಸೀರೆ, ಖಣವನ್ನು ಕೊಟ್ಟು, ಕಡಲೆ ಬೆಲ್ಲದೊಂದಿಗೆ ಮಡಿಲನ್ನು ತುಂಬಿದಳು. ಮದು ಮಕ್ಕಳಿಗೆ ಆರತಿಯನ್ನು ಎತ್ತಿ ಹರಿಸಿದರು. ವರಪೂಜೆಯ ಕಲಾಪ ಮುಗಿದು ಊಟದ ಸಮಯವಾಗಿತ್ತು. ಆದರೂ ಮೃದುಲಾಳ ಪತ್ತೆ ಇಲ್ಲ. ಯಾವ ಫೋನು ಸಹ ಬಂದಿರಲಿಲ್ಲ. ಕಾರ್ತೀಕನಿಗೆ ಬೇಸರ, ಕೋಪ, ಆತಂಕ ಎಲ್ಲವೂ ಒಟ್ಟಿಗೇ ಮುತ್ತಿದ್ದವು. ಅಲ್ಲೇ ಕಂಡ ರಾಶಿಯನ್ನು ಹತ್ತಿರಕ್ಕೆ ಕರೆದ.

"ರಾಶೀ, ನಿಮ್ಮ ಮೇಡಂದು ಫೋನೇನಾದ್ರೂ ಬಂದಿತ್ತಾ? ಯಾಕೋ ಇಷ್ಟು ಹೊತ್ತಾದ್ರೂ ಬಂದೇ ಇಲ್ಲ..."

"ಹೌದೂ ಅವರ‍್ಯಾಕೆ ಬಂದಿಲ್ಲ? ನಂಗೇನು ಯಾವ ಫೋನೂ ಬಂದಿಲ್ಲ"

"ಸರಿ, ಹೋಗ್ಲಿ ಬಿಡಿ... ಅವರು ಬಂದಿಲ್ಲ ಅಂತ ಯಾರಿಗೂ ಹೇಳ್ಬೇಡಿ"

"ಕ್ಷೀರಂಗೆ ಏನಾದ್ರೂ ಗೊತ್ತಿರಬಹುದು. ಅವಳು ಯಾಕೋ ಮಂಕಾಗಿದ್ಲು. ಅಳ್ತಿದ್ದ ಹಾಗಿತ್ತು"

"ಹೌದಾ? ಅಳ್ತಿದ್ಲಾ?.. ಅವಳನ್ನು ಕರೀರಿ ಕೇಳ್ತೀನಿ ಪ್ಲೀಸ್..." ರಾಶಿ ರೂಮಿಗೆ ಓಡಿದಳು. ಕ್ಷೀರಾಳನ್ನು ಬಾಗಿಲ ಬಳಿ ಕಾಣುತ್ತಿದ್ದಂತೆಯೇ ಕಾರ್ತೀಕ ಧಾವಿಸಿದ.

"ಕ್ಷೀರಾ... ಯಾಕೆ ಹೀಗೆ ಮಂಕಾಗಿದೀಯ... ಎನಿಪ್ರಾಬ್ಲಂ... ಮೃದುಲಾ ಏನಾದ್ರೂ ಫೋನು ಮಾಡಿದ್ಲಾ? ಏನಂದ್ಲು?"

"ಇಲ್ಲ ಅವರಿಂದ ಫೋನು ಬಂದಿಲ್ಲ... ಯಾಕೋ ಆತಂಕ ಆಗ್ತಿದೆ"

"ಹೋಗ್ಲಿ ಬಿಡು, ನೀನು ಹೀಗೆ ಕೆಟ್ಟ ಮುಖ ಹಾಕ್ಕೊಂಡ್ರೆ, ಎಲ್ರೂ ಏನಾದ್ರೂ ಕೇಳ್ತಾರೆ... ಮೃದುಲಾ ಮದುವೆಗೆ ಬರದಿದ್ರೆ ನಿನ್ನ ತಪ್ಪೇನು?"

"ಅದಲ್ಲ, ನಂಗ್ಯಾಕೋ ಅಪ್ಪನ ನೆನಪು ಆಗ್ತಿದೆ. ನಾವು ಇಲ್ಲಿ ಸಂಭ್ರಮ ಪಡ್ತಿದೀವಿ. ಅವರು ಅಲ್ಲಿ ಸುಮ್ಮನೇ ತಾರಸಿಯನ್ನು ದಿಟ್ಟಿಸುತ್ತಾ ಮಲಗಿರ್ತಾರೆ. ಇಲ್ಲಿ ನಾವು ಸಿಹಿ ಊಟ ಮಾಡುತ್ತೇವೆ. ಅಲ್ಲಿ ಅವರು ಊಟ ಮಾಡಿದ್ರೋ ಇಲ್ಲವೋ?" ಅವಳ ಗಂಟಲು ಕಟ್ಟಿತ್ತು. ಕಣ್ಣುಗಳನ್ನು ಒರೆಸಿಕೊಂಡಳು.

"ಶ್... ಅಳ್ಬೇಡ, ನಾನು ಏನೋ ಅಂದೆ ಅಂತ ಎಲ್ರೂ ಅಂದ್ಕೋತಾರೆ... ಮನೆಗೆ ಫೋನು ಮಾಡಿ ಕೇಳಿದ್ಯಾ?"

"ಇಲ್ಲ, ಫೋನು ಮಾಡ್ಲಿಲ್ಲ..."

"ಸರಿ ಬಿಡು, ನಿಮ್ಮ ತಂದೇನ ನೋಡ್ಕೊಂಡು ಬರ್ಬೇಕು ಅಂತ ನಿನಗನ್ನಿಸಿದ್ರೆ ಹೇಳು, ಮೊದಲನೇ ಪಂಕ್ತಿ ಊಟ ಮುಗಿಯೋದರೊಳಗೆ ಹೋಗಿ ಬಂದು ಬಿಡೋಣ. ನಾನು ಕರ್ಕೊಂಡು ಹೋಗ್ತೀನಿ, ಬರ್ತೀಯಾ?" ಕ್ಷೀರಾ ಹೆದರಿದಳು.

"ನಾವಿಬ್ಬರೂ ಛತ್ರದಿಂದ ಹೊರಕ್ಕೆ ಹೋಗುವಂತಿಲ್ಲ. ಯಾರಿಗಾದ್ರೂ ಗೊತ್ತಾದರೆ ಏನಂದುಕೊಳ್ತಾರೆ? ನಿಮ್ಮ ತಾಯಿಗೆ ಗೊತ್ತಾದ್ರೆ ಸುಮ್ಮನಿರ್ತಾರಾ?"

"ಹೊರಕ್ಕೆ ಹೋಗಲೇಬಾರದು ಅಂತ ಯಾವ ರೂಲ್ಸೂ ಇಲ್ಲ. ಅಮ್ಮಂಗೆ ನಾನೇ ಹೇಳಿ ಬರ್ತೀನಿ" ವಿಶ್ವಾಸವನ್ನು ಪ್ರಕಟಿಸಿ ಅವಳ ಕೈಗಳನ್ನು ಅದುಮಿದ. ಬೇಕಾದ್ರೆ ಒಂದಿಷ್ಟು ತಿಂಡಿಗಳನ್ನು ಪ್ಯಾಕ್ ಮಾಡಿಸ್ಕೋ. ಬೇಗ ಹೋಗಿ ಬೇಗ ವಾಪಸ್ಸು ಬಂದು ಬಿಡೋಣ" ಕ್ಷೀರಾ ಅತ್ತಿತ್ತ ನೋಡಿ, ನಯವಾಗಿ ಕೈಗಳನ್ನು ಬಿಡಿಸಿಕೊಂಡು ಹಿಂದೆ ಸರಿದಳು.

"ನಂಗೆ ಭಯ ಆಗುತ್ತೆ ಕಾರ್ತೀಕ್" ಎಂದಳು.

"ಯಾಕೆ? ನನ್ನ ಮೇಲೆ ನಂಬಿಕೆ ಇಲ್ವಾ ಕ್ಷೀರ? ನಾನು ಸೇಫ್ ಆಗಿ ವಾಪಸ್ಸು ಕರ್ಕೊಂಡು ಬರ್ತೀನಿ" ಎಂದು ಹೇಳಿ, ತಾಯಿ ಇದ್ದ ಕಡೆಗೆ ಹೊರಟು ಹೋದ. ಅವನು ತಾಯಿಗೆ ಏನು ಹೇಳಿದನೋ, ಅವನು ಬರುವಷ್ಟರಲ್ಲಿ ಕ್ಷೀರಾ ಒಂದಿಷ್ಟು ಸಿಹಿಯ, ಖಾರದ ಭಕ್ಷ್ಯಗಳನ್ನು ಕವರುಗಳಿಗೆ ತುಂಬಿಸಿಕೊಂಡು ಸಿದ್ಧಳಾಗಿದ್ದಳು. ಮದುಮಕ್ಕಳಿಬ್ಬರೂ ಛತ್ರದಿಂದ ಹೊರಬಂದು ಕಾರನ್ನೇರಿದರು.

ಬಾಗಿಲನ್ನು ತೆರೆದ ಗಿರಿಜಮ್ಮ ಕ್ಷೀರಳನ್ನು ಕಂಡು ಅಚ್ಚರಿಗೊಂಡಳು. ಕ್ಷೀರಾ ಒಳಬಂದಳು "ಅಪ್ಪ ಮಲಗಿದಾರಾ? ಅವರದ್ದು ಊಟ ಆಯ್ತಾ?" ಅಂತ ಕೇಳಿದಳು.

"ಹೂಂ, ಆಗಲೇ ಆಯ್ತು. ಬಿಸಿ ಬಿಸಿಯಾಗಿ ಊಟ ಮಾಡಿ ಮಲಗಿದಾರೆ. ಮೇಡಂ ಬಂದಿದಾರೆ. ಅವರ ರೂಮ್ನಲ್ಲೇ ಇದಾರೆ" ಕ್ಷೀರಾ ಹುಬ್ಬೇರಿಸಿದಳು.

"ಯಾವ ಮೇಡಂ...? ಸಿಸ್ಟರ್ರು ಎಲ್ಲಿ ಹೋದ್ರು?"

"ಸಿಸ್ಟರ್ರು ಇದಾರೆ. ಮೇಡಂ ರಾಯರ ಹತ್ತಿರ ಮಾತನ್ನಾಡುತ್ತಿದ್ರು. ಅವರೇ ಅವರಿಗೆ ಊಟವನ್ನು ಮಾಡಿಸಿದ್ದು" ಅಷ್ಟರಲ್ಲಿ ಕಾರ್ತೀಕನೂ ಒಳಕ್ಕೆ ಬಂದಿದ್ದ. ಇಬ್ಬರೂ ಕೌತುಕದಿಂದ ರೂಮಿನ ಬಾಗಿಲ ಬಳಿ ನಿಂತು ಇಣುಕಿ ನೋಡಿದರು. ಅವರಿಬ್ಬರಿಗೆ ಬೆನ್ನು ಮಾಡಿ ಕುಳಿತಿದ್ದ ಮೇಡಂನ ಕೈಗಳು ಅಪ್ಪನ ಕೈಗಳ ಮೇಲಿದ್ದವು.

"ಯಾರದು ಕಾರ್ತೀಕ್?" ಕ್ಷೀರಾ ಭಯದಿಂದ ಧ್ವನಿ ತಗ್ಗಿಸಿ ಕೇಳಿದಳು.

"ನೋಡೋಣ ತಡಿ" ಇಬ್ಬರೂ ಒಳ ಬಂದರು. ಹೆಜ್ಜೆಯ ಸಪ್ಪಳವನ್ನು ಕೇಳಿ ಮೇಡಂ ಎದ್ದು ನಿಂತು ಇತ್ತ ತಿರುಗಿದಳು. ಮೇಡಂ ಮೃದುಲಾ !

"ಮೃದುಲಾ !" ಕಾರ್ತೀಕ್ ಉದ್ಗಾರವೆತ್ತಿದ. "ನೀವು ಇಲ್ಲಿ?" ಅಚ್ಚರಿ ಹಾಗೂ ಕೋಪದಿಂದ ಪ್ರಶ್ನಿಸಿದ. ಕ್ಷೀರಾ ತನ್ನ ಕಣ್ಣುಗಳನ್ನು ತಾನೇ ನಂಬದವಳಂತೆ ದಿಟ್ಟಿಸಿ ನೋಡುತ್ತಿದ್ದಳು. ಮೃದುಲಾ ಇವರಿಬ್ಬರ ಬಳಿಗೆ ಬಂದಳು.

"ಶ್ ! ಮೆಲ್ಲಗೆ. ಈಗ್ತಾನೆ ನಿದ್ದೆ ಹತ್ತಿದೆ. ಹೊರಗೆ ಹೋಗಿ ಮಾತನಾಡೋಣ" ಎನ್ನುತ್ತಾ ಅವರಿಬ್ಬರನ್ನು ದಾಟಿ ಹೊರಬಂದಳು. ಅವರಿಬ್ಬರೂ ಹೊರಕ್ಕೆ ಬಂದರು.

"ನೀವು ಛತ್ರಕ್ಕೆ ಬರದೇ ಇಲ್ಲಿಗೆ ಯಾಕೆ ಬಂದಿದೀರಿ? ಏನಾಗಿದೆ ಇವರಿಗೆ?"

"ಏನೂ ಇಲ್ಲ. ತುಂಬಾ ಚಡಪಡಿಕೆ ಇತ್ತು. ಇವರ ಬಳಿ ಕುಳಿತು, ನಾಲ್ಕು ಸಮಾಧಾನದ ಮಾತುಗಳನ್ನಾಡಿದೆ. ಈಗ್ತಾನೆ ಮಲಗಿದರು ಅಷ್ಟೇ..."

"ಅಷ್ಟೇ ಅಲ್ಲ, ಇನ್ನು ಏನೋ ಇದೆ. ನೀವು ಮುಚ್ಚಿಡ್ತಾ ಇದೀರಿ..."

"ನಮ್ಮಪ್ಪ ಹುಶಾರಾಗಿದಾರಾ ಮೇಡಂ? ಡಾಕ್ಟರಿಗೆ ಫೋನು ಮಾಡೋಣ್ವಾ"

"ಏನೂ ಬೇಡ ಕ್ಷೀರಾ. ಹೀ ಈಸ್ ಆಲ್‌ರೈಟ್. ಅದ್ಸರಿ ಈ ಹೊತ್ನಲ್ಲಿ ನೀವಿಬ್ರೂ ಇಲ್ಲಿಗ್ಯಾಕೆ ಬಂದಿದೀರಿ? ನಿಮ್ಮಮ್ಮಂಗೆ ಗೊತ್ತು ತಾನೆ?"

"ಹೂಂ, ಅಮ್ಮಂಗೆ ಹೇಳ್ಬಿಟ್ಟೆ ಬಂದಿದೀನಿ. ನಿಮಗೋಸ್ಕರ ಸಾಯಂಕಾಲದಿಂದ ನಾವುಗಳು ಕಾಯ್ತಾನೇ ಇದೀವಿ. ಛತ್ರಕ್ಕೆ ಬರಲೂ ಇಲ್ಲ, ಒಂದು ಫೋನು ಕೂಡಾ ಮಾಡ್ಲಿಲ್ಲ ಯಾಕೆ? ನಾವು ಆತಂಕದಿಂದ ಏನಾಯ್ತೋ ಅಂತ ಚಿಂತಿಸುತ್ತಾ ಇದ್ದರೆ, ಇಲ್ಲಿ ನೀವು ಹಾಯಾಗಿ ಕುಳಿತಿದೀರಿ! ನಾವು ಏನಂದುಕೊಳ್ಬೇಕು?" ಮೃದುಲಾ ಉತ್ತರಿಸಲಿಲ್ಲ. ಅವನೇ ಮತ್ತೆ ನುಡಿದ.

"ಕ್ಷೀರಾ ಅಪ್ಪನ್ನ ನೋಡ್ಬೇಕು ಅಂತಂದ್ಲು ಕರ್‍ಕೊಂಡ್ಬಂದೆ. ಇಲ್ದಿದ್ರೆ ನೀವು ಇಲ್ಲಿದೀರಿ ಅಂತ ನಮಗೆ ಗೊತ್ತೇ ಆಗ್ತಿರಲಿಲ್ಲ. ಈಗ್ಲಾದ್ರೂ ಛತ್ರಕ್ಕೆ ನಡೀರಿ. ಎಲ್ರೂ ನಿಮ್ಮನೇ ಕೇಳ್ತಿದ್ರು. ಎರಡನೇ ಪಂಕ್ತಿಯ ಊಟದ ಹೊತ್ತಿಗೆ ನಾವುಗಳು ಅಲ್ಲಿರಬೇಕು"

"ನೀವುಗಳು ಹೊರಡಿ, ನನ್ನ ಊಟವೂ ಆಗಿದೆ. ನಾನು ಇಲ್ಲಿಯೇ ಇರ್ತೀನಿ. ನಾನು ಬರುಲ್ಲ"

"ನೀವ್ಯಾಕೆ ಇಲ್ಲಿರಬೇಕು? ಏನಾದರೂ ಸೀರಿಯಸ್ ಪ್ರಾಬ್ಲಂ ಇದ್ದರೆ ಹೇಳಿ. ಇವರನ್ನು ನರ್ಸಿಂಗ್ ಹೋಂಗೆ ಸೇರಿಸೋಣ" ಕ್ಷೀರಾ ಅಳಲು ಪ್ರಾರಂಭಿಸಿದಳು. ಮೃದುಲಾ ಅವಳ ಕಡೆ ನೋಡಿ ನುಡಿದಳು.

"ಹಾಗೇನೂ ಖಂಡಿತಾ ಇಲ್ಲ. ನಾನು ಇಲ್ಲಿ ಇರ್ತೀನಿ ಅಂತ ಹೇಳಿದ್ನಲ್ಲ. ನಾನು ನೋಡ್ಕೋತೀನಿ"

"ಅದೇ ಯಾಕೇ ಅಂತ. ಗಿರಿಜಮ್ಮ ಇದಾಳೆ, ನರ್ಸು ಇದಾಳೆ. ನೀವು ಇಲ್ಲಿ ಯಾಕೆ ಇರ್ಬೇಕು?" ಎತ್ತರದ ಧ್ವನಿಯಲ್ಲಿ ಕೇಳಿದ.

"ಒಂಟಿಯಾಗಿ, ಅಸಹಾಯಕರಾಗಿ ಮಲಗಿದಾರಲ್ಲ... ಅದಕ್ಕೇ ಅವರಿಗೆ ಕಂಪೆನಿ ಕೊಡೋಣ ಅಂತ ಅನ್ನಿಸ್ತು. ಸೀದಾ ಇಲ್ಲಿಗೆ ಬಂದೆ ತಪ್ಪಾ?" ಕ್ಷೀರಾ ಕಣ್ಣುಗಳನ್ನು ಒರೆಸಿಕೊಂಡು ಸಂಶಯದಿಂದ ನೋಡಿದಳು.

"ಇದು ಯಾರೂ ಒಪ್ಪದ ಮಾತು. ತಮಾಷೆ ಅಂತ ಅನ್ನಿಸುತ್ತೆ. ನೀವೇನೂ ಸಮಾಜ ಸೇವಕಿ ಅಲ್ಲ. ಅಥವಾ ಇವರ ಸ್ನೇಹಿತರಲ್ಲ. ನೀವು ಒಬ್ಬ ಹೆಂಗಸು. ನೀವು ಇಲ್ಲಿ ಇರುವುದು ಹಾಸ್ಯಾಸ್ಪದವಾಗಿ ಕಾಣುತ್ತೆ. ಎಲ್ರೂ ಏನಂದುಕೊಳ್ತಾರೆ?" ಕಾರ್ತೀಕ್ ಕಟುವಾಗಿ ಕೇಳಿದ.

"ನನ್ನ ತಲೆ ಕೆಟ್ಟಿದೆ ಅಂತ ಅಂದ್ಕೊಳ್ತಾರೆ ತಾನೇ? ಪರವಾಗಿಲ್ಲ. ಈಗ ನೀವು ಹೊರಡಿ. ಮದು ಮಕ್ಕಳು ಛತ್ರದಿಂದ ಪರಾರಿಯಾಗಿದಾರೆ ಅಂತ ಪೋಲೀಸ್ ಕಂಪ್ಲೇಂಟ್ ಕೊಡ್ತಾರೆ ಅಷ್ಟೇ" ಅವಳು ನಕ್ಕಳು, ಅವನು ನಗಲಿಲ್ಲ.

"ಇದು ತಮಾಷೆಗೆ ಸಮಯವಲ್ಲ. ಕ್ಷೀರಾಳ ಮನೆಯವರು ಅಪಾರ್ಥ ಮಾಡ್ಕೋತಾರೆ. ಸುಮ್ಮನೆ ಹೊರಡಿ" ಅವನು ಅವಳ ಕೈ ಹಿಡಿದು ಎಳೆದ. ಅವಳು ಕೈಯನ್ನು ಹಿಂದಕ್ಕೆ ಎಳೆದುಕೊಂಡಳು.

"ಯಾರೂ ಅಪಾರ್ಥ ಮಾಡಿಕೊಳ್ಳಲ್ಲ. ನಾನು ಅಂಥಾ ಹೀನ ಹೆಂಗಸೂ ಅಲ್ಲ. ನನಗೂ ಇವರಿಗೂ ಸಂಬಂಧವಿದೆ"

"ಏನು ಸಂಬಂಧವಿದೆ ನಂಗೆ ಗೊತ್ತಿಲ್ಲದ್ದು? ಏನು ಹೇಳ್ತಾ ಇದೀರಾ? ಇದುವರೆಗೂ ನೀವು ಹೇಳದೇ ಇದ್ದದ್ದು, ಈಗ ಎಲ್ಲಿಯದು?" ಸಂಶಯದಿಂದ ಅವನ ಕಣ್ಣುಗಳು ಕಿರಿದಾಗಿದ್ದವು.

"ಹೂಂ, ಇದೆ ಇವರು ನನ್ನ ಪತಿ"

"ಮೃದುಲಾ ! ಮೈ ಮೇಲೆ ಎಚ್ಚರವಿದೆ ತಾನೆ?" ಕಣ್ಣುಗಳನ್ನು ಅರಳಿಸಿದ.

"ಎಚ್ಚರವಾಗಿಯೇ ಇದೀನಿ. ಇವರು ಅಶೋಕ್. ನಾನು ಇವರನ್ನು ಮದುವೆಯಾದವಳು. ನಾನು ಇವರ ಮೊದಲ ಪತ್ನಿ ತಿಳೀತೇ?" ಕ್ಷೀರಾ ಶಾಕ್ ಹೊಡೆಸಿಕೊಂಡವಳಂತೆ ಗೋಡೆಗೆ ಒರಗಿ ನಿಂತಳು. ಕಾರ್ತೀಕ್ ಮೃದುಲಾಳ ಭುಜಗಳನ್ನು ಹಿಡಿದು ಅಲುಗಿಸಿದ.

"ನಾನು ನಂಬುಲ್ಲ, ಈ ಸುಳ್ಳು ನಾಟಕ ಯಾರಿಗಾಗಿ? ಏತಕ್ಕಾಗಿ?"

"ಇದು ನಾಟಕ ಅಲ್ಲ ಕಾರ್ತೀಕ್. ನೀವು ನಂಬದಿದ್ದರೂ ಈ ಸಂಬಂಧ ನಿಜ. ಈಗ ಹೇಳುವ ಸಮಯ ಬಂದಿದೆ. ಎಲ್ಲವನ್ನು ಹೇಳ್ತೀನಿ. ಇವರು ನನ್ನನ್ನು ಮದುವೆಯಾಗಿದ್ದರು. ನಾನೇ ಇವರನ್ನು ದೂರ ಮಾಡಿ ಬಿಟ್ಟಿದ್ದೆ. ಆ ನಂತರ ಇವರು ನನ್ನ ಸ್ನೇಹಿತೆ ಮಾಲಾಶ್ರೀಯನ್ನು ಮದುವೆಯಾದರು. ಅವಳೀಗ ಬದುಕಿಲ್ಲ. ಆಕ್ಸಿಡೆಂಟ್‌ನಲ್ಲಿ ಸತ್ತು ಹೋದಳು. ಇವರಿಗೆ ಪೆರಾಲಿಸಿಸ್ ಸ್ಟ್ರೋಕ್ ಹೊಡೆದು, ಅಸಹಾಯಕ ಸ್ಥಿತಿಯಲ್ಲಿ ಮಲಗಿದಾರೆ. ಈ ಹೆಣ್ಣು ಮಕ್ಕಳು ತಬ್ಬಲಿಗಳಾಗಿದಾರೆ. ನನಗೂ ಗೊತ್ತಾದದ್ದು ಈಗಲೇ. ನಾನು ಹೊಸಾ ಸಂಬಂಧವನ್ನು ಕಲ್ಪಿಸಿಕೊಂಡಿದೀನಿ ಅಂತ ಭಾವಿಸಿದೆಯಾ? ಇವರ ಸ್ಥಿತಿಯನ್ನು ನೋಡು. ಹೊಸ ಸಂಬಂಧವನ್ನು ಕಲ್ಪಿಸಿಕೊಳ್ಳುವ ಪರಿಸ್ಥಿತಿ ಇದೆಯಾ? ಅಥವಾ ಆ ವಯಸ್ಸು ಕೂಡಾ ನಮ್ಮಿಬ್ಬರಿಗೆ ಇಲ್ಲ. ಅದಿರಲಿ, ನಾನು ಯಾವ ಸಾಕ್ಷಿ ಪುರಾವೆಯನ್ನು ನಿನಗೆ ನೀಡಬೇಕಾದ ಅಗತ್ಯ ನನಗಿಲ್ಲ. ಆ ದಿನ ಮಾಲಾಶ್ರೀಯ ಫೋಟೋ ನೋಡಿದೆ. ಇವರನ್ನು ಈ ಸ್ಥಿತಿಯಲ್ಲಿ ಕಂಡೆ. ಆದರೆ, ನಾನು ಯಾರಿಗೂ ಏನನ್ನೂ ಹೇಳಲಿಲ್ಲ. ಆದರೆ ಸಧ್ಯದ ಪರಿಸ್ಥಿತಿಯನ್ನು ನೋಡು..." ಕ್ಷೀರಾಳ ಕಡೆ ತಿರುಗಿದಳು. "ಸಾಕ್ಷಿಗೆ ದಿನಗಳು ತುಂಬಿವೆ. ಕ್ಷೀರಾ ಗಂಡನ ಮನೆಗೆ ಹೊರಡಲಿದ್ದಾಳೆ. ರಾಶಿ ಇನ್ನೂ ಚಿಕ್ಕವಳು. ಒಂಟಿಯಾಗಿ ಇರಲಾರಳು. ಕಾಲ ಕೆಟ್ಟಿದು, ಈಗ ಇಲ್ಲಿ ಹಿರಿಯ ಹೆಂಗಸಿನ ಅಗತ್ಯವಿದೆ. ಆ ಸ್ಥಾನವನ್ನು ನಾನು ತುಂಬುತ್ತಿದ್ದೇನೆ" ದೃಢವಾಗಿ ತೀರ್ಮಾನ ತೆಗೆದುಕೊಂಡವಳಂತೆ ನುಡಿದಳು. ಕಾರ್ತೀಕ ತಲೆ ಕೊಡವಿದ.

"ಏನೇನೋ ಮಾತಾಡ್ಬೇಡಿ. ಗಿರಿಜಮ್ಮ ಇದಾರೆ. ನರ್ಸು ಇದಾಳೆ. ಸಾಕ್ಷಿಯ ಅತ್ತೆ ಮನೆಯವರು ಇದಾರೆ. ಇಷ್ಟು ವರ್ಷಗಳು ನೀವು ಇಲ್ಲಿ ಇರಲೇ ಇಲ್ಲ. ಈಗ ಏಕಾಏಕಿ ಇಲ್ಲಿ ಹೇಗೆ ಇರೋಕೆ ಆಗುತ್ತೆ? ನಿಮ್ಮ ಜೀವನದ ಶೈಲಿ, ಈ ಸಂಸಾರಕ್ಕೆ ಹೊಂದಿಕೊಳ್ಳಲಾಗದಷ್ಟು ಬದಲಾಗಿದೆ. ಈ ಸಂಸಾರದ ಜವಾಬ್ದಾರಿ ಸುಲಭವಲ್ಲ"

"ಎಲ್ಲವನ್ನು ಸರಿ ಮಾಡುತ್ತೇನೆಂಬ ನಂಬಿಕೆ ನನಗಿದೆ. ನನ್ನ ಪ್ರಯತ್ನಕ್ಕೆ ಯಾರೂ ಅಡ್ಡ ಬರಬೇಡಿ"

"ಆ ನಂಬಿಕೆ ನಮಗ್ಯಾರಿಗೂ ಇಲ್ಲ. ಸುಮ್ಮನೇ ಹಾಸ್ಯಾಸ್ಪದವಾಗುತ್ತದೆ ಅಷ್ಟೆ. ಬೇರೆ ಇನ್ಯಾರಿಗಾದ್ರೂ ಗೊತ್ತಾಗುವ ಮೊದಲು, ಈ ನಿರ್ಧಾರವನ್ನು ಬಿಟ್ಟು ಬಿಡಿ. ಯಾರೂ, ನಿಮ್ಮನ್ನು ಈ ಸ್ಥಾನದಲ್ಲಿ ಒಪ್ಪಿಕೊಳ್ಳುವುದಿಲ್ಲ"

"ನೀನು ಸುಮ್ಮನಿರು ಕಾರ್ತೀಕ್. ಇದು ನನ್ನ ಸ್ವಂತ ವಿಷಯ. ಇವರು ನನ್ನ ಕೊರಳಿಗೆ ಮಾಂಗಲ್ಯವನ್ನು ತೊಡಿಸಿದ್ದರು. ಅಪ್ಪ ನನ್ನನ್ನು ಇವರಿಗೆ ಧಾರೆ ಎರೆದುಕೊಟ್ಟಿದ್ದರು. ಅಗ್ನಿಸಾಕ್ಷಿಯಾಗಿ, ಸಪ್ತಪದಿಯನ್ನು ತುಳಿದು, ನಾನು ಇವರ ಅರ್ಧಾಂಗಿಯಾಗಿದ್ದೆ. ಇವರೊಂದಿಗೆ ಸಂಸಾರವನ್ನು ನಡೆಸಬೇಕಾದದ್ದು ನನ್ನ ಧರ್ಮವಾಗಿತ್ತು. ಆದರೆ ನನಗೆ ತಿಳುವಳಿಕೆ ಸಾಲದಾಗಿತ್ತು, ಮೂರ್ಖಳಾಗಿದ್ದೆ, ಸ್ವಾರ್ಥಿಯಾಗಿದ್ದೆ. ಹೆತ್ತ ತಂದೆಯ ಮಾತಿಗೆ ಬೆಲೆ ಕೊಟ್ಟೆ. ಪ್ರೀತಿಸಿ ಮದುವೆಯಾದವರು ಒಂದಲ್ಲ ಒಂದು ದಿನ ಅವರಾಗಿಯೇ ನನ್ನ ಬಳಿಗೆ ಬಂದೇ ಬರುತ್ತಾರೆಂಬ ದುರಭಿಮಾನದಿಂದ ತಂದೆಯ ಮನೆಯಲ್ಲೇ ಉಳಿದುಕೊಂಡೆ. ನನ್ನ ಗಂಡನ ಸ್ವಾಭಿಮಾನವನ್ನು ಒರೆ ಹಚ್ಚಲು ಹೋಗಿ ನನ್ನ ಬದುಕನ್ನು ನಾನೇ ಕೈಯಾರೆ ಬರಡು ಮಾಡಿಕೊಂಡೆ. ಅನಂತರ ಎಷ್ಟೋ ವರ್ಷಗಳ ನಂತರ ಪಶ್ಚಾತ್ತಾಪವಾಗಿತ್ತು. ಆದರೆ ಕಾಲ ಮಿಂಚಿತ್ತು. ಅದೇ ಕೊರಗಿನಲ್ಲಿ ನನ್ನ ಬಾಳಿನ ದಿನಗಳನ್ನು ತಳ್ಳುತ್ತಿದ್ದೆ... ಅನಂತರ ಇಷ್ಟು ವರ್ಷಗಳ ನಂತರ ನಾನು ಇವರನ್ನು ಕಂಡಿದ್ದು ಆಕಸ್ಮಿಕವಾಗಿ. ಅದೂ ಈ ಸ್ಥಿತಿಯಲ್ಲಿ... ನನ್ನ ಮನದ ತೊಳಲಾಟ ಹೆಚ್ಚಾಯಿತು. ಈಗಲಾದರೂ ಇವರ ಜೊತೆ ಇರಬೇಕೆಂಬ ಹಂಬಲ ಹಗಲೂ ರಾತ್ರಿ ಕಾಡತೊಡಗಿತು. ನನಗೆ ನಾನೇ ಪ್ರಶ್ನೆಗಳನ್ನು ಕೇಳಿಕೊಂಡೆ. ಉತ್ತರಗಳನ್ನು ಹುಡುಕಿದೆ. ಇದು ತಪ್ಪಲ್ಲ. ಸಿಕ್ಕಿರುವ ಅವಕಾಶವನ್ನು ಬಿಡಬಾರದು ಎಂಬ ತೀರ್ಮಾನಕ್ಕೆ ಬಂದೆ... ಇದು ನಿನಗೆ ತಪ್ಪು ಅಂತ ಅನ್ನಿಸುತ್ತಾ ಕ್ಷೀರಾ?"

"ಇವಳೇನು ಹೇಳ್ತಾಳೆ? ಈ ವಯಸ್ನಲ್ಲಿ ಈಗ ಇವಳ ಅಪ್ಪನ ಜೊತೆಯಲ್ಲಿ ಬಂದು ಇರ್ತೀನಿ ಅಂತೀರಲ್ಲ ಇದು ಅವಮರ್ಯಾದೆಯ ಕೆಲಸ ಅಲ್ವಾ?"

"ಷಟಪ್! ನಾನು ಅವಮರ್ಯಾದೆಯ ಯಾವ ಕೆಲಸವನ್ನು ಮಾಡಿಲ್ಲ. ನಾವು ಪ್ರೀತಿಸಿ ಮದುವೆಯಾದವರು. ಆ ಪ್ರೀತಿಯೇ ಒಬ್ಬರನ್ನೊಬ್ಬರು ಬಿಟ್ಟು ದೂರ ದೂರ ಇರುವಂತೆ ಮಾಡಿದ್ದು. ನಾನು ಈಗಲೂ ಇವರನ್ನು ಪ್ರೀತಿಸುತ್ತೇನೆ. ಇವರು ಈಗಲೂ ನನ್ನ ಪತಿಯೇ. ಇವರು ಮತ್ತೆ ಮದುವೆಯಾದರು. ಆದರೆ, ನಾನು ನನ್ನ

ಪ್ರೀತಿಯನ್ನು ಇವರಿಗಾಗಿಯೇ ಮೀಸಲಿಟ್ಟು ಒಂಟಿಯಾಗಿಯೇ ಬಾಳಿದೆ. ಇವರು ಆರೋಗ್ಯವಂತರಾಗಿದ್ದರೆ, ಮತ್ತೆ ಮದುವೆಯಾಗುತ್ತಿದ್ದರೋ ಏನೋ, ನಾನು ಇವರ ಬಳಿಗೆ ಬರುತ್ತಿದ್ದೆನೋ ಇಲ್ಲವೋ... ಇದು ನನ್ನ ಅದೃಷ್ಟವೋ, ದುರಾದೃಷ್ಟವೋ ತಿಳಿಯದು. ಈಗ ಇವರೂ ನನ್ನನ್ನು ಗುರುತಿಸಿದ್ದಾರೆ. ಆದರೆ ಭಾವನೆಗಳನ್ನು ಹೇಳಲಾಗುತ್ತಿಲ್ಲ. ಇದು ಇವರ ಅಸಹಾಯಕತೆ. ಇದರ ದುರುಪಯೋಗವನ್ನು ಪಡೆದುಕೊಳ್ಳುತ್ತಿದ್ದೇನೆಂದು ಭಾವಿಸಬೇಡಿ..." ಮೃದುಲಾ ಮುಂದೆ ಮಾತನಾಡಲಾಗದಂತೆ ಸುಮ್ಮನಾಗಿ ಬಿಟ್ಟಳು.

ಕಾರ್ತೀಕ, ಕ್ಷೀರಾ ಮುಖ ಮುಖ ನೋಡಿಕೊಂಡರು. ಗೋಡೆಯ ಮೇಲಿನ ಗಡಿಯಾರ ಗಂಟೆ ಬಾರಿಸಿದಾಗ, ಕಾರ್ತೀಕ ಎಚ್ಚೆತ್ತ.

"ಕ್ಷೀರಾ, ಈ ಸಮಸ್ಯೆಯನ್ನು ಈಗ ಬಗೆಹರಿಸಲು ಆಗುವುದಿಲ್ಲ. ನಾವು ಈಗ ಹೊರಡಲೇ ಬೇಕು. ಇಲ್ಲದಿದ್ದರೆ ಮತ್ತೆ ಒಂದು ಸಮಸ್ಯೆ ಉದ್ಭವಿಸುತ್ತೆ. ನಡೀ ಹೋಗೋಣ" ಅವಳ ಕೈಯನ್ನು ಹಿಡಿದು ಹೊರಕ್ಕೆ ಕರೆ ತಂದ. ಇಬ್ಬರೂ ಕಾರನ್ನೇರಿದರು. ಕಾರು ಚಲಿಸಿದ ಮೇಲೆ ಅವನು ಮಾತಾಡಿದ.

"ಈ ವಿಚಾರವನ್ನು ಈಗಲೇ ಯಾರಿಗೂ ಹೇಳ್ಬೇಡ ಕ್ಷೀರಾ... ಈಗ ನಮ್ಮಿಬ್ಬರ ನೆಮ್ಮದಿ ಕೆಟ್ಟಿದೆ. ಆಮೇಲೆ ಎಲ್ಲರ ನೆಮ್ಮದಿಯೂ ಕೆಡುತ್ತೆ"

"ಇದೆಲ್ಲಾ ಏನು ಕಾರ್ತೀಕ್? ಮೇಡಂ ಹೇಳ್ತಾ ಇರೋದೆಲ್ಲಾ ನಿಜಾನಾ? ನಂಗಂತೂ ನಂಬೋಕೇ ಆಗ್ತಿಲ್ಲ" ವ್ಯಸನದಿಂದ ಕೇಳಿದಳು.

"ಅವರಿಗೆ ಮದುವೆ ಆಗಿತ್ತು ಅನ್ನೋ ವಿಷಯ ಮಾತ್ರ ನನಗೆ ಗೊತ್ತಿತ್ತು. ಆದರೆ, ನಿನ್ನ ತಂದೆಯೇ ಇವರ ಪತಿ ಆಗಿದ್ದವರು ಅಂತ ನನಗೆ ಖಂಡಿತಾ ಗೊತ್ತಿರಲಿಲ್ಲ, ನನ್ನನ್ನು ನಂಬು" ಅವಳ ಕೈಗಳನ್ನು ಹುಡುಕಿ, ಮೆಲ್ಲಗೆ ಅದುಮಿದ.

"ಈಗ ಈ ವಿಷಯ ಎಲ್ರಿಗೂ ಗೊತ್ತಾದ್ರೆ ನಾಚಿಕೆಗೇಡು. ಎಲ್ಲರೂ ಏನಂದುಕೊಳ್ತಾರೆ?" ಅವಳ ಧ್ವನಿ ನಡುಗಿತ್ತು.

"ನೀನೇನೂ ಯೋಚಿಸಬೇಡ ಕ್ಷೀರಾ. ತಕ್ಷಣಕ್ಕೆ ಯಾರಿಗೂ ಗೊತ್ತಾಗುವುದಿಲ್ಲ. ಮದುವೆ ಕಾರ್ಯ ಒಂದು ನೆರವೇರಿ ಬಿಡಲಿ. ಅಲ್ಲಿಯವರೆಗೂ ನಾವು ಯಾರಿಗೂ ಹೇಳುವುದು ಬೇಡ" ಛತ್ರ ತಲುಪುವವರೆಗೂ ಇಬ್ಬರೂ ಮತ್ತೆ ಮಾತನಾಡಲಿಲ್ಲ.

ಕಾರಿನಿಂದ ಇಳಿದವಳೇ ಕ್ಷೀರಾ ಮೆಲ್ಲನೆ ನುಸುಳಿ ತಮ್ಮ ಬಿಡಾರವನ್ನು ಸೇರಿಕೊಂಡಳು. ಸಾಕ್ಷಿ ದಬಾಯಿಸಿದಳು.

"ಇದೇನೇ ಇಷ್ಟು ಹೊತ್ತು ಮಾಡ್ದೆ? ನಂಗಂತೂ ಜೀವನ ಹೋಗ್ತಿತ್ತು. ಸ್ವಲ್ಪನಾದ್ರೂ ಜವಾಬ್ದಾರಿ ಬೇಡ್ವಾ ನಿಮ್ಮಿಬ್ಬರಿಗೂ? ಹೋಗ್ಲಿ ಅಪ್ಪ ಏನ್ಮಾಡ್ತಿದ್ರು? ಮಾತಾಡಿದ್ರಾ?"

"ಇಲ್ಲ, ಮಲಗಿ ಬಿಟ್ಟಿದ್ರು"

"ಸರಿ, ನೀವಿಬ್ಬರೂ ಬೇಗ ಊಟ ಮಾಡಿ. ಬೆಳಿಗ್ಗೆ ಬೇಗ ಏಳ್ಬೇಕು. ನಿನ್ನ ಭಾವ ನಿನ್ನನ್ನು ಕೇಳ್ಕೊಂಡು ಬಂದಿದ್ರು, ಏನೋ ಒಂದು ನೆಪ ಹೇಳಿ ಕಳ್ಸಿದೀನಿ. ಅವರು

ಅವರಮ್ಮನ್ನ ಕರ್ಕೊಂಡು ಮನೆಗೆ ಹೋದ್ರು. ಮತ್ತೆ ಬರ್ತಾರೆ. ಮನೆಗೆ ಅಪ್ಪನ್ನ ನೋಡೋಕೆ ಹೋಗಿದ್ದೆ ಅಂತ ಬಾಯಿ ಬಿಟ್ಟೀಯ ಜೋಕೆ ! ರಾಶಿಗೂ ಹೇಳಬೇಡ. ಅಂದ ಹಾಗೇ ಅವರ ಮೇಡಂ ಬರಲೇ ಇಲ್ಲ. ಬರೋ ಮನಸ್ಸಿಲ್ಲವೇನೋ? ಅಷ್ಟು ದೊಡ್ಡ ಬುದ್ಧಿ ಎಲ್ಲಿದೆ? ಬಾಯಲ್ಲಿ ಹೇಳೋದೇ ಬೇರೆ..." ಸಾಕ್ಷಿ ನಕ್ಕಳು. ಕ್ಷೀರಾ ನಗಲಿಲ್ಲ. ಅವಳಿಗೆ ಬೇಸರವಾಗಿತ್ತು. ಮಾತನ್ನು ಮರೆಸಲು ಕೇಳಿದಳು.

"ನಿನ್ನ ಊಟ ಆಯ್ತಾ ಸಾಕ್ಷಿ?"

"ನಾನು ಮೊದಲನೇ ಪಂಕ್ತೀಲೇ ಕೂತು ಬಿಟ್ಟೆ. ರಾಶಿ, ತನ್ನ ಫ್ರೆಂಡ್ಸ್ ಜೊತೆ ಹರಟ್ತಾ ಊಟ ಮಾಡ್ತಿದಾಳೆ. ನೀನೂ ಹೋಗು" ಕ್ಷೀರಾ ಊಟದ ಮನೆಗೆ ಬಂದಳು. ಕಾರ್ತೀಕ್ ಊಟಕ್ಕೆ ಕುಳಿತಿದ್ದ. ಅವನ ತಾಯಿ ಅವನ ಪಕ್ಕದಲ್ಲಿ ನಿಂತು ಮಾತನಾಡುತ್ತಿದ್ದಳು. ಇವಳ ಕಾಲುಗಳು ತಣ್ಣಗಾದವು. ಎದುರು ಸಾಲಿನಲ್ಲಿ ಖಾಲಿ ಇದ್ದ ಕಡೆ ಊಟಕ್ಕೆ ಕುಳಿತಳು. ಬೆರಳುಗಳು ಎಲೆಯ ಮೇಲಿನ ಪರಿಕರಗಳ ಮೇಲೆ ಓಡಾಡಿದವು... ಆದರೆ ಊಟ ರುಚಿಸುವಂತಿರಲಿಲ್ಲ.

ಇದೇನಿದು ಹೊಸತು? ಕೆಲವೇ ನಿಮಿಷಗಳ ಹಿಂದೆ ತಾನು, ತನ್ನ ಮನೆಯಲ್ಲಿ ಕಂಡಿದ್ದು, ಕೇಳಿದ್ದು ನಿಜವೇ?... ಅಥವಾ ಕಲ್ಪನೆಯೇ?... ರಾಶಿಗೆ ಈ ವಿಷಯ ಗೊತ್ತಿರಬಹುದೆ? ಗೊತ್ತಿದ್ದರೆ ಹೇಳದೇ ಇರುತ್ತಿದ್ದಳೇ? ಕಾರ್ತೀಕ್‌ನಿಗೆ ನಿಜವಾಗಿಯೂ ಈ ವಿಷಯ ಗೊತ್ತಿರಲಿಲ್ಲವೇ? ಅವನ ತಾಯಿಗೆ ಗೊತ್ತಿರಬಹುದೇ? ಇದುವರೆಗೂ ತನ್ನನ್ನೇನೂ ಕೇಳಿಲ್ಲ. ಮುಂದೆ ಏನೇನು ಮಾತುಕತೆಗಳು ನಡೆಯಬೇಕಾಗಿದೆಯೋ? ರಾಶಿಯ ಕಡೆ ನೋಡಿದಳು. ಅವಳು ಇವಳ ಕಡೆ ನೋಡಲಿಲ್ಲ. ಕಾರ್ತೀಕ ತಾಯಿಯೊಡನೆ ಮಾತನಾಡುವುದರಲ್ಲಿ ನಿರತನಾಗಿದ್ದ. ತಿಂದದ್ದು ಸಾಕು ಎನಿಸಿತ್ತು. ಎದ್ದು ಕೈ ತೊಳೆಯಲು ನಡೆದಳು. ತಾನು ಒಂಟಿ ಎನಿಸಿತ್ತು. ತನ್ನ ಬಿಡಾರಕ್ಕೆ ಬಂದು ಕುಳಿತಳು.

ತನಗೆ ಕಾರ್ತೀಕನ ಪರಿಚಯವಾದಾಗಿನಿಂದ, ಇದುವರೆಗಿನ ವಿಷಯಗಳನ್ನೆಲ್ಲಾ ತನ್ನಲ್ಲೇ ಮೆಲುಕು ಹಾಕಿದಳು. ಒಮ್ಮೆ ಒಂದಕ್ಕೊಂದು ಸಂಬಂಧವಿಲ್ಲ ಅಂತ ಅನ್ನಿಸಿದರೆ, ಮರುಕ್ಷಣವೇ ಇದು ಏನೋ ಸಂಚು ಅಂತ ಎನಿಸುತ್ತಿತ್ತು. ಅಪ್ಪ ಯಾಕೆ ಸುಮ್ಮನಿದ್ದರು? ಕಣ್ಣಿನಲ್ಲಾದರೂ ವಿರೋಧವನ್ನು ಸೂಚಿಸಬಹುದಾಗಿತ್ತಲ್ಲ ಅಂತ, ಅಂದುಕೊಂಡರೂ ಅದಕ್ಕೆ ಉತ್ತರ ಸಿಗಲಿಲ್ಲ. ಅಪ್ಪ ಮಾತನಾಡುವಂತಿದ್ದರೇ... ಎಲ್ಲಾ ತಿಳಿಯುತ್ತಿತ್ತು... ನಿಜ... ಅವರು ಅಸಹಾಯಕ ಸ್ಥಿತಿಯಲ್ಲಿದ್ದಾರೆ. ಅವರಿಗೆ ಏನೂ ತಿಳಿಯುತ್ತಿಲ್ಲ. ಏನನ್ನು ಹೇಳಲಾಗುತ್ತಿಲ್ಲ. ಈಗ ಈ ಸಮಸ್ಯೆಗೆ ಏನು ಉತ್ತರ?

"ಕ್ಷೀರಾ ಏನು ಯೋಚಿಸ್ತಿದೀಯಾ?" ಸಂಜಯ ಕೇಳಿದಾಗ ಅವಳು ಬೆಚ್ಚಿದಳು. "ಅರೇ, ಯಾಕೆ ಬೆಚ್ತೀಯಾ...? ಹೊತ್ತಾಗಿದೆ, ಮಲಕ್ಕೋ..." ಎಂದು ಹೇಳಿ ಸಾಕ್ಷಿ ಮಂಚದ ಮೇಲೆ ಮಲಗಿದಳು. ಸಂಜಯ ಬಾಗಿಲನ್ನು ಹಾಕಿಕೊಳ್ಳುವಂತೆ ಹೇಳಿ ಹೊರಟು ಹೋದ. ಕ್ಷೀರಾ ಕೆಳಗೆ ಹಾಸಿಗೆಯನ್ನು ಹಾಸಿಕೊಂಡು ಮಲಗಿದಳು.

* * *

28

ಬೆಳಗಾಗುತ್ತಿದ್ದಂತೆಯೇ ಮದುವೆ ಮನೆಯ ಸಡಗರ ಸಂಭ್ರಮಗಳು ಪ್ರಾರಂಭವಾಗಿದ್ದವು. ಮುಹೂರ್ತದ ಹೊತ್ತಿಗೆ ಎಲ್ಲರೂ ಸಿದ್ಧರಾಗಬೇಕಾಗಿತ್ತು. ಕರೆದಿದ್ದ ಆಹ್ವಾನಿತರಲ್ಲಿ ಕೆಲವರು ಬರಲು ಪ್ರಾರಂಭಿಸಿದ್ದರು. ಬಂದವರಿಗೆ ತಿಂಡಿ ಕಾಫಿಯ ಸಮಾರಾಧನೆ ಚೆನ್ನಾಗಿ ನಡೆಯುತ್ತಿತ್ತು.

ಮುಹೂರ್ತಕ್ಕೆ ಕೆಲವೇ ನಿಮಿಷಗಳು ಉಳಿದಿರುವಾಗ, ಮದುವೆಯ ಮಂಟಪಕ್ಕೆ ಅಶೋಕ್‌ರವರನ್ನು ಗಿರಿಜಮ್ಮನ ಇನ್ನೊಬ್ಬ ಮಗ ವ್ಹೀಲ್‌ಛೇರ್‌ನಲ್ಲಿ ಕೂರಿಸಿಕೊಂಡು ಕರೆ ತಂದ. ಎಲ್ಲರೂ ಆಶ್ಚರ್ಯದಿಂದ ಅತ್ತಲೇ ನೋಡತೊಡಗಿದರು. ಪರಿಚಯದವರು, ಸ್ನೇಹಿತರು, ನೆಂಟರಿಷ್ಟರು, ಆತ್ಮೀಯರು ವಿಶ್ವಾಸದಿಂದ ಸ್ನೇಹದಿಂದ, ಕನಿಕರದಿಂದ ಅನುಮಾನಗಳಿಂದ ಮಾತನಾಡಿಸಿದ್ದರು. ಮದುವೆಯ ಕಲಾಪಗಳು ಜರುಗುತ್ತಿದ್ದವು.

ಮಾವನನ್ನು ಕಂಡು, ಸಂಜಯನ ಹುಬ್ಬುಗಳು ಸಂಕುಚಿತಗೊಂಡಿದ್ದವು. ಸಾಕ್ಷಿಯ ಕಿವಿಯಲ್ಲಿ, ಅಸಮಾಧಾನದಿಂದ ಕೇಳಿದ.

"ಸಾಕ್ಷೀ... ನಿಮ್ಮ ತಂದೇನ ಕರ್ಕೊಂಡು ಬರೋಕೆ ಯಾರು ಹೇಳಿದ್ರು?"

"ನಂಗೊತ್ತಿಲ್ಲ, ಕ್ಷೀರಾ ಏನಾದ್ರೂ ಹೇಳಿದ್ಲೋ ಏನೋ?"

"ಅವಳಿಗೆ ಅಷ್ಟು ತಿಳುವಳಿಕೆ ಬೇಡ್ವಾ? ನೂರೆಂಟು ಜನ, ನೂರೆಂಟು ಪ್ರಶ್ನೆ ಕೇಳ್ತಾರೆ. ನಿಮಗೆಲ್ಲಾ ಪ್ರತಿಷ್ಠೆ ಜಾಸ್ತಿ. ಬೇಡವಾದ ಕೆಲಸವನ್ನೇ ಮಾಡ್ತೀರಿ"

"ಈಗ ನೀವು ಸುಮ್ನಿರಿ. ನಾನು ಆಮೇಲೆ ವಿಚಾರಿಸ್ತೀನಿ"

ಹಸೆಮಣೆಯ ಮೇಲೆ ಕುಳಿತಿದ್ದ ಕಾರ್ತೀಕ್ ಪಕ್ಕದಲ್ಲಿ ಕುಳಿತಿದ್ದ ಕ್ಷೀರಾಳ ಕಡೆ ನೋಡಿ ಕಣ್ಣಿನಲ್ಲೇ ಪ್ರಶ್ನಿಸಿದ. ಅವಳು ತಲೆ ತಗ್ಗಿಸಿದಳು. ಕಾರ್ತೀಕನ ದೃಷ್ಟಿ ಮೃದುಲಾಳ ಮೇಲೆ ಹರಿಯಿತು. ಅವಳು ಅವನ ತಾಯಿ ಜಲಜಳ ಜೊತೆಯಲ್ಲಿ ಮಾತನಾಡುತ್ತಿದುದನ್ನು ಕಂಡ. ಆಹ್ವಾನಿತರಲ್ಲಿ ಕೆಲವರು ಮೃದುಲಾಳನ್ನು ಗುರುತಿಸಿದ್ದರು. ಕೆಲವರು ಅನುಮಾನದ ದೃಷ್ಟಿಯನ್ನು ಬೀರಿದರು. ಕೆಲವರು ನಕ್ಕು ಮಾತನಾಡಿಸಿದ್ದರು. ಜಲಜಾ ಆಕ್ಷೇಪಣೆ ಮಾಡಿದಳು.

"ಇದೇನೇ ಮೃದುಲಾ, ಈಗ ಬರ್ತಿದೀಯ? ನೆನ್ನೆ ಎಲ್ಲಿ ಮಾಯವಾಗಿದ್ದೆ? ಕಾರ್ತೀಕ್ ನಿನ್ನನ್ನು ಕರ್ಕೊಂಡು ಬರ್ತೀನಿ ಅಂತ ಮನೆಗೆ ಹೋಗಿದ್ದ ನೀನು ಮನೇಲೂ ಇರ್ಲಿಲ್ಲವಂತೆ. ಏನಾಯ್ತು ನಿಂಗೆ? ಅವನೇನಾದ್ರೂ ಅಂದ್ನಾ? ನಮ್ಮಿಂದ ಏನಾದ್ರೂ ತಪ್ಪಾಯ್ತ? ಯಾಕೆ ಹೀಗೆ ಮಾಡ್ದೆ? ಬೇಕೂಂತ ಹೀಗೆ ಮಾಡಿದ್ಯಾ...?"

"ನೆನ್ನೆ ಏನೋ ಮುಖ್ಯವಾದ ಕೆಲಸವಿತ್ತು, ಬರುಕ್ಕಾಗ್ಲಿಲ್ಲ. ಈಗ ಬಂದಿದೀನಲ್ಲ..." ಅವಳು ಮುಗುಳ್ನಕ್ಕು ನುಡಿದರೂ, ಜಲಜಂಗೆ ಸಮಾಧಾನವಾಗಿರಲಿಲ್ಲ.

"ಕಾರ್ತೀಕ್‌ನ ಮಾವನವರನ್ನು ವ್ಹೀಲ್‌ಛೇರ್‌ನಲ್ಲಿ ಕೂರಿಸ್ಕೊಂಡು ಕರ್ಕೊಂಡು ಬಂದಿದಾರೆ. ಅವರಿಗೆ ಇಷ್ಟು ಅನಾರೋಗ್ಯ ಅಂತ ನಂಗೆ ಗೊತ್ತಾಗ್ಲಿಲ್ಲ, ಅದನ್ನು

ಹೇಳಲಿಲ್ಲ. ಅವರನ್ನು ಈ ಮುಂಚೆ ಎಲ್ಲೋ ನೋಡಿದೀನಿ ಅಂತ ಅನ್ನಿಸ್ತಿದೆ. ಆದರೆ ಯಾರು ಅಂತ ನೆನಪಾಗ್ತಿಲ್ಲ"

"ಗೊತ್ತಾಗ್ಲಿಲ್ವಾ ಅತ್ತೇ... ಇವರು ಅಶೋಕ್" ಮೃದುಲಾ ಸಂಭ್ರಮದಿಂದ ನುಡಿದಾಗ, ಜಲಜಳ ಮುಖದ ಮೇಲೆ ಸಂಶಯದ ಗೆರೆಗಳು ಕಂಡವು.

"ಯಾವ ಅಶೋಕ್? ಗೊತ್ತಾಗ್ಲಿಲ್ವಲ್ಲಾ..."

"ನಿಧಾನವಾಗಿ ಗೊತ್ತಾಗುತ್ತೆ. ಈಗ ಬಿಡಿ, ಶಾಸ್ತ್ರ ಎಲ್ಲಾ ಮುಗೀತಾ? ನಾನು ಕಾರ್ತೀಕ್‌ನ ಮಾತನಾಡಿಸ್ಕೊಂಡು ಬರ್ತೀನಿ" ಅವಳು ಮಂಟಪದ ಬಳಿಗೆ ನಡೆದಳು. ಜಲಜ ಮತ್ತೆ ಅಶೋಕನ ಕಡೆ ನೋಡಿದಳು. ಆದರೆ ಅಲ್ಲಿಯೇ ನಿಂತು ಯೋಚಿಸಲು ಸಮಯವಿರಲಿಲ್ಲ. ಕಲಾಪಗಳ ಸಂಭ್ರಮದಲ್ಲಿ ಸೇರಿಕೊಂಡಳು. ಒಂದೊಂದಾಗಿ ಶಾಸ್ತ್ರಗಳೂ, ಕಲಾಪಗಳೂ ನೆರವೇರಿದವು. ಕ್ಷೀರಾ-ಕಾರ್ತೀಕ್ ಸತಿ-ಪತಿಗಳಾದರು. ಇಬ್ಬರೂ ಮಂಟಪದಿಂದ ಕೆಳಗಿಳಿದು ಬಂದು ಹಿರಿಯರ ಆಶೀರ್ವಾದಗಳನ್ನು ಪಡೆದರು. ಕಾರ್ತೀಕ್ ಮೊಟ್ಟ ಮೊದಲ ಬಾರಿಗೆ ಮಾವನಿಗೆ ನಮಸ್ಕರಿಸಿದ. ಅಶೋಕ್‌ನ ಕೈ ನವದಂಪತಿಗಳ ತಲೆಯನ್ನು ಸವರಿತು. ಕ್ಷೀರಾ ಸಂಜ್ಞೆಯಲ್ಲಿ ಅಪ್ಪನೊಡನೆ ಮಾತನಾಡಿದಳು. ಅವನಿಗೆ ಏನು ಅರ್ಥವಾಯಿತೋ, ಇವರುಗಳಿಗೆ ಅರ್ಥವಾಗುವಂತಿರಲಿಲ್ಲ. ಆಹ್ವಾನಿತರು ಊಟ, ಫಲತಾಂಬೂಲಗಳ ಕಡೆ ಗಮನವಿಟ್ಟಿದ್ದರು. ಆ ಸಮಯದಲ್ಲಿ ಅಶೋಕ್‌ರವರನ್ನು ಮತ್ತೆ ವಾಪಸ್ಸು ಮನೆಗೆ ಕರೆದುಕೊಂಡು ಹೊರಟು ಹೋಗಿದ್ದರು. ಮೃದುಲಾ ತಾನೂ ಹೊರಡುವುದಾಗಿ ತಿಳಿಸಿದಾಗ ಜಲಜ ಕೋಪಿಸಿಕೊಂಡಳು.

"ಇದ್ಯಾಕೇ ಓಗಾಡ್ತೀಯಾ? ನಿನ್ನ ಸಾಕು ಮಗನ ಮದುವೆ, ನಿನಗೇ ಸಂಭ್ರಮವಿಲ್ಲವಲ್ಲ. ಈ ಪಕ್ಷಕ್ಕೆ ಅವನಿಗೆ ಹುಡುಗಿಯನ್ನೇಕೆ ಗೊತ್ತು ಮಾಡಿಕೊಟ್ಟೆ?"

"ನಾನು ಗೊತ್ತು ಮಾಡಿ ಕೊಡ್ಲಿಲ್ಲ. ಅವನೇ ಗೊತ್ತು ಮಾಡಿಕೊಂಡ. ಅದಿರಲಿ, ಈಗ ನನಗೆ ಮುಖ್ಯವಾದ ಕೆಲಸವಿದೆ. ನಾನು ಹೋಗಲೇಬೇಕು"

"ಅದೆಂಥಾ ಕೆಲಸ? ರಜಾ ಹಾಕಲಿಲ್ವಾ?"

"ಹಾಕಿದೀನಿ... ಆದರೆ ಇದು ಬೇರೆ ಕೆಲಸ. ಅದರ ಬಗ್ಗೆ ಆಮೇಲೆ ನಿಧಾನವಾಗಿ ಮಾತಾಡ್ತೀನಿ. ಈಗ ಇಲ್ಲಿ ಆ ಮಾತು ಬೇಡ"

"ಸಾಯಂಕಾಲ ರಿಸೆಪ್ಷನ್‌ಗೆ ಬರ್ತೀಯಾ ತಾನೇ? ತಪ್ಪಿಸ್ಕೋಬೇಡ"

"ಊಟ ಮಾಡಿದ್ರಾ?" ಕಾರ್ತೀಕ್ ಹತ್ತಿರ ಬಂದು ಪ್ರಶ್ನಿಸಿದ.

"ಹೂಂ, ಆಯ್ತು. ಸಾಯಂಕಾಲ ಮತ್ತೆ ಬರ್ತೀನಿ"

"ಈಗ ಹೋಗಲೇಬೇಕಾ?"

"ಹೂಂ" ಎಂದಷ್ಟೇ ಹೇಳಿ ಅವಳು ಅಲ್ಲಿಂದ ಸರಿದಿದ್ದಳು. ತಾಯಿ ಏನಾದರೂ ಹೇಳುವ ಮೊದಲೇ ಕಾರ್ತೀಕ್ ಅಲ್ಲಿಂದ ಕದಲಿದ.

* * *

29

"ಕ್ಷೀರಾ ರೆಡೀನಾ" ಕಾರ್ತೀಕ್ ಆರತಕ್ಷತೆಗೆ ಸಿದ್ಧನಾಗಿ ಬಂದು ಕೇಳಿದ. ಮಂಚದ ಮೇಲೆ ಸುಸ್ತಾಗಿದೆಯೆಂದು ಮಲಗಿದ್ದ ಸಾಕ್ಷಿ ಎದ್ದು ಕುಳಿತಳು.

"ಆಯ್ತು ಬರ್ತೀನಿ..." ಎಂದು ಹೇಳಿ 'ರಾಶೀ ಎಲ್ಲೇ ಕಾಣ್ತಿಲ್ಲ' ಎಂದು ಸಾಕ್ಷಿಯನ್ನು ಕೇಳಿದಳು.

"ಅವಳಾ? ಮನೆಗೆ ಹೋಗಿ ಬರ್ತೀನಿ ಅಂತ ಹೊರಟಿದ್ದಳು. ಅಲ್ಲೇ ಡ್ರೆಸ್ ಮಾಡ್ಕೊಂಡು ಬರ್ತಾಳಂತೆ. ಫ್ರೆಂಡ್ಸ್ ಜೊತೇಲಿ ಹೋಗಿದಾಳೆ"

"ಮನೆಗಾ?" ಕ್ಷೀರಾ ಬೆಚ್ಚಿ ಕಾರ್ತೀಕನ ಕಡೆ ನೋಡಿದಳು. ಕಾರ್ತೀಕನೂ ಅಧೀರನಾದ. ಕ್ಷೀರ ಹೊರಬಂದಳು. ಈಗ ಏನು ಮಾಡೋದು? ಅಲ್ಲಿ ಮೇಡಂ ಇರ್ತಾರೇನೋ? ಅನರ್ಥವಾಗುತ್ತೆ. ರಾಶೀನ ಹೋಗದಂತೆ ತಡೆಯಬೇಕು" ಎಂದಳು.

"ನಾನು ಈಗ ಹೇಗೆ ತಡೆಯೋಕೆ ಆಗುತ್ತೆ ಕ್ಷೀರಾ. ಹೋಗ್ಲಿ ಅವಳ ಹತ್ರ ಮೊಬೈಲ್ ಫೋನು ಇದೆಯಾ?"

"ಇಲ್ಲ, ಅವಳ ಫ್ರೆಂಡ್ಸ್ ಹತ್ತಿರ ಇರಬಹುದು. ನನಗೆ ನಂಬರ್ರು ಗೊತ್ತಿಲ್ಲ"

"ಸರಿ, ನಾನು ಮೃದುಲಾ ಎಲ್ಲಿದಾರೆ ಅಂತ ವಿಚಾರಿಸ್ತೀನಿ" ತನ್ನ ಮೊಬೈಲ್‌ನಿಂದ ಅವಳಿಗೆ ಮಾಡಿದ. ಅವಳು ಅಲ್ಲಿಯೇ ಇದಾಳೆಂದು ತಿಳಿಯಿತು. ಅವಳ ಮೇಲೆ ರೇಗಿದ.

"ಸುಮ್ನೆ ಎಲ್ರಿಗೂ ಕುತೂಹಲ ಹುಟ್ಟಿದೆ. ಮದುವೆ ಮನೇಲೇ ಇದ್ದಿದ್ರೆ ಯಾರಿಗೂ ಅನುಮಾನ ಬರ್ತಿರಲಿಲ್ಲ. ರಾಶಿ, ಮನೆಗೆ ಅವಳ ಫ್ರೆಂಡ್ಸ್ ಜೊತೆ ಬರ್ತಿದಾಳಂತೆ. ಅವಳೂ, ಅವಳ ಫ್ರೆಂಡ್ಸ್ ನಿಮ್ಮನ್ನು ಅಲ್ಲಿ ಕಾಣುವ ಮೊದಲು ನೀವು ಅಲ್ಲಿಂದ ಹೊರಟು, ಸೀದಾ ಇಲ್ಲಿಗೆ ಬನ್ನಿ"

"ನಾನು ಅಂಥಾ ತಪ್ಪನ್ನೇನೂ ಮಾಡಿಲ್ಲ, ಗೊತ್ತಾದ್ರೆ ಗೊತ್ತಾಗ್ಲೀ"

"ಪ್ಲೀಸ್, ಅರ್ಥ ಮಾಡ್ಕೊಳ್ಳಿ, ಇವತ್ತೇ ಬೇಡ, ಅಮ್ಮ ಏನೇನೋ ಕೇಳ್ತಾಳೆ. ಅದಕ್ಕೆ ನನಗೆ ಉತ್ತರ ಗೊತ್ತಿಲ್ಲ. ನನ್ನನ್ನು ನಿಜವಾಗಿ ತಾಯಿಯಂತೆ ನೋಡಿಕೊಂಡಿದ್ದರೆ, ಈ ಮಗನ ಮಾತಿಗೆ ಬೆಲೆ ಕೊಟ್ಟು ಬನ್ನಿ. ಇಲ್ಲದಿದ್ರೆ, ಈ ತಾಯಿ ಮಗನ ಬಾಂಧವ್ಯಕ್ಕೆ ದ್ರೋಹ ಬಗೆದಂತಾಗುತ್ತೆ"

"ಇದೊಳ್ಳೆ ಎಮೋಷನಲ್ ಬ್ಲ್ಯಾಕ್‌ಮೇಲ್ ಆಯ್ತಲ್ಲ, ಬರ್ತೀನಿ ಬಿಡು"

"ಥ್ಯಾಂಕ್ಸ್ ಮೃದುಲಾ, ನನಗೀಗ ಟೆನ್ಷನ್ ಕಡಿಮೆ ಆಯ್ತು"

"ಮೃದುಲಾ ಹತ್ರ ಮಾತಾಡ್ತಿದ್ಯಾ? ಎಲ್ಲಿದಾಳೆ ಅವಳು?" ಜಲಜ ಒಳಕ್ಕೆ ಬಂದು ಕೇಳಿದ್ದಳು.

"ಬರ್ತಾ ಇದಾರೆ, ದಾರೀಲಿ ಇದಾರೆ" ಅವನು ತಾಯಿಗೆ ಹೇಳಿದ್ದು ಮೃದುಲಾಳಿಗೆ ಕೇಳಿಸಿತ್ತು. ಅಶೋಕ್‌ನ ಕಡೆ ನೋಡಿದಳು. ಅವನ ದೃಷ್ಟಿ ಅವಳ ಕಡೆಗೆ ಇದ್ದರೂ,

ಅಲ್ಲಿ ಯಾವ ಭಾವನೆಗಳೂ ಕಾಣಿಸಲಿಲ್ಲ. ಮುಖ ತೊಳೆದು ಬೇಗ ಬೇಗ ಸಿದ್ಧಳಾದಳು. ಗಿರಿಜಮ್ಮನ ಮಗನಿಗೂ, ನರ್ಸಿಗೂ ಹೇಳಿದಳು.

ರಾಶಿ ಹಾಗೂ ಅವಳ ಫ್ರೆಂಡ್ಸ್ ಬರ್ತಿದಾರಂತೆ. ನಾನು ಇಲ್ಲಿ ಇದೀನಿ ಅಂತ ಅವಳಿಗೆ ಹೇಳಬೇಡಿ" ಅವರಿಬ್ಬರೂ ತಲೆಯಾಡಿಸಿದರು. ಅವಳು ಅಲ್ಲಿಂದ ಹೊರಬಿದ್ದಳು.

ಅಲಂಕೃತ ಮಂಟಪದ ಮಧ್ಯೆ, ರಿಸೆಪ್ಷನ್‌ಗಾಗಿ ಹಾಕಿದ್ದ, ಕುರ್ಚಿಗಳ ಮೇಲೆ ನವದಂಪತಿಗಳು ಕುಳಿತಿದ್ದರು. ದೂರದಿಂದಲೇ ಮೃದುಲಾ, ಕಾರ್ತೀಕನ ಕಡೆ ಕೈಯಾಡಿಸಿದಳು. ಇವನೂ ಪ್ರತಿಯಾಗಿ ಕೈಯಾಡಿಸಿದ.

"ಸಧ್ಯ ಮೃದುಲಾ ಬಂದ್ರು" ಎಂದ. ಕ್ಷೀರಾ ಅತ್ತ ಕಡೆ ನೋಡಿದಳು. ಅವಳೂ ಸಮಾಧಾನಗೊಂಡಳು. ಜಲಜ, ಮೃದುಲಾಳನ್ನು ಒಂದು ಮೂಲೆಗೆ ಕರೆದು ಒಯ್ದು ಕೋಪದಿಂದ ನುಡಿದಳು.

"ನನಗೆ, ನಿನ್ನ ಮೇಲೆ ಸಿಕ್ಕಾಬಟ್ಟೆ ಕೋಪ ಬಂದಿದೆ. ನೀನು ಹೀಗಾ ಮಾಡೋದು?"

"ನಾನೇನ್ಮಾಡ್ದೆ ಅತ್ತೆ?"

"ಕಾರ್ತೀಕ್‌ನ ನಿನಗೆ ವಹಿಸಿಕೊಟ್ಟೆ. ನೀನು ತಾಯಿಯಂತೆ ಪೋಷಿಸಿದೆ. ಈಗ ಏನಾಯ್ತು? ಅವನನ್ನು ದೂರ ಮಾಡ್ತಿದೀಯಲ್ಲ. ಇದು ನ್ಯಾಯಾನಾ? ಈಗ ಅವನ ಮದುವೆ ನಡೀತಿರೋದು ಸಂಭ್ರಮದಿಂದ ಓಡಾಡೋದನ್ನು ಬಿಟ್ಟು, ತಪ್ಪಿಸ್ಕೊಂಡು ತಿರುಗ್ತಿದೀಯಲ್ಲ. ಅವನಿಗೆ ಬೇಸರವಾಗುಲ್ವಾ?"

"ಅವನು ಹಾಗಂತ ನಿಮ್ಹತ್ರ ಹೇಳಿದ್ನಾ?"

"ಇಲ್ಲ, ಎಷ್ಟಾಗಲೀ ಗಂಡು ಹುಡುಗ. ಹಾಗೆಲ್ಲಾ ಬಾಯಿಬಿಟ್ಟು ಹೇಳ್ತಾನಾ? ನಾನು ಹೆತ್ತ ತಾಯಿ. ಆದರೆ, ನೀನು ನನಗಿಂತ ಹೆಚ್ಚು. ನಿನಗೆ ಗಂಡ ಇದ್ದಿದ್ರೆ ನಿನ್ನನ್ನೇ ಹಸೆಮಣೆಯ ಮೇಲೆ ಕೂರಿಸಬಹುದಾಗಿತ್ತು" ಹಾಗೆ ಹೇಳಿ ತಕ್ಷಣವೇ ನಾಲಿಗೆಯನ್ನು ಕಚ್ಚಿಕೊಂಡಳು.

"ನಾನು ಹಣೆಮಣೆ ಮೇಲಾ? ನನಗೆ ಆ ಆಸೆಯೇ ಇಲ್ಲ. ಅಲ್ಲದೇ..."

"ಹೋಗ್ಲಿ ಬಿಡು, ನಾನೂ ಪೆದ್ದು ಪೆದ್ದಾಗಿ ಮಾತನಾಡಿ ಬಿಡ್ತೀನಿ. ನಿನ್ನ ಗಂಡ ನಿನ್ನ ಸಂಸಾರ ಅಂತ ನಿನಗೇ ಇದ್ದಿದ್ರೆ, ನಮ್ಮ ಕಾರ್ತೀಕ್‌ನ ನೀನ್ಯಾಕೆ ಸಾಕ್ತಿದ್ದೆ? ನಾನ್ಯಾಕೆ ಕೊಡ್ತಿದ್ದೆ. ಬೇಜಾರು ಮಾಡ್ಕೋಬೇಡ"

"ಇಲ್ಲ ಅತ್ತೆ, ನನಗೆ ಯಾವ ಬೇಸರವೂ ಇಲ್ಲ. ಈಗಲೂ ನಿಮಗೇ ಅವನ ಮೇಲೆ ಸಂಪೂರ್ಣ ಹಕ್ಕಿರುವುದು ಅಧಿಕಾರವಿರುವುದು"

"ಅಂದ್ರೇ... ನೀನು ಅವನನ್ನು ಸಾಕಿದ್ದಕ್ಕೆ ಯಾವ ಅರ್ಥವೂ ಇಲ್ಲವೆ ಹಾಗಾದ್ರೆ?"

"ಯಾವ ಅರ್ಥದಲ್ಲಿ ಹೇಳ್ತಿದೀರಿ ಅತ್ತೆ? ನಂಗೆ ಗೊತ್ತಾಗ್ತಿಲ್ಲ"

"ಮೃದುಲಾ ನೀನು ಜಾಣೆ. ಕಾಲೇಜ್ನಲ್ಲಿ ಮೇಷ್ಟ್ರಾಗಿದೀಯ. ನಿನಗೆ ಗೊತ್ತಾಗ್ಲಿಲ್ಲ ಅಂದ್ರೆ ನಾನು ನಂಬೋಲ್ಲ. ಹೋಗ್ಲಿ ಬಿಡು, ನಾನು ಮತ್ತೆ ಮಾತಾಡೋಲ್ಲ"

"ರಾಶಿ ಎಲ್ಲಿ ಕಾಣ್ತಿಲ್ಲವಲ್ಲ... ಸಾಕ್ಷಿಯೂ ಹೊರಕ್ಕೆ ಬಂದಿಲ್ಲ. ಇಬ್ಬರೂ ಎಲ್ಲಿ ಹೋದ್ರು?" ಮೃದುಲಾ ಮಾತಿನ ಧಾಟಿಯನ್ನು ಬದಲಾಯಿಸಿದಳು.

"ಸಾಕ್ಷಿಗೆ ಆಯಾಸವಾಗಿದೆ. ಬಸಿರಿ ಹುಡುಗಿ, ಅವಳ ಅತ್ತೆಯಂತೂ ಅವಳಿಗೆ ತಿಳುವಳಿಕೆಯನ್ನು ಹೇಳ್ತಾನೇ ಇರ್ತಾರೆ. ರೆಸ್ಟ್ ತಗೊಳ್ತಿರಬಹುದು. ರಾಶಿ, ತನ್ನ ದಂಡಿನ ಹುಡುಗಿಯರ ಜೊತೇಲಿ ತಿರುಗಾಡ್ತಿರಬಹುದು. ಅದಕ್ಕೆ ಇನ್ನೇನು ಕೆಲಸ? ಹೇಳೋರಿಲ್ಲ ಕೇಳೋರಿಲ್ಲ" ಮೃದುಲಾ ಜಲಜಳನ್ನೇ ತೀಕ್ಷ್ಣವಾಗಿ ನೋಡಿದಳು.

"ಅತ್ತೇ, ನಾನು ಸಾಕ್ಷೀನ ಮಾತ್ನಾಡ್ಸಿಕೊಂಡು ಬರ್ತೀನಿ"

"ಅವಳ ಜೊತೆಗೆ ಅವಳ ಗಂಡ ಇದಾನೆ. ಅಲ್ಲಿ ನಿಂಗೇನು ಕೆಲಸ? ಕೂತ್ಕೋ ನಿನ್ಹತ್ರ ನಾನು ಮಾತಾಡ್ಬೇಕು. ನಾವುಗಳು ಊರಿಗೆ ಹೊರಟು ಹೋದ್ರೆ, ನೀನು ಮತ್ತೆ ಸಿಗೋದು ಇನ್ಯಾವಾಗ್ಲೋ?"

"ಹುಂ, ಹೇಳಿ ಅತ್ತೆ... ಏನು ವಿಷಯ?" ಇಬ್ಬರೂ ಅಕ್ಕಪಕ್ಕ ಕುಳಿತರು.

"ಕಾರ್ತೀಕ್, ಕ್ಷೀರಾ ಇಬ್ಬರೂ ನಿನ್ನ ಮನೇಲಿ ಇನ್ನು ಮುಂದೆ ಇರುವುದು ನಿನಗೆ ಇಷ್ಟವಿಲ್ಲದಿದ್ರೆ ನೇರವಾಗಿ ಹೇಳಿಬಿಡು. ಈಗ ನನ್ನ ಮಗನೂ ಚೆನ್ನಾಗಿ ಸಂಪಾದಿಸ್ತಾ ಇದಾನೆ. ಬೇರೆ ಮನೆ ಮಾಡ್ಕೊಂಡು ಅವರ ಪಾಡಿಗೆ ಅವರು ಇರ್ತಾರೆ"

"ನಾನು ಹಾಗೆಂದೂ ಹೇಳಿಲ್ಲವಲ್ಲ"

"ಹೇಳಿಲ್ಲ. ಆದರೆ ಯಾಕೋ ನೀನು ಮೊದಲಿನಂತೆ ಇಲ್ಲ ಅಂತ ಅನ್ನಿಸ್ತಿದೆ"

"ಇಲ್ಲ, ಅತ್ತೆ ನಾನು ಏನೂ ಬದಲಾಗಿಲ್ಲ" ನಗುತ್ತಾ ನುಡಿದಳು.

"ಹಾಗಾದ್ರೆ, ನೀನೇ ಸಾಕಿ ಬೆಳೆಸಿದ ಕಾರ್ತೀಕ್‌ನ ಮದುವೆಗೆ ಬರದೆ ಇರುವಂಥ ಪ್ರಬಲವಾದ ಕಾರಣ ಏನು? ನಾವು ಏನೂಂತ ತಿಳ್ಕೋಬೇಕು?"

"ಶ್ ! ಮೆಲ್ಲಗೆ ಮಾತಾಡಿ ಅತ್ತೆ. ಕೇಳಿಸ್ಕೊಂಡೋರು, ನಾವಿಬ್ರೂ ಜಗಳ ಆಡ್ತಿದೀವಿ ಅಂತ ಅಂದ್ಕೋತಾರೆ"

"ಜಗಳ ಅಂತ್ಲಾದ್ರೂ ಅಂದ್ಕೊಳ್ಳಲಿ, ಚರ್ಚೆ ಅಂತ್ಲಾದ್ರೂ ಅಂದ್ಕೊಳ್ಳಲಿ, ನನ್ನ ಕಣ್ಣ ಮುಂದೆ ಬೆಳೆದ ಹುಡುಗಿ ನೀನು. ಒಂದು ಕಾಲದಲ್ಲಿ ಅಕ್ಕತಂಗಿಯರಂತೆ ನಾವಿಬ್ಬರೂ ಬೆಳೆದೆವು. ನಿನ್ನ ಸಂಸಾರ ಮುರಿದು ಬಿದ್ದಾಗ, ಸ್ನೇಹಿತೆಯಂತೆ, ನಿನಗೆ ನಾನು ತಿಳುವಳಿಕೆಯನ್ನು ಹೇಳಿದ್ದೆ. ನಿನ್ನ ಒಂಟಿತನವನ್ನು ನೋಡಲಾರದೇ, ಕಾರ್ತೀಕ್‌ನ ನಿನ್ನ ಜೊತೆಗೆ ಅಂತ ಬಿಟ್ಟೆ. ಈಗ ಅವನಿಂದ ನಿಂಗೆ ತೊಂದರೆ ಆಗುತ್ತಿದೆಯಾ ನೇರವಾಗಿ ಹೇಳು..." ಮೃದುಲಾ ಅತ್ತಿತ್ತ ನೋಡಿ ಅತ್ತೆಯನ್ನು ಎಬ್ಬಿಸಿದಳು.

"ಸರಿ, ಹಾಗಾದ್ರೆ ಇಲ್ಲಿ ಮಾತು ಬೇಡ. ರೂಮಿನಲ್ಲಿ ಕೂತು ಮಾತನಾಡೋಣ" ಇಬ್ಬರೂ, ಪಕ್ಕದಲ್ಲೇ ಇದ್ದ ರೂಮಿಗೆ ಹೋಗಿ, ಬಾಗಿಲನ್ನು ಹಾಕಿಕೊಂಡು ಕುಳಿತರು.

"ನಾನೀಗ ಒಂದು ಮುಖ್ಯವಾದ ನಿರ್ಧಾರವನ್ನು ತೆಗೆದುಕೊಂಡಿದ್ದೇನೆ. ಕಾಲೇಜಿನ, ಲೆಕ್ಚರರ್ ಕೆಲಸಕ್ಕೆ ರಾಜೀನಾಮೆ ಕೊಡ್ತಿದೇನೆ"

"ಸರಿ... ಅದಕ್ಕೇ..."

"ಯಾಕೆ ಕೆಲಸಾನ ಬಿಡ್ತಿದೀಯ ಅಂತ ಕೇಳುಲ್ವಾ ಅತ್ತೆ?"

"ನೀನೇ ಹೇಳಿ ಬಿಡು. ಪ್ರಬಲವಾದ ಕಾರಣ ಏನಿದೆಯೋ ಯಾರಿಗೆ ಗೊತ್ತು?"

"ನಾನು ನನ್ನ ಗಂಡನ ಮನೆಗೆ ಹೋಗ್ತಿದೀನಿ" ಜಲಜ ಅಗಲವಾಗಿ ಬಾಯನ್ನು ಬಿಟ್ಟಳು.

"ಗಂಡನಾ? ಇಷ್ಟು ವರ್ಷಗಳ ಮೇಲೆ? ಈಗ ಎಲ್ಲಿದಾನೆ?"

"ಇಲ್ಲೇ ಇದಾರೆ. ಇದೇ ಊರ್ನಲ್ಲಿದಾರೆ"

"ಅವನ ಹೆಂಡ್ತಿ ಮಕ್ಕಳು ನಿನ್ನನ್ನ ಸೇರಿಸ್ತಾರೇನೇ ಮೃದುಲಾ? ಸ್ವಾಭಿಮಾನವನ್ನು ಬಿಟ್ಟು ಅಲ್ಲಿ ಹೇಗೇ ಇರ್ತೀಯಾ? ನಿನ್ನ ಪಾಡಿಗೆ ನೀನು ಹಾಯಾಗಿದ್ದೆ. ಈಗ ಯಾಕೇ ಈ ಚಪಲ, ಈ ವಯಸ್ನಲ್ಲಿ?"

"ಚಪಲ ಯಾರಿಗೂ ಇಲ್ಲ ಅತ್ತೆ. ಈಗ ಅವರಿಗೆ ಹೆಂಡತಿಯ ಅವಶ್ಯಕತೆ ಇದೆ"

"ನೀನು ಅದೇನು ಹೇಳ್ತಿದೀಯೋ, ಒಂದೂ ಸರಿಯಾಗಿ ಗೊತ್ತಾಗ್ತಿಲ್ಲ. ಅವನ ಎರಡನೇ ಹೆಂಡ್ತಿ ಏನಾದ್ಲು? ಅವಳೂ ಅವನನ್ನು ದೂರ ಮಾಡಿದಾಳಾ?"

"ಇಲ್ಲ ಅತ್ತೆ, ಅವರ ಹೆಂಡತಿ ಈಗ ಬದುಕಿಲ್ಲ"

"ಅವಳು ಸತ್ತ ಮೇಲೆ, ನಿನ್ನ ನೆನಪು ಬಂತಾ ಪುಣ್ಯಾತ್ಮಂಗೆ?"

"ಇಲ್ಲ ಅತ್ತೆ, ಅವರಿಗೆ ಏನೂ ಗೊತ್ತಿಲ್ಲ. ನಾನೇ ಅವರ ಜೊತೆಯಲ್ಲಿ ಇರುವುದಕ್ಕೆ ನಿರ್ಧರಿಸಿರುವುದು. ಅವರ ಆರೋಗ್ಯ ಚೆನ್ನಾಗಿಲ್ಲ. ಹಾಸಿಗೆ ಹಿಡಿದು ಮಲಗಿ ಬಿಟ್ಟಿದಾರೆ"

"ಹಾಸಿಗೆ ಹಿಡಿದು ಮಲಗಿರೋನ ಜೊತೆ, ಈಗ ಏನು ಸಂಸಾರ ಮಾಡ್ತೀಯೇ ಮೃದುಲಾ? ಅವನ ಸೇವೆ ಮಾಡೋಕೆ ಈಗ ನೀನೇ ಆಗ್ಬೇಕಾ? ಮಕ್ಕಳಿರಬಹುದು. ಆಳುಕಾಳುಗಳಿರಬಹುದು. ಈಗ ನೀನು ಹೋಗಿ ಅಲ್ಲಿರುವುದು ಹಾಸ್ಯಾಸ್ಪದವಾಗಿರುತ್ತೆ, ಖಂಡಿತಾ ಚೆನ್ನಾಗಿರುಲ್ಲ"

"ಅದ್ಯಾಕ್ಹಾಗಂತೀರಿ ಅತ್ತೆ? ನನ್ನ ಗಂಡನ ಜೊತೆ ನಾನು ಬಾಳುವುದು ಅದ್ಹೇಗೆ ಹಾಸ್ಯಾಸ್ಪದವಾಗುತ್ತೆ?"

"ಅವನೀಗ ನಿನ್ನ ಗಂಡನಾಗಿ ಎಲ್ಲಿ ಉಳಿದಿದಾನೆ? ನಿನಗೆ ಡೈವೋರ್ಸ್ ಕೊಟ್ಟ ದಿನವೇ ನಿಮ್ಮಿಬ್ಬರ ಪತಿ ಪತ್ನಿ ಅನ್ನೋ ಸಂಬಂಧ ಕೊನೆಯಾಗಿತ್ತಲ್ಲ"

"ಕಾನೂನು ಪ್ರಕಾರ ನಾವಿಬ್ಬರೂ ಪತಿ ಪತ್ನಿಯರಾಗಿರಲಿಲ್ಲ ನಿಜ. ಆದರೆ ನಾನು ದೂರದಲ್ಲಿದ್ದು ಅವರ ಪತ್ನಿಯಾಗಿಯೇ ಉಳಿದಿದೀನಿ"

"ಅವನು ಮತ್ತೆ ಮದುವೆಯಾದ. ನೀನೂ ಆಗಬಹುದಾಗಿತ್ತು ಅಲ್ವಾ?"

"ಅವರು, ಅವರ ತಾಯಿಯ ಮಾತಿಗೆ ಬೆಲೆ ಕೊಟ್ಟು ಮತ್ತೆ ಮದುವೆಯಾದರು. ಇಲ್ಲಿ ನಾನು ಅಪ್ಪನ ಮಾತಿಗೆ ಬೆಲೆ ಕೊಟ್ಟು ಇಲ್ಲೇ ಉಳಿದು ಬಿಟ್ಟೆ. ಆದರೆ ಅಪ್ಪ ಸ್ವಾರ್ಥಿಯಾಗಿ ಬಿಟ್ಟರು. ನನಗೆ ಮರು ಮದುವೆಯ ಪ್ರಯತ್ನವನ್ನೇ ಮಾಡಲಿಲ್ಲ. ನನ್ನ ಒಂಟಿತನದ ಬಗ್ಗೆ ಅವರಿಗೆ ಏನೂ ಅನ್ನಿಸಲಿಲ್ಲವೇನೋ? ಅಲ್ಲದೇ ಮರು ಮದುವೆಯ ಆಸೆ ನನಗೆ ಬರಲೇ ಇಲ್ಲ... ಅಪ್ಪ, ನನಗೆ ಅನ್ಯಾಯ ಮಾಡಿಬಿಟ್ಟರು. ಅಪ್ಪನ ಕಂಡೀಷನ್‌ಗೆ ಯಾರು ಒಪ್ತಿದ್ರು ನೀವೇ ಹೇಳಿ"

"ಇದರಲ್ಲಿ ತಪ್ಪೇನಿದೆ? ಒಬ್ಬಳೇ ಮಗಳು. ಅಳಿಯ, ಮನೆ ಅಳಿಯನಾಗಿರಲಿ ಅಂತ ಅಣ್ಣ ಬಯಸಿದ. ಅದು ಸ್ವಾಭಾವಿಕ."

"ಈ ವಿಷಯದಲ್ಲಿ ನಿಮಗೆ, ನಿಮ್ಮ ಅಣ್ಣನದು ತಪ್ಪು ಅಂತ ಎಂದೂ ಅನ್ನಿಸಲಿಲ್ವಾ ಅತ್ತೆ? ಈಗ ಕಾರ್ತೀಕ್ ಕ್ಷೀರನ್ನ ಮದುವೆಯಾಗಿದಾನೆ. ಅವರ ಮನೇಲಿ ಬರೀ ಹೆಣ್ಣು ಮಕ್ಕಳು. ಕ್ಷೀರಾ, ಕಾರ್ತೀಕ್ ಅಲ್ಲೇ ನಮ್ಮ ಮನೆಯಲ್ಲಿರಲಿ ಅಂತ ಹೇಳಿದರೆ, ನೀವು ಒಪ್ತೀರಾ ಅತ್ತೆ? ಮನೆ ಅಳಿಯನಾಗಿ ಅವರ ಮನೆಯಲ್ಲಿರಲಿ ಅಂತ ಕಳಿಸ್ತೀರಾ? ನಿಮಗೆ ಒಪ್ಪಿಗೇನಾ?"

ಜಲಜ ಹುಬ್ಬುಗಂಟಿಕ್ಕಿದಳು. "ಈಗ ಅವನ ಮಾತ್ಯಾಕೆ? ಇನ್ನು ಇಬ್ಬರು ಹೆಣ್ಣು ಮಕ್ಕಳಿದಾರಲ್ಲ ಅಲ್ಲಿ?"

"ಸಾಕ್ಷಿ ದಿನ ತುಂಬಿದ ಬಸುರಿ. ರಾಶಿ ಇನ್ನು ಚಿಕ್ಕವಳು. ಆತನಿಗೆ ಅನಾರೋಗ್ಯ. ಅಲ್ಲಿ ಬೇರೆ ಗಂಡು ದಿಕ್ಕಿಲ್ಲ. ಈಗ ಬೇರೆ ದಾರಿ ಏನಿದೆ?"

"ಹೆಣ್ಣು ಮಕ್ಕಳ ಮನೆಗಳಲ್ಲಿ ಆತನೇ ಬಂದು ಇರಬಹುದಲ್ಲ" ಜಲಜ ಅಸಹನೆಯಿಂದ ನುಡಿದಳು.

"ಇಲ್ಲ ಅತ್ತೆ. ಸಾಕ್ಷಿಯ ಗಂಡನ ಮನೆಯಲ್ಲಿ ದೊಡ್ಡ ಸಂಸಾರ. ಅಲ್ಲಿ ಇಟ್ಟುಕೊಂಡು ಚೆನ್ನಾಗಿ ನೋಡಿಕೊಳ್ಳುವುದು ಕಷ್ಟವೇ. ಕಾರ್ತೀಕ್ ನನ್ನ ಮನೆಯಲ್ಲೇ ಇರ್ತಾನೆ. ಅಲ್ಲಿ ಆತ ಬಂದು ಇರುವುದಕ್ಕೆ ನಾನು ಒಪ್ಪುವುದಿಲ್ಲ"

"ಯಾಕೆ? ನಿನಗೇನು ಕಷ್ಟ ಆಗುತ್ತೆ? ಅವರ ಮಗಳು ಇರ್ತಾಳೆ ಅವರ ಸೇವೆ ಮಾಡೋಕೆ. ಮನೆ ದೊಡ್ಡದಾಗಿದೆ, ಅನುಕೂಲವಿದೆ. ನಿಂಗೇನು ತೊಂದರೆ?"

"ಅದು, ನನ್ನ ತಂದೆಯ ಮನೆ. ಆ ಮನೆಗೆ ನನ್ನ ಗಂಡ ಬಂದು, ಅಲ್ಲಿಯೇ ಇರಲು ಒಪ್ಪಿಕೊಂಡಿರಲಿಲ್ಲ"

"ಅದಕ್ಕೂ ಇದಕ್ಕೂ ಏನು ಸಂಬಂಧ?"

"ಸಂಬಂಧ ಇದೆ... ಆ ನನ್ನ ಗಂಡನೇ ಈಗ ಕಾರ್ತೀಕನ ಮಾವ, ನಿಮ್ಮ ಸೊಸೆ ಕ್ಷೀರಾಳ ತಂದೆ. ಆಗ ಚೆನ್ನಾಗಿದ್ದು ಆರೋಗ್ಯವಂತರಾಗಿದ್ದ ಕಾಲದಲ್ಲಿ ಆ ಮನೆಗೆ ಬರಲಿಲ್ಲ. ಈಗ ಅಸಹಾಯಕರಾಗಿ, ಅನಾರೋಗ್ಯದಿಂದ ಮಲಗಿರುವವರನ್ನು ಮೋಸದಿಂದ ಆ ಮನೆಯಲ್ಲಿ ನಾನು ಇಟ್ಟುಕೊಳ್ಳುವುದಿಲ್ಲ" ಜಲಜ ಮಾತಿಲ್ಲದಂತೆ ಕುಳಿತುಬಿಟ್ಟಳು.

"ಅದಕ್ಕೇ ನಾನೇ ಹೋಗಿ ಅವರ ಮನೆಯಲ್ಲಿ, ಅವರ ಜೊತೆಯಲ್ಲಿರುವ ನಿರ್ಧಾರವನ್ನು ಮಾಡಿದೀನಿ"

"ಇದೆಂಥಾ ನ್ಯಾಯ ಮೃದುಲಾ... ಇದು ಸರಿಯಲ್ಲ. ಎಲ್ಲವೂ ಸರಿಯಾಗಿದ್ದ ಕಾಲದಲ್ಲಿ ಅವನ ಜೊತೆ ಬಾಳಲಿಲ್ಲ. ಸಂಸಾರ ನಡೆಸಲಿಲ್ಲ. ಅವನ ಮಕ್ಕಳನ್ನು ನೀನು ಹೆರಲಿಲ್ಲ. ಈಗ ನಿನ್ನದಲ್ಲದ ಮಕ್ಕಳ ತಾಯಿಯಾಗಿ, ಅವನ ಸೇವೆಯನ್ನು ಮಾಡ್ತೀನಿ ಅಂತ ಅಂತೀಯಲ್ಲ. ನಗಬೇಕೋ, ಅಳಬೇಕೋ ನನಗೆ ಗೊತ್ತಾಗ್ತಿಲ್ಲ"

"ಯಾವುದೂ ಬೇಡ. ಈಗ ನನ್ನ ಪಾಡಿಗೆ ನನ್ನನ್ನು ಬಿಟ್ಟು ಬಿಡಿ. ಕ್ರಮೇಣ ಎಲ್ಲಾ ಸರಿ ಹೋಗುತ್ತದೆ. ಆ ನಂಬಿಕೆ ನನಗಿದೆ"

"ಬಿಟ್ಟು ಹೋಗಿದ್ದನ್ನು ಮತ್ತೆ ಜೋಡಿಸ್ತೀನಿ ಅಂತ ಅಂತೀಯಲ್ಲ. ನಿನ್ನದು ಬರೀ ಹುಚ್ಚುತನ... ಕಷ್ಟವಾಗುವುದು ನಿನಗೇ. ಆ ಹೆಣ್ಣು ಮಕ್ಕಳು ಚಿಕ್ಕವರಲ್ಲ. ಬೆಳೆದು ದೊಡ್ಡವರಾಗಿದಾರೆ. ಈ ಸಂಬಂಧಾನ ಒಪ್ಪಿಕೊಳ್ತಾರೇನೇ ಮೃದುಲಾ?"

"ಒಪ್ಪಿಕೊಂಡರೆ ಅವರಿಗೇ ಒಳ್ಳೆಯದು. ಸಾಕ್ಷಿ ಅತ್ತೆಯ ಮನೆಗೆ ಹೋಗಿ ಹಾಯಾಗಿರಬಹುದು. ಕ್ಷೀರಾ ಹೊಸ ಸಂಸಾರವನ್ನು ನಿಶ್ಚಿಂತೆಯಿಂದ ಆರಂಭಿಸಬಹುದು. ರಾಶಿ ಚಿಕ್ಕ ಹುಡುಗಿ ಮುಗ್ಧೆ. ಮಗುವಿನ ಥರ. ಅವಳಿಗೆ ಜೊತೆಯಾಗಿ ಆ ಮನೆಗೆ ಹಿರಿಯ ಹೆಂಗಸಾಗಿರ್ತೀನಿ"

"ಇವೆಲ್ಲಾ ನೀನು ಹೇಳುವಷ್ಟು ಸುಲಭವಲ್ಲ. ಅಲ್ಲಿ ನೀನು ಮಲತಾಯಿ ಅಂತ ಅನ್ನಿಸಿಕೊಳ್ತೀಯ" ಎಚ್ಚರಿಕೆ ನೀಡುವಂತೆ ನುಡಿದಳು.

"ತಾಯಿಯನ್ನು ಕಳೆದುಕೊಂಡಿರುವ ತಬ್ಬಲಿಗಳು ಅವರು. ನಾನು ತಾಯಿಯ ಸ್ಥಾನವನ್ನು ತುಂಬುತ್ತಿದೀನಿ ಅಷ್ಟೆ. ಅವರ ತಾಯಿ ಬೇರೆ ಯಾರೂ ಅಲ್ಲ. ನನಗೆ ಸ್ನೇಹಿತೆಯಾಗಿದ್ದವಳು"

"ಅವಳು ನಿನ್ನ ಸವತಿಯಾಗಿದ್ದಳು. ಅದನ್ನು ಮರೆಯಬೇಡ..."

"ಅದರಲ್ಲಿ ಅವಳ ತಪ್ಪೇನಿದೆ?"

"ಬಲು ಅಚ್ಚುಕಟ್ಟಾಗಿ ಎಲ್ಲವನ್ನು ಯೋಚಿಸಿದೀಯೆ... ಆದರೆ ದುಡುಕಬೇಡ. ಮೊದಲು ಆ ಹೆಣ್ಣು ಮಕ್ಕಳಿಗೆ ಈ ವಿಷಯವನ್ನು ತಿಳಿಸಿ, ಅವರೊಡನೆ ಮಾತನಾಡು. ಹಾಗೇ, ನಿನ್ನ ಈ ನಿರ್ಧಾರ ಆತನಿಗೆ ಒಪ್ಪಿಗೆ ಇದೆಯೋ ಇಲ್ಲವೋ ಅಂತ ತಿಳಿದುಕೊಂಡು ಮುಂದುವರಿ. ಮತ್ತೆ ಎಡವಟ್ಟಾಗಬಾರದು"

"ಇನ್ನು ಮತ್ತೆ ಎಡವಟ್ಟಾಗಲು ಹೇಗೆ ಸಾಧ್ಯ ನೀವೇ ಹೇಳಿ ಅತ್ತೆ. ಯಾರು ಒಪ್ಪಲಿ ಬಿಡಲಿ, ನಾನಂತೂ ಅವರ ಜೊತೆಯಲ್ಲಿ ಇರುವವಳೇ..."

"ನಿನ್ನ ಈ ನಿರ್ಧಾರ ಸಫಲವಾಗಲಿ, ಮತ್ತೆ ದ್ರೋಹವಾಗದಿರಲಿ ಅಂತ ಹಾರೈಸ್ತೀನಿ" ಜಲಜ ಭಾವುಕತೆಯಿಂದ ನುಡಿದಾಗ, ಮೃದುಲಾ ಅತ್ತೆಯ ಭುಜಕ್ಕೆ ಒರಗಿದಳು. ಜಲಜಳ ಬಲಗೈ ಅವಳ ತಲೆಯ ಮೇಲೆ ಆಡಿತು.

"ಥ್ಯಾಂಕ್ಸ್ ಯೂ ಅತ್ತೆ. ಈಗ ಎದೆಗುದಿ ಎಷ್ಟೋ ಕಡಿಮೆ ಆಯಿತು. ನನಗೆ ನಾನೇ ಧೈರ್ಯವಂತೆ ಅಂತ ಹೇಳಿಕೊಂಡ್ರೂ, ಏನೋ ಆತಂಕ ಕಾಣುತ್ತಿತ್ತು"

"ಬೆಳಿಗ್ಗೆ ಅವನನ್ನು ನೋಡಿ, ಈ ಮುಂಚೆ ಎಲ್ಲಿಯೋ ನೋಡಿದೀನಿ ಅಂತ ಅನ್ನಿಸ್ತು. ಆತನೇ ಕಾರ್ತೀಕನ ಮಾವ ಅಂತ ತಿಳಿದಾಗ, ಬಹಳ ಬೇಸರವಾಗಿತ್ತು. ಮನುಷ್ಯ ಬಹಳ ಇಳಿದು ಹೋಗಿದಾನೆ. ಗುರುತೇ ಸಿಗಲಿಲ್ಲ. ಅವನು ಕೆಟ್ಟವನು ಅಂತ ನಾನು ಹಳಿಯುವುದಿಲ್ಲ. ಆದರೂ, ಅವನಿಗೆ ಇಂಥ ಅವಸ್ಥೆ ಬರಬಾರದಾಗಿತ್ತು ಛೇ" ಅವಳು ಮರುಕದಿಂದ ನುಡಿದಾಗ, ಮೃದುಲಾ ಅವಳ ಕೈಗಳನ್ನು ಹಿಡಿದಳು.

"ಇನ್ನೆಂದೂ ನನ್ನ ಎದುರಿಗೆ ಅವರ ಬಗ್ಗೆ, ಅಯ್ಯೋ ಪಾಪ, ಅಂತೆಲ್ಲಾ ಹೇಳ್ಬೇಡಿ. ನಂಗೆ ಬೇಸರವಾಗುತ್ತೆ"

"ಏನೋಮ್ಮ, ನಂಗ್ಯಾಕೋ ಎಲ್ಲಾ ವಿಚಿತ್ರವಾಗಿ ಕಾಣುತ್ತೆ. ದೇವರೇ ನಿನ್ನನ್ನು ಕಾಪಾಡ್ಬೇಕು" ಕೈಗಳನ್ನು ಮೇಲೆತ್ತಿದಳು.

"ಈ ಪ್ರೇರಣೆ, ಆ ನಿಮ್ಮ ದೇವರದ್ದೇ. ನೀವು ನಿರಾತಂಕವಾಗಿರಿ" ಮೃದುಲಾ ಮುಗುಳ್ನಕ್ಕು ಎದ್ದಳು. ಜಲಜ ನಿಟ್ಟುಸಿರು ಬಿಟ್ಟಳು.

ರಿಸೆಪ್ಶನ್ ಮುಗಿಯುವ ಮೊದಲೇ ಮೃದುಲಾ ತನ್ನ ಊಟವನ್ನು ಮುಗಿಸಿ, ಡಬ್ಬಿಗಳಿಗೆ ಒಂದಿಷ್ಟನ್ನು ತುಂಬಿಸಿಕೊಂಡು, ಅಲ್ಲಿಂದ ಹೊರಟಳು. ಅವಳು ಕಾರಿನ ಬಳಿಗೆ ಬರುವ ಹೊತ್ತಿಗೆ, ರಾಶಿ ತನ್ನ ಸ್ನೇಹಿತೆಯರೊಂದಿಗೆ ಆಟೋರಿಕ್ಷಾದಲ್ಲಿ ಬಂದು ಇಳಿದಳು. ಮೃದುಲಾ ರಾಶಿಯನ್ನು ಸಮೀಪಿಸಿದಳು.

"ರಾಶೀ... ಎಲ್ಲಿಂದ ಬರ್ತಿದೀಯ. ಇಷ್ಟು ಲೇಟಾಗಿ?" ಅವಳು ತನ್ನ ಸ್ನೇಹಿತೆಯರ ಕಡೆ ನೋಡಿದಳು. ಆದರೆ ಉತ್ತರಿಸಲಿಲ್ಲ.

"ರಾಶೀ... ನಾನು ನಿನ್ನನೇ ಕೇಳ್ತಾ ಇರೋದು. ನೀನು ಮನೆಗೆ ಹೋಗಿದೀಯ ಅಂತ ನಿನ್ನ ಅಕ್ಕ ಹೇಳಿದ್ಲು. ಆದರೆ ಈಗ ಬರ್ತಿದೀಯ. ಎಲ್ಲಿಗೆ ಹೋಗಿದ್ದೆ?"

"ಮನೆಗೆ ಹೋಗಿದ್ದೆವು ಮೇಡಂ. ಅಲ್ಲಿಂದ ಇನ್ನೊಬ್ಬ ಫ್ರೆಂಡ್ ಮನೆಗೆ ಹೋದೆವು. ಅಲ್ಲಿ ಡಿ.ವಿ.ಡಿ.ಯಲ್ಲಿ ಯಾವುದೋ ಪಿಕ್ಚರ್ ನೋಡ್ತಾ ಕೂತುಬಿಟ್ಟೆವು, ಹೊತ್ತಾಗಿ ಹೋಯ್ತು. ಸಾರಿ ಮೇಡಂ"

"ನನಗೆ ಸಾರಿ ಹೇಳಿದ್ರೆ ಆಯ್ತಾ? ನಿನ್ನ ಅಕ್ಕಂದಿರು, ಭಾವ ಎಲ್ಲಾ ನಿನ್ನನ್ನ ಬೈಯಲ್ವಾ? ಕೇಳಿದ್ರೆ ಏನ್ಹೇಳ್ತೀಯಾ?"

"ನಿಜಾನೇ ಹೇಳ್ತೀನಿ. ನಂಗೇನು ಭಯ? ಅಲ್ಲದೇ ನನ್ನ ಬಗ್ಗೆ ಆತಂಕ ಪಡೋಕೆ ಯಾರಿದಾರೆ? ಸಾಕ್ಷಿಗೆ, ಅವಳ ಸುಸ್ತು ಸಂಕಟದಲ್ಲಿ ನನ್ನ ನೆನಪು ಎಲ್ಲಿರುತ್ತೆ? ಕ್ಷೀರಾ ಇವತ್ತು ಈ ಲೋಕದಲ್ಲೇ ಇಲ್ಲ. ನಾನು ಅಲ್ಲಿ ಇಲ್ಲ ಅನ್ನೋದು ಕೂಡಾ ಯಾರಿಗೂ ಗೊತ್ತಾಗಿರುಲ್ಲ"

"ಹಾಗೆಲ್ಲಾ ಹಗುರವಾಗಿ ಮಾತಾಡ್ಬೇಡ ರಾಶೀ. ಇದು ತಪ್ಪಲ್ವಾ? ನಿಮ್ಮ ಮನೆಯ ಫಂಕ್ಷನ್‌ನಲ್ಲಿ ನೀನೇ ಇಲ್ಲದೇ, ಯಾವುದೋ ಫ್ರೆಂಡ್ ಮನೇಲಿ ಕೂತು ಪಿಕ್ಚರ್ ನೋಡ್ತಿದ್ದೆ ಅಂತ ಹೇಳ್ತಿದೀಯಲ್ಲ. ನಿಮ್ಮ ತಂದೆಗೆ ಈ ವಿಷಯ ತಿಳಿದರೆ ಅವರಿಗೆ ಬೇಸರವಾಗುಲ್ವಾ?"

"ಅವರಿಗೆ ಈ ವಿಷಯ ತಿಳಿಸೋರು ಯಾರು? ಒಂದು ವೇಳೆ ತಿಳಿದರೂ ಅವರಿಗೆ ಬೈಯೋಕೇ ಆಗುಲ್ಲವಲ್ಲ..."

"ರಾಶೀ..." ಮೃದುಲಾ ಸ್ವಲ್ಪ ಎತ್ತರದ ಧ್ವನಿಯಲ್ಲಿ ಕೂಗಿ ಸುಮ್ಮನಾದಳು.

"ಹೋಗ್ಲಿ ಬಿಡಿ ಮೇಡಂ. ರಾಶಿ ಏನೂ ದಿನಾ ದಿನಾ ಹೀಗೆ ಸುತ್ತಾಡುಲ್ಲ. ನಾವೇ ಬಲವಂತವಾಗಿ ಕೂರಿಸಿಕೊಂಡೆವು"

"ಸುಮ್ನಿರಿ, ನಿಮ್ಮ ಕಿತಾಪತಿಯೆಲ್ಲಾ ನನಗೆ ಗೊತ್ತು. ಈಗ ತುಂಬಾ ಹೊತ್ತಾಗಿದೆ. ಒಳಗೆ ಹೋಗಿ. ಇವತ್ತು ರಾತ್ರಿ, ನೀವೆಲ್ಲಾ ಇಲ್ಲೇ ಇರ್ತೀರೋ, ಅಥವಾ ನಿಮ್ಮ ನಿಮ್ಮ ಮನೆಗೆ ಹೋಗ್ತೀರೋ?"

"ಇಲ್ಲೇ ಇರ್ತೀವಿ ಮೇಡಂ. ನಾಳೆ ನಾವುಗಳೆಲ್ಲ, ಬೀಗರ ಜೊತೆ ಅವರ ಊರಿಗೆ ಹೋಗ್ತಾ ಇದೀವಿ"

"ಹೌದಾ?... ಕಾಲೇಜು?" ಮೃದುಲಾ ಹುಬ್ಬೇರಿಸಿದಳು.

"ಒಂದು ದಿನ ತಾನೇ?... ನೀವು ಬರೋಲ್ವಾ ಮೇಡಂ...?"

"ಇಲ್ಲ, ನನಗೆ ಬೇರೆ ಕೆಲಸವಿದೆ. ಗುಡ್‌ನೈಟ್ ಗರ್ಲ್ಸ್...." ಎಂದು ಹೇಳಿ ಕಾರನ್ನೇರಿದಳು. ಅವಳ ಮನಸ್ಸು ಬೇರೇನನ್ನೋ ಯೋಚಿಸುತ್ತಿತ್ತು.

"ಅಬ್ಬಾ... ಮೇಡಂ ಎಲ್ಲಿ ಬೈದು ಬಿಡ್ತಾರೋ ಅಂತ ಹೆದರಿದ್ದೆ"

"ಮೇಡಂಗೆ ನಿನ್ನನ್ನ ಕಂಡರೆ ವಿಪರೀತ ಇಷ್ಟ. ನಿನ್ನನ್ನ ಅವರು ಎಂದೂ ಬೈದೇ ಇಲ್ಲ. ನೀನ್ಯಾಕೇ ಅವರ ಮನೇಲಿ ಹೋಗಿ ಇರಬಾರದು? ಇಲ್ಲಿ ನಿನ್ನ ಮನೇಲಿ ನೀನು ಒಬ್ಬಳೇ ಆಗಿಬಿಡ್ತೀಯ. ಅಲ್ಲಾದ್ರೆ ಕ್ಷೀರಾ ಅಕ್ಕ ಇರ್ತಾರಲ್ಲ"

"ನೋಡೋಣ ಆ ಮಾತು ಬಂದಾಗ... ಅವರುಗಳೇ ಆ ಮಾತನ್ನೆತ್ತಲಿ. ನಾನೇ ಹೇಗೆ ಹೇಳಲಿ? ಆದರೆ ಕರೆದರೆ ನಾನು ರೆಡಿ" ರಾಶಿ ನಗುತ್ತಾ ನುಡಿದಾಗ, ಮೈತ್ರಿ ಚಿವುಟಿದಳು.

"ಘಾಟಿ ಕಣೇ ನೀನು... ಆದರೆ, ನಾವುಗಳ್ಯಾರೂ ಈಗಿನಂತೆ ಫ್ರೀಯಾಗಿ ಮೀಟ್ ಮಾಡುಕ್ಕೆ ಆಗುಲ್ಲವಲ್ಲೇ..."

"ಈಗ್ಲಿಂದ ಅಳ್ಬೇಡ್ವೇ... ನಡೀ ಒಳಕ್ಕೆ ಹೋಗೋಣ" ಎಲ್ಲರೂ ಛತ್ರದ ಒಳಕ್ಕೆ ಬಂದರು.

* * *

ಮೃದುಲಾ ಅತ್ತ ಹೋದ ಕೆಲವೇ ಗಂಟೆಗಳಲ್ಲಿ ಮೃದುಲಾ, ಅಶೋಕನ ಮೊದಲ ಪತ್ನಿಯಾಗಿದ್ದವಳು ಎನ್ನುವ ವಾರ್ತೆ ನೆಂಟರಿಷ್ಟರಲ್ಲಿ ಹರಡಿತು. ಸಾಕ್ಷಿಯ ಅತ್ತೆಗೂ ಈ ವಿಷಯ ತಿಳಿಯಿತು. ಆಕೆ ತನ್ನ ಮಗನಿಗೆ ತಕ್ಷಣವೇ ತಿಳಿಸಿದಳು. ಸಂಜಯ್ ತಕ್ಷಣವೇ ಹೆಂಡತಿಯ ಬಳಿಗೆ ಬಂದ.

"ಒಂದು ಹೊಸ ವಿಷಯ ತಿಳೀತು. ನೀನು ನಂಗೆ ಹೇಳಿರ್ಲೇ ಇಲ್ಲ" ಸಾಕ್ಷಿಯ ಕಡೆ ತೀಕ್ಷ್ಣವಾಗಿ ನೋಡಿ ಬಾಣ ಎಸೆದಂತೆ ನುಡಿದ.

"ಯಾವ ವಿಷಯ? ಸುಸ್ತಾಗಿ ಮಲಗಿದೀನಿ. ನಿಮ್ಮದೇನು ತಮಾಷೆ?"

"ತಮಾಷೆ ಅಲ್ಲ, ತಾಜಾ ಸುದ್ದಿ. ನಿಮ್ಮ ತಾಯಿ, ನಿಮ್ಮ ತಂದೆಗೆ ಎರಡನೆ ಪತ್ನಿ ಅಂತ ಗೊತ್ತಾಯ್ತು. ನೀನು ಹೇಳೇ ಇರ್ಲಿಲ್ಲ"

"ಹೌದಾ? ಯಾರು ಹೇಳಿದ್ರು? ನಿಜಾನಾ? ನಾನು ನಂಬುಲ್ಲ" ಸಾಕ್ಷಿ ಎದ್ದು ಕುಳಿತಳು.

"ಹೂಂ, ಇಲ್ಲಿ ಇರುವ ನೆಂಟರಿಷ್ಟರೆಲ್ಲಾ ಮಾತಾಡಿಕೊಳ್ತಿದಾರೆ... ನಿಜ ಅಲ್ಲದೇ ಸುಳ್ಳು ಯಾಕೆ ಆಗುತ್ತೆ? ನೀನು ಇಲ್ಲಿ ಮಲಗಿ ಬಿಟ್ಟಿದೀಯ. ಕ್ಷೀರಾ ರಿಸೆಪ್ಷನ್‌ನಲ್ಲಿ ಕೂತಿದಾಳೆ. ರಾಶಿ ಫ್ರೆಂಡ್ಸ್ ಜೊತೆ ಎಲ್ಲೆಲ್ಲೋ ಅಲೆದು ಈಗ ಬಂದಿದಾಳೆ. ಚೆನ್ನಾಗಿದೀರಿ ಅಕ್ಕ ತಂಗಿಯರು. ಜವಾಬ್ದಾರೀನೇ ಇಲ್ಲ" ಹೀಯಾಳಿಸಿದ.

"ಏನೇನೋ ಮಾತಾಡ್ಬೇಡಿ ಸಂಜಯ್. ನೇರವಾಗಿ ಅದೇನು ಹೇಳ್ಬೇಕೋ ಹೇಳ್ಬಿಡಿ. ನಮ್ಮಪ್ಪನ ಸುದ್ದಿ ಅಂತ ಅದೇನೋ ಹೇಳಿದ್ರಲ್ಲ... ಅದೇನು ಅಂತ ವಿವರಿಸಿ ಹೇಳಿ... ನಮಗ್ಯಾರಿಗೂ ಗೊತ್ತಿಲ್ಲದ್ದು..."

"ಹೋಗ್ಲಿ ಬಿಡು. ನಿಂಗೆ ಶಾಕ್ ಆಗಬಹುದು. ನಾನು ಹೇಳೋಲ್ಲ"

"ನೀವು ಹೇಳ್ದೇ ಇದ್ರೆ ನಾನು ಬಿಡೋಲ್ಲ. ಹೇಳ್ಲೇಬೇಕು" ರಟ್ಟೆ ಎಳೆದಳು.

"ಸರಿ ಹೇಳ್ತೀನಿ. ಆದರೆ, ನಿನ್ನ ಎದೇನ ಗಟ್ಟಿ ಮಾಡ್ಕೋ..."

"ಅಂಥಾದ್ದೇನು ವಿಷಯ...? ಅತ್ಲಾಗೆ ಬೇಗ ಹೇಳ್ಬಾರ್ದಾ?"

"ನಿಮ್ಮಪ್ಪನ ಮೊದಲ ಪತ್ನಿ ಯಾರು ಗೊತ್ತಾ? ಮೃದುಲಾ ಮೇಡಂ ಅಂತೆ"

"ಆಂ !" ಸಾಕ್ಷಿ ದೊಡ್ಡದಾಗಿ ಬಾಯಿ ಬಿಟ್ಟಳು... ರಾಶಿಯ ಮೇಡಂ... ಮೃದುಲಾನಾ?... ಕಾರ್ತೀಕ್‌ನ ಕಸಿನ್..."

"ಹುಂ... ಅವರೇ... ಈಗ ಗೊತ್ತಾಯ್ತಾ? ಅವರು ಯಾವ ಸುಳಿವನ್ನು ಕೊಡದೆ ನಮ್ಮ ಮನೆಗೆ ಹೇಗೆ ಎಂಟ್ರಿ ಆದ್ರು ಅಂತ?"

"ನಾನು ಇದನ್ನು ನಂಬೋಲ್ಲ ಸಂಜಯ್. ಯರೋ ತಮಾಷೆ ಮಾಡ್ತಿದಾರೆ. ಅವರ ಮೇಲೆ ಅಪವಾದವನ್ನು ಹೊರಿಸಿದಾರೆ... ನಮ್ಮಪ್ಪ ಅಂತೋರಲ್ಲ"

"ಮೊದಲಿಗೆ ನಾನೂ ನಂಬಲಿಲ್ಲ ಸಾಕ್ಷೀ... ಕಾರ್ತೀಕ್‌ನ ತಾಯಿ ಸುಳ್ಳು ಹೇಳ್ತಾರಾ? ನಮ್ಮಮ್ಮ ನನ್ಹತ್ರ ಯಾಕೆ ಸುಳ್ಳು ಹೇಳ್ತಾಳೆ, ನೀನೇ ಹೇಳು?... ಕ್ಷೀರಾಳ

ಅತ್ತೆ ಜಲಜ, ನಿಮ್ಮಪ್ಪನ ಮೊದಲ ಮದುವೆಯ ಪ್ರತ್ಯಕ್ಷ ಸಾಕ್ಷಿಯಾಗಿದ್ದವರು. ಅವರು ನಿಮ್ಮಪ್ಪನ್ನ ಗುರುತಿಸಿದಾರೆ. ಈಗ ಅವರಿಗೆ ಚಿಂತೆಯಾಗಿದೆಯಂತೆ"

"ಏನಂತೆ ಅವರ ಚಿಂತೆ? ಎಲ್ಲಾ ಬರೀ ಸುಳ್ಳಿನ ಕಂತೆ"

"ನೀವುಗಳೆಲ್ಲ ಅವರನ್ನು ದೊಡ್ಡಮ್ಮ ಅಂತ ಅಕ್ಸೆಪ್ಟ್ ಮಾಡ್ಕೊಳ್ತಿರ್ರೋ ಇಲ್ವೋ ಅಂತ ಅವರಿಗೆ ಚಿಂತೆ ಅಂತೆ" ಸಾಕ್ಷಿ ಗಂಭೀರಳಾದಳು.

"ನಿಜವೋ ಸುಳ್ಳೋ ಅಂತ ಮೊದಲು ಸರಿಯಾಗಿ ಗೊತ್ತಾಗ್ಲಿ. ಒಂದು ವೇಳೆ ನಿಜವೇ ಆಗಿದ್ದರೂ, ಈಗ ನಾವೇಕೆ ಅಕ್ಸೆಪ್ಟ್ ಮಾಡ್ಕೊಳ್ಬೇಕು? ಡೈವೋರ್ಸ್ ಆಗಿದ್ದರೆ, ನಮ್ಮಪ್ಪಂಗೂ ಅವರಿಗೂ ಯಾವ ಸಂಬಂಧವೂ ಇರುಲ್ಲ. ಅದಿರಲಿ, ನಾನು ಮೇಡಂ ಹತ್ರ ಮಾತಾಡ್ತೀನಿ. ಇದೆಲ್ಲಾ ಏನು ತಮಾಷೆ ಅಂತ ದಬಾಯಿಸ್ತೀನಿ"

"ಈಗ ಅವರು ನಿನಗೆಲ್ಲಿ ಸಿಗ್ತಾರೆ? ನಿಮ್ಮಪ್ಪನ ಮನೆಗೆ ಬಂದು ಸೇರಿದ್ದಾಗಿದೆ. ನೆನ್ನೆ ರಾತ್ರಿಯಿಂದ ಅಲ್ಲೇ ಇದಾರಂತೆ"

"ಹೌದಾ? ನಮಗ್ಯಾರಿಗೂ ಈ ವಿಷಯ ಗೊತ್ತಿರ್ಲೇ ಇಲ್ಲ" ಸಾಕ್ಷಿ ಅಗಲವಾಗಿ ಕಣ್ಣು ಬಿಟ್ಟು ಹೇಳಿದಾಗ, ಅವನು ನಕ್ಕು ಚಪ್ಪಾಳೆ ತಟ್ಟಿದ.

"ನಿನಗೆ ಗೊತ್ತಿರಲಿಲ್ಲ ಅಷ್ಟೇ. ಈ ವಿಷಯದಲ್ಲಿ ಕ್ಷೀರಾ-ಕಾರ್ತೀಕ್ ಸಹ ಶಾಮೀಲಾಗಿದಾರೆ ಅಂತ ನನಗೆ ಭಾರಿ ಅನುಮಾನ"

"ಅದ್ಹೇಗೆ ಹೇಳ್ತೀರಿ? ನಾನು ಕ್ಷೀರನ್ನ ವಿಚಾರಿಸ್ತೀನಿ. ನೀವು ಏನೂ ಕೇಳ್ಬೇಡಿ. ಅವಳು ಗೊತ್ತಿದ್ದೂ, ಹೇಳದೇ ಇದ್ದರೆ, ಏನಾದರೂ ಬಲವಾದ ಕಾರಣ ಇದ್ದೇ ಇರುತ್ತೆ"

"ಇರಬಹುದು, ನೀನು ನಿನ್ನ ತಂಗೀನ ಕವರಪ್ ಮಾಡ್ತಿದೀಯ. ಅವರುಗಳಿಗೋಸ್ಕರ ನಮ್ಮ ಮನೆ ಬಿಟ್ಟು, ನಿಮ್ಮಪ್ಪನ ಮನೇಲಿದೀಯ. ನಿನ್ನ ಹತ್ತಿರಾನೇ ಮುಚ್ಚು ಮರೇನಾ?"

"ನಾನು ಪ್ರೆಗ್ನೆಂಟ್, ಶಾಕ್ ಆಗದಿರಲಿ ಅಂತ ಹೇಳಿಲ್ಲದೇ ಇರಬಹುದು"

"ಯಾವಾಗ ತಿಳಿದ್ರೂ ಶಾಕಿಂಗ್ ನ್ಯೂಸೇ. ಮೇಡಂ ಮೃದುಲಾಳದ್ದು ಏನೋ ಪ್ಲ್ಯಾನ್ ಇದೆ. ಇಲ್ದಿದ್ರೆ ಇಷ್ಟು ವರ್ಷಗಳ ನಂತರ, ಬಿಟ್ಟಿದ್ದ ಗಂಡನ ಮೇಲೆ ಪ್ರೀತಿ ಬಂತಾ? ಅದೂ ಅಲ್ದೇ ಕೈಲಾಗದೇ ಮಲಗಿರೋ ಗಂಡನ ಬಳಿ ಆಕೆಗೇನು ಕೆಲಸ?" ಸಂಜಯ್ ಕೆಟ್ಟದಾಗಿ ನಕ್ಕ.

"ಪ್ಲೀಸ್, ಹೀಗೆಲ್ಲಾ ಮಾತಾಡ್ಬೇಡಿ. ನಾನು ವಿಚಾರಿಸ್ತೀನಿ, ನೀವು ಸುಮ್ನಿರಿ"

"ನಾನು ಹೇಗೆ ಸುಮ್ಮನಿರ್ಲಿ? ಯಾಕೆ ಸುಮ್ಮನಿರ್ಲಿ? ನಿನ್ನನ್ನು ಮದುವೆಯಾದ ಮೇಲೆ, ನಿನ್ನ ಮನೆಯ ವಿಷಯ ನನಗೂ ಸಂಬಂಧಿಸಿದುದೇ. ಅವರು ಯಾರೋ ಇದುವರೆಗೆ ಅಪರಿಚಿತರಾಗಿದ್ದವರು, ಹಳೆಯ ಸಂಬಂಧವನ್ನು ಹುಡುಕಿಕೊಂಡು, ಬಂದು ಇರ್ತೀನಿ ಅಂತಂದ್ರೆ ಒಪ್ಪಿಕೊಂಡು ಬಿಡೋಕೆ ಆಗುತ್ತಾ?"

"ನಾವೆಲ್ಲಿ ಒಪ್ಪಿದೀವಿ? ಅಪ್ಪನ ಮನಸ್ನಲ್ಲಿ ಏನಿದೆಯೋ?"

"ಕೈ ಕಾಲನ್ನು ಆಡಿಸದೇ, ಪಿಳಿ ಪಿಳಿ ಕಣ್ಣುಗಳನ್ನು ಬಿಟ್ಟುಕೊಂಡು, ಮಲಗಿರುವವರ ಮನಸ್ಸು ಏನೂ ಕೆಲಸ ಮಾಡುಲ್ಲ ಸಾಕ್ಷಿ. ಬಾಯಿ ಬಿಟ್ಟು ಮಾತನಾಡುಕ್ಕೆ ಆಗೋದೇ ಇಲ್ಲ. ಅದನ್ನೆಲ್ಲಾ ತಿಳ್ಕೊಂಡೇ ಆಕೆ ನಿಮ್ಮ ಮನೆಗೆ ಲಗ್ಗೆ ಹಾಕಿರೋದು. ನನ್ನ ಮಾತಿಗೆ ಬೆಲೆ ಕೊಟ್ಟು, ನಿಮ್ಮಪ್ಪನ್ನ ಯಾವ್ದಾದ್ರೂ ಹೆಲ್ತ್ ಕೇರ್ ಸೆಂಟರ್‌ಗೆ ಸೇರಿಸಿದ್ದಿದ್ರೆ, ಯಾವ ಮೇಡಂಗೂ ಬರುವ ಅವಕಾಶ ಇರ್ತಿರಲಿಲ್ಲ"

"ಮುಂದೆ ಏನ್ಮಾಡೋಣ ಅಂತ ಯೋಚಿಸೋಣ. ನಿಮ್ಮದು ಊಟ ಆಯ್ತಾ ಸಂಜಯ್? ಇವತ್ತು ರಾತ್ರಿ ಇಲ್ಲೇ ಇರ್ತೀರಾ? ಮಾತಾಡೋಣ"

"ಸರಿ, ಇರ್ತೀನಿ. ಊಟಕ್ಕೆ ನೀನೂ ಏಳು. ಇಬ್ಬರೂ ಒಟ್ಟಿಗೆ ಮಾಡೋಣ" ಸಾಕ್ಷಿ ಸೊಂಟವನ್ನು ನೀವಿಕೊಂಡು ಎದ್ದಳು. ಸಂಜಯ್ ಸಹಾಯ ಮಾಡಿದ. ಇಬ್ಬರೂ ಡೈನಿಂಗ್ ಹಾಲ್‌ಗೆ ಬಂದರು. ಒಂದು ಕಡೆ ಇಬ್ಬರೂ ಕುಳಿತರು.

ರಿಸೆಪ್ಶನ್ ಮುಗಿದಿತ್ತು. ಕ್ಷೀರಾ ಕಾರ್ತೀಕ್ ಸಹ ಡೈನಿಂಗ್ ಹಾಲ್‌ಗೆ ಬಂದರು ಎದುರು ಸಾಲಿನಲ್ಲಿ ಇವರಿಬ್ಬರೂ ಕುಳಿತರು.

"ಕ್ಷೀರಾ ಏನು ಯೋಚಿಸ್ತಿದೀಯಾ? ಟೆನ್ಷನ್ನಾ?" ಕಾರ್ತೀಕ ಮೆಲ್ಲಗೆ ಕೇಳಿದ.

"ಇಲ್ಲ, ಅಪ್ಪನ ಬಗ್ಗೆ ಯೋಚಿಸ್ತಿದ್ದೆ"

"ಮೃದುಲಾ ಅಲ್ಲಿ ಇರ್ತೀನಿ ಅಂತ ಹೇಳಿದಾರಲ್ಲ ಇನ್ನೇನು?" ಬೇಸರದಿಂದ ಕೇಳಿದ.

"ಪ್ಲೀಸ್ ಕಾರ್ತೀಕ್ ಬೇಸರ ಪಟ್ಕೋಬೇಡಿ"

"ಇಲ್ಲ ಕ್ಷೀರಾ, ನನಗೆ ಯಾವ ಬೇಸರವೂ ಇಲ್ಲ" ಅವಳನ್ನು ಒಲಿಸಲು ನುಡಿದ.

"ನಿಜವಾಗಿಯೂ ಬೇಸರ ಇಲ್ವಾ?"

ಅವನು ಮುಗುಳ್ನಕ್ಕ. "ನನಗೆ ನಿನ್ನ ಮೇಲೆ ಪ್ರೀತಿ ಇದೆ. ಅಷ್ಟೇ ಪ್ರೀತಿಯನ್ನು ನಾನು ನಿನ್ನಿಂದ ಬಯಸ್ತೀನಿ ಅಷ್ಟೇ"

"ಇದ್ದಕ್ಕಿದ್ದ ಹಾಗೆ ಇಷ್ಟು ವರ್ಷಗಳ ನಂತರ, ನಿಮ್ಮ ಮೃದುಲಾ ಯಾಕೆ ಹೀಗೆ ಡಿಸಿಷನ್ ತಗೊಂಡ್ರೋ?"

"ನಂಗೊತ್ತಿಲ್ಲ, ಅವರನ್ನು ಕಂಡು ಹಳೆಯ ಪ್ರೀತಿ ಮತ್ತೆ ಜಾಗೃತವಾಗಿರಬಹುದು"

" ವಯಸ್ನಲ್ಲಿ ಪ್ರೀತೀನಾ? ಅದು ಅಪ್ಪ ಹೀಗೆ ಮಲಗಿರುವಾಗ ಅದು ಪ್ರೀತಿಯಲ್ಲ, ಅನುಕಂಪ. ಅಪ್ಪನಿಗೆ ನೋವಾಗುಲ್ವಾ?"

"ಅದನ್ನು ನಿಮ್ಮ ತಂದೆ ತಿಳಿಸಬೇಕು. ಮೊದಲು, ತಮಗೆ ಪತ್ನಿ ಬೇಕು ಅಥವಾ ಬೇಡ ಅನ್ನೋದನ್ನು ಸಂಜ್ಞೆ ಮಾಡಿ ತೋರಿಸಲಿ ಅಥವಾ ಬರೆದು ತೋರಿಸಲಿ"

"ಅಪ್ಪನ್ನ ಹೇಗೆ ಕೇಳೋದು?... ಕೇಳೋರು ಯಾರು?"

"ಇನ್ಯಾರು? ನೀವುಗಳೇ. ಒಂದು ವೇಳೆ ಅವರಿಗೆ ಒಪ್ಪಿಗೆ ಇದ್ದರೆ, ನೀವುಗಳು ಅಕ್ಸೆಪ್ಟ್ ಮಾಡ್ಕೋಬೇಕಾಗುತ್ತೆ. ಮೃದುಲಾ ಕೆಟ್ಟವರಲ್ಲ. ಅಪ್ಪನ್ನ ಚೆನ್ನಾಗಿ ನೋಡ್ಕೋತಾರೆ"

"ಹಾಗಾದ್ರೆ... ಮೃದುಲಾ ಮಾಡ್ತಾ ಇರೋದು ಸರಿ ಅಂತ ಅನ್ನಿಸುತ್ತಾ ನಿಮಗೆ?"

"ಇದರಲ್ಲಿ ತಪ್ಪೂ ಕಾಣ್ತಿಲ್ಲ ಕ್ಷೀರಾ. ಈ ವಯಸ್ನಲ್ಲಿ ಎಷ್ಟೋ ಜನ ಗಂಡಸರು ಮರು ಮದುವೆಯಾಗ್ತಾರೆ. ಮೃದುಲಾ, ಎಷ್ಟಾಗಲೀ ಅವರಿಗೆ ಮೊದಲು ಪತ್ನಿಯಾಗಿದ್ದವರು. ಇದು ಅವರದ್ದೇ ಡಿಸಿಷನ್. ಯಾರ ಕಿತಾಪತಿಯೂ ಇಲ್ಲ. ಈಗ ಬೇಗ ಬೇಗ ಊಟವನ್ನು ಮುಗಿಸು. ಎಲ್ಲರೂ ನಮ್ಮ ಕಡೆಯೇ ನೋಡ್ತಿದಾರೆ"

ಕ್ಷೀರಾ ತಲೆತಗ್ಗಿಸಿ ಊಟವನ್ನು ಮುಗಿಸಿದಳು. ಇಬ್ಬರೂ ತಮಗಾಗಿ ಸಿದ್ಧಪಡಿಸಿದ್ದ ಕೋಣೆಗೆ ಹೊರಟರು. ಸಾಕ್ಷಿ ತಂಗಿಯನ್ನು ತಬ್ಬಿಕೊಂಡು, ಕೈಕುಲಕಿ ಶುಭರಾತ್ರಿಯನ್ನು ಹಾರೈಸಿದಳು. ಕಾರ್ತೀಕನ ಕಡೆ ನೋಡಿ ಮುಗುಳ್ನಗೆಯನ್ನು ಬೀರಿದಳು. ಅವನು ಸಂಕೋಚದ ನಗೆಯನ್ನು ನಕ್ಕು ಕ್ಷೀರಾಳ ಕೈ ಹಿಡಿದು ಅವಳನ್ನು ರೂಮಿನೊಳಕ್ಕೆ ಕರೆದೊಯ್ದ. ರೂಮಿನ ಬಾಗಿಲನ್ನು ಭದ್ರಪಡಿಸಿ, ತಮಗಾಗಿ ಸಿದ್ಧವಾಗಿದ್ದ ಮಂಚದ ಬಳಿಗೆ ಇಬ್ಬರೂ ಬಂದು ಕುಳಿತರು.

"ಏನನ್ನಿಸ್ತಾ ಇದೆ ಕ್ಷೀರಾ? ಆರ್ ಯೂ ಹ್ಯಾಪೀ..." ಅವಳ ಮುಖವನ್ನೆತ್ತಿ ಕೇಳಿದ. ಅವಳು ನಾಚಿಕೆಯಿಂದ ಅರಳಿದ ಕೆಂದಾವರೆಯಂತಾಗಿದ್ದಳು. ಇದು ನಮ್ಮ ಮೊದಲ ರಾತ್ರಿ. ಇಂದಿನಿಂದ ನಮ್ಮ ದಾಂಪತ್ಯ ಜೀವನ ಪ್ರಾರಂಭ. ನಾನು ನಿನ್ನ ಬಗ್ಗೆ, ನೀನು ನನ್ನ ಬಗ್ಗೆ ಮಾತ್ರ ಯೋಚಿಸಬೇಕು. ಬೇರೆ ಯಾವ ಚಿಂತೆಯೂ ಇರಬಾರದು ರೈಟ್?..." ಎನ್ನುತ್ತಾ ಅವಳನ್ನು ಮುದ್ದಿಸಿದ. ಅವಳು ಅವನನ್ನು ತಳ್ಳಿದಳು.

"ದೀಪವನ್ನು ಆರಿಸಿ ಬಿಡಿ ಕಾರ್ತೀಕ್..."

"ತಡಿ, ಮೊದಲು ನಿನ್ನನ್ನು ಸರಿಯಾಗಿ ನೋಡಿ ಬಿಡ್ತೀನಿ. ಆಫೀಸ್ನಲ್ಲಿ ನನ್ನ ಎದುರಿಗೆ ತಡವರಿಸುತ್ತಾ ನಿಂತಿರುವ ಹುಡುಗಿಯ ತರಹ ಕಾಣ್ತೀಯೋ, ಅಥವಾ ಒಂದು ಕಂಪೆನಿಯ ಬಾಸ್‌ನ ಹೆಂಡತಿ ಅನ್ನೋ ಗರ್ವ ಮುಖದಲ್ಲಿ ಕಾಣ್ತಾ ಇದೆಯೋ ಅಂತ ನಾನೂ ನೋಡ್ಬೇಕಲ್ಲ... ಇತ್ಲಾಗೆ ತಿರುಗು" ಅವಳನ್ನು ತನ್ನೆಡೆಗೆ ತಿರುಗಿಸಿಕೊಂಡ.

"ತುಥ್, ನನ್ನನ್ನೇನು ಇಂಟರ್‌ವ್ಯೂ ಮಾಡ್ತಿದೀರಾ? ನಾನು ಒಪ್ಪಲ್ಲ"

"ಹಾಗಾದ್ರೆ ನೀನೇ ನನ್ನನ್ನು ಇಂಟರ್‌ವ್ಯೂ ಮಾಡು, ನಾನು ರೆಡಿ" ತನ್ನ ಮುಖವನ್ನು ಅವಳ ಮುಖದ ಬಳಿಗೆ ತಂದ. ಅವಳು ಅವನನ್ನು ತಳ್ಳಿ ಎದ್ದಳು.

"ಮೊದಲು ಹಾಲನ್ನು ಕುಡಿದು ಬಿಡಿ, ಅದು ಸಂಪ್ರದಾಯ. ಹಾಗಂತ ಅಕ್ಕ ಹೇಳಿದಾಳೆ" ಎನ್ನುತ್ತಾ ಹಾಲಿನ ಲೋಟವನ್ನು ಅವನ ಕೈಗಿತ್ತಳು.

"ನೀನು ಕುಡಿದು ಬಿಡು ಕ್ಷೀರಾ. ನಾನು ಹಾಲಿನ ಜೊತೆಯಲ್ಲಿ ಜೇನನ್ನು ಸವಿತೀನಿ" ಅವಳ ಕೆಂದುಟಿಗಳನ್ನು ಆಸೆ ಕಣ್ಣುಗಳಿಂದ ನೋಡಿದ. ಅವಳಿಗೆ ಅವನ ಇಂಗಿತ ಅರ್ಥವಾಗಿತ್ತು.

"ಅದೆಲ್ಲಾ ಮೋಸ, ನಿಮ್ಮ ಪಾಲು ನಿಮಗೆ..." ಎಂದಳು ನಗುತ್ತಾ. ಅವನು ಅವಳನ್ನು ತನ್ನೆಡೆಗೆ ರಭಸವಾಗಿ ಎಳೆದುಕೊಂಡ. ಲೋಟದ ಹಾಲು ತುಳುಕಿತು.

"ಏನ್ಮಾಡ್ತೀರಿ ಕಾರ್ತೀಕ್... ನನ್ನ ಸೀರೆ ಮೇಲೆಲ್ಲಾ ಹಾಲು ಚೆಲ್ಲಿತು" ಅವಳು ಕೈಗಳಿಂದ ಸೀರೆ ಮೇಲೆ ಬಿದ್ದ ಹಾಲನ್ನು ಕೊಡವಿಕೊಂಡಳು. ಅವನು ನಗುತ್ತಾ ಅವಳ ಸೊಂಟಕ್ಕೆ ಕೈ ಹಾಕಿದ. ಸೀರೆಯ ನೆರಿಗೆಗಳು ಅವನ ಕೈಗೆ ಬಂದವು. ಕ್ಷೀರಾ ಮುಖವನ್ನು ಕೈಗಳಿಂದ ಮುಚ್ಚಿಕೊಂಡಳು. ಅವನು ಕೈಗಳನ್ನು ಬಿಡಿಸಿ, ಅವಳ ಮುಖವನ್ನು ತನ್ನ ಕೈಗಳಲ್ಲಿ ಹಿಡಿದು, ತುಟಿಗಳನ್ನು ಚುಂಬಿಸಿ ಜೇನನ್ನು ಹೀರಿದ.

"ಕ್ಷೀರಾ... ನೀನು ಇಷ್ಟು ಸ್ವೀಟ್ ಆಗಿದೀಯ ಅಂತ ನನಗೆ ಗೊತ್ತಿರಲೇ ಇಲ್ಲ. ಚೂಡಿದಾರ್‌ನಲ್ಲಿ ನಿನ್ನ ಅಂದ ಚೆಂದ ಎಲ್ಲಾ ಮುಚ್ಚಿ ಹೋಗಿತ್ತು" ಎನ್ನುತ್ತಾ ಅವಳನ್ನು ಆಲಂಗಿಸಿಕೊಂಡು ಮಂಚದ ಮೇಲೆ ಮಲಗಿಸಿದ. ಅವಳನ್ನೇ ದಿಟ್ಟಿಸಿದ.

"ಪ್ಲೀಸ್ ಕಾರ್ತೀಕ್... ಹಾಗೆ ನೋಡ್ಬೇಡಿ. ನಂಗೆ ನಾಚ್ಕೆ ಆಗುತ್ತೆ. ದೀಪವನ್ನು ಆರಿಸಿ ಬಿಡಿ" ಎಂದಳು.

"ಓ...ಕೇ..." ಎನ್ನುತ್ತಾ ದೀಪವನ್ನು ಆರಿಸಿದ.

* * *

31

ಮಾರನೇ ದಿನ ಬೀಗರು ಔತಣದ ಸವಿಯಾದ ಊಟವನ್ನು ಮುಗಿಸಿ, ವಾಪಸ್ಸು ಹೊರಟರು. ಆ ಸಮಯದಲ್ಲಿ ಮೃದುಲಾ ಕಾರ್ತೀಕ್‌ಗೆ ಫೋನು ಮಾಡಿ ಶುಭವನ್ನು ಹಾರೈಸಿದ್ದಳು. ಕ್ಷೀರಾಳ ಜತೆ ನಾಲ್ಕು ದಿನ ಅಲ್ಲಿದ್ದು, ಊರನ್ನೆಲ್ಲಾ ತೋರಿಸಿಕೊಂಡು ಬಾ ಎಂದಿದ್ದಳು. ಕಾರ್ತೀಕ ನಕ್ಕು ಕ್ಷೀರಾಳ ಕಡೆ ನೋಡಿದ.

"ನಗುವ ವಿಷಯ ಅಲ್ಲ ಕಾರ್ತೀಕ್. ಅವಳನ್ನು ಖುಷಿಯಾಗಿಟ್ಟುಕೊಳ್ಳುವುದು ಈಗ ನಿನ್ನ ಮೊದಲ ಡ್ಯೂಟಿ" ಎಂದಳು.

"ಕ್ಷೀರಾ ಬಹಳ ಖುಷಿಯಾಗಿದಾಳೆ. ನಾನು ಅವಳನ್ನು ಬಹಳ ಚೆನ್ನಾಗಿ ನೋಡಿಕೊಳ್ತಾ ಇದೀನಿ. ನಿಮ್ಮ ವಿಷಯ ಏನು? ಅಲ್ಲೇ ಎಷ್ಟು ದಿನ ಅಂತ ಇರೋದು? ನೀವು ನಿಮ್ಮ ಮನೆಗೆ ವಾಪಸ್ಸು ಹೋಗುವುದೇ ಸರಿ" ಎಂದಿದ್ದ.

"ಅದನ್ನೆಲ್ಲ ನಿಧಾನವಾಗಿ ಮಾತನಾಡೋಣ" ಎಂದು ಹೇಳಿ ಕಟ್ ಮಾಡಿದಳು.

"ಸಾಂಪ್ರದಾಯಿಕವಾಗಿ ಬೀಗರನ್ನು ಬೀಳ್ಕೊಟ್ಟಿದ್ದಾಗಿತ್ತು. ಬಂದಿದ್ದ ನೆಂಟರೆಲ್ಲಾ ವಾಪಸ್ಸು ಹೊರಟು ಹೋಗಿದ್ದರು. ಸಂಜಯನ ತಾಯಿ, ಸಾಕ್ಷಿಯ ಬಳಿಗೆ ಬಂದರು. ಅವಳನ್ನು ಮೇಲಿನಿಂದ ಕೆಳಕ್ಕೆ ನಾಲ್ಕಾರು ಸಾರಿ ನೋಡಿದರು.

"ತಂಗಿಯ ಮದುವೆ ಅಂತ ಓಡಾಡಿದ್ದು ಸಾಕು. ಬಹಳ ಬಳಲಿ ಹೋಗಿದೀಯ. ಹತ್ತಾರು ಜೊತೆ ಕಣ್ಣುಗಳ ದೃಷ್ಟಿಯೂ ಬಿದ್ದಿರುತ್ತೆ. ನಮ್ಮ ಮನೆಗೇ ಬಂದು ಬಿಡು. ಚೆನ್ನಾಗಿ ರೆಸ್ಟ್ ತಗೋ. ರಾತ್ರಿ ದೃಷ್ಟಿಯನ್ನು ನೀವಾಳಿಸಿ ತೆಗೀತೀನಿ" ಅತ್ತೆ ಅಷ್ಟು ಹೇಳಿದ್ದೇ ಸಾಕು ಎಂಬಂತೆ, ಸಾಕ್ಷಿ ಅತ್ತೆಯ ಮನೆಗೆ ಹೊರಡಲು ಸಿದ್ಧಳಾದಳು. ಸಂಜಯ ಅಡ್ಡ ಬಂದ.

"ಸಾಕ್ಷಿ, ಇವತ್ತೇ ನಮ್ಮ ಮನೆಗೆ ಬರುವುದು ಬೇಡ. ಅಲ್ಲಿ ಆ ಹೆಂಗಸು ಝೂಂಡಾ ಹೂಡಿ ಬಿಡುತ್ತಾಳೆ. ಮೊದಲು ಅವಳನ್ನು ಮನೆಯಿಂದ ಹೊರಕ್ಕೆ ಕಳಿಸು. ಆಮೇಲೆ ನಮ್ಮ ಮನೆಗೆ ಬಾ"

"ನನಗೆ ಈಗ ಯಾವ ಕದನವೂ ಬೇಡವಾಗಿದೆ ಸಂಜೂ, ಹಾಯಾಗಿ ಒಂದೆರಡು ದಿನ ನಾನು ನಿಮ್ಮ ಮನೇಲಿ ರೆಸ್ಟ್ ತಗೋತೀನಿ. ಅವರು ಅಪ್ಪನ ಹಿರಿಯ ಹೆಂಡತಿಯಾಗಿದ್ದವರು. ಒಂದೆರಡು ದಿನಗಳು ಇದ್ದು ಹೋಗ್ಲೀ... ಅವರ ಆಸೆಯನ್ನು ತೀರಿಸಿಕೊಳ್ಳಲಿ"

"ಇದೇನೇ ಸಾಕ್ಷಿ ಸುಮ್ಮನಿದ್ದು ಬಿಡ್ತೀಯಾ? ಸರಿ ಹಾಗಾದ್ರೆ ತವರು ಮನೆಯ ಆಸೆಯನ್ನು ತೊರೆದು ಬಿಡು... ಈಗ ನೀವುಗಳು ಸಡಿಲ ಬಿಟ್ಟರೆ, ಅಲ್ಲಿ ನಿಮಗೆಲ್ಲಿರುತ್ತೆ ಸ್ಥಳ...?"

"ಕ್ಷೀರಾ ವಾಪಸ್ಸು ಬರಲಿ. ಈಗ ರಾಶಿ ಒಬ್ಬಳೇ ಆಗ್ತಾಳಲ್ಲ. ಅವರು ಎಷ್ಟಾಗಲೀ ಅವಳ ಮೇಡಂ, ಅವಳ ಜೊತೆಗಿದಾರೆ ಅಂತ ಅಂದುಕೊಂಡರಾಯ್ತು"

"ರಾಶೀನ ನಮ್ಮ ಮನೆಗೆ ಕರ್ಕೊಂಡು ಹೋಗೋಣ"

"ಹಾಗಾದ್ರೆ ಅಪ್ಪನನ್ನು ನಿಮ್ಮ ಮನೆಗೆ ಕರ್ಕೊಂಡು ಬರ್ತೀನಿ. ನಿಮ್ಮ ತಾಯೀನ ಒಪ್ಪಿಸಿ"

"ಈಗ ನಿಮ್ಮ ಅಪ್ಪನ ಮಾತು ಮಧ್ಯೆ ಯಾಕೆ? ಅವರಿಗೆ ಏನೂ ಗೊತ್ತಾಗುಲ್ಲ. ಅವರ ಪಾಡಿಗೆ ಅವರಿದಾರೆ"

"ಹಾಗೆ ಹೇಳ್ಬೇಡಿ ಸಂಜೂ... ನಮಗೆ ಹರ್ಟ್ ಆಗುತ್ತೆ. ಅಲ್ಲಿ ರಾಶೀನೂ ಇಲ್ಲದಿದ್ರೆ, ಅಪ್ಪ ಒಂಟಿಯಾಗಿ ಬಿಡುಲ್ವಾ?" ಸಂಜಯ್ ಸುಮ್ಮನಾದ.

"ಸಾಕ್ಷೀ... ಕ್ಷೀರಾ ಫೋನು ಮಾಡಿದಾಳೆ ಮಾತಾಡ್ತೀಯಾ?" ಸಂಜಯ್ ಮೊಬೈಲ್‌ನ ಅವಳ ಕೈಗೆ ಕೊಟ್ಟ.

"ಏನೇ ಕ್ಷೀರಾ ಹೇಗಿದೆಯಾ? ಅತ್ತೆ ಮನೆ ಹೇಗಿದೆ? ಕಾರ್ತೀಕ್ ಏನಂತಾನೆ? ಹ್ಯಾಪಿಯಾಗಿದೀಯಾ?"

"ಹೂಂ, ನಾನು ಚೆನ್ನಾಗಿದೀನಿ. ಏನೂ ಪ್ರಾಬ್ಲಂ ಇಲ್ಲ. ನೀನ್ಯಾಕೆ ನಿನ್ನ ಅತ್ತೆ ಮನೆಗೆ ಬಂದು ಬಿಟ್ಟಿದೀಯಾ? ಹುಶಾರಾಗಿದೀಯಾ ತಾನೆ? ನಾನು ನಮ್ಮ ಮನೆಗೆ ಫೋನು ಮಾಡಿದ್ದೆ. ನೀನು ಇಲ್ಲಿದೀಯ ಅಂತ ತಿಳೀತು... ಎನಿ ಪ್ರಾಬ್ಲಂ?"

"ಈ ಅತ್ತೇ ಮನೇನೇ ತಾನೇ ನನಗೆ ಪರ್ಮನೆಂಟ್. ನಿನಗಿರುವ ಹಾಗೆ ಎರಡೆರಡು ಅತ್ತೆ ಮನೆಗಳಿವೆಯಾ ನನಗೆ?" ಸಂಜಯ್ ಕಡೆ ನೋಡಿದಳು.

"ಯಾಕೇ ಹಾಗೆ ಮಾತಾಡ್ತೀಯಾ? ನೀನು ರಾಶಿಗೆ ಜತೆ ಆಗಿರ್ತೀಯ... ಅಪ್ಪನ್ನ ನೋಡ್ಕೋತೀಯ ಅಂತ ಅಂದ್ಕೊಂಡಿದ್ದೆ... ಈಗ ಆತಂಕವಾಗ್ತಿದೆ ಕಣೇ"

"ಆತಂಕ ಯಾಕೆ? ಅಲ್ಲಿ ನಿನ್ನ ಮೇಡಂ ಇದಾರಲ್ಲ. ಅವರು ಅಪ್ಪನ್ನೂ ನೋಡ್ಕೋತಾರೆ. ರಾಶಿಗೂ ಬೇಕಾಗಿದಾರೆ"

"ಏನೇನೋ ಆಡ್ತೀಯಲ್ಲೇ ಸಾಕ್ಷಿ...?"

"ಮತ್ತಿನ್ನೇನು? ನಿನಗೆ ಎಲ್ಲಾ ಗೊತ್ತಿತ್ತಲ್ಲ. ನನಗ್ಯಾಕೆ ಮೊದಲೇ ಹೇಳ್ಲಿಲ್ಲ. ಅವರಾಗಿಯೇ ಬಂದು ತನ್ನ ಸ್ಥಾನವನ್ನು ಆಕ್ರಮಿಸಿಕೊಂಡಿದಾರಲ್ಲ... ಈಗ ಮುಂದೆ ಏನು ಅಂತ?"

"ನನಗೆ ಗೊತ್ತಾದದ್ದೇ ಮದುವೆಯ ಹಿಂದಿನ ದಿನ ರಂಪ ಆಗುತ್ತಲ್ಲ ಅಂತ ನಾನು ಯಾರಿಗೂ ಹೇಳದೇ ಸುಮ್ಮನಿದ್ದು ಬಿಟ್ಟೆ. ಕಾರ್ತೀಕ್‌ಗೂ ಅವರು ಅಲ್ಲಿರುವುದು ಇಷ್ಟವಿಲ್ಲ. ಇಲ್ಲಿ ಇರಬೇಡಿ, ವಾಪಸ್ಸು ನಿಮ್ಮ ಮನೆಗೆ ಹೋಗಿ ಅಂತ ಹೇಗೇ ಹೇಳೋದು?"

"ಅದೆಲ್ಲಾ ನಂಗೊತ್ತಿಲ್ಲ. ಕಾರ್ತೀಕ್ ಕೈಲಿ ಹೇಳ್ಸು. ಅವನೇ ತಾನೇ ಅವರ ಸಾಕು ಮಗ. ನಿನ್ನ ಸ್ವಂತ ಅತ್ತೆ ಏನಂತಾರೆ? ಅವರ ಬಗ್ಗೆ ನಿನ್ನನ್ನ ಕೇಳಿದ್ರಾ?"

"ಒಂದೊಂದ್ಸಾರಿ ಒಂದೊಂದು ಥರ ಮಾತಾಡ್ತಾರೆ. ಕಾರ್ತೀಕ್ ಇರೋದ್ರಿಂದ ಇಲ್ಲಿ ಇದೀನಿ. ಇಲ್ದಿದ್ರೆ ಓಡಿ ಬಂದ್ಬಿಡ್ತಿದ್ದೆ"

"ಕಾರ್ತೀಕ್, ಸಂಜೂ ಅಷ್ಟು ಸ್ವಾರ್ಥಿ ಅಲ್ಲ ಬಿಡು. ಹೋಗ್ಲೀ ನಿನ್ನ ಮ್ಯಾರೀಡ್ ಲೈಫ್ ಎಂಜಾಯ್ ಮಾಡ್ತಿದೀಯಾ?"

"ಮನೇಲೇ ಇದೀವಿ ಸಾಕ್ಷಿ. ಹೊರಗೆಲ್ಲೂ ಹೋಗಿಯೇ ಇಲ್ಲ. ಹಸೀ ಮೈ ಎಲ್ಲಿಗೂ ಹೋಗ್ಬೇಡಿ ಅಂತ ಅತ್ತೆ ಹೇಳ್ಬಿಟ್ಟಿದಾರೆ"

"ಕಾರ್ತೀಕ್ ಇದನ್ನೆಲ್ಲಾ ನಂಬ್ತಾನಾ?"

"ನಂಬಿಕೆ ಇರಲಿ ಬಿಡಲಿ, ಅಮ್ಮನ ಮಾತಿಗೆ ಬೆಲೆ ಕೊಡ್ಬೇಕು ಅಂತ. ಬಹುಶಃ ಅವರಿಂದ ದೂರವೇ ಇದ್ದೆ ಅಂತ ಅಳುಕು ಇರಬಹುದು"

"ಹುಶಾರಾಗಿರೇ ಕ್ಷೀರಾ... ಅಮ್ಮನ ಅಪ್ಪನ ಸೇವೆಗೆ ಅಂತ ನಿನ್ನನ್ನು ಅಲ್ಲಿಯೇ ಬಿಟ್ಟು ಬಂದಾನು. ಆಮೇಲೆ ಅವನಿಲ್ಲಿ ಮೇಡಂ ಜೊತೆ, ನೀನಲ್ಲಿ ಅತ್ತೆ ಜೊತೆ" ಸಾಕ್ಷಿ ನಕ್ಕಳು. ಕ್ಷೀರಾ ಗದರಿದಳು.

"ಸಾಕು ನಿನ್ನ ಜೋಕ್... ಅಪ್ಪ ಹೇಗಿದಾರೆ?"

"ರಾಶೀನ ಕೇಳ್ಬೇಕಾಗಿತ್ತು" ಸಾಕ್ಷಿ ನುಡಿದಳು.

"ಅದಕ್ಕೇನು ಗೊತ್ತಾಗುತ್ತೆ? ಉಂಡೆ ಚಕ್ಕುಲಿ ತಿಂದ್ಕೊಂಡು ಟಿ.ವೀ.ನ ನೋಡ್ಕೊಂಡು ಕಾಲ ಕಳೀತಿರಬಹುದು"

"ಅವಳು ಇನ್ನೊಂದೆರಡು ವರ್ಷ ದೊಡ್ಡವಳಾಗಿದ್ದು, ಜವಾಬ್ದಾರಿ ಇದ್ದಿದ್ರೆ ಆತಂಕ ಇರ್ತಿರಲಿಲ್ಲ ಅಲ್ವಾ?"

"ಎಲ್ಲಕ್ಕಿಂತ ಮುಖ್ಯವಾಗಿ, ಅಪ್ಪ ಹೀಗೆ ಮಲಗದೇ ಇದ್ದಿದ್ರೆ ಎಲ್ಲಾ ಚೆನ್ನಾಗಿರ್ತಿತ್ತು"

"ಅಪ್ಪನ ಕರ್ಮ, ನಮ್ಮ ದುರಾದೃಷ್ಟ... ಎಂಥಾ ಕಷ್ಟ ಬಂತಲ್ಲೇ ನಮಗೆ" ಹೇಳ್ತಾ ಹೇಳ್ತಾ ಧ್ವನಿ ದಪ್ಪಗಾಗಿತ್ತು.

"ನಿನ್ನ ಆರೋಗ್ಯಾನ ಕೆಡಿಸ್ಕೋಬೇಡ್ವೇ ಸಾಕ್ಷಿ. ಆಮೇಲೆ ನಿಮ್ಮತ್ತೆ ನಿನ್ನನ್ನ ನಮ್ಮೆಲ್ಲರನ್ನು ಅನ್ನದೇ ಬಿಡುಲ್ಲ..."

"ಅದಕ್ಕೇ ಅವರೇ ನನ್ನನ್ನು ಇಲ್ಲಿಗೆ ಕರ್ಕೊಂಡು ಬಂದಿರೋದು. ಅವರ ಕೇರ್‌ನಲ್ಲಿದೀನಿ. ಅವರ ಮೊಮ್ಮಗನಿಗೆ ತಾಯಿಯಾಗ್ತಿದೀನಿ ಅಂತ ತುಂಬಾ ಉಪಚಾರ ಮಾಡ್ತಾರೆ. ಒಮ್ಮೊಮ್ಮೆ ಇಲ್ಲೇ ಇದ್ದು ಬಿಡೋಣ ಅಂತ ಅನ್ನಿಸುತ್ತೆ. ಬಾಣಂತನ ಮುಗಿಯುವವರೆಗೂ ನಾನು ಸೇಫ್..."

"ಎಲ್ರೂ ಎಷ್ಟು ಸ್ವಾರ್ಥಿಗಳು ಅಲ್ವಾ? ಭಾವ ಏನಂತಾರೆ?"

"ನಿಮ್ಮ ಭಾವಂಗೆ ಏನೋ ಕಳವಳ. ಏನೇನೋ ಆಡ್ತಾರೆ. ಅವರಿಗೆ ಆಸ್ತಿಯ ಚಿಂತೆ. ಎಲ್ಲಾ ಎಲ್ಲಿ ಮೇಡಂ ಹೊಡೆದು ಬಿಡ್ತಾರೋ ಅಂತ ತಳಮಳ. ಇದನ್ನು ಕಾರ್ತೀಕ್‌ಗೆ ಹೇಳ್ಬೇಡ"

"ಏನಿದೆ ಆಸ್ತಿ? ಅವರೇ ಕೊಡ್ಬೇಕು ಅಷ್ಟೇ. ಅವರ ಬಳಿ ಬೇಕಾದಷ್ಟಿದೆ"

"ಅವರ ಆಸ್ತಿಯೆಲ್ಲಾ ಕಾರ್ತೀಕ್‌ಗೇ ಸೇರುತ್ತೆ ಅಲ್ವಾ? ನೀನು ಲಕ್ಕಿ ಕಣೇ"

"ಏನೋ ಗೊತ್ತಿಲ್ಲ, ಕಾರ್ತೀಕ್‌ಗೆ ಆ ಆಸೆ ಇಲ್ಲ. ಹಾಗಂತ ಹೇಳಿದ್ರು"

"ಓ.. ಅದೆಲ್ಲಾ ಗೊಡ್ಡು ವೈರಾಗ್ಯ. ಎಲ್ಲಾ ತನಗೇ ಸಿಗತ್ತೆ ಅಂತ ಗೊತ್ತೇ ಇದೆಯಲ್ಲ.. ಅಂತೂ ನೀನು ಛಾನ್ಸು ಹೊಡೆದೆ"

"ಈಗ್ಲೇ ಆ ಚಿಂತೆ ಯಾಕೆ?.. ಬಿಡು..." ಎನ್ನುತ್ತಾ ಲೈನನ್ನು ಕಟ್ ಮಾಡಿದಳು.

32

"ರಾಶೀ ಏಳಮ್ಮಾ..." ಮೃದುಲಾ ರಾಶಿಯನ್ನು ಎಬ್ಬಿಸಿದಾಗ, ಅವಳು ಮತ್ತೆ ಮುಸುಕು ಬೀರಿದಳು. ರಾಶೀ... ಏಳು... ಎದ್ದು ಬೇಗ ರೆಡಿಯಾಗು. ಕಾಲೇಜಿಗೆ ಹೊತ್ತಾಗುತ್ತೆ" ಮೃದುಲಾ ಮುಸುಕನ್ನು ತೆಗೆದಳು.

"ಇವತ್ತು ನೀವೂ ಕಾಲೇಜಿಗೆ ಬರ್ತೀರಾ ಮೇಡಂ..."

"ಇಲ್ಲ, ರಾಶೀ... ನಾನು ರಜ ಹಾಕಿದೀನಿ... ನೀನು ಹೊಗ್ಬಾ"

"ನಾನೂ ರಜ ಹಾಕ್ತೀನಿ..."

"ನಿಂಗೆ ಪಾಠ ಮಿಸ್ ಆಗುತ್ತೆ... ಸುಮ್ನೇ ಹೇಳಿದ ಹಾಗೆ ಕೇಳು..." ನೀನು ಗುಡ್‌ಗರ್ಲ್ ಅಲ್ವಾ?" ರಾಶಿ ಆಕಳಿಸುತ್ತಾ ಎದ್ದು ಕುಳಿತಳು.

"ಅಮ್ಮ... ನಿಮ್ಮ ಹಾಗೆ ಪೂಸಿ ಹೊಡೆದು ಎಬ್ಬಿಸುತ್ತಿದ್ಲು..." ಆಮೇಲೆ ಸಾಕ್ಷಿಯಾಗಲೀ, ಕ್ಷೀರಾ ಆಗಲಿ ಹೀಗೆ ಎಬ್ಬಿಸುತ್ತಲೇ ಇರ್ಲಿಲ್ಲ. ಬೈದೇ ಎಬ್ಬಿಸುತ್ತಿದ್ರು"

"ಅವರು ಎಷ್ಟಾಗಲೀ ಅಕ್ಕಂದಿರು... ಅವರಿಗೂ ಕೆಲಸ ಇರ್ತಿತ್ತು ಅಲ್ವಾ?"

"ಹೌದು ಮೇಡಂ... ಅಕ್ಕಂದಿರು ಅಮ್ಮ ಆಗೋಕೆ ಸಾಧ್ಯಾನಾ?... ಈಗ ನೋಡಿ ಸಾಕ್ಷಿ ಸುಸ್ತು ಅಂತ ನೆವ ಹಾಕಿ ಮನೆಗೆ ಹೊರಟು ಹೋದ್ಲು. ಕ್ಷೀರಾ ಗಂಡನ ಮನೆಗೆ ಹೊರಟು ಹೋದ್ಲು"

"ಮದುವೆ ಆದ್ಮೇಲೆ ಹಾಗೇ ತಾನೇ... ಈಗ ನೀನು ಏಳು"

"ಅವರಿಬ್ಬರನ್ನು ನೋಡಿದ್ರೆ ನಂಗೆ ಅಸೂಯೆ ಆಗುತ್ತೆ ಮೇಡಂ... ನಾನೂ ಬೇಗ ಮದುವೆ ಮಾಡ್ಕೊಂಡು ಬಿಡೋಣ ಅಂತ ಅನ್ನಿಸುತ್ತೆ"

"ಸಿಲ್ಲಿ ಗರ್ಲ್... ನೀನು ಓದು ಮುಗಿಸು... ನಿನಗೂ ಮದುವೆ ಮಾಡೋಣಂತೆ. ಈಗ ನೀನಿನ್ನು ಚಿಕ್ಕೋಳು. ಮದುವೆ ಅಂದ್ರೆ ಜವಾಬ್ದಾರಿ ಜಾಸ್ತಿ"

"ಅದಕ್ಕೇ ನೀವು ಮದುವೆ ಆಗದೇ ಸಿಂಗಲ್ ಆಗೇ ಇದೀರಾ ಮೇಡಂ?" ಮೃದುಲಾ ಅತ್ತ ಮುಖ ತಿರುಗಿಸಿದಳು.

"ನೀನು ವಿಪರೀತ ಪ್ರಶ್ನೆ ಕೇಳ್ತೀಯಾ ರಾಶಿ... ಈಗ ನನ್ನ ಮಾತು ಯಾಕೆ?"

"ಸಾರಿ ಮೇಡಂ... ಸಾರಿ... ಕೋಪ ಮಾಡ್ಕೋಬೇಡಿ... ಆದರೆ ನಂಗೂ ಕೆಲವು ಕುತೂಹಲಗಳಿವೆ ಮೇಡಂ..."

"ನಿನ್ನ ಕುತೂಹಲದ ಪ್ರಶ್ನೆಗಳಿಗೆ ಇನ್ನೊಂದಾದ್ರೂ ಉತ್ತರ ಹೇಳ್ತೀನಿ. ಈಗ ನೀನು ಜಾಣೆ ತರಹ ಎದ್ದು ಸ್ನಾನ ಮಾಡಿ, ತಿಂಡಿ ತಿಂದು ಕಾಲೇಜಿಗೆ ಹೋಗು. ಇವತ್ತು ನಿನ್ನ ಅಕ್ಕಂದಿರು ಭಾವಂದಿರು, ಸಾಯಂಕಾಲದ ಹೊತ್ತಿಗೆ ಬರ್ತಾರೆ. ಅವರೆಲ್ಲಾ ನಿನ್ನನ್ನ ಗುಡ್‌ಗರ್ಲ್ ಅಂತ ಹೊಗಳಬೇಕೋ ಬೇಡ್ವೋ."

"ನಾನು ಅವರಿಬ್ಬರನ್ನು ಮಾತನಾಡಿಸುಲ್ಲ. ನನ್ನೊಬ್ಬಳನ್ನೇ ಬಿಟ್ಟು ಹೋಗಲು ಅವರಿಬ್ಬರಿಗೂ ಮನಸ್ಸಾದ್ರೂ ಹೇಗೆ ಬಂತು?"

"ನಾನು ನಿನ್ನ ಜೊತೆಲಿದೀನಲ್ಲ... ಅದಕ್ಕೇ ಬಿಟ್ಟು ಹೋದ್ರು"

"ನೀವು ಈ ಮನೆಗೆ ಗೆಸ್ಟ್, ಅಷ್ಟಾದರೂ ತಿಳೀಬೇಡ್ವಾ ಸಾಕ್ಷಿಗೆ"

"ನೀನು ಬೇಗ ಬೆಳೆದು ದೊಡ್ಡವಳಾಗಲಿ ಅಂತ ಅವರ ಆಸೆ. ಇವತ್ತು ಏನು ಅಡಿಗೆ ಮಾಡಿಸಬೇಕು ಅಂತ ಹೇಳಿಬಿಡು"

"ಅವರಿಗೆಲ್ಲಾ ಏನು ಇಷ್ಟವೋ ಅದನ್ನೇ ಮಾಡಿಸಿದ್ರಾಯ್ತು... ನಾನು ಇವತ್ತೊಂದು ದಿನ ರಜ ಹಾಕ್ತೀನಿ ಮೇಡಂ ಪ್ಲೀಸ್..."

"ರಾಶೀ... ನಾನು ಮುದ್ದು ಮಾಡಿ ಕೆಡಿಸ್ತೀನಿ ಅಂತ ನಿನ್ನ ಅಕ್ಕಂದಿರು ನನ್ನನ್ನು ಬೈತಾರೆ ಅಷ್ಟೇ..."

"ಬೈದರೆ ನಾನು ಸುಮ್ಮನಿರ್ತೀನಾ? ನಾನೂ ದಬಾಯಿಸ್ತೀನಿ. ನೀವೂ ಇಲ್ಲದೇ ಇದ್ದಿದ್ರೆ ನಾನು ಒಬ್ಬಳೇ ಹೇಗಿರಬೇಕಾಗಿತ್ತು? ಹಾಗಂತ ಕೇಳ್ತೀನಿ"

ಮೃದುಲಾ ನಕ್ಕು ಅವಳ ತಲೆಯ ಮೇಲೆ ಕೈಯಾಡಿಸಿದಳು. ರಾಶಿ ಮತ್ತೆ ಮುಸುಕು ಬೀರಿ ಮಲಗಿದಳು.

33

ಮನೆಯ ಮುಂದೆ ಕಾರು ನಿಂತ ಸದ್ದು ಕೇಳಿಸಿತು. ರಾಶಿ ಎದ್ದು ಬಚ್ಚಲ ಮನೆಗೆ ಓಡಿದಳು. ಮೃದುಲಾ, ಗಿರಿಜಮ್ಮ ಹಾಗೂ ಅವಳ ಸೊಸೆಯನ್ನು ಮುಂಬಾಗಿಲಿಗೆ ಕಳಿಸಿದಳು. ಮೃದುಲಾ ಕಾರ್ತೀಕನ ಕಡೆ ಮುಗುಳ್ನಗೆ ಬೀರಿದಳು.

ಮದುಮಕ್ಕಳು ಹರ್ಷದಿಂದ ಇರುವುದನ್ನು ಕಂಡು ಅವಳಿಗೆ ನೆಮ್ಮದಿ ಎನಿಸಿತ್ತು. "ನೀವಿಬ್ರೂ ಇಲ್ಲೇ ನಿಂತಿರಿ. ನಾನು ಗಿರಿಜಮ್ಮನ್ನ ಕರ್ಕೊಂಡು ಬರ್ತೀನಿ" ಎಂದು ಒಳಗೆ ಬಂದಳು. ಗಿರಿಜಮ್ಮನ ಸೊಸೆ, ಕೆಂದಾರತಿಯನ್ನು ಸಿದ್ಧಗೊಳಿಸಿದಳು. ಚಪ್ಪರದ ಕೆಳಗೆ ಮಣೆಯನ್ನು ಹಾಕಿ, ಆರತಿ ಎತ್ತಿ ಇಬ್ಬರನ್ನು ಒಳಕ್ಕೆ ಬರಮಾಡಿಕೊಂಡರು.

"ಹೇಗಿದೀಯಮ್ಮ ಕ್ಷೀರಾ? ಹೇಗಿದೆ ಹೊಸ ಜೀವನ?" ವಿಚಾರಿಸಿದಳು. ಒಳ ಬಂದ ಕ್ಷೀರಾ, ಹಾಲಿನಲ್ಲಿ ವ್ಹೀಲ್ ಛೇರ್ ಮೇಲೆ ಕುಳಿತಿದ್ದ ತಂದೆಯನ್ನು ಕಂಡಳು. ಆಶ್ಚರ್ಯದಿಂದ ಕಣ್ಣರಳಿಸಿ ಕಾರ್ತೀಕ್ ಕಡೆ ನೋಡಿದಳು. ಕಾರ್ತೀಕ್ ಭುಜ ಕುಣಿಸಿದ. ಕ್ಷೀರಾ ಸಡಗರದಿಂದ ಅಪ್ಪನ ಬಳಿಗೆ ಬಂದು ಕೈ ಹಿಡಿದಳು.

"ಅಪ್ಪಾ ಹೇಗಿದೀರಪ್ಪಾ?" ತಂದೆಯ ದೃಷ್ಟಿ ಇಬ್ಬರ ಮೇಲೂ ಬಿದ್ದಿತು. ಮುಖದಲ್ಲಿ ನೆಮ್ಮದಿಯ ಕಳೆ ಮೂಡಿತ್ತು. ನಿಧಾನವಾಗಿ ತಲೆಯಾಡಿಸಿದ್ದನ್ನು ಕಂಡರು. ಏನಾಶ್ಚರ್ಯ!... ಮೂರು ನಾಲ್ಕು ದಿನಗಳಲ್ಲಿ ಅಪ್ಪನಲ್ಲಿ ಎಷ್ಟು ಸುಧಾರಣೆ? ಮೃದುಲಾಳ ಕಡೆ ತಿರುಗಿದಳು. ಅಷ್ಟರಲ್ಲಿ ಸಂಜಯ್ ಸಾಕ್ಷಿ ಸಹ ಬಂದರು. ರಾಶಿ ಮುಖ ತೊಳೆದು ಕನ್ನಡಿಯಲ್ಲಿ ತನ್ನನ್ನೊಮ್ಮೆ ನೋಡಿಕೊಂಡು, ಈಚೆ ಬಂದು ಅವರುಗಳನ್ನು ಸೇರಿದಳು.

"ಏನೇ ನೀನು ಕಾಲೇಜಿಗೆ ಹೋಗಲಿಲ್ವಾ?" ಇಬ್ಬರೂ ಒಟ್ಟಿಗೆ ಕೇಳಿದರು.

"ಹೋಗ್ಬೇಕೂಂತ ಇದ್ದೆ. ಈಗ ನೀವುಗಳು ಬಂದ್ರಲ್ಲ, ನನ್ನ ಕಾಲೇಜ್ ಪ್ರೋಗ್ರಾಂ ಕ್ಯಾನ್ಸಲ್. ಅದ್ಸರಿ... ಸಾಯಂಕಾಲ ತಾನೇ ನೀವುಗಳು ಬರೋ ಪ್ರೋಗ್ರಾಂ ಇದ್ದದ್ದು" ಅವಳು ಮೇಡಂ ಕಡೆ ನೋಡಿದಳು. ಮೃದುಲಾ ಕ್ಷೀರಾಳ ಕಡೆ ನೋಡಿ ಕಣ್ಣು ಸಂಜ್ಞೆ ಮಾಡಿದಳು.

"ಸಾಯಂಕಾಲಕ್ಕೇ ಬರ್ಬೇಕೂಂತ ಇದ್ದದ್ದು. ಆದರೆ ಬೇಗ ಬಂದು ಬಿಟ್ಟೆವು. ಬರ್ತಾ ಹಾಗೇ ಸಾಕ್ಷಿಗೆ ಫೋನ್ ಮಾಡಿದೆ ಅಷ್ಟೇ..."

"ನಾನು ಕಾಲೇಜಿಗೆ ಹೊರಟು ಹೋಗಿರ್ತೀನಿ ಅಂತ ಅಂದ್ಕೊಂಡ್ರಾ?.. ನಾನು ನಿಮ್ಮನ್ನೆಲ್ಲಾ ಫೂಲ್ ಮಾಡ್ಬಿಟ್ಟೆ"

"ಹೂಂ, ಫೂಲ್ ಮಾಡ್ಬಿಟ್ಟೆ... ಇನ್ನು ನಿನ್ನ ಚೈಲ್ಡಿಷ್ ಬುದ್ಧಿ ಹಾಗೇ ಇದೆಯಲ್ಲ. ನೀನು ಬದಲಾಗೋದೂ ಇಲ್ಲ" ಎಂದು ಸಾಕ್ಷಿ ಗೊಣಗುತ್ತಾ ತಂದೆಯ ಬಳಿಗೆ

ಬಂದಳು. "ಅಪ್ಪಾ ಹೇಗಿದೀರಪ್ಪಾ... ನಾಲ್ಕು ದಿನಗಳಾಯ್ತು ನಿಮ್ಮನ್ನು ನೋಡಿ" ಎಂದಳು. ಅಶೋಕ್, ಮಗಳನ್ನೇ ಮೇಲಿನಿಂದ ಕೆಳಗಿನ ತನಕ ನೋಡಿದ. ಮಗಳ ದೇಹದ ಅಳತೆ ದೊಡ್ಡದಾಗಿರುವುದು ಗಮನಕ್ಕೆ ಬಂದು, ನೋಟದಲ್ಲಿ ಸಂತಸವನ್ನು ತುಳುಕಿಸಿದ. ಸಾಕ್ಷಿ ನಾಚಿದಳು. ಮೃದುಲಾ, ಅವರುಗಳನ್ನು ಮಾತನಾಡಲು ಬಿಟ್ಟು ಒಳಕ್ಕೆ ಹೊರಟು ಹೋಗಿದ್ದಳು. ಕಾರ್ತೀಕ್ ಸಂಜಯ್ ಹೊರಗೆ ನಿಂತು ಮಾತನ್ನಾಡುತ್ತಿದ್ದರು.

"ಅಪ್ಪನ ಮುಖದಲ್ಲಿ ಗೆಲುವಿದೆ, ನೆಮ್ಮದಿ ಕಾಣ್ತಿದೆ ಅಲ್ವಾ?"

"ಇರಬಹುದು, ರಾಶಿ ಅಪ್ಪನ್ನ ಚೆನ್ನಾಗಿ ನೋಡ್ಕೊಂಡಿದಾಳೆ. ರಾಶಿಗೆ ಜವಾಬ್ದಾರಿ ಬಂದಿದೆ ಅಲ್ವೇನಪ್ಪಾ?"

"ನಾನು ಅಪ್ಪನ್ನ ನೋಡ್ಕೋಳ್ಳೋಕೆ ಸಮಯ ಎಲ್ಲಿತ್ತು? ಎಲ್ಲಾ ದಿನವೂ ಕಾಲೇಜಿಗೆ ಹೋಗಿದ್ದೆ. ಅವರ ಜೊತೇಲಿ ಮನೇಲಿದ್ದವರು, ಗಿರಿಜಮ್ಮ, ಅವರ ಮಗ, ಸೊಸೆ ಹಾಗೂ ಸಿಸ್ಟರ್..."

"ಹಾಗಾದ್ರೆ ಮೇಡಂ... ಇಲ್ಲಿ ಇರ್ಲಿಲ್ವಾ?" ಪಿಸುದನಿಯಲ್ಲಿ ಕೇಳಿದಳು.

"ಇದ್ದರಪ್ಪಾ, ಅಪ್ಪಂಗೆ ನ್ಯೂಸ್ ಪೇಪರನ್ನು ಓದಿ, ವಿಷಯವನ್ನು ಹೇಳ್ತಿದ್ರು. ಅಪ್ಪ ಕೇಳಿಸ್ಕೋತಿದ್ರು, ಅಲ್ವೇನಪ್ಪಾ" ಅಶೋಕ್ ಹೂಂ ಎನ್ನುವಂತೆ ತಲೆಯಾಡಿಸಿ ಮಕ್ಕಳ ಮುಖವನ್ನೇ ನೋಡಿದ.

"ನೋಡಿದ್ಯೇನೇ, ಎರಡು ಮೂರು ದಿನಗಳಲ್ಲಿ ಅಪ್ಪನ್ನ ಬದಲಾಯಿಸಿ ಬಿಟ್ಟಿದಾರೆ. ಅಪ್ಪ ಆ ಕಡೆಗೇ ವಾಲಿ ಬಿಟ್ಟಿದಾರೆ" ಸಾಕ್ಷಿ ಉಸುರಿದಳು. ಇಬ್ಬರೂ ಅಲ್ಲಿಂದ ವೆರಾಂಡಕ್ಕೆ ಬಂದರು.

"ಹಾಗಾದ್ರೆ ಇದು, ನಾವು ಗಾಢವಾಗಿ ಯೋಚಿಸಬೇಕಾದ ವಿಷಯ ಅಪ್ಪನ ಆರೋಗ್ಯ ಬೇಗ ಬೇಗ ಸುಧಾರಿಸುತ್ತದೆ ಅನ್ನೋದಾದ್ರೆ, ಮೇಡಂ ಇಲ್ಲಿರಬಹುದಲ್ಲ"

"ನಿಮ್ಮ ಭಾವಂಗೆ ಇಷ್ಟವಿಲ್ಲ, ಕೊಂಕು ಮಾತಾಡ್ತಾರೆ ಕ್ಷೀರಾ..."

"ಹಾಗಾದ್ರೆ ಅಪ್ಪನ ಆರೋಗ್ಯ ಸುಧಾರಿಸುವುದು ಭಾವಂಗೆ ಬೇಡ್ವಾ?"

"ಕ್ಷೀರಾ... ನಿಮ್ಮ ಭಾವ ಅಷ್ಟು ಕೆಟ್ಟವರಲ್ಲ... ಅಪ್ಪ ನಮ್ಮನ್ನೆಲ್ಲಾ ಕ್ರಮೇಣ ಮರೆತು ಬಿಟ್ರೆ ಅಂತ ಅವರ ಚಿಂತೆ... ಹಾಗೇನಾದ್ರು ಆದ್ರೆ...? ದುಃಖವಾಗುತ್ತೆ ಕಣೇ..."

"ಹಾಗ್ಹೇಗೇ ಆಗುತ್ತೆ? ರಾಶಿಯಂತೂ ಇಲ್ಲೇ ಇರ್ತಾಳಲ್ಲ"

"ಅಲ್ಲ ಒಂದ್ಮಾತು ಹೇಳು. ಅಪ್ಪ ಇಷ್ಟು ಬೇಗ ಅಮ್ಮನ್ನ ಮರೆತು ಬಿಟ್ರಾ? ಅದೇ ಅಷ್ಟು ಸುಲಭವಾಗಿರುವಾಗ, ನಮ್ಮದೆಲ್ಲ ಏನು ಮಹಾ?"

"ಅಪ್ಪನಿಗೆ ಈಗ, ಸಂಗಾತಿಯ ಅಗತ್ಯವಿದೆ. ಅವರ ನೋವು-ನಲಿವುಗಳನ್ನು ಹೇಳಿಕೊಳ್ಳಲು ಹತ್ತಿರದವರು ಬೇಕಲ್ವಾ?"

"ಹಾಗಂತ, ಈಗ ಸುಮ್ಮನಿದ್ದು ಬಿಡೋಣ್ವಾ?... ಕ್ರಮೇಣ ಈ ಮನೆಯ ಒಡತಿ, ಮೇಡಂ ಮೃದುಲಾ ಆಗ್ತಾರೆ"

"ಅಪ್ಪನ ಮನೆಯ ಮೊದಲ ಒಡತಿ ಈ ಮೇಡಂ ಮೃದುಲಾನೇ. ಈಗ ಇಷ್ಟು ವರ್ಷಗಳ ನಂತರ ಮತ್ತೆ ತಮ್ಮ ಮನೆಗೆ ಬಂದಿದಾರೆ. ಈ ಮನೆಯ ಒಡತಿಯಾಗಿ ಇರಲಿ ಬಿಡು"

"ಅಂತೂ ನೀನೂ ಮೇಡಂ ಪರ ಅಂತಾಯ್ತು. ಪರವಾಗಿಲ್ಲ ಕಾರ್ತೀಕ್ ನಿನ್ನ ಕಿವಿಯನ್ನು ಚೆನ್ನಾಗಿಯೇ ಊದಿದಾನೆ... ಇದಕ್ಕೇನಾದ್ರೂ ಅನುಮಾನ ಸಹ ಬಂದಿನೆಯೋ ಇಲ್ವೋ... ಪೆದ್ದು..." ರಾಶಿಯ ಕಡೆ ನೋಡುತ್ತಾ ಎಂದಳು.

"ನಾನು ಯಾರ ಪರಾನೂ ಅಲ್ಲ. ನೀನು ಪ್ರಾಕ್ಟಿಕಲ್ ಆಗಿ ಯೋಚಿಸು. ನೀನು ಸದಾ ಕಾಲವೂ ಇಲ್ಲಿಯೇ ಇರುಕ್ಕೆ ಆಗುಲ್ಲ. ರಾಶೀನ ಬೇರೆ ಎಲ್ಲಾದ್ರೂ ಬಿಡೋಕೆ ಅಪ್ಪ ಒಪ್ಪುಲ್ಲ. ಗಿರಿಜಮ್ಮ, ಸಿಸ್ಟರ್ ಎಲ್ಲಾ ಹೊರಗಿನವರು... ಇವರಾದ್ರೆ..."

"ಅಪ್ಪನ ಮೊದಲ ಹೆಂಡತಿ... ನಾವು ಈಗ ಅವರನ್ನು ಅಮ್ಮನ ಸ್ಥಾನದಲ್ಲಿ ಕೂರಿಸಬೇಕಾಗಿದೆ. ಇನ್‌ಫ್ಯಾಕ್ಟ್ ಅವರಾಗಿಯೇ ಬಂದು ಕೂತು ಬಿಟ್ಟಿದಾರೆ... ಆದರೆ, ನಿನ್ನ ಭಾವಂಗೆ ಇಷ್ಟವಿಲ್ಲ. ಅವರಿಗೆ ಏನೋ ಅನುಮಾನ. ಇದರಿಂದ ಮೇಡಂಗೆ ಸ್ವಂತ ಲಾಭವೇನಾದ್ರೂ ಇರಬಹುದು ಅಂತ..."

"ಏನು ಲಾಭ? ಅವತ್ತೇ ಹೇಳಿದ್ನಲ್ಲ, ಅವರಿಗೇ ಬೇಕಾದಷ್ಟಿದೆ"

"ಆದರೂ, ಅವರನ್ನು ಅಕ್ಸೆಪ್ಟ್ ಮಾಡಿಕೋಬೇಕು ಅಂತ ಅಂದ್ರೆ... ಸುಲಭಾನಾ ಕ್ಷೀರಾ ! ಯೋಚಿಸಬೇಡ್ವಾ?..." ಅಪ್ಪನ್ನ ಮನಸ್ನಲ್ಲಿ ಏನಿದೆ... ಅವರಿಗೆ ಒಪ್ಪಿಗೇನಾ ಅಂತ ತಿಳ್ಕೋಬೇಕು... ಅದು ಮೊದಲ ಕೆಲಸ"

"ಅಪ್ಪನ್ನ ಮೊದಲು ಕೇಳೋದು ಬೇಡ. ಮೊದಲು ಮೇಡಂ ಹತ್ರ ಮಾತನಾಡೋಣ... ಒಂದು ಇತ್ಯರ್ಥಕ್ಕೆ ಬರೋಣ"

"ಹೌದು, ಮಾತಾಡೋಕೆ ನಮಗೂ ಅಧಿಕಾರ ಇದೆ ಅಲ್ವಾ? ಮುಸುಕಿನೊಳಗಿನ ಗುದ್ದು ಅಂತ ಸುಮ್ಮನೇ ಅನುಭವಿಸೋದು ಬೇಡ"

"ಸರಿ, ಊಟ ಆಗುವವರೆಗೂ ಯಾವ ಮಾತನ್ನು ಆಡೋದು ಬೇಡ. ಅಷ್ಟರಲ್ಲಿ ನೀನೂ ಭಾವನ ಹತ್ತಿರ ಮಾತಾಡಿರು... ಅವರು ರೇಗೋದು ಬೇಡ"

"ನಾನು ಭಾವಂಗೆ ಹಾಗೆ ಮಾತಾಡಿ, ಹೀಗೆ ಮಾತಾಡಿ ಅಂತ ಹೇಳುಲ್ಲ. ಅವರು ನನ್ನ ಮಾತನ್ನು ಕೇಳೋದೂ ಇಲ್ಲ. ನಾವೆಲ್ಲಾ ಒಂದು ನಿರ್ಧಾರಕ್ಕೆ ಬಂದರೆ, ಭಾವಾನೂ ಒಪ್ಕೋ ಬೇಕಾಗುತ್ತೆ... ಅದಿರಲಿ, ನಿನ್ನ ವಿಷಯ ಹೇಳು..." ಸಾಕ್ಷಿ ತಂಗಿಯನ್ನು ವಿಚಾರಿಸಿದಳು. ಪಕ್ಕದ ರೂಮಿನಲ್ಲಿ ಕುಳಿತಿದ್ದ ಮೃದುಲಾಳ ಕಿವಿಗೆ ಅರೆಬರೆ ಮಾತುಗಳು ಕೇಳಿಸಿದ್ದವು. ಅವಳಿಗೆ ಬೇಸರವೇನೂ ಆಗಲಿಲ್ಲ. ಇದು ಎಷ್ಟಾಗಲೀ, ಅವರ ಮನೆಯ ವಿಚಾರ. ಅವರುಗಳು ಚರ್ಚೆ ನಡೆಸಿ, ಒಂದು

ಒಮ್ಮತಕ್ಕೆ ಬರುವುದು ಅವರಿಗೆ ಸೇರಿದ್ದು. ಎಲ್ಲರೂ ಬೆಳೆದವರು, ಸುಮ್ಮನೇ ನನ್ನನ್ನು ಅಕ್ಸೆಪ್ಟ್ ಮಾಡಿಕೊಳ್ಳಲ್ಲ. ಏನು ಮಾತು ಬರುತ್ತೋ ಅದನ್ನು ಎದುರಿಸ್ತೀನಿ" ಅಂತಂದುಕೊಂಡಳು.

* * *

34

ಗಿರಿಜಮ್ಮ ಸಿಹಿ ಅಡಿಗೆಯನ್ನು ಮಾಡಿದ್ದರು. ಎಲ್ಲರನ್ನು ಒಟ್ಟಿಗೇ ಕೂರಿಸಿ ಬಡಿಸಿದರು. ಮೃದುಲಾ, ಅಶೋಕನಿಗೆ ಊಟವನ್ನು ಮುಂಚೆಯೇ ಮಾಡಿಸಿ, ಇವರುಗಳೊಂದಿಗೆ ಕುಳಿತಳು. ಊಟದ ಮನೆಯಲ್ಲಿ ಮಾತುಗಳು ಸಹಜವಾಗಿರಲಿಲ್ಲ. ಸುಮ್ಮನೇ ಆಡಲೇಬೇಕು ಎಂಬಂತೆ ಆಡಿದಂತಿತ್ತು. ಮೃದುಲಾಳಿಗೂ ಮುಜುಗರವಾಗಿತ್ತು. ಕಾರ್ತೀಕ ಆಗಾಗ್ಗೆ ಅವಳ ಕಡೆ ನೋಡುತ್ತಿದುದು ಅವಳ ಗಮನಕ್ಕೆ ಬಂದಿತ್ತು. ಸಂಜಯ ಗಂಭೀರವನ್ನು ನಟಿಸಿದ್ದ.

ಭಾರಿ ಊಟದ ನಂತರ, ಆಯಾಸವನ್ನು ಪರಿಹರಿಸಿಕೊಳ್ಳುವವರಂತೆ ಎಲ್ಲರೂ ಅಲ್ಲಲ್ಲೇ ಕುಳಿತು ಹರಟತೊಡಗಿದರು. ಮೃದುಲಾ ಅಲ್ಲಿಯೇ ಸುಳಿದಾಡಿದರೂ, ಯಾರೂ ಮುಖ್ಯವಾದ ವಿಷಯವನ್ನು ಎತ್ತಲಿಲ್ಲ. ಮೃದುಲಾ ತಾನೇ ಒಂದು ನಿರ್ಧಾರಕ್ಕೆ ಬಂದು, ಅವರುಗಳೊಡನೆ ಕುಳಿತಳು. ಸಂಜಯ ಹೆಂಡತಿಯ ಮೊಣಕೈ ತಿವಿದ. ಕಾರ್ತೀಕ ಕ್ಷೀರಾಳ ಕೈಗಳನ್ನು ಬಿಗಿಯಾಗಿ ಹಿಡಿದ. ರಾಶಿ ಮೇಡಂ ಕಡೆ ನೋಡಿ ಮುಗುಳ್ನಕ್ಕಳು. ಮೃದುಲಾ ಎಲ್ಲರನ್ನು ಒಮ್ಮೆ ನೋಡಿ ಮಾತಿಗೆ ಆರಂಭಿಸಿದಳು. "ಎಕ್ಸ್‌ಕ್ಯೂಸ್ ಮೀ... ನಾನು ನಿಮ್ಮೆಲ್ಲರ ಜೊತೆ ಸ್ವಲ್ಪ ಮಾತಾಡ್ಬೇಕು" ಯಾವ ಅಳುಕೂ ಇಲ್ಲದೆ ಹೇಳಿದಳು. ಎಲ್ಲರೂ ಪಿಳಿಪಿಳಿ ಕಣ್ಣು ಬಿಟ್ಟು ಅವಳನ್ನೇ ನೋಡಿ, ಪರಸ್ಪರ ಮುಖವನ್ನು ನೋಡಿಕೊಂಡರು.

ನಾನು, ಈ ಮನೆಗೆ ಹೊಸಬಳೂ ಅಲ್ಲ; ಹಳಬಳೂ ಅಲ್ಲ. ಈಗಾಗಲೇ ನಾನು ನಿಮಗೆ ಪರಿಚಿತಳು. ಕೇವಲ ರಾಶಿಯ ಮೇಡಂ ಆಗಿ ಮಾತ್ರವಲ್ಲ ಈ ಮನೆಯ ಯಜಮಾನ, ಮಿಸ್ಟರ್ ಅಶೋಕ್‌ರವರ ಮೊದಲ ಪತ್ನಿಯಾಗಿದ್ದವಳು ಕೂಡಾ. ಆ ಅಧಿಕಾರದಿಂದ ನಾನು ಇಲ್ಲಿಗೆ ಬಂದು ಇಲ್ಲ. ಇಪ್ಪತ್ತೈದು ವರ್ಷಗಳ ಹಿಂದೆ ನಾವಿಬ್ಬರೂ ಮದುವೆಯಾಗಿದ್ದೆವು. ನಂತರ ಕಾರಣಾಂತರಗಳಿಂದ ದೂರವಾದೆವು. ನಾವಿಬ್ಬರೂ ಮದುವೆಗೆ ಮೊದಲು ಒಬ್ಬರನ್ನೊಬ್ಬರು ಪ್ರೀತಿಸಿದ್ದೆವು. ಆ ಪ್ರೀತಿ ನನ್ನಲ್ಲಿ ಈಗಲೂ ಇದೆ. ನಾನೆಂದೂ ಅವರನ್ನು ದ್ವೇಷಿಸಲೇ ಇಲ್ಲ. ಅವರಿಂದ ಕೆಲವು ನಿರೀಕ್ಷೆಗಳು ಇದ್ದುದುಂಟು. ನಿರಾಸೆಯಾದುದೂ ಉಂಟು. ಆದರೆ, ಪ್ರೀತಿ ಎಂದೂ ಕಡಿಮೆ ಆಗಲಿಲ್ಲ. ಆ ಕಾರಣದಿಂದಲೇ ನಾನು ಮರು ಮದುವೆ ಆಗಲಿಲ್ಲ. ಆದರೆ ನಾವಿಬ್ಬರೂ ಮತ್ತೆಂದೂ ಭೇಟಿಯಾಗಿರಲೇ ಇಲ್ಲ. ಈಗಲೇ, ರಾಶಿ ನನ್ನ ವಿದ್ಯಾರ್ಥಿನಿಯಾದ ಬಳಿಕವೇ, ನಾನು ಇವರನ್ನು ಕಂಡದ್ದು. ಆದರೆ, ನಿಮ್ಮ ತಾಯಿ ಮಾಲಾಶ್ರೀ ಬದುಕಿಲ್ಲ ಎಂದು ತಿಳಿದು ನನಗೆ ವ್ಯಥೆಯಾಯಿತು. ಮಾಲಾ ನನ್ನ

ಸ್ನೇಹಿತೆಯಾಗಿದ್ದವಳು. ಅವಳ ಮೇಲೆ ನನಗೆ ಯಾವ ಮತ್ಸರವೂ ಇರಲಿಲ್ಲ. ಮೊದಲ ಬಾರಿಗೆ ರಾಶಿಯನ್ನು ಕಂಡಾಗ, ಮಾಲಾಶ್ರೀಯನ್ನು ಕಂಡಂತೆ ಆಗಿ, ಅವಳ ನೆನಪು ಮರುಕಳಿಸಿತ್ತು. ಆಕಸ್ಮಿಕ ಎಂಬಂತೆ, ನಿಮ್ಮೆಲ್ಲರ ಪರಿಚಯ ನನಗಾಯಿತು. ನಿಮ್ಮ ಮನೆಯ ದುರಂತದ ಬಗ್ಗೆ ತಿಳಿಯಿತು. ಆಘಾತದಿಂದ ನನಗೆ ಏನು ಹೇಳಬೇಕೆಂದು ತಿಳಿಯಲಿಲ್ಲ. ನನ್ನ ಬಗ್ಗೆ ಹೇಳಿಕೊಳ್ಳಲು ಹಿಂಜರಿದೆ. ಈ ಸಮಯದಲ್ಲಿ ಕ್ಷೀರಾ, ಕಾರ್ತೀಕ್‌ನನ್ನು ಆಕರ್ಷಿಸಿದ್ದಳು. ರಾಶಿ ನನ್ನ ಪ್ರೀತಿಯ ವಿದ್ಯಾರ್ಥಿನಿಯಾಗಿದ್ದಳು. ನನಗೇ ಅರಿವಿಲ್ಲದಂತೆ, ನನ್ನ ಮನ ಇತ್ತ ಕಡೆ ತಿರುಗುತ್ತಿತ್ತು...

ತಾಯಿಯನ್ನು ಕಳೆದುಕೊಂಡು ನೀವುಗಳು ಅನುಭವಿಸುತ್ತಿರುವ ನೋವು, ಹಾಸಿಗೆ ಹಿಡಿದು ಮಲಗಿರುವ ತಂದೆಯ ಬಗ್ಗೆ ನಿಮ್ಮ ಸಂಕಟ, ಎಲ್ಲವೂ ನನಗೆ ಅರ್ಥವಾಗುತ್ತಿತ್ತು. ಸಂಗಾತಿ ಇಲ್ಲದೇ ಅಶೋಕ್ ಒಂಟಿಯಾಗಿದ್ದಾರೆಂದು ಎನಿಸಿತ್ತು. ಇವರ ವೇದನೆಯನ್ನು ಅರ್ಥ ಮಾಡಿಕೊಳ್ಳುವವರು ಬಳಿಯಲ್ಲಿ ಇಲ್ಲ ಎಂದು ಅವರು ಚಡಪಡಿಸುತ್ತಿರುವರೆಂದೆನಿಸಿತ್ತು. ಮಕ್ಕಳ ಬಳಿ ಹೇಳಿಕೊಳ್ಳಲಾಗದೆ, ಮೂಕ ಸಂಕಟ ಪಡುತ್ತಿದ್ದಾರೆಂದೆನಿಸಿತ್ತು. ಸಾಕ್ಷಿಯ ಪ್ರೆಗ್ನೆಸ್ಸಿ, ಕ್ಷೀರಾಳ ಮದುವೆ, ರಾಶಿಯ ವಿದ್ಯಾಭ್ಯಾಸ ಇದೆಲ್ಲವನ್ನು ಕುರಿತು ಇವರ ಕಡೆಯಿಂದ ಗಮನ ಬೀರಿದಾಗ, ಇಲ್ಲಿ ಮನೆಯ ಒಡತಿ ಒಬ್ಬಳ ಅವಶ್ಯಕತೆ ಇದೆ ಎಂದೆನಿಸತೊಡಗಿತು. ಶಾಸ್ತ್ರೋಕ್ತವಾಗಿ ಮದುವೆಯಾಗಿ ಇವರ ಸುಖ ದುಃಖಗಳನ್ನು ಹಂಚಿಕೊಳ್ಳುವ ಅಧಿಕಾರವನ್ನು ನಾನಾಗಿಯೇ ದೂರ ಮಾಡಿದ್ದೆನಲ್ಲ ಎನ್ನುವ ವ್ಯಥೆ ನನ್ನನ್ನು ಬಾಧಿಸತೊಡಗಿತು. ಇವರ ಅನಾರೋಗ್ಯ ನನ್ನನ್ನು ಚಿಂತೆ ಗೀಡು ಮಾಡಿತ್ತು. ಆಗ ಮೂಡಿದ್ದು ಈ ಆಲೋಚನೆ. ನಾನು ಸ್ವ ಇಚ್ಛೆಯಿಂದ ಈ ಮನೆಯಲ್ಲಿ ಅಶೋಕರಿಗೆ ಪತ್ನಿಯಾಗಿ, ಅವರ ಮಕ್ಕಳಿಗೆ ತಾಯಿಯಾಗಿ ಇರಲು ನಿರ್ಧರಿಸಿದ್ದೇನೆ. ಇದಕ್ಕೆ ನಿಮ್ಮೆಲ್ಲರ ಸಹಕಾರ ನನಗೆ ಬೇಕು. ಅದು ನನಗೆ ಸಿಗುತ್ತದೆ ಎಂಬ ನಂಬಿಕೆ ನನಗಿದೆ" ಎಲ್ಲರೂ ಮೌನದಿಂದ ಅವಳ ಮಾತನ್ನು ಆಲಿಸಿದರು. ಆ ತಕ್ಷಣಕ್ಕೆ ಏನು ಹೇಳಬೇಕೆಂದು ಯಾರಿಗೂ ಗೊತ್ತಾಗಲಿಲ್ಲ. ಅವಳು ಮಾತನ್ನು ಮುಂದುವರೆಸಿದಳು. ರಾಶಿ ಕಕ್ಕಾಬಿಕ್ಕಿಯಾಗಿ ಅಕ್ಕಂದಿರ ಕಡೆ ನೋಡಿದಳು.

"ನಾನು ಇಲ್ಲಿ, ಈ ಮನೆಯಲ್ಲಿ ನಿಮ್ಮೆಲ್ಲರೊಂದಿಗೆ ಇರುವುದು ನಿಮಗೆ ಬೇಡವೆನಿಸಿದರೆ, ನಿಮ್ಮ ತಂದೆಯನ್ನು ನನ್ನ ವಶಕ್ಕೆ ಬಿಟ್ಟು ಕೊಡಿ. ನಾನು ಬೇರೆ ಮನೆ ಮಾಡಿಕೊಂಡು ಇವರನ್ನು ಚೆನ್ನಾಗಿ ನೋಡಿಕೊಳ್ತೀನಿ. ಆ ಶಕ್ತಿ ನನಗಿದೆ"

"ಇಲ್ಲ, ಅಪ್ಪನ್ನ ನಾವುಗಳು ಎಲ್ಲಿಗೂ ಕಳಿಸುವುದಿಲ್ಲ. ಅವರು ಈ ಮನೆಯಲ್ಲಿಯೇ ಇರಬೇಕು" ಸಾಕ್ಷಿ ನುಡಿದಳು.

"ಹಾಗಾದರೆ, ನಾನು ನಿಮ್ಮ ತಂದೆಯ ಜೊತೆ ಇಲ್ಲಿರಲು ನಿಮಗ್ಯಾರಿಗೂ ಸಮ್ಮತಿ ಇಲ್ಲ ಅಂತ ಭಾವಿಸಲಾ? ಪರವಾಗಿಲ್ಲ ಬಿಡಿ. ದಿನಕ್ಕೊಮ್ಮೆ ಬಂದು ನೋಡಿಕೊಂಡು ಮಾತನಾಡಿಸಿಕೊಂಡು ಹೋಗ್ತೀನಿ. ಅದಕ್ಕೆ ನಿಮ್ಮಗಳ್ಯಾರದ್ದೂ ಅಭ್ಯಂತರವಿಲ್ಲವೆಂದು ಭಾವಿಸ್ತೀನಿ" ಅವಳ ಮುಖದಲ್ಲಿ ಯಾಚನೆಯ ಭಾವನೆ

ಇದ್ದುದನ್ನು ಗಮನಿಸಿ, ಕಾರ್ತಿಕ್ ಮುಜುಗರದಿಂದ ಕ್ಷೀರಾಳ ಕಡೆ ನೋಡಿದ. ಕ್ಷೀರಾ ಸಾಕ್ಷಿಯ ಕಡೆ ನೋಡಿದಳು. ರಾಶಿಯ ಮುಖ ಕಂಗೆಟ್ಟಿತ್ತು.

"ಯಾಕೆ? ಯಾರೂ ಏನನ್ನು ಹೇಳ್ತಿಲ್ಲ. ನನ್ನ ಮಾತಿನ ಮೇಲೆ ನಿಮಗ್ಯಾರಿಗೂ ನಂಬಿಕೆ ಇಲ್ಲವಾ? ನಿಮ್ಮೆಲ್ಲರ ವಿಶ್ವಾಸಕ್ಕೆ ನಾನು ಅರ್ಹಳಲ್ಲವಾ?"

"ಸಾಕು ಮೃದುಲಾ, ನೀವು ಯಾರನ್ನು ಏನನ್ನು ಕೇಳಿಕೊಳ್ಳಬೇಕಾಗಿಲ್ಲ. ನನಗೆ ಹಿಂಸೆ ಆಗುತ್ತಿದೆ. ನಿಮ್ಮ ಪ್ರೀತಿ, ಘನತೆ, ಗೌರವ, ಇಲ್ಲಿ ಯಾರಿಗೂ ಅರ್ಥವಾಗುವುದಿಲ್ಲ" ಕಾರ್ತೀಕ್ ನೊಂದು ನುಡಿದಾಗ ಕ್ಷೀರಾ ನುಡಿದಳು.

"ಹಾಗೇನಿಲ್ಲ ನನಗೆ ನಿಮ್ಮ ಮೇಲೆ ಅಪಾರವಾದ ಗೌರವ, ನಂಬಿಕೆ ಎಲ್ಲಾ ಇದೆ. ನನ್ನ ಅಭ್ಯಂತರ ಏನೂ ಇಲ್ಲ" ಸಾಕ್ಷಿ ಗಂಡನ ಕಡೆ ನೋಡಿದಳು. ಅವನು ಅವಮಾನಿತನಾದವನಂತೆ ತಲೆತಗ್ಗಿಸಿ ಕುಳಿತಿದ್ದ.

"ನನಗೆ ಯಾವ ಅಭ್ಯಂತರ ಇಲ್ಲ ಮೇಡಂ. ನಾವುಗಳು, ನಮ್ಮ ನಮ್ಮ ಸಂಸಾರದ ಕೆಲಸ ಕಾರ್ಯಗಳ ನಡುವೆ, ಅಪ್ಪನನ್ನು ಎಲ್ಲಿ ಮರೆತು ಬಿಡ್ತೀವೋ ಅನ್ನೋ ವ್ಯಥೆ ಬಾಧಿಸುತ್ತಲೇ ಇರುತ್ತದೆ. ಈಗ ನಿಮ್ಮ ಮೇಲೆ ಆ ಹೊರೆಯನ್ನು ಹಾಕಿದರೆ ನಮಗೂ ನೆಮ್ಮದಿ ಇರುತ್ತದೆ. ಎರಡು ವರ್ಷಗಳ ಹಿಂದೆ, ಈ ಮನೆಯಿಂದ ಹೊರಕ್ಕೆ ಕಾಲಿಟ್ಟವಳು ನಾನು. ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ. ನಾನು ಇಲ್ಲಿಯೂ ಇರಲಾಗದ, ಅಲ್ಲಿಯೂ ಸೇರಲಾಗದ ತ್ರಿಶಂಕು ಸ್ಥಿತಿಯಲ್ಲಿದೀನಿ. ಈ ಮಧ್ಯೆ ಈ ಪ್ರೆಗ್ನೆನ್ಸಿ. ನನಗೆ ಏನು ಹೇಳ್ಬೇಕೂಂತ ಗೊತ್ತಾಗ್ತಿಲ್ಲ. ಕ್ಷಮಿಸಿ ಮೇಡಂ" ಸಾಕ್ಷಿ ನುಡಿದಳು. ಸಂಜಯ್ ಉರಿಗಣ್ಣಿನಿಂದ ಹೆಂಡತಿಯನ್ನು ನೋಡಿದ.

"ಥ್ಯಾಂಕ್ಸ್..." ಇವರು ನನ್ನ ಪತಿಯಾಗಿದ್ದವರು. ಆದರೆ ಈಗ ಕಾನೂನು ರೀತ್ಯಾ ನನಗೆ ಅಧಿಕಾರವಿಲ್ಲ. ಆದರೆ ಆ ಅಧಿಕಾರವನ್ನು ನೀವುಗಳು ಮತ್ತೆ ನನಗೆ ಕೊಡ್ತಿದೀರಿ. ನನ್ನ ಬಗ್ಗೆ ಆದರವಿದೆಯೋ, ತಿರಸ್ಕಾರವಿದೆಯೋ, ನಿಜ ಏನು ಅಂತ ನನಗೆ ತಿಳಿಯದು. ನನ್ನ ಕರ್ತವ್ಯ ಅಂತ ನಾನು ಇಲ್ಲಿ ಇರ್ತೀನಿ. ನಾನು ಅವರ ಮೊದಲ ಪತ್ನಿ... ಆದರೆ, ನಿಮಗೆ ಮೊದಲು ಯಾವ ಸ್ಥಾನವಿತ್ತೋ ಆ ಸ್ಥಾನ ಸದಾಕಾಲವೂ ಇರುತ್ತೆ... ನನ್ನಿಂದ ನಿಮಗೆ ಯಾವ ತೊಂದರೆ ಉಂಟಾಗುವುದಿಲ್ಲ. ಅದು ಖಂಡಿತ... ನಿಮ್ಮ ತಂದೆಯ ಹಾಗೂ ರಾಶಿಯ ಜವಾಬ್ದಾರಿ ಇನ್ನು ಮುಂದೆ ನನ್ನದು. ಸಾಕ್ಷಿ ಯಾವ ಟೆನ್ಷನ್ ಇಲ್ಲದೇ ನಿರಾತಂಕವಾಗಿರಬಹುದು. ಕ್ಷೀರಾ ನಲಿವಿನಿಂದ ಹಾಯಾಗಿರಬಹುದು.

ರಾಶಿ ಗರಬಡಿದವಳಂತೆ ಕುಳಿತಿದ್ದಳು. ಈ ಅಧ್ಯಾಯವೇ ಅವಳಿಗೆ ಹೊಸತು. ಮೊದಲಿಗೆ, ಮೇಡಂ ಯಾಕೆ ಹೀಗೆ ಮಾತಾಡ್ತಿದಾರೆ ಅಂತೆನ್ನಿಸಿತ್ತು. ಯಾವುದೋ ಸಿನಿಮಾದ ದೃಶ್ಯ, ಸಂಭಾಷಣೆಯಂತೆ ತೋರಿತ್ತು. ಅರ್ಥವಾದ, ಅರ್ಥವಾಗದ ಗೊಂದಲದಲ್ಲಿ ಮುಳುಗಿದ್ದವಳಂತೆ ಕಂಡು ಬಂದಳು. ಆದರೂ, ಮೇಡಂ ತನ್ನ ಬಗ್ಗೆ ತೋರಿದ ಮುತುವರ್ಜಿ ಅವಳಿಗೆ ಧೈರ್ಯವನ್ನು ಉಂಟು ಮಾಡಿತ್ತು. ಸಂತಸವೂ ತುಂಬಿತ್ತು. ಆದರೆ ಮಾತುಗಳೇ ಹೊರಡಲಿಲ್ಲ.

ಮೃದುಲಾಳ ಕೈ ಸಂಜ್ಞೆಯನ್ನು ಅರಿತು, ನರ್ಸು ಅಶೋಕ್‌ನನ್ನು ವ್ಹೀಲ್ ಛೇರ್‌ನಲ್ಲಿ ಕೂರಿಸಿ, ತಳ್ಳಿಕೊಂಡು ಬಂದು ಎಲ್ಲರ ಮಧ್ಯೆ ನಿಲ್ಲಿಸಿದಳು.

"ನನ್ನ ಈ ಆಸೆಗೆ, ನಿರ್ಧಾರಕ್ಕೆ ನಿಮ್ಮ ತಂದೆಯ ಒಪ್ಪಿಗೆ ಇದೆಯೋ ಇಲ್ಲವೋ ಎಂಬ ಸಂಶಯ ನಿಮಗೆಲ್ಲಾ ಇರಬಹುದು. ಅವರ ಮನಸ್ಸಲ್ಲಿ ಏನಿದೆ ಅನ್ನುವುದನ್ನು ನೀವುಗಳೇ ತಿಳಿದುಕೊಳ್ಳಿ" ಎಂದಳು. ಸಾಕ್ಷಿ ಸಂಶಯದಿಂದ, ಕ್ಷೀರಾ ಆತಂಕದಿಂದ ತಂದೆಯ ಕಡೆ ನೋಡಿದರು. ರಾಶಿ ಎದ್ದು ಬಂದು ತಂದೆಯ ಪಕ್ಕದಲ್ಲಿ ನಿಂತಳು. ಅವರ ಕೈ ನಿಧಾನವಾಗಿ ಸರಿದು ರಾಶಿಯ ಕೈಗೆ ತಗುಲಿತು. ಅಪ್ಪನಿಗೆ ಒಪ್ಪಿಗೆ ಇದೆ ಎನ್ನುವುದನ್ನು ಅವರ ಮೌನದಿಂದಲೇ ಅರಿತರು. ಅವರ್‍ಯಾರಿಗೂ ತಂದೆಯ ನಿರ್ಧಾರ ಬೇಸರ ಎನಿಸಲಿಲ್ಲ. ಆದರೆ ತಾಯಿಯ ನೆನಪು ಒತ್ತಿಕೊಂಡು ಬಂದು ಕಣ್ಣೀರು ಇಳಿಯಿತು. ಸಂಜಯ ಅಸಹನೆಯಿಂದ ಹಲ್ಲು ಕಡಿದು ಅಲ್ಲಿಂದ ಎದ್ದು ಹೋಗಿದ್ದ. ಕಾರ್ತಿಕ್ ಕೈ ಕಟ್ಟಿ ಎತ್ತಲೋ ನೋಡುತ್ತಾ ಕುಳಿತಿದ್ದ. ಒಂದೆರಡು ಗಳಿಗೆಯ ನಂತರ, ಸಂಜಯ್ ತನಗೆ ತಾನೇ ಸಮಾಧಾನವನ್ನು ಹೇಳಿಕೊಂಡು ಮತ್ತೆ ಒಳಗೆ ಬಂದಿದ್ದ. ಎಲ್ಲರೂ ಸುಮ್ಮನೆ ಕುಳಿತರು.

ಗಿರಿಜಮ್ಮನ ಸೊಸೆ ಕಾಫಿಯನ್ನು, ಬಿಸಿಬಿಸಿ ಆಂಬೊಡೆಗಳನ್ನು ಎಲ್ಲರ ಮುಂದಿತ್ತಳು. ಆಂಬೋಡೆಗಳನ್ನು ಆಸೆಯಿಂದ ತಿನ್ನುತ್ತಿದ್ದ ಹೆಂಡತಿಯನ್ನೇ ಕೆಕ್ಕರಿಸಿ ನೋಡಿದ ಸಂಜಯ್, ಬರೀ ಕಾಫಿಯನ್ನು ಕುಡಿದು ಎದ್ದ.

"ನಾನು ಆಮೇಲೆಬಂದು ನಿನ್ನನ್ನು ಕರ್‍ಕೊಂಡು ಹೋಗ್ತೀನಿ. ನೀನು ಈಗ್ಲೇ ಹೊರಡುವ ಹಾಗೆ ಕಾಣುಲ್ಲ" ಎಂದು ಬುಸುಗುಟ್ಟಿದ. ಅವಳು ಉತ್ತರಿಸುವ ಮೊದಲೇ ಯಾರಿಗೂ ಹೇಳದೇ ಅಲ್ಲಿಂದ ಹೊರಟಿದ್ದ. ಕಾಫಿಯೊಂದಿಗೆ ಆಂಬೊಡೆಯ ಸವಿಯನ್ನು ಮೆದ್ದ ಸಾಕ್ಷಿ, ಹಾಗೇ ಸೋಫಾದ ಬೆನ್ನಿಗೆ ಒರಗಿದಳು. ಕ್ಷಣ ಮಾತ್ರಗಳಲ್ಲಿ ಅವಳು ನಿದ್ದೆಯೊಳಗೆ ಇಳಿದಳು. ಅವಳ ನಿದ್ದೆಗೆ ಭಂಗ ಬರದಿರಲಿ ಎಂದು ಎಲ್ಲರೂ ಅಲ್ಲಿಂದ ಎದ್ದರು.

"ನಾವು ಯಾವ್ದಾದ್ರೂ ಫಸ್ಟ್ ಷೋ ಪಿಕ್ಚರ್‌ಗೆ ಹೋಗಿ ಬರ್ತೀವಿ" ಕಾರ್ತಿಕ್ ಮೃದುಲಾಳಿಗೆ ಹೇಳಿ ಕ್ಷೀರಾಳೊಡನೆ ಮನೆಯಿಂದ ಹೊರ ನಡೆದ. "ನಾನು ಕೀರ್ತಿಯ ಮನೆಗೆ ಹೋಗಿ ಬರ್ತೀನಿ" ಎಂದು ರಾಶಿ ಹೊರಟಳು. ಮೃದುಲಾ ಕೈಯಲ್ಲಿ ಒಂದು ಪುಸ್ತಕವನ್ನು ಹಿಡಿದು ಅಶೋಕನ ಮಂಚದ ಬಳಿ ಕುಳಿತಳು. ಸಂಜೆಗತ್ತಲು ನಿಧಾನವಾಗಿ ಇಳಿದು ಬರುತ್ತಿತ್ತು. ಇದ್ದಕ್ಕಿದ್ದಂತೆ, ಯಾರೋ ಜೋರಾಗಿ 'ಅಮ್ಮಾ' ಎಂದು ಕಿರುಚಿದ್ದು, ಗಾಢವಾದ ಮೌನವನ್ನು ಸೀಳಿಕೊಂಡು ಬಂದು ಮೃದುಲಾಳನ್ನು ಬೆಚ್ಚಿಸಿತು. ಕೈಯಲ್ಲಿದ್ದ ಪುಸ್ತಕ ಕೆಳಕ್ಕೆ ಬಿದ್ದಿತು. ಮತ್ತದೇ ಧ್ವನಿ ಕೇಳಿಬಂದಾಗ, ಮೃದುಲಾ ಸಾವರಿಸಿಕೊಂಡು ಹೊರಕ್ಕೆ ಬಂದು, ದೀಪವನ್ನು ಹಾಕಿದಳು. ಸೋಫಾದ ಮೇಲೆ ಕುಳಿತಿದ್ದ ಸಾಕ್ಷಿ... ಮುಖವನ್ನು ಕಿವುಚುತ್ತಾ ಅಮ್ಮಾ... ಎಂದು ನರಳಿದಳು. ಅವಳ ಕೈ ಅವಳ ಹೊಟ್ಟೆಯ ಮೇಲಿತ್ತು. ಮೃದುಲಾ ಸಮೀಪಕ್ಕೆ ಬಂದಳು. ಕಣ್ಣುಗಳು

ಭಯದಿಂದ ಅಗಲವಾಗಿದ್ದವು. ಬೆವರಿನ ಹನಿಗಳು ಹಣೆಯ ಮೇಲೆ ಸಾಲಾಗಿ ಮುತ್ತಿದ್ದವು.

"ಸಾಕ್ಷೀ... ನೀನಾ ಕಿರುಚಿದ್ದು?... ಏನಾಗ್ತಿದೆ?" ಆತಂಕದಿಂದ ಕೇಳಿದಳು.

"ಸ್ವಲ್ಪ ಗಿರಿಜಮ್ಮನ್ನ ಕರೀತೀರಾ ಪ್ಲೀಸ್. ನಂಗೆ ಏನೋ ಆಗ್ತಿದೆ. ಏನಾಗ್ತಿದೆ ಅಂತ ಗೊತ್ತಾಗ್ತಿಲ್ಲ" ಭಯದಿಂದ ನುಡಿದಳು. ಮೃದುಲಾ ಒಳಗೆ ಹೋಗಿ ಗಿರಿಜಮ್ಮನನ್ನು ಕರೆತಂದಳು. ಸಾಕ್ಷಿ ಗಿರಿಜಮ್ಮನ ಕೈಗಳನ್ನು ಹಿಡಿದಳು.

"ಏನಾಗ್ತಿದೆ ಸಾಕ್ಷೀ... ಡಾಕ್ಟರಿಗೆ ಫೋನು ಮಾಡೋಣ್ವಾ?"

"ಹೊಟ್ಟೆಯಲ್ಲಿ ಎಳೆದ ಹಾಗೆ ನೋಯ್ತಿದೆ ಗಿರಿಜಮ್ಮ... ಭಯ ಆಗ್ತಿದೆ"

"ಭಯ ಪಡಬೇಡಮ್ಮ, ಎಲ್ಲಾ ಸರಿ ಹೋಗುತ್ತೆ. ನಾವುಗಳು ಇದೀವಲ್ಲ"

"ನಾನು ಈಗ್ಲೇ ಡಾಕ್ಟರಿಗೆ ಫೋನು ಮಾಡ್ತೀವಿ. ನಿನ್ನ ಡಾಕ್ಟರ್ ಯಾರು? ಅವರ ನಂಬರ್ರು ಹೇಳ್ತೀಯಾ?" ಮೃದುಲಾ ಕೇಳಿದಳು.

"ಸಂಜೂಗೆ ಫೋನು ಮಾಡಿ ಮೇಡಂ... ಅವರು ಬಂದು ನನ್ನನ್ನು ನರ್ಸಿಂಗ್ ಹೋಂಗೆ ಕರ್ಕೊಂಡು ಹೋಗ್ತಾರೆ. ನಾನು ಮನೇಲಿರುಲ್ಲ" ಅಳುತ್ತಾ ನುಡಿದಳು.

"ಆಯ್ತು... ಸಂಜಯ್‌ಗೆ ಮಾಡ್ತೀನಿ, ನಂಬರ್ರು ಹೇಳು. ಗಿರಿಜಮ್ಮ ನೀವು ಇವಳ ಜೊತೇಲೇ ಇರಿ" ಎಂದು ಹೇಳಿ, ಸಾಕ್ಷಿ ಹೇಳಿದ ನಂಬರನ್ನು ಗುರುತು ಹಾಕಿಕೊಂಡು, ತನ್ನ ಮೊಬೈಲ್‌ನಿಂದ ಸಂಜಯ್‌ಗೆ ಕಾಲ್ ಮಾಡಿದಳು. ಆದರೆ ಅವನ ಮೊಬೈಲ್ ಸ್ವಿಚ್ ಆಫ್ ಆಗಿತ್ತು. ಅಷ್ಟರಲ್ಲಿ ರಾಶಿ ವಾಪಸ್ಸಾಗಿದ್ದಳು.

"ರಾಶೀ ಬಾಯಲ್ಲಿ ನಿಮ್ಮ ಭಾವನ ಮನೆಯ ಫೋನು ನಂಬರ್ರು ಎಷ್ಟು? ಬೇಗ ಹೇಳು..."

"ಅವರ ಮನೆಯ ನಂಬರ್ರು ಯಾಕೆ? ಅಕ್ಕ ಇಲ್ಲೇ ಇದಾಳಲ್ಲ"

"ತಲೆ ಹರಟೆ ಸುಮ್ಮನೇ ನಂಬರ್ರನ್ನ ಕೊಡೆ" ಸಾಕ್ಷಿ ಮುಖ ಕಿವುಚಿ ಹೇಳಿದಾಗ ರಾಶಿ ಅಕ್ಕನ ಬಳಿಗೆ ಓಡಿದಳು.

"ಏನಾಯ್ತೇ ಅಕ್ಕ? ಏನಾಯ್ತೆ? ಭಾವ ಆಗ ಹೋದವರು ಇನ್ನು ಬಂದಿಲ್ವಾ?.. ಭಾವನ ಮೊಬೈಲ್‌ಗೆ ಮಾಡಿದ್ರೆ ಆಗುಲ್ವಾ?"

"ಸ್ಟುಪಿಡ್.. ಹೊತ್ತು ಗೊತ್ತು ಒಂದೂ ಗೊತ್ತಾಗುಲ್ಲ ನಿಂಗೆ. ನಾನಿಲ್ಲಿ ಸಾಯ್ತಾ ಇದೀನಿ. ನಿನ್ನ ಭಾವ ಪತ್ತೆ ಇಲ್ಲ. ಮನೆಗೆ ಫೋನು ಮಾಡಿ, ಭಾವ ಎಲ್ಲೇ ಇದ್ರೂ ಈಗ್ಲೇ ಬರ್ಬೇಕಂತೆ ಅಂತ ಹೇಳು"

"ಸಾರೀ ಕಣೇ..." ಎನ್ನುತ್ತಾ ಮೇಡಂಗೆ ಫೋನು ನಂಬರನ್ನು ತಿಳಿಸಿದಳು.

"ರಾಶೀ... ನೀನು ಇಲ್ಲಿ ನಿನ್ನ ಅಕ್ಕನ ಜೊತೇಲಿರು. ನಾನು ಸ್ವಲ್ಪ ಜೀರಿಗೆ ಕಷಾಯ ಮಾಡ್ಕೊಂಡು ಬರ್ತೀನಿ" ಗಿರಿಜಮ್ಮ ಅಡಿಗೆ ಮನೆಗೆ ನಡೆದಳು.

"ಅಕ್ಕ ನರಳ್ತಾ ಇದಾಳೆ. ನಂಗೆ ಭಯ ಆಗುತ್ತೆ. ನಿಮ್ಮ ಸೊಸೆಗೆ ಹೇಳಿ" ರಾಶಿ ಹಿಂದೆ ಸರಿದಳು.

"ನನ್ನ ಮಗ ಸೊಸೆ ಇಬ್ರೂ ಮನೇಲಿಲ್ಲ. ಮಾರ್ಕೆಟ್ಟಿಗೆ ಹೋಗಿದಾರೆ. ಸ್ವಲ್ಪ ಹೊತ್ತು ಕೂತಿರು. ನಾನು ಬೇಗ ಬಂದು ಬಿಡ್ತೀನಿ" ರಾಶಿ ಮತ್ತೆ ಅಕ್ಕನ ಬಳಿಗೆ ಬಂದು ಕುಳಿತು ಮೇಡಂ ಕಡೆ ನೋಡಿದಳು.

"ಸಾಕ್ಷೀ ನೀನ್ಯಾಕೆ ಡಾಕ್ಟರ ಹತ್ರ ಹೋಗ್ಬಾರ್ದು... ಭಾವ ಎಲ್ಲಿಗೆ ಹೋದ್ರೋ ಏನೋ... ನಿಂಗೂ ಗೊತ್ತಿಲ್ವಾ?"

"ನಿಮ್ಮನೇಲಿ ಯಾರೂ ಇಲ್ಲ ಅಂತ ಕಾಣುತ್ತೆ. ರಿಂಗಾಗ್ತಾನೇ ಇದೆ. ಯಾರೂ ಎತ್ತುತ್ತಾನೇ ಇಲ್ಲ. ಸಂಜಯ್ ಎಲ್ಲಿಗೆ ಹೋಗ್ತೀನಿ ಅಂತ ನಿಂಗೆ ಹೇಳಿದ್ರಾ?"

"ಇಲ್ಲ, ನಂಗೇನೂ ಹೇಳಿಲ್ಲ. ಪ್ಲೀಸ್, ನನ್ನನ್ನು ಯಾರಾದ್ರೂ ನರ್ಸಿಂಗ್ ಹೋಂಗೆ ಕರ್ಕೊಂಡು ಹೋಗಿ. ನಂಗೆ ಭಯ ಆಗ್ತಿದೆ. ತಡ್ಕೊಳ್ಳೋಕೆ ಆಗ್ತಿಲ್ಲ... ನಾನು ಇಲ್ಲೇ ಸತ್ತು ಹೋಗ್ತೀನಿ ಅಷ್ಟೇ" ಸಾಕ್ಷಿ ಅಳತೊಡಗಿದಳು.

ಗಿರಿಜಮ್ಮ ಬಂದು ತಲೆ ಸವರಿ, ಜೀರಿಗೆ ಕಷಾಯವನ್ನು ಕುಡಿಸಿದರು. ಮೃದುಲಾ ಮತ್ತೆ ಮತ್ತೆ ಸಂಜಯನ ಮನೆಗೆ ಕರೆ ಮಾಡಿದಳು. ಚಡಪಡಿಕೆಯಿಂದ ಅತ್ತಿಂದಿತ್ತ ತಿರುಗಾಡಿದಳು. ಕಾರ್ತೀಕ್‌ನಿಗೆ ಫೋನ್ ಮಾಡಿದಳು. ಅವನ ಮೊಬೈಲ್ ಕೂಡಾ ಸ್ವಿಚ್ ಆಫ್ ಆಗಿತ್ತು. ಸಾಕ್ಷಿ ನಿಮಿಷ ನಿಮಿಷಕ್ಕೂ ಹೆದರಿಸತೊಡಗಿದಳು. ಮೃದುಲಾ ಒಂದು ನಿರ್ಧಾರಕ್ಕೆ ಬಂದಳು.

"ಗಿರಿಜಮ್ಮ... ಸಾಕ್ಷೀನ ಈಗಲೇ ಕರ್ಕೊಂಡು ಹೋಗಿ ನರ್ಸಿಂಗ್ ಹೋಂಗೆ ಸೇರಿಸೋಣ. ಅಲ್ಲಿ ಡಾಕ್ಟರ್ಸ್ ಇರ್ತಾರೆ. ನೀವು ಸಾಕ್ಷೀನ ಮುಂಬಾಗಿಲ ತನಕ ಕರ್ಕೊಂಡು ಬನ್ನಿ. ನಾನು ಕಾರನ್ನು ತರ್ತೀನಿ" ಎಂದು ಹೇಳಿ ತನ್ನ ಹ್ಯಾಂಡ್‌ಬ್ಯಾಗನ್ನೆತ್ತಿಕೊಂಡು ಹೊರಟಳು. ಸಾಕ್ಷಿ ಸೊಂಟವನ್ನು ಹಿಡಿದುಕೊಂಡು, ನರಳುತ್ತಾ, ಗಿರಿಜಮ್ಮನ ಆಸರೆ ಹಿಡಿದು ಹೊರಬಾಗಿಲಿಗೆ ಬಂದಳು. ಮೃದುಲಾ ಕಾರಿನ ಹಿಂಬಾಗಿಲನ್ನು ತೆರೆದಳು. ಗಿರಿಜಮ್ಮ ಸಾಕ್ಷಿಯನ್ನು ಸೀಟಿಗೆ ಒರಗಿಸಿ, ತಾನೂ ಅವಳ ಪಕ್ಕದಲ್ಲಿ ಕುಳಿತಳು. ಮೃದುಲಾ ಕಾರನ್ನು ಓಡಿಸುವ ಮೊದಲು ರಾಶಿಯನ್ನು ಕರೆದಳು.

"ರಾಶೀ ನೀನು ಮನೇಲೇ ಇರು. ಎಲ್ಲಿಗೂ ಹೋಗ್ಬೇಡ. ಮನೆಯವರು ಯಾರೇ ಫೋನು ಮಾಡಿದರೂ, ನನಗೆ ಫೋನು ಮಾಡೋಕೆ ಹೇಳು... ಹ್ಞಾಂ... ನಿನ್ನ ತಂದೆಗೆ ಈಗಲೇ ಏನನ್ನು ಹೇಳ್ಬೇಡ. ಅವರಿಗೆ ಆತಂಕವಾಗುತ್ತೆ"

ರಾಶಿ ತಲೆಯಾಡಿಸಿ ಸಾಕ್ಷಿಯ ಕಡೆ ನೋಡಿದಳು. "ಸಾಕ್ಷಿ ಆಲ್ ದಿ ಬೆಸ್ಟ್ ಕಣೇ" ಎಂದು ಶುಭ ಕೋರಿದಳು. ಸಾಕ್ಷಿ ಕ್ಷೀಣವಾಗಿ ಮುಗುಳ್ನಕ್ಕಳು. ಕಾರು ಮುಂದಕ್ಕೆ ಓಡಿತು.

ಸಾಕ್ಷಿ ಹೇಳಿದ, ನರ್ಸಿಂಗ್ ಹೋಂ ಮುಂದೆ ಕಾರನ್ನು ನಿಲ್ಲಿಸಿದಳು. ಅಟೆಂಡರ್‌ಗಳು ಬಂದು, ಸಾಕ್ಷಿಯನ್ನು ಒಳಕ್ಕೆ ಕರೆದೊಯ್ದರು. ತಕ್ಷಣವೇ ಡಾಕ್ಟರ್ಸ್‌ಗಳು ನೋಡಿ, ಅವಳನ್ನು ಅಡ್ಮಿಟ್ ಮಾಡಿಕೊಂಡರು.

"ಯಾಕೋ ಇದುವರೆಗೂ ಯಾರೂ ಬರ್ಲಿಲ್ಲ. ಫೋನು ಕೂಡಾ ಮಾಡ್ಲಿಲ್ಲ. ನಾನು ಮ,ನೆಗೆ ಹೋಗಿ ನೋಡ್ತೀನಿ. ಗಿರಿಜಮ್ಮ ನೀವು ಇಲ್ಲೇ ಇರಿ. ತಕ್ಷಣಕ್ಕೆ ಏನಾದ್ರೂ ಬೇಕಾದ್ರೆ ತಂದು ಕೊಡಿ" ಎಂದು ಹೇಳಿ ಆಕೆಯ ಕೈಗೆ ಐನೂರು ರೂಗಳನ್ನಿತ್ತಳು. ಕಾರನ್ನು ಮನೆಯ ಕಡೆಗೆ ಓಡಿಸಿದಳು.

"ಕಾರು ನಿಂತ ಸದ್ದು ಕೇಳಿದೊಡನೆ, ರಾಶಿ ಬಾಗಿಲನ್ನು ತೆರೆದು ಕಾರಿನ ಬಳಿಗೆ ಓಡಿ ಬಂದಳು. ಡೆಲಿವರಿ ಆಯ್ತಾ ಮೇಡಂ? ಎಂಥಾ ಬೇಬಿ? ಹೆಣ್ಣೋ ಗಂಡೋ?" ಕಾತುರದಿಂದ ಪ್ರಶ್ನಿಸಿದಳು.

"ಇನ್ನು ಇಲ್ಲ ರಾಶಿ. ನಿಮ್ಮ ಅಕ್ಕನ್ನ ಅಡ್ಮಿಟ್ ಮಾಡಿಕೊಂಡಿದಾರೆ. ಡಾಕ್ಟರ್ಸ್ ನರ್ಸು ಎಲ್ಲಾ ಅಟೆಂಡ್ ಮಾಡ್ತಿದಾರೆ. ಏನೂ ಆತಂಕವಿಲ್ಲ"

"ಇಲ್ಲೇ ನಮ್ಮ ಮನೇಲೇ ನರ್ಸು ಇದ್ದರಲ್ಲ ಮೇಡಂ. ಅಕ್ಕ ಮನೇಲೇ ಇರಬಹುದಾಗಿತ್ತು"

"ಈ ನರ್ಸು ಇರೋದು, ಬರೀ ನಿಮ್ಮ ತಂದೇನ ನೋಡಿಕೊಳ್ಳೋಕೆ. ಅವಳಿಗೆ ಎಲ್ಲಾ ವಿಷಯಗಳು ಗೊತ್ತಿರುಲ್ಲ. ನಿಮ್ಮಪ್ಪ ಏನು ಮಾಡ್ತಿದಾರೆ? ಯಾರಾದ್ರೂ ಫೋನು ಮಾಡಿದ್ರಾ?"

"ಅಪ್ಪ ಮಲಗಿದಾರೆ, ಯಾರದ್ದೂ ಫೋನು ಇಲ್ಲ. ಈಗ ಹೇಗೂ ನೀವು ಬಂದಿದೀರಲ್ಲ. ನಾನು ಫ್ರೆಂಡ್ ಮನೆಗೆ ಹೋಗ್ತೀನಿ..."

"ಬೇಡ ರಾಶೀ.. ಅದೆಷ್ಟು ಸಾರಿ ಫ್ರೆಂಡ್ಸ್ ಮನೆಗೆ ಹೋಗೋದು? ಈಗ ನೀನು ಮನೇಲೇ ಇರು. ನಾನು ಮತ್ತೆ ನರ್ಸಿಂಗ್ ಹೋಂಗೆ ಹೋಗಬೇಕಾಗಬಹುದು ನೀನೂ ನನ್ನ ಜೊತೆಗೆ ಬರೂವಂತೆ"

"ಇಲ್ಲ, ನಾನು ಬರೋಲ್ಲ. ನನಗೆ ನರ್ಸಿಂಗ್ ಹೋಂ ಅಂತಂದ್ರೆ ಭಯ. ನನಗೆ ಅಮ್ಮನ ನೆನಪು ಬರ್ತಿದೆ ಮೇಡಂ. ಈಗ ಅಮ್ಮ ಇದ್ದಿದ್ರೆ ಎಷ್ಟು ಖುಷಿ ಪಡ್ತಿದ್ಲೋ...? ಮೊದಲ ಬಾರಿಗೆ ಅಜ್ಜಿಯಾಗ್ತಿದ್ಲು..." ತಕ್ಷಣವೇ ಮಾತನ್ನು ನಿಲ್ಲಿಸಿ, ಮೃದುಲಾಳ ಕಡೆ ನೋಡಿದಳು. ಮೃದುಲಾ ಮಾತನಾಡಲಿಲ್ಲ. ಮತ್ತೆ ಸಂಜಯನ ಮನೆಗೆ ಫೋನು ಮಾಡಿದಳು. ಈಗ ಸಂಜಯನ ತಾಯಿ ರಿಸೀವರ್‌ನೆತ್ತಿದಳು. ಮೃದುಲಾ ವಿಷಯವನ್ನು ತಿಳಿಸಿ, ಸಂಜಯನೇನಾದ್ರೂ ಅಲ್ಲಿದಾನ ಅಂತ ವಿಚಾರಿಸಿದಳು.

"ಇಲ್ಲ, ಅವನು ಇಲ್ಲಿಲ್ಲ, ಅಲ್ಲೇ ಇದಾನೆ ಅಂತ ಅಂದ್ಕೊಂಡಿದ್ದೆ ! ಸಾಕ್ಷಿ ಹುಶಾರಾಗಿದಾಳೆ ತಾನೆ? ಇನ್ನೂ ಡೆಲಿವರಿಗೆ ಸಮಯ ಇತ್ತಲ್ಲ"

"ಏನೋ ನಂಗೆ ತಿಳೀದು, ಡಾಕ್ಟರ್ಸ್‌ಗಳಿದಾರೆ. ಅಡ್ಮಿಟ್ ಮಾಡಿಕೊಂಡಿದಾರೆ. ಸಾಕ್ಷಿಯ ಜೊತೆ ಗಿರಿಜಮ್ಮ ಇದಾರೆ..."

"ಒಳ್ಳೇ ಕೆಲಸವನ್ನೇ ಮಾಡಿದಿರಿ. ಆಕೆ ಅನುಭವಸ್ಥೆ" ಎಂದು ಹೇಳಿದಾಗ ಮೃದುಲಾ ಮನದಲ್ಲೇ ನಕ್ಕಳು. ಮಾತನ್ನು ಮುಗಿಸಿದಳು.

ನಗು ನಗುತ್ತಾ, ಒಳ ಬಂದ ಕ್ಷೀರಾ, ಕಾರ್ತೀಕ್ ಮೃದುಲಾಳ ಆತಂಕದ ಮುಖವನ್ನು ಕಂಡರು. ಅವರಿಗೂ ಕಳವಳವಾಗಿತ್ತು. ಮೃದುಲಾಳನ್ನು ಕಣ್ಣಿನಲ್ಲೇ ಏನಾಯ್ತೆಂದು ಪ್ರಶ್ನಿಸಿದ. ಅಷ್ಟರಲ್ಲಿ ರಾಶಿ, ಸಾಕ್ಷಿಯನ್ನು ನರ್ಸಿಂಗ್ ಹೋಂಗೆ ಸೇರಿಸಿದುದನ್ನು ಕ್ಷೀರಾಳಿಗೆ ತಿಳಿಸಿದಳು.

"ಕಾರ್ತೀಕ್, ನಾವು ಹೋಗಿ ಅಕ್ಕನ್ನ ಮಾತನಾಡಿಸಿಕೊಂಡು ಬರೋಣ"

"ಈಗ ಹೋದ್ರೂ ಯಾರನ್ನು ಒಳಕ್ಕೆ ಬಿಡುಲ್ಲ. ಅವಳೀಗ ಲೇಬರ್ ವಾರ್ಡ್‌ನಲ್ಲಿರ್ತಾಳೆ. ಸಂಜಯನಿಗೆ ಇನ್ನು ವಿಷಯ ಗೊತ್ತಿಲ್ಲ... ಅವರ ತಾಯಿಯ ಹತ್ತಿರ ಇದೇ ತಾನೇ ಮಾತನಾಡಿದೆ" ಎಂದಳು.

"ಅಲ್ಲಿ ಗಿರಿಜಮ್ಮ ಒಬ್ಬರೇ ಇದಾರೆ. ಅವರಿಗೆ ಊಟ, ಹೊದಿಕೆ..." ಕ್ಷೀರಾ ಅನುಮಾನ ಪಡುತ್ತಾ ಕೇಳಿದಳು.

"ಗಿರಿಜಮ್ಮನ ಮಗ ಸೊಸೆ ಇನ್ನು ಬಂದಿಲ್ಲ. ಅವರು ಬಂದ ಮೇಲೆ ಅವರ ಹತ್ರ ಕಳಿಸೋಣ..." ಕ್ಷೀರಾ ಸುಮ್ಮನಾದಳು. ತಾನು ಸಿನಿಮಾಕ್ಕೆ ಹೋಗಬಾರದಾಗಿತ್ತು. ಹೀಗೆ ಸಾಕ್ಷಿಗೆ ಹುಶಾರು ತಪ್ಪುತ್ತೆ ಅಂತ ಗೊತ್ತಾಗ್ಲಿಲ್ಲವಲ್ಲ ಎಂದು ಮನದಲ್ಲೇ ಪೇಚಾಡಿದಳು. ಯಾರಿಗೂ ಯಾವ ಮಾತೂ ಹೊಳೆಯದೇ ಅಲ್ಲಲ್ಲೇ ಕುಳಿತರು. ಮಾರ್ಕೆಟ್ಟಿಗೆ ಹೋಗಿದ್ದವರು ಹಿಂತಿರುಗಿದ್ದರು. ಇಬ್ಬರೂ ಅಡಿಗೆ ಮನೆಯನ್ನು ಸೇರಿದರು.

ಬೆಳಗಿನ ಝಾವದ ಹೊತ್ತಿಗೆ ಕರೆಗಂಟೆ ಹೊಡೆದ ಸದ್ದು ಕೇಳಿಸಿದಾಗ, ತೂಕಡಿಸುತ್ತಾ ಕುಳಿತಿದ್ದ ಮೃದುಲಾ ಎಚ್ಚೆತ್ತಳು. ಮತ್ತೆ ಕರೆಗಂಟೆ ಹೊಡೆದಾಗ, ಕಾರ್ತೀಕ ಮಲಗಿದ್ದ ರೂಮಿನ ಬಾಗಿಲನ್ನು ಬಡಿದಳು. ಕಾರ್ತೀಕ ಬಾಗಿಲನ್ನು ತೆರೆದ.

"ಮೃದುಲಾ ನೀವಿನ್ನು ಮಲಗಿಲ್ವಾ? ನಾಲ್ಕು ಗಂಟೆಯಾಗ್ತಾ ಬಂದಿದೆ"

"ಯಾರೋ ಬಾಗಿಲು ಬೆಲ್ ಮಾಡ್ತಿದಾರೆ ಕಾರ್ತೀಕ್. ಅದಕ್ಕೇ ನಿನ್ನನ್ನ ಎಬ್ಬಿಸಿದೆ ಸಾರೀ..." ಮತ್ತೆ ಬೆಲ್ ಸದ್ದು ಕೇಳಿಸಿತು.

ಕಾರ್ತೀಕ್ ಕಿಟಕಿಯನ್ನು ತೆರೆದು ಯಾರು ಅಂತ ಕೇಳಿದ. ಹೊರಗೆ ನಿಂತಿದ್ದ ಸಂಜಯ್ ನಾನು ಅಂತಂದ. ಕಾರ್ತೀಕ್ ಬಾಗಿಲನ್ನು ತೆರೆದ. ಸಂಜಯ ಒಳಬಂದ. ಇಬ್ಬರೂ ಗಾಬರಿಯಿಂದ ಅವನನ್ನೇ ನೋಡಿದರು. ಇನ್ನು ಬೆಳಕಾಗಿಲ್ಲ... ಇವನು ಇಲ್ಲಿಗೇಕೆ ಬಂದನೋ? ಸಾಕ್ಷಿಯನ್ನು ಆಸ್ಪತ್ರೆಗೆ ಸೇರಿಸಿರುವ ವಿಷಯ ತಿಳಿದಿದೆಯೋ ಇಲ್ಲವೋ, ಹೇಗೆ ಹೇಳುವುದು ಎಂದು ಅನುಮಾನಿಸಿ, ಪರಸ್ಪರ ಮುಖ ಮುಖ ನೋಡಿಕೊಂಡರು.

"ಗುಡ್ ಮಾರ್ನಿಂಗ್ ಮೇಡಂ.. ಗುಡ್ ಮಾರ್ನಿಂಗ್ ಕಾರ್ತೀಕ್" ಅವನು ಹಿಗ್ಗಿನಿಂದ ಹೇಳಿದಾಗ 'ಗುಡ್ ಮಾರ್ನಿಂಗ್' ಎಂದು ಹೇಳಿದರು.

"ಸಾಕ್ಷಿಗೆ ಈಗ ಅರ್ಧ ಗಂಟೆಗೆ ಮೊದಲು ಗಂಡು ಮಗುವಾಯ್ತು" ಎಂದ. ಅವನ ಮುಖ ಮೊರದಗಲವಾಗಿತ್ತು.

"ಹ್ಞಾಂ... ಹೌದಾ?... ಫೋನ್ ಬರುತ್ತೇನೋ ಅಂತ ಕಾಯ್ತಾ ನಾನು ಇಲ್ಲೇ ಕೂತಿದ್ದೆ..." ಮೃದುಲಾ ನುಡಿದಳು.

"ಫೋನ್ ಮಾಡೋದು ಬೇಡ. ಪರ್ಸನಲ್ ಆಗೇ ಬಂದು ಹೇಳೋಣಾಂತ ಮನೆಗೇ ಬಂದೇ ಮೇಡಂ... ಎನಿವೇ ಥ್ಯಾಂಕ್ ಯೂ ವೆರಿಮಚ್" ಎಂದ.

"ಥ್ಯಾಂಕ್ಸ್ ಯಾಕೆ? ಅಂಥಾದ್ದೇನೂ ವಿಶೇಷವಾಗಿ ಮಾಡಲಿಲ್ಲ ನಾನು..."

"ಅಂದ್ಹಾಗೇ ನೀವು ನರ್ಸಿಂಗ್ ಹೋಂಗೆ ಯಾವಾಗ ಹೋದ್ರಿ? ಯಾರು ಹೇಳಿದ್ರು?"

"ನಮ್ಮ ತಾಯಿ ಹೇಳಿದ್ರು... ಕಾರ್ತೀಕ್ ಟು ಡೇ ಆಮ್ ವೆರಿ ಹ್ಯಾಪೀ..."

"ಕಂಗ್ರಾಜುಲೇಷನ್ಸ್ ಸಂಜಯ್ ಸಾಕ್ಷಿ ಹೇಗಿದಾಳೆ?"

"ಅವಳೂ ಹುಶಾರಾಗಿದಾಳೆ..." ಅಷ್ಟರಲ್ಲಿ ಕ್ಷೀರಾ ಎದ್ದು ಬಂದಿದ್ದಳು. ಕಾರ್ತೀಕ ವಿಷಯವನ್ನು ತಿಳಿಸಿದ.

"ಕಂಗ್ರಾಟ್ಸ್ ಭಾವ... ಕೂತ್ಕೊಳ್ಳಿ... ಅಪ್ಪಂಗೆ ಹೇಳಿ ಬರ್ತೀನಿ"

"ಈಗ ಎಬ್ಬಿಸೋದು ಬೇಡ, ಮಲಗಿರ್ತಾರೆ. ಬೆಳಗಾದ ಮೇಲೆ ನಾನೇ ಹೇಳ್ತೀನಿ" ಎಂದಾಗ, ಎಲ್ಲರೂ ಮೌನಿಗಳಾದರು. ಸಂಜಯ ಹೊರಡ್ತೀನಿ ಅಂತಂದ.

"ಭಾವ ಕಾಫಿ ಕುಡಿಯೋರಂತೆ..." ಸಂಜಯ ಬೇಡ ಎಂದು ಹೇಳಿ ಆ ಚಳಿಯಲ್ಲೇ ಹೊರಟು ಬಿಟ್ಟ. ಕಾರ್ತೀಕ್ ಕ್ಷೀರಾ ಮತ್ತೆ ರೂಮನ್ನು ಸೇರಿಕೊಂಡರು. ಮೃದುಲಾ ಸೋಫಾದ ಮೇಲೆ ಮಲಗಿದಾಳೆ.

ಸಾಕ್ಷಿಗೆ ಮಗುವಾಗಿದೆ. ಅದು ನನ್ನ ಗಂಡನಾಗಿದ್ದವನ ಮೊದಲ ಮೊಮ್ಮಗು. ನನಗೆ ನೇರವಾದ ಸಂಬಂಧವಿಲ್ಲ. ಸಂಜಯ ಥ್ಯಾಂಕ್ಸ್, ಹೇಳಿದ. ಅವನ ಅಸಮಾಧಾನ ಕಡಿಮೆ ಆಗಿರಬಹುದು. ಆದರೂ ತಕ್ಷಣವೇ ಹೊರಟು ಬಿಟ್ಟನಲ್ಲ. ಅವನ ಮನಸ್ಸಿನಲ್ಲಿ ಏನಿದೆಯೋ?.. ಸಧ್ಯಕ್ಕಂತೂ ಬೇರೆ ಯೋಚನೆಗಳಿಗೆ ಅವನಿಗೆ ಬಿಡುವಿಲ್ಲ. ಆದರೆ ತನ್ನ ಜವಾಬ್ದಾರಿ ಹೆಚ್ಚಾಯಿತು. ಇವರುಗಳಿಗೆ ಬೇಕೋ ಬೇಡವೋ, ನಾನಂತೂ ಈ ಮನೆಯ ಯಜಮಾನಿಯ ಪಟ್ಟವನ್ನು ಹಿಡಿದಿದ್ದಾಗಿದೆ... ಅದಕ್ಕೆ ತಕ್ಕ ಹಾಗೆ ವರ್ತಿಸಬೇಕಾದುದು ನನ್ನ ಧರ್ಮ ಎಂದುಕೊಂಡು ನಿದ್ರಿಸಲು ಯತ್ನಿಸಿದಳು.

36

ಬೆಳಕು ಚೆನ್ನಾಗಿ ಹರಿಯುತ್ತಿದ್ದಂತೆಯೇ ಅಕ್ಕತಂಗಿಯರು ಮಗುವನ್ನು ನೋಡಿ ಬರಲು ಹೊರಡಲು ಸಿದ್ಧರಾದರು. ಕಾರ್ತೀಕ ಹೇಳಿದ.

"ಮೃದುಲಾ, ನೀವು ಬರುಲ್ವಾ?"

"ಇಲ್ಲ, ಇಲ್ಲಿ ನಿನ್ನ ಮಾವ ಒಬ್ಬರೇ ಆಗಿ ಬಿಡ್ತಾರೆ. ನೀವೆಲ್ಲಾ ಹೋಗ್ಬನ್ನಿ" ಯಾರೂ ಬಲವಂತ ಮಾಡಲಿಲ್ಲ. ಫ್ಲಾಸ್ಕಿನಲ್ಲಿ ತುಂಬಿಸಿಟ್ಟ ಕಾಫಿಯ ಜೊತೆಗೆ ಒಂದಿಷ್ಟು ಬೇಕಾದ ಬಟ್ಟೆಗಳನ್ನು ಕ್ಷೀರಾ ಜೋಡಿಸಿಕೊಂಡಳು. ಅವರುಗಳು ಅತ್ತ ಹೊರಟ ನಂತರ ಮೃದುಲಾ ಅಶೋಕನ ರೂಮಿಗೆ ಬಂದಳು. ನರ್ಸನ್ನು ಹೊರಕ್ಕೆ ಕಳುಹಿಸಿ, ತಾನು ಅವನ ಬಳಿ ಕುಳಿತಳು. ಅವನು ಅವಳನ್ನೇ ದಿಟ್ಟಿಸಿದ. ಕೈಗಳು ಅವಳ ಕಡೆ ಸರಿದವು. ಅವಳು ಕೈಗಳನ್ನು ಹಿಡಿದು, ಪ್ರೀತಿಯಿಂದ ಅದುಮಿದಳು. "ಕಂಗ್ರಾಟ್ಸ್ ಅಶೋಕ್, ನೀವು ತಾತಾ ಆಗಿದೀರಿ.. ಸಾಕ್ಷಿಗೆ ಗಂಡು ಮಗುವಾಗಿದೆ" ಎಂದಳು. ಅವನ ಕಣ್ಣುಗಳು ಅರಳಿದವು. ಸಂತಸದಿಂದ ತುಟಿಗಳು ಅದುರಿದವು. ಏನನ್ನೋ ಹೇಳಲು ಪ್ರಯತ್ನಿಸುತ್ತಿರುವಂತೆ ಅನ್ನಿಸಿತ್ತು. "ನಿಮ್ಮ ಹೃದಯ ಸಂತಸದಿಂದ ಹಿಗ್ಗಿದೆ ಅಂತ ನಂಗೆ ಗೊತ್ತಾಗ್ತಿದೆ. ಅಶೋಕ್.. ಮಗೂನ ನೀವು ನೋಡೋರಂತೆ. ನೋಡ್ತೀರಾ? ಕರ್ಕೊಂಡು ಹೋಗ್ಲಾ?" ಕೇಳಿದಳು. ಅವನು ತಲೆಯಾಡಿಸಿದ.

"ಓ...ಕೇ.. ನಾನು ಕರ್ಕೊಂಡು ಹೋಗ್ತೀನಿ. ನೀವು ನಿಮ್ಮ ಮೊಮ್ಮಗುವನ್ನು ನೋಡೋರಂತೆ. ಈಗ ಮನೇಲಿ ಯಾರೂ ಇಲ್ಲ. ಎಲ್ಲಾ ನರ್ಸಿಂಗ್ ಹೋಂಗೆ ಹೋಗಿದಾರೆ. ಅವರುಗಳು ವಾಪಸ್ಸು ಬರುವಷ್ಟರಲ್ಲಿ ನೀವು ತಿಂಡಿ ತಿಂದು, ಔಷಧಿ ತಗೊಂಡು ಸ್ವಲ್ಪ ರೆಸ್ಟ್ ತಗೊಳ್ಳಿ" ಅವಳ ಬಲಗೈ ಅವನ ಹಣೆಯ ಮೇಲಾಡಿತು. ಅವನು ಕಣ್ಣಿನಲ್ಲೇ 'ಥ್ಯಾಂಕ್ಸ್' ಎಂದು ಹೇಳಿದ. ಅವಳು ನರ್ಸನ್ನು ಕರೆದು ಸ್ನಾನ ಮಾಡಿಸುವಂತೆ ಹೇಳಿ, ತಿಂಡಿ ತರಲು ಒಳಗೆ ನಡೆದಳು.

ಆಸ್ಪತ್ರೆಗೆ ಹೋಗಿದ್ದವರು ಹಿಂತಿರುಗಿದ್ದರು. ರಾಶಿ ಸಡಗರದಿಂದ ಮೇಡಂ ಬಳಿಗೆ ಓಡಿಬಂದಳು. ಮೇಡಂ, ಮಗು ತುಂಬಾ ಕ್ಯೂಟ್ ಆಗಿದೆ. ಪುಟ್ಟ ಪುಟ್ಟ ಬೆರಳು. ನನ್ನ ಕಡೆ ನೋಡಿ ಸ್ಮೈಲ್ ಮಾಡಿತು" ಸಂಭ್ರಮದಿಂದ ಹೇಳಿಕೊಂಡಳು.

"ಇನ್ಮೇಲೆ ನನ್ನನ್ನ ಮೇಡಂ ಅಂತ ಕರೀಬೇಡ..."

"ಯಾಕೆ ಮೇಡಂ? ನಾನೇನ್ಮಾಡ್ದೆ?"

ಮೃದುಲಾ ಮುಗುಳ್ನಗುತ್ತಾ ನುಡಿದಳು. "ನೀನು ಚಿಕ್ಕಮ್ಮ ಆದೆ ಅಲ್ವಾ? ಅದಕ್ಕೇ ಇವತ್ನಿಂದ ನಾನು ನಿನ್ನ ದೊಡ್ಡಮ್ಮ. ನನ್ನನ್ನ ದೊಡ್ಡಮ್ಮ ಅಂತ್ಲೇ ಕರೀಬೇಕು. ಇನ್ಮುಂದೆ ನಾನು ನಿಮಗೆಲ್ಲಾ ದೊಡ್ಡಮ್ಮ ತಿಳೀತಾ?" ರಾಶಿ ಕ್ಷೀರಾಳ ಕಡೆ ನೋಡಿದಳು. ಕ್ಷೀರಾ ಮುಗುಳ್ನಕ್ಕಳು.

"ಹಾಗಾದ್ರೆ, ನೀವು ಪಾಪುಗೆ ದೊಡ್ಡಜ್ಜಿ" ರಾಶಿ ನಗುತ್ತಾ ಹೇಳಿದಳು. ಮೃದುಲಾ ತಲೆಯಾಡಿಸಿದಳು. "ನಾನು ಅಪ್ಪಂಗೆ ಹೇಳ್ಬಿಟ್ಟು ಬರ್ತೀನಿ" ರಾಶಿ ತಂದೆಯ ರೂಮಿನ ಕಡೆ ಹೊರಟಳು.

"ಅಪ್ಪನ್ನ, ಸಿಸ್ಟರ್ ಹೊರಕ್ಕೆ ಕರ್ಕೊಂಡು ಬರ್ತಾರೆ. ನಾನು ಈಗಾಗ್ಲೇ ಅವರಿಗೆ ಈ ಗುಡ್‌ನ್ಯೂಸ್‌ನ ತಿಳ್ಸಿದೀನಿ. ಅವರನ್ನು ನರ್ಸಿಂಗ್ ಹೋಂಗೆ ಕರ್ಕೊಂಡು ಹೋಗ್ತೀನಿ. ಅವರೂ ಪಾಪೂನ ನೋಡ್ಲಿ"

"ಅಪ್ಪಾ ಅಲ್ಲಿಗೆ ಬರ್ತಾರ? ಅವರಿಗೆ ಕಷ್ಟ ಆಗುಲ್ವಾ?" ಕ್ಷೀರಾ ಕೇಳಿದಳು.

"ಅವರಿಗೂ ಮೊದಲನೇ ಮೊಮ್ಮಗು. ನೋಡ್ಬೇಕು ಅನ್ನೋ ಆಸೆ ಇರುತ್ತೆ. ನಾವು ಕರ್ಕೊಂಡು ಹೋಗಿ ತೋರಿಸಿದ್ರೆ ಅವರಿಗೆ ಖುಷಿ ಆಗುತ್ತೆ ಅಲ್ವಾ?" ಸಿಸ್ಟರ್ ಅಶೋಕನನ್ನು ವ್ಹೀಲ್ ಛೇರ್ ಮೇಲೆ ಕೂರಿಸಿಕೊಂಡು ಹೊರಕ್ಕೆ ಕರೆ ತಂದಳು"

"ಅಪ್ಪಾ..." ರಾಶಿ ಅವನ ಕತ್ತಿಗೆ ಜೋತು ಬಿದ್ದಳು. "ಪಾಪು ತುಂಬಾ ಮುದ್ದಾಗಿದೆ" ರಾಶಿ ತಂದೆಯ ಕಣ್ಣಿನಲ್ಲಿ ಆನಂದದ ಹೊಳಪನ್ನು ಕಂಡಳು.

"ರಾಶಿ ಹುಟ್ಟಿದ್ಮೇಲೆ, ಈ ಮನೇಲಿ ಚಿಕ್ಕ ಮಕ್ಕಳು ಯಾರೂ ಇರಲಿಲ್ಲ" ಕ್ಷೀರಾ ಅಪ್ಪನ ಕಡೆ ನೋಡಿ ಹೇಳಿದಳು. ಆತನ ಕೈ ರಾಶಿಯ ತಲೆಯನ್ನು ತಾಕಿತು.

"ಅಪ್ಪಂಗೆ ತುಂಬಾ ಖುಷಿಯಾಗಿದೆ ಅಲ್ವಾ ಮೇಡಂ... ಸಾರೀ.. ಸಾರಿ ದೊಡ್ಡಮ್ಮಾ" ಅಶೋಕ್ ಮೃದುಲಾಳ ಕಡೆ ನೋಡಿದ. ಅವಳು ಹೌದು ಎನ್ನುವಂತೆ ತಲೆಯಾಡಿಸಿದಳು. ಗಿರಿಜಮ್ಮನ ಮಗ ಸೊಸೆ ಸಿದ್ಧರಾಗಿ ಹೊರಟರು. ಅಶೋಕನನ್ನು ಎತ್ತಿ ಕಾರಿನಲ್ಲಿ ಕೂರಿಸಿದರು. ಮೃದುಲಾ ಡ್ರೈವರ್ ಸೀಟಿನಲ್ಲಿ ಕುಳಿತಳು. ಕಾರು ಚಲಿಸಿತು.

"ದೊಡ್ಡಮ್ಮಾ ಎಷ್ಟು ಒಳ್ಳೆಯವರು ಅಲ್ವಾ?" ರಾಶಿ ಕ್ಷೀರನನ್ನು ಕೇಳಿದಳು. ಕ್ಷೀರಾ ಉತ್ತರಿಸದೇ ಕಾರು ಹೋದ ದಿಕ್ಕನ್ನೇ ನೋಡುತ್ತಿದ್ದಳು.

"ಮೂರನೇ ದಿವಸ, ಸಾಕ್ಷೀನ ಮಗೂನ, ಡಿಸ್ಚಾರ್ಜ್ ಮಾಡಿಸಿಕೊಂಡು ನಮ್ಮ ಮನೆಗೆ ಕರ್ಕೊಂಡು ಹೋಗ್ತೀರಿ" ಸಾಕ್ಷಿಯ ಅತ್ತೆ ನುಡಿದಳು.

"ಮಗು-ಬಾಣಂತೀನ ನಮ್ಮ ಮನೆಗೇ ಕರ್ಕೊಂಡು ಹೋಗ್ತೀವಿ. ನೀವು ಒಪ್ಕೋಬೇಕು" ಮೃದುಲಾ ವಿನಯಪೂರ್ವಕವಾಗಿ ಕೇಳಿದಾಗ, ಆಕೆ ಬೆರಗು ಕಣ್ಣುಗಳಿಂದ ನೋಡಿದಳು. ಮೃದುಲಾ ಕಿರುನಗೆಯನ್ನು ನಕ್ಕಳು.

"ನನಗೆ ಯಾವ ಅನುಭವವೂ ಇಲ್ಲ ನಿಜ. ಆದರೆ ಗಿರಿಜಮ್ಮ ಇದಾರೆ. ಅವರ ಮಗ ಸೊಸೆ ಇದಾರೆ. ಕೆಲಸದವಳು ಇದಾಳೆ. ಸಾಕ್ಷಿಗೆ ಇದು ಮೊದಲ ಬಾಣಂತನ ತವರು ಮನೆಯಲ್ಲಿ ಬಾಣಂತನ ಮಾಡುವುದು ಸಂಪ್ರದಾಯ. ಅದು ಇವರ ಆಸೆ ಕೂಡಾ..." ಅಶೋಕನ ಕಡೆ ನೋಡಿ ನುಡಿದಳು. ಅಶೋಕ ಹೌದು ಎನ್ನುವಂತೆ ನಿಧಾನವಾಗಿ ತಲೆಯಾಡಿಸಿ, ಕಣ್ಣು ರೆಪ್ಪೆಗಳನ್ನು ಆಡಿಸಿದಾಗ ಆಕೆಗೆ ಮತ್ತೂ ಅಚ್ಚರಿ. ಆಕೆ ಹೊಗಳಿದಳು.

"ಬೀಗರ ಆರೋಗ್ಯ ಚೆನ್ನಾಗಿ ಸುಧಾರಿಸಿರುವಂತಿದೆ. ಇದೆಲ್ಲಾ ನಿಮ್ಮ ಶುಶ್ರೂಷೆಯ ಚಮತ್ಕಾರ"

"ಡಾಕ್ಟರ್ಸ್ ಕೊಟ್ಟ ಔಷಧಗಳ ಪರಿಣಾಮ. ಮನೆಯವರ ಉಪಚಾರದ ಪ್ರಭಾವ. ಸ್ವಲ್ಪ ಮಟ್ಟಿಗೆ ನೆಮ್ಮದಿ ಕೂಡಾ. ಮೊದಲ ಬಾರಿಗೆ ತಾತಾ ಆಗಿರುವ ಖುಷಿ ಎಲ್ಲಾ ಸೇರಿದೆ ಅಲ್ವಾ?"

"ಹೌದು ಮೊಮ್ಮಗನನ್ನು ಕಣ್ತುಂಬಾ ನೋಡುವ ಅದೃಷ್ಟ ನಮ್ಮ ಬೀಗಿತ್ತಿಗೆ ಇರಲಿಲ್ಲ. ಮದುವೆಯಾಗಿ ಎರಡು ವರ್ಷಗಳಾಗಿದ್ದವು. ಆಕೆ ಬದುಕಿರುವಾಗಲೇ ಈ

ಮಗು ಹುಟ್ಟಿದ್ದಿದ್ದರೆ, ಬಾಣಂತನವನ್ನು ಮಾಡುವ ಸಂತೋಷ ಆಕೆಗೆ ಸಿಕ್ಕಿರುತ್ತಿತ್ತು" ಮೃದುಲಾ ಮೌನಿಯಾದಳು.

"ಛೆ... ಛೆ... ನೀವು ತಪ್ಪು ತಿಳ್ಕೋಬೇಡಿ. ಹೆಣ್ಣು ಮಕ್ಕಳನ್ನು ಮದುವೆ ಮಾಡಿಕೊಟ್ಟ ಮೇಲೆ, ಬಾಣಂತನವನ್ನು ಮಾಡಬೇಕು ಅನ್ನೋ ಆಸೆಯೂ ತಾಯಂದಿರಿಗೆ ಇರುತ್ತೆ. ಪಾಪ, ಮಾಲಾರವರಿಗೆ ತಮ್ಮ ಮಗಳು ಬಸುರಿ ಅನ್ನೋ ವಿಷಯ ಸಹ ಗೊತ್ತಾಗಲಿಲ್ಲ. ಸಾಕ್ಷಿಗೆ ಅದೇ ಕೊರಗು. ಅತ್ತೆ ಎಷ್ಟೇ ಮಾಡಿದರೂ, ತಾಯಿ ಮಾಡಿದ ಹಾಗಾಗುತ್ತಾ?" ಆಕೆ ನವಿರಾಗಿ ಆಕ್ಷೇಪಣೆಯ ಮಾತುಗಳನ್ನಾಡಿ, ಅಶೋಕನ ಕಡೆ ನೋಡಿದಳು.

ಮೃದುಲಾ ಪೆಚ್ಚಾದಳು. ತನ್ನ ಮುಂದೆ ಈಕೆ ಬೇಕೆಂದೇ ಈ ಮಾತುಗಳನ್ನಾಡುತ್ತಿರಬಹುದೇ ಅಂತನ್ನಿಸಿ, ಮಾತನ್ನು ಮುಂದುವರೆಸಲು ಇಚ್ಛೆ ಇಲ್ಲದೆ ವ್ಹೀಲ್ ಛೇರ್‌ನ್ನು ವಾರ್ಡಿನೊಳಕ್ಕೆ ತಳ್ಳಿಕೊಂಡು ನಡೆದಳು. ಅಲ್ಲಿದ್ದ ನರ್ಸು ತೊಟ್ಟಿಲಲ್ಲಿ ಮಲಗಿದ್ದ ಮಗುವನ್ನು ಎತ್ತಿ ಆತನಿಗೆ ತೋರಿಸಿದಳು. ಆತ ಮೆಚ್ಚುಗೆಯಿಂದ ಸಾಕ್ಷಿಯ ಕಡೆ ನೋಡಿದ. ಅವಳ ಕಣ್ಣಲ್ಲಿ ನೀರು ಜಿನುಗಿತ್ತು.

37

ಹೆರಿಗೆಯಾದ ಮೂರನೇ ದಿನದಲ್ಲಿ, ಸಾಕ್ಷಿಯನ್ನು ಡಿಸ್ಚಾರ್ಜ್ ಮಾಡಿಸಿಕೊಂಡು ಕರೆತಂದರು. ಮುಂಬಾಗಿಲಿನಲ್ಲಿ ಮಗು ಬಾಣಂತಿಯನ್ನು ನಿಲ್ಲಿಸಿ, ಕೆಂದಾರತಿಯನ್ನೆತ್ತಿ ಒಳಕ್ಕೆ ಬರಮಾಡಿಕೊಂಡರು.

"ಅಂತೂ ನೀವಾಗಿಯೇ ತೊಂದರೆಯನ್ನು ತಗೊಳ್ತಿದೀರಿ..." ಸಾಕ್ಷಿಯ ಅತ್ತೆ ದೇಶಾವರಿ ನಗೆಯನ್ನು ನಕ್ಕು ಮೃದುಲಾಳ ಕಡೆ ನೋಡಿ ನುಡಿದಳು.

"ನನಗೇನು ತೊಂದರೆ? ಈ ಮನೆಗೆ ನಾನೂ ಹೊಸಬಳೇ... ನನ್ನಿಂದ ಬೇರೆಯವರಿಗೆ ತೊಂದರೆ ಆಗದಿದ್ದರೆ ಸಾಕು" ಮೃದುಲಾ ಜಾಣೆಯಂತೆ ಉತ್ತರಿಸಿದಳು.

"ಛೆ... ಛೆ... ಹಾಗ್ಯಾಕಂತೀರಿ? ನಿಮ್ಮ ಕಾಲ್ಗುಣ ಚೆನ್ನಾಗಿದೆ. ನನ್ನ ಸೊಸೆಗೆ ಗಂಡು ಮಗುವಾಯಿತು. ಬೀಗರು ನಿಮ್ಮ ಆರೈಕೆಯಿಂದ ಬೇಗ ಬೇಗ ಗುಣಮುಖರಾಗ್ತಿದಾರೆ. ಆದಷ್ಟು ಬೇಗ ಮೊದಲಿನಂತೆಯೇ ಆಗ್ತಾರೆ ನೋಡ್ತಿರಿ" ಮೃದುಲಾ ಸುಮ್ಮನೆ ನಕ್ಕಳು. "ನಿಮ್ಮದು ತುಂಬಾ ದೊಡ್ಡ ಮನಸ್ಸು. ಮದುವೆ ಆಗಿಯೂ ಯೌವನದಲ್ಲಿ ಯಾವುದೇ ಸುಖವನ್ನು ಅನುಭವಿಸಲಿಲ್ಲ ನೀವು. ಈಗ ಈ ವಯಸ್ನಲ್ಲಿ ಅವರ ಸೇವೆಗೆ ನಿಸ್ವಾರ್ಥವಾಗಿ ನಿಂತಿದೀರಲ್ಲ. ಶಾಭಾಸ್‌ಗಿರಿ ಕೊಡ್ಬೇಕು ನಿಮಗೆ"

"ಯಾವ ಶಾಭಾಸ್‌ಗಿರಿಯ ಆಸೆಗೆ ನಾನು ಇಲ್ಲಿಗೆ ಬಂದು ನಿಂತಿಲ್ಲ. ಇವರನ್ನು ಪ್ರೀತಿಸಿ ಮದುವೆಯಾಗಿದ್ದವಳು ನಾನು. ಆದರೆ ಯಾವುದೋ ದುರಭಿಮಾನದಿಂದ ದೂರವಿದ್ದು ಬಿಟ್ಟೆ. ಆದರೂ, ಆ ಪ್ರೀತಿ ಈಗಲೂ ನನ್ನಲ್ಲಿ ಇದೆ. ಆ ಪ್ರೀತಿಯೇ ನನ್ನನ್ನು ಈಗ ಇಲ್ಲಿ ಇರುವಂತೆ ಮಾಡಿದೆ"

ನಡುಮನೆಯಲ್ಲಿ ವ್ಹೀಲ್ ಛೇರ್ ಮೇಲೆ ಕುಳಿತಿದ್ದ ಅಶೋಕ್‌ಗೆ ಮಗುವನ್ನು ತೋರಿಸಿದಳು. ಅಶೋಕ್, ಹೆಂಡತಿಯ ಫೋಟೋದತ್ತ ನೋಟವನ್ನು ಹರಿಸಿದ.

ಒಂದು ಗಳಿಗೆ ಚುಚ್ಚಿದಂತಾದರೂ, ಮರುಗಳಿಗೆಯೇ ಚೇತರಿಸಿಕೊಂಡಳು. ಮಗುವನ್ನು ಮಾಲಾಳ ಫೋಟೋದ ಮುಂದೆ ಹಿಡಿದಳು.

"ಮಾಲಾ ನೋಡು, ನಿನ್ನ ಮಗ ಎಷ್ಟು ಮುದ್ದಾಗಿದಾನೆ ಅಂತ ಅಲ್ಲಿ ಇದ್ದವರೆಲ್ಲ ಒಮ್ಮೆಗೇ ಮೂಕರಾದರು. ಒಂದು ಗಳಿಗೆ ತಾಯಿಯ ನೆನಪು ಒತ್ತಿ ಬಂದು ಹೆಣ್ಣು ಮಕ್ಕಳ ಕಣ್ಣು ಒದ್ದೆಯಾಯಿತು. ಮರು ಗಳಿಗೆಯಲ್ಲೇ ತಮಗೆ ತಾವೇ ಸಮಾಧಾನವನ್ನು ಹೇಳಿಕೊಂಡರು.

"ಗಿರಿಜಮ್ಮಾ, ಬಾಣಂತಿಯ ಆರೈಕೆ ನಿಮಗೆ ಸೇರಿದ್ದು. ಹೊತ್ತು ಹೊತ್ತಿಗೆ ಹಾಲು, ಕಾಫಿ, ಪಥ್ಯದ ಅಡಿಗೆ ಅಷ್ಟನ್ನು ನೀವು ನೋಡಿಕೊಳ್ಳಬೇಕು. ಸಾಕ್ಷಿ ನೀನೂ ಅಷ್ಟೇ. ಕಟ್ಟುನಿಟ್ಟಾಗಿ ಬಾಣಂತನವನ್ನು ಮಾಡಿಕೊಳ್ಳಬೇಕು. ಎದ್ದು ಓಡಾಡಿ, ಅಪಥ್ಯ ಮಾಡ್ಕೋಬಾರದು. ಅದು ಎಳೆ ಮಗುವಿನ ಮೇಲೆ ಪರಿಣಾಮ ಬೀರುತ್ತೆ" ಸಾಕ್ಷಿ ತಲೆಯಾಡಿಸಿದಳು.

"ಮೃದುಲಾ ಅವರೇ, ನಿಮ್ಮ ಮಾತಿಗೆ ಬೆಲೆ ಕೊಟ್ಟು, ನನ್ನ ಸೊಸೆಯನ್ನು ಮೊಮ್ಮಗುವನ್ನು ಇಲ್ಲಿಗೆ ಕರೆತಂದಿದೀನಿ. ಗಿರಿಜಮ್ಮ ಹೊರಗಿನವರು. ಬಾಣಂತಿಗೆ ಮಗುಗೆ, ಏನೂ ತೊಂದರೆ ಆಗದಂತೆ ನೋಡಿಕೊಳ್ಳಬೇಕಾದುದು ನಿಮ್ಮ ಕರ್ತವ್ಯ" ಮೃದುಲಳಿಗೆ ಆದೇಶವಿತ್ತಳು. ಮೃದುಲಾ ಅಶೋಕನ ಕಡೆ ನೋಡಿದಳು.

"ನೀವು ಇದುವರೆಗೆ ಆರಾಮವಾಗಿ, ಠಾಕೋ ಠೀಕಾಗಿ ಡ್ರೆಸ್ ಮಾಡ್ಕೊಂಡು ಕಾರ್ನಲ್ಲಿ ಬುರ್ ಅಂತ ಹೋಗಿ, ಹುಡುಗಿಯರಿಗೆ ಪಾಠ ಹೇಳಿದಷ್ಟು ಸುಲಭವಲ್ಲ ನಿಮ್ಮ ಗಂಡನ, ಅವರ ಮಕ್ಕಳ ಯೋಗಕ್ಷೇಮದ ಜವಾಬ್ದಾರಿಯನ್ನು ಕೈಗೆತ್ತಿಕೊಂಡಿದೀರಿ, ನಿಭಾಯಿಸಬೇಕಾದುದು ನಿಮ್ಮ ಧರ್ಮ" ಆಕೆ ನಗುತ್ತಾ ಬೆನ್ನ ಮೇಲೆ ಕೈ ಇಟ್ಟು ಹೇಳಿದಾಗ, ಆ ಮಾತುಗಳು ಸವಾಲಿನಂತಿತ್ತು.

ಇಲ್ಲಿ ಇರುವವರೆಲ್ಲಾ ನನ್ನವರೇ ಎಂಬ ವಿಶ್ವಾಸ ನನಗಿದೆ. ಎಲ್ಲರ ಸಹಕಾರವೂ ನನಗಿದೆ ಎಂಬ ನಂಬಿಕೆ ಇದೆ. ನೀವು ಅನುಭವಸ್ಥರು, ನಿಮ್ಮ ಮಾರ್ಗದರ್ಶನ ನನಗೆ ಬೇಕು. ಆಗ ನಾನು ಎಲ್ಲವನ್ನು ನಿಭಾಯಿಸಬಲ್ಲೆ" ಮೃದುಲಾ ವಿನಯದಿಂದ ಹೇಳಿದಾಗ ಆಕೆ ಮುಗುಳ್ನಕ್ಕಳು. ಸಂಜಯ ಗಂಭೀರನಾಗಿ ನಿಂತಿದ್ದ.

"ಅಮ್ಮಾ ಹೊರಡು, ನಿನ್ನನ್ನ ಮನೆಗೆ ಬಿಡ್ತೀನಿ" ಎಂದ.

"ಇಲ್ಲೇ ಸ್ನಾನ ಮಾಡಿ, ಇಲ್ಲೇ ಊಟ ಮಾಡಿಕೊಂಡು ಹೋಗಬಹುದಲ್ಲ"

"ಇಲ್ಲ ಮೃದುಲಾರವರೇ, ಮನೇಲಿ ರಾಶಿ ಕೆಲಸ ಬಿದ್ದಿದೆ. ಮೂರು ದಿನದಿಂದ ಆಸ್ಪತ್ರೆಯ ಓಡಾಟವಾಗಿದೆ. ನನಗೂ ರೆಸ್ಟ್ ಬೇಕು. ನನ್ನ ಮೊಮ್ಮಗುವನ್ನು ನೋಡ್ತೋಕೆ ನಾನು ಬರ್ತಾನೇ ಇರ್ತೀನಿ" ಎಂದು ಹೇಳಿ, ಹೊರಟೇ ಬಿಟ್ಟಳು. ಬೈಕ್ ಹೊರಟ ಸದ್ದು ಕೇಳಿದ ಕೂಡಲೇ, ಸಾಕ್ಷಿ ತಲೆಗೆ ಕಟ್ಟಿಕೊಂಡಿದ್ದ ಸ್ಕಾರ್ಫ್‌ನ್ನು ತೆಗೆದಳು. ಮೃದುಲಾಳ ಕಡೆ ನೋಡಿದಳು.

"ಪ್ಲೀಸ್ ಮೇಡಂ... ನೀವು ಶಾಲು ಹೊದ್ಕೋ, ಮಫ್ಲರ್ ಸುತ್ತಿಕೋ ಅಂತೆಲ್ಲಾ ಹೇಳ್ಬೇಡಿ... ಶೆಕೆ ಆಗುತ್ತೆ" ಮೃದುಲಾ ಸುಮ್ಮನಿದ್ದಳು. ಅಡಿಗೆ ಮನೆಗೆ ಹೋಗಿ ಗಿರಿಜಮ್ಮನಿಗೆ ಹೇಳಿದಳು.

"ಗಿರಿಜಮ್ಮ, ನೀವು ಸಾಕ್ಷಿಗೆ ಅವಳ ಅತ್ತೆ ಹೇಳಿದಂತೆ ಕೇಳುವಂತೆ ಹೇಳಿ. ನನಗೆ ಯಾವ ಅನುಭವವಿಲ್ಲ ನಿಜ. ಆದರೆ, ಅವಳ ಅತ್ತೆ ಆಕ್ಷೇಪಣೆ ಮಾಡುವಂತೆ ಆಗಬಾರದು. ಅಲ್ಲದೇ, ಇದರಿಂದ ಅವಳಿಗೆ, ಅವಳ ಮಗುವಿಗೆ ಒಳ್ಳೆಯದೇ ತಾನೇ..."

"ನಾನು ಅದನ್ನೆಲ್ಲಾ ನೋಡ್ಕೋತೀನಿ ಮೇಡಂ. ನೀವು ಚಿಂತೆ ಮಾಡ್ಬೇಡಿ" ಗಿರಿಜಮ್ಮ ಆಶ್ವಾಸನೆ ಕೊಟ್ಟ ಮೇಲೆ ಮೃದುಲಾಳಿಗೆ ಸಮಾಧಾನವಾಯಿತು. ಗಿರಿಜಮ್ಮ ಸೊಸೆಗೆ ಅಡಿಗೆ ಮನೆಯ ಕೆಲಸಗಳನ್ನು ವಹಿಸಿ, ಬಾಣಂತಿಯ ಕೋಣೆಗೆ ನಡೆದಳು.

38

ಮಧ್ಯಾಹ್ನ ಎಲ್ಲರ ಊಟವಾದ ನಂತರ, ಮೃದುಲಾ ಕಾರ್ತೀಕನ ಬಳಿಗೆ ಬಂದು, ತನ್ನ ಮನೆಯ ಬೀಗದ ಕೈಯನ್ನು ಅವನ ಕೈಗಿತ್ತಳು. ಅವನು ಅವಳನ್ನೇ ಮಿಕಿ ಮಿಕಿ ನೋಡಿದ.

"ಇಲ್ಲಿ ಈ ಮನೆಯಲ್ಲಿ ಇರುವುದು ಎರಡೇ ರೂಮುಗಳು. ಹೊಸದಾಗಿ ಮದುವೆಯಾದವರು ನೀವು. ಇಲ್ಲಿ ನಿಮಗೆ ಪ್ರೈವೆಸಿ ಕಡಿಮೆ. ನೀವಿಬ್ಬರೂ ಆ ಮನೆಗೆ ಹೋಗಿ. ನಿಮ್ಮ ಹೊಸ ಸಂಸಾರವನ್ನು ಪ್ರಾರಂಭಿಸಿ" ಕ್ಷೀರಾ ಕಾರ್ತೀಕನನ್ನು ಪ್ರಶ್ನಾರ್ಥಕವಾಗಿ ನೋಡಿದಳು. ಅವನು ಸುಮ್ಮನಿರು ಎನ್ನುವಂತೆ ಕಣ್ಣು ಸಂಜ್ಞೆ ಮಾಡಿದ. ಸಾಯಂಕಾಲದ ಹೊತ್ತಿಗೆ ಅವರಿಬ್ಬರೂ ಆ ಮನೆಗೆ ಹೊರಟರು. ಸಂಜಯ ತಾನೂ ತನ್ನ ಮನೆಗೆ ಹೊರಟ. ಮೃದುಲಾ ಅವನನ್ನು ತಡೆಯಲಿಲ್ಲ. ಸಾಕ್ಷಿ ಮಾತ್ರ ಗಂಡನಿಗೆ ಪಿಸುದನಿಯಲ್ಲಿ ಹೇಳಿದಳು.

"ನೀವೂ ಹೊರಟು ಹೋಗ್ತೀರೇನ್ರೀ.. ಇಲ್ಲಿ ನಾನು ಒಂಟಿಯಾಗಿ ಬಿಡ್ತೀನಿ"

"ಏನು ಒಂಟಿಯಾಗ್ತೀಯಾ? ನಿನ್ನ ಪಕ್ಕ ನಿನ್ನ ಮಗ ಮಲಗಿದಾನೆ. ನನಗೆಲ್ಲಿದೆ ಜಾಗ? ಅಲ್ಲದೇ ನೀನು ಬಾಣಂತಿ... ನಿನ್ನೊಡನೆ ಸರಸ ಆಡಿದರೆ, ಅಮ್ಮನ ಹತ್ರ ಬೈಯಿಸಿಕೊಳ್ಳಬೇಕಾಗುತ್ತೆ"

"ಅಲ್ಲಿ ಹೋಗಿ ಅಮ್ಮನೆದುರು ಕುಳಿತು ಏನ್ಮಾಡ್ತೀರಾ?"

"ಇಲ್ಲಿ ಕುಳಿತು ಏನ್ಮಾಡ್ಲೀ... ನಿನ್ನ ಹೊಸಾ ಮೇಡಂನ ಎದುರಿಗೆ ಓಡಾಡುವ ಆಸೆ ನನಗಿಲ್ಲ. ಈಗ ಈ ಮನೆ ನಿಮ್ಮ ಮನೆಯಾಗಿ ಉಳಿದಿಲ್ಲ"

"ಮತ್ತೆ ಶುರು ಮಾಡಿದ್ರಾ ನಿಮ್ಮ ವರಸೇನಾ?"

"ನಾನ್ಯಾವಾಗ ಮುಗಿಸಿದ್ದೆ?... ಸಧ್ಯಕ್ಕೆ ಮಾತು ಬೇಡ ಅಂತ ಸುಮ್ಮನಾಗಿದ್ದೆ... ಸಮಯ ಬಂದಾಗ ಎಲ್ಲಾ ಒದರ್ತೀನಿ. ನಾನು ಸುಮ್ಮನಿರುಲ್ಲ"

"ಸುಮ್ಮನಿರ್ರೀ... ನಿಮಗ್ಯಾಕೆ ಬೇಕು? ಒಂದು ತಿಂಗಳ ಬಾಣಂತನ ಮುಗೀತಿದ್ದ ಹಾಗೇ ನಾನು ನಿಮ್ಮ ಮನೆಗೆ ಬಂದು ಬಿಡ್ತೀನಿ"

"ನಿನಗೂ ಬೇಡ್ವಾ ನಿನ್ನ ದೊಡ್ಡಮ್ಮನ ಸಹವಾಸ?"

"ಹಾಗಲ್ಲ, ಹೇಗೂ ಅವರು ಅಪ್ಪನ ಜವಾಬ್ದಾರೀನ ತಗೋತಾರೆ. ಕ್ಷೀರಾ ಅವಳ ಪಾಡಿಗೆ ಅವಳು ಹೋಗಲಿಲ್ವಾ?... ನಾನೇನು ಬಿಡುವಾಗಿದೀನಾ? ನಮ್ಮ ಪಾಮು ಕೆಲಸಾನೇ ಬೇಕಾದಷ್ಟು ಇರುತ್ತೆ"

"ಅಂದ್ಹಾಗೇ ಇವನಿಗೆ ಏನು ಹೆಸರಿಡೋಣ... ಅದೆಲ್ಲಾ ನಿನ್ನ ಕೆಲಸ..."

"ಆಯ್ತು... ನಾನೇ ಸೆಲೆಕ್ಟ್ ಮಾಡ್ತೀನಿ. ನಾಮಕರಣಾನ ಗ್ರ್ಯಾಂಡಾಗಿ ಮಾಡೋಣ. ಅಪ್ಪನಿಗೂ ಖುಷಿಯಾಗುತ್ತೆ"

"ನಾನು ಏನೂ ಮಾಡ್ಲಾರೆ. ಸಾಕ್ಷೀ... ನನಗೆ ಇದಕ್ಕೆಲ್ಲಾ ಖರ್ಚು ಮಾಡುಕ್ಕೆ ಹಣವೂ ಇಲ್ಲ... ಸಮಯವೂ ಇಲ್ಲ"

"ನೀವ್ಯಾಕೆ ಮಾಡ್ಬೇಕು? ಅಪ್ಪ ಮಾಡ್ತಾರೆ..."

"ನಿನ್ನ ಅಪ್ಪಾನಾ?... ತಮಾಷೆ ಮಾಡ್ತಿದೀಯಾ?"

"ಅಪ್ಪನ ಕೇರ್ ಟೇಕರ್ ಮಾಡ್ತಾರೆ... ಅವರು ಖಂಡಿತಾ ಇಲ್ಲ ಅನ್ನಲ್ಲ. ಆಕ್ಷೇಪಣೆ ಬರಬಾರದು ಅಂತ ಖಂಡಿತಾ ಹೂಂ ಅಂತಾರೆ"

"ನೀನೂ ಹೀಗೆ ಮಾತಾಡ್ತೀಯಲ್ಲ ಸಾಕ್ಷಿ... ಅವರನ್ಯಾಕೆ ಕೇಳ್ಬೇಕು...?

"ನೀವು ಸುಮ್ನಿರಿ ಸಂಜು... ನಿಮ್ಮಪ್ಪನ ಮನೇಲಿ ಏನೂ ಮಾಡ್ಲಿಲ್ಲ. ಹಾಗೆ ಹೀಗೆ ಅಂತ ನಿಮ್ಮಮ್ಮ ಹಂಗಿಸದೇ ಬಿಡೋರಲ್ಲ. ಆ ಭಯ ಮೃದುಲಾ ಮೇಡಂಗೂ ಇರುತ್ತೆ. ನಾವು ಕೇಳದೇ ಇದ್ದರೂ, ಅವರು ಸಮಾರಂಭ ಮಾಡಿಸ್ತಾರೆ ನೋಡ್ತೀರಿ"

"ಅಷ್ಟು ಗ್ಯಾರಂಟಿಯಾಗಿ ಹೇಗೆ ಹೇಳ್ತೀಯಾ?"

"ಇಲ್ಲೇ ಬಾಣಂತನ ನಡೆಯಲಿ ಅಂತ ಇಲ್ಲಿಗೆ ಕರ್ಕೊಂಡು ಬಂದ್ರು... ನಿಮ್ಮಮ್ಮ ಸುಮ್ಮನಿರಲಿಲ್ವಾ?... ಅವರಿಗೇನು ಅಷ್ಟು ಗೊತ್ತಾಗುಲ್ವಾ?"

"ಹಾಗಾದ್ರೆ, ಆ ಮೇಡಂನ ಈ ಮನೆಯ ಯಜಮಾನಿತಿ ಅಂತ ನೀವುಗಳೆಲ್ಲಾ ಒಪ್ಪಿಕೊಂಡು ಬಿಟ್ರಾ?"

"ಬೇರೆ ದಾರಿ ಏನಿದೆ ಹೇಳಿ ಸಂಜೂ...? ಅಪ್ಪನ ಅನಾರೋಗ್ಯ ಒಂದಿಲ್ಲದೇ ಇದ್ದಿದ್ರೆ, ಆ ವಿಚಾರವೇ ಬೇರೆಯಾಗಿರುತ್ತಿತ್ತು. ಇನ್ನೊಂದೆರಡು ವರ್ಷಗಳ ನಂತರ ರಾಶೀನೂ ಮದುವೆ ಮಾಡ್ಕೊಂಡು ಹೊರಟು ಹೋದ್ರೆ... ಅಪ್ಪನ ಗತಿ?"

"ನೀವುಗಳು ಮೂರು ಜನ ಮಕ್ಕಳಿದೀರಿ... ಎಲ್ರೂ ಸ್ವಾರ್ಥಿಗಳಾಗಿ ಬಿಟ್ರಿ... ಇಷ್ಟೇನಾ ನಿಮ್ಮ ಪ್ರೀತಿ?"

"ಪ್ರೀತಿ ಇದೆ, ಸ್ವಾತಂತ್ರ್ಯ ಎಲ್ಲಿದೆ ಸಂಜೂ... ನೀವು ಬೇರೆ ಮನೆ ಮಾಡಿ. ಸರದಿ ಪ್ರಕಾರ ಅಪ್ಪನ್ನ ಎಲ್ರೂ ನಮ್ಮ ಮನೇಲಿಟ್ಟು ಕೊಳ್ಳೋಣ"

"ಅದು ಸಧ್ಯಕ್ಕಂತೂ ಸಾಧ್ಯವಿಲ್ಲ"

"ಹಾಗಾದ್ರೆ ಸುಮ್ನಿರಿ. ಮೇಡಂ ಈ ಮನೇಲಿದ್ರೆ ನಮಗೆ ರಾಶಿಯ ಚಿಂತೆಯೂ ಇರುಲ್ಲ. ಅವರಿಂದ ನಮಗೇನು ತೊಂದರೆ?"

"ತೊಂದರೆ ಇದೆ ಸಾಕ್ಷೀ... ಈಗ ಆ ಮಾತು ಬೇಡ. ಮತ್ತೆಂದಾದ್ರೂ ಆಡೋಣ. ಈಗ ರೆಸ್ಟ್ ತಗೋ... ನಾನು ಬರ್ತೀನಿ..." ಅವನು ಮಗುವನ್ನು ಮುದ್ದಿಸಿ, ಅವಳ ಕೆನ್ನೆಯನ್ನು ತಟ್ಟಿ ಹೊರಬಂದ. ಮೃದುಲಾ ನೋಡಿದರೂ ನೋಡದವಳಂತೆ ಸುಮ್ಮನಿದ್ದಳು. ಎರಡು ದಿನಗಳ ಹಿಂದೆ ಬಂದ ಈ ಹೆಂಗಸಿಗೆ ಎಷ್ಟು ಧಿಮಾಕು ಅಂತ ಅಂದುಕೊಂಡ. ಈ ಅಕ್ಕತಂಗಿಯರು ಪೆದ್ದರು ಅಂತಂದುಕೊಂಡ.

39

ಮೃದುಲಾ ಸಾಕ್ಷಿಯೊಡನೆ ಮಾತನಾಡಿ, ನಾಮಕರಣಕ್ಕೆ ಸಿದ್ಧತೆಗಳನ್ನು ಮಾಡಿಸಿದಳು. ಕ್ಷೀರಾ ಕಾರ್ತೀಕ ಅವಳಿಗೆ ಸಹಾಯಕರಾದರು.

"ಸಂಜಯ ಯಾಕೋ ಅಪ್ಸೆಟ್ ಆಗಿರುವಂತಿದೆ. ಬೇಜಾರಾಗುವ ಹಾಗೆ ಅವನೇನಾದ್ರೂ ಮಾತಾಡಿದ್ರೆ ಅವಮಾನ ಆಗುತ್ತೆ. ನೀವು ಮೊದಲೇ ಅವನ ಹತ್ರ ಮಾತನಾಡಬೇಕಾಗಿತ್ತು" ಕಾರ್ತೀಕನೆಂದ.

"ಆಡಿದ್ರಾಯ್ತು... ನೀನೂ ಇರುವಾಗ ಒಟ್ಟಿಗೇ ಕೂತು ಮಾತನಾಡಿದರಾಯ್ತು" ಕಾರ್ತೀಕ ಇದೇ ಮಾತನ್ನು ಕ್ಷೀರಾಳೊಡನೆ ಹೇಳಿದ.

"ಮೃದುಲಾ, ಇಲ್ಲೇ ಇರೋದು ಅಂತ ನಿರ್ಧರಿಸಿರುವಾಗ, ಅದು ಎಲ್ಲರಿಗೂ ಹಿತವಾಗಿರಬೇಕು ಅಲ್ವಾ? ನಿಮ್ಮ ಭಾವಂಗೆ ಏನೋ ಅಸಮಾಧಾನ... ನಿಮ್ಮ ಅಕ್ಕನ ಹತ್ರ ಮಾತನಾಡಿ ಏನೂಂತ ತಿಳ್ಕೋ..."

"ಭಾವನ ಮನಸ್ನಲ್ಲಿ ಏನಿದೆ ಅಂತ ಅಕ್ಕನಿಗೂ ಗೊತ್ತು, ನಂಗೂ ಗೊತ್ತು. ಆದರೆ, ಹೇಳಿದ್ರೆ ಚೆನ್ನಾಗಿರುಲ್ಲ..."

"ಮೃದುಲಂಗೆ ಅವಮಾನವಾಗುವಂತಹ ವಿಚಾರ ಇದ್ದರೆ ಈಗಲೇ ಹೇಳಿ ಬಿಡು ಕ್ಷೀರಾ... ನಾಮಕರಣ ಅದೂ ಇದು ಅಂತ ಸಂಭ್ರಮದಿಂದ ಓಡಾಡ್ತಿದಾರೆ. ಸಮಾಜದಲ್ಲಿ ಗೌರವ ಇರುವ ವ್ಯಕ್ತಿ ಅವರು. ನಿಮ್ಮ ಭಾವ ಏನೇನೋ ಆಡಿದಾರೆ. ನನಗೂ ಸಹನೆ ಮೀರುತ್ತೆ. ನಮ್ಮ ನಮ್ಮ ಸಂಬಂಧ ಕೆಡುತ್ತೆ ಅಷ್ಟೇ..."

"ನಮ್ಮ ಅಪ್ಪನ ಹೆಸರಿನಲ್ಲಿ ಏನೂ ಆಸ್ತಿ ಇಲ್ಲ ಕಾರ್ತೀಕ್... ಒಂದು ಸೈಟು ಇತ್ತು. ಅದನ್ನು ಮಾಡಿಬಿಟ್ಟಿದಾರೆ. ಆ ವಿಷಯ ಭಾವನಿಗೆ ತಿಳಿಯದು. ನಾವ್ಯಾರು ಹೇಳಿಲ್ಲ... ಅಮ್ಮನ ಒಡವೆಗಳಿವೆ. ಅದೆಲ್ಲಾ ಲಾಕರ್‌ನಲ್ಲಿದೆ... ಈಗ ಅದೆಲ್ಲಾ ಮೇಡಂಗೆ ಹೊರಟು ಹೋಗುತ್ತೆ ಅಂತ ಅವರಿಗೆ ಅಸಹನೆ..."

"ಛೇ... ನಿಮ್ಮ ಭಾವಂಗೆ ಇಂತಹ ಚೀಪ್ ಮೆಂಟಾಲಿಟಿ ಅಂತ ಗೊತ್ತಿರ್ಲಿಲ್ಲ"

"ಅದೆಲ್ಲಾ ಅವರ ತಾಯಿ ಚಿತಾವಣೆ... ಇಲ್ಲಿ ನಮ್ಮ ಮನೇಲಿ ಕಷ್ಟ ಅಂತ ತಿಳಿದರೂ, ಸಾಕ್ಷೀನ ಇಲ್ಲೇ ಬಿಟ್ಟಿದಾರೆ... ನಾಮಕರಣ ಮಾಡಲಿ ಅನ್ನೋ ಆಸೆ. ಭಾವ, ಅವರಮ್ಮ ಹೇಳಿದ ಹಾಗೇ ಕೇಳ್ತಾರೆ..."

"ನಿಮ್ಮ ಭಾವನ ಮನಸ್ನಲ್ಲಿರೋ ತಪ್ಪು ಕಲ್ಪನೇನ ಹೋಗಿಸೋದು ಹೇಗೆ? ಮೃದುಲನ್ನ ಹೇಗಾದ್ರೂ ಒಪ್ಪಿಸಿ, ವಾಪಸ್ಸು ಕರೆದುಕೊಂಡು ಹೊರಟು ಹೋಗೋಣ. ನಿಮ್ಮ ತಂದೆ, ರಾಶಿಯೂ ನಮ್ಮ ಜೊತೆಗೇ ಬರಲಿ"

"ಆಗಲೂ ಭಾವ ಹಂಗಿಸದೇ ಬಿಡುಲ್ಲ... ನಾಮಕರಣದ ಸಮಾರಂಭ ಮುಗಿದು ಹೋಗಲಿ. ಆಮೇಲೆ ಒಂದು ದಿನ ಎಲ್ಲರೂ ಕೂತು ಮಾತನಾಡೋಣ"

"ನಮ್ಮ ಮೃದುಲಂಗೆ ಇಂತಹ ಸಮಸ್ಯೆ ಬರಬಾರದಾಗಿತ್ತು. ಅವರು ಇಲ್ಲಿಗೆ ಬಂದು ಇರ್ತೀನಿ ಅಂತ ತೀರ್ಮಾನ ತಗೋಬಾರದಾಗಿತ್ತು"

"ಈಗಲೂ ಕನ್ವಿನ್ಸ್ ಮಾಡಿ ಕಾರ್ತೀಕ್. ನಾನು ನಿಮ್ಮ ಜತೆಗಿದೀನಿ"

"ಥ್ಯಾಂಕ್ಸ್ ಕ್ಷೀರಾ... ಮೃದುಲಾ ಹೇಗೆ, ಅವರ ಸ್ವಭಾವ, ನಡವಳಿಕೆ ಎಂಥದು ಅಂತ ನನಗೆ ಚೆನ್ನಾಗಿ ಗೊತ್ತು. ಅವರ ಈ ನಿರ್ಧಾರದಲ್ಲಿ ಯಾವ ದುರುದ್ದೇಶವೂ ಇಲ್ಲ..." ಕಾರ್ತೀಕ ನೊಂದು ನುಡಿದ.

ಸಂಜಯ ಎಂದಿನಂತೆ ಬಂದ. ಕಾರ್ತೀಕನನ್ನು ಕಂಡು ಹುಬ್ಬೇರಿಸಿದ.

"ಹಾಯ್ ಸಂಜಯ್ ಹೇಗಿದೀರಿ..." ಕೈ ಕುಲುಕಿದ.

"ನೀವು ಹೇಗಿದೀರಿ ಕಾರ್ತೀಕ್.. ಹೇಗೆ ಇದಾಳೆ ನನ್ನ ನಾದಿನಿ?"

"ಫೈನ್... ಹ್ಯಾಪಿಯಾಗಿದಾಳೆ"

"ಈ ಹುಡುಗೀರೆಲ್ಲಾ ಹಾಗೇನೇ ಕಾರ್ತೀಕ್. ತಮಗೆ ಸಿಗಬೇಕಾದುದೆಲ್ಲಾ ಸಿಕ್ಕಾಗ ಹ್ಯಾಪಿಯಾಗಿಯೇ ಇರ್ತಾರೆ... ಒಂದೊಂದ್ಸಾರಿ..."

"ಯಾರ ಬಗ್ಗೆ ಹೇಳ್ತಿದೀರಿ ಸಂಜಯ್... ಕ್ಷೀರಾ, ಅವಳ ಅಕ್ಕ ತಂಗಿ ಎಲ್ಲರೂ ಹ್ಯಾಪಿಯಾಗಿದಾರಲ್ಲ..."

"ಹ್ಯಾಪಿಯಾಗಿರುಕ್ಕೆ ಹೇಗೆ ಸಾಧ್ಯ ಕಾರ್ತೀಕ್... ಅವರು ಇರ್ತೀನಿ ಅಂತಂದ್ರೂ ಬೇರೆಯವರು ಬಿಡಬೇಕಲ್ಲ..." ಕಾರ್ತೀಕನಿಗೆ ಅವನ ಮಾತಿನ ವರಸೆ ಬೇಸರವನ್ನುಂಟು ಮಾಡಿತು. ಮಾತಿನ ಜಾಡನ್ನು ಬದಲಾಯಿಸಿದ.

"ಹನ್ನೆರಡನೇ ದಿನ ನಾಮಕರಣಕ್ಕೆ ಎಲ್ಲೇ ಸಮೀಪದ ಒಂದು ಸಣ್ಣ ಛತ್ರವನ್ನು ಗೊತ್ತು ಮಾಡಿದೀನಿ. ಬರ್ತೀರಾ ನೋಡ್ಕೊಂಡು ಬರೋಣ"

"ನೋಡೋಕೆ ಏನಿದೆ ಕಾರ್ತೀಕ್? ಒಂದು ದಿನದ ಕಾರ್ಯಕ್ರಮ... ನಮ್ಮ ಕಡೆ ಒಂದು ಇಪ್ಪತ್ತು ಇಪ್ಪತ್ತೈದು ಜನರು ಬರ್ತಾರೆ.. ಎಲ್ಲಾ ಕಾಂಟ್ರ್ಯಾಕ್ಟ್‌ಗೆ ಕೊಟ್ಟು ಬಿಡಿ. ನನಗೆ ಆಫೀಸ್ನಲ್ಲಿ ಹೆವಿ ವರ್ಕ್ ಬಿಡುವೇ ಇಲ್ಲ... ಮಗೂನ ಬಂದು ನೋಡಿ, ಮಾತನಾಡಿಸ್ದೇ ಇದ್ರೆ ಸಾಕ್ಷಿಗೆ ಕೋಪ ಬರುತ್ತೆ. ಆಮೇಲೆ ಮಾತನಾಡೋಣ ಎಂದು ಹೇಳಿ ಬಾಣಂತಿಯ ರೂಮಿನೊಳಕ್ಕೆ ಹೊರಟು ಹೋದ.

ಭಾವನ ಮಾತುಗಳನ್ನು ಕೇಳಿಸಿಕೊಂಡಿದ್ದ ಕ್ಷೀರಾ ಅವನ ಬಳಿಗೆ ಬಂದವಳು. "ಸಾರೀ ಕಾರ್ತೀಕ್... ಭಾವನ ಮಾತ್ನಿಂದ ಬೇಜಾರಾಯ್ತಾ?"

"ಬೇಜಾರಾಗದೇ ಇರುತ್ತಾ ಕ್ಷೀರಾ... ಈ ಫಂಕ್ಷನ್ ಒಂದು ಆಗಿ ಹೋಗಲಿ... ಆಮೇಲೆ ಏನು ಮಾಡ್ತೀನಿ ಅಂತ ನೋಡ್ತಿರು"

"ಪ್ಲೀಸ್ ಕಾರ್ತೀಕ್, ನೀವೂ ತಾಳ್ಮೆ ಕಳಕೋ ಬೇಡಿ. ಭಾವಂಗೆ ಇರುವ ಅನುಮಾನಗಳೆಲ್ಲಾ ಹೋಗುವ ರೀತಿ ಮಾತಾಡ್ಬೇಕು... ಅವರದ್ದು ಬರೀ ತಪ್ಪು ಕಲ್ಪನೆ"

"ಐ ನೋ... ನಿಮ್ಮ ಭಾವಂಗೆ ಏನೋ ದುರಹಂಕಾರ... ಜೊತೆಗೆ ಏನೋ ಅಸಮಾಧಾ. ಅದೆಲ್ಲಾ ಕ್ಲಿಯರ್ ಆಗಲೇಬೇಕು... ಸಂಜಯ್‌ಗೆ ಎಷ್ಟು ಹಕ್ಕು ಇದೆಯೋ ನನಗೂ ಅಷ್ಟೇ ಹಕ್ಕಿದೆ.

"ನೀವೂ ಹಕ್ಕು ಅಧಿಕಾರ ಅಂತೆಲ್ಲಾ ಮಾತಾಡ್ಬೇಡಿ. ಕಾರ್ತಿಕ್ ನನಗಿಷ್ಟವಾಗುಲ್ಲ"

"ನಾನೂ ನಿಮ್ಮ ಭಾವನ ಥರ ಇರ್ಬೇಕು ಅಂತ ನೀನೇ ಹೇಳಿದ್ದೆ..."

"ಈಗ ಆ ಮಾತನ್ನು ಹಿಂದಕ್ಕೆ ತಗೋತೀನಿ. ನೀವು ನೀವಾಗಿಯೇ ಇರಿ. ಯಾರ ಹಾಗೂ ಆಗಬೇಕಾಗಿಲ್ಲ"

"ಯೆಸ್ ಬಾಸ್" ಕಾರ್ತಿಕ್ ಅವಳ ಕೊರಳ ಮೇಲೆ ತುಟಿಯಾಡಿಸಿದ.

"ಕಾರ್ತಿಕ್ ಇದು ರೋಮಾನ್ಸ್‌ಗೆ ಸಮಯವಲ್ಲ"

"ಆದಷ್ಟು ಬೇಗ ಮನೆಗೆ ಹೋಗೋಣ... ಅಲ್ಲಿ ನಾನು ಯಾರಿಗೂ ಹೆದರಬೇಕಾಗಿಲ್ಲ" ಆಸೆ ಕಣ್ಣುಗಳಿಂದ ಅವಳ ಕಡೆ ನೋಡಿದ. ಕ್ಷೀರಾ ಸೆರಗು ಬೀಸಿ, ವೈಯಾರದಿಂದ ಕೊನೆಗಣ್ಣ ನೋಟವನ್ನು ಬೀರಿ, ಕಿಲ ಕಿಲ ನಕ್ಕು ಒಳಗೆ ನಡೆದಳು.

* * *

40

ಸಮಾರಂಭ ನಡೆಯುವ ಛತ್ರಕ್ಕೆ ಎಲ್ಲರೂ ಸಿದ್ಧರಾಗಿ ಹೊರಟರು. ಸಾಕ್ಷಿಗೆ, ಮಗುವಿಗೆ, ಎಣ್ಣೆ ಸ್ನಾನವನ್ನು ಮಾಡಿಸಿ, ಸಾಂಬ್ರಾಣಿ ಹೊಗೆಯನ್ನು ಹಾಕಿ ಮೈಕಾಯಿಸಿದ್ದರು. ಮನೆಯೊಳಗೆಲ್ಲಾ ನವಿರಾದ ವಾಸನೆ ತುಂಬಿಕೊಂಡಿತ್ತು.

ಮುಂಚಿತವಾಗಿ ಬಂದಿದ್ದ ಸಾಕ್ಷಿಯ ಅತ್ತೆ ಮಗುವನ್ನು ಜೋಪಾನವಾಗಿ ಎತ್ತಿಕೊಂಡು ಕಾರನ್ನೇರಿ ಕುಳಿತಳು. ಸಾಕ್ಷಿಯೂ ಚೆನ್ನಾಗಿ ಅಲಂಕರಿಸಿಕೊಂಡಿದ್ದಳು. ಸಂಜಯ ಅವಳ ಬಳಿ ಸಾರಿದ.

"ಎಷ್ಟು ಕಳೆ ಕಳೆಯಾಗಿ ಕಾಣ್ತಿದೀಯಲ್ಲೇ ಸಾಕ್ಷಿ..." ಎನ್ನುತ್ತಾ ರೂಮಿನ ಬಾಗಿಲನ್ನು ಮುಂದು ಮಾಡಿದ. ಬಳಿ ಬಂದವನನ್ನು ಸಾಕ್ಷಿ ಸರಿಸಿದಳು.

"ನಾನು ಈಗ ಹಸೀ ಬಾಣಂತಿ. ನಿಮ್ಮಮ್ಮಂಗೆ ಗೊತ್ತಾದ್ರೇ ನನ್ನನ್ನೇ ಬೈತಾರೆ. ಹೊತ್ತಾಗುತ್ತೆ ನನ್ನನ್ನು ಬಿಡಿ"

"ನಾನು ನಿನ್ನನ್ನು ಮುಟ್ಟೇ ಇಲ್ಲವಲ್ಲೇ, ಬಿಡಿ ಅಂತ ಅಂತೀಯಲ್ಲ. ಹೋಗ್ಲಿ ನಿನ್ನ ಆಸೆನೂ ತೀರಿಸ್ಕೊ ಒಂದೇ ಒಂದು..." ಎನ್ನುತ್ತಾ ಅವಳ ಮುಖದ ಬಳಿ ಬಾಗಿದ.

"ಏನು ಬೇಕಾಗಿತ್ತು ಗಿರಿಜಮ್ಮ...?" ಸಾಕ್ಷಿ ಹಾಗೆಂದೊಡನೆ, ಸಂಜಯ ಹಿಂದಕ್ಕೆ ಹಾರಿದ. ಸಾಕ್ಷಿ ಸದ್ದಾಗುವಂತೆ ನಕ್ಕಳು. ಅವನು ತಿರುಗಿದ. ಅಲ್ಲಿ ಯಾರೂ ಇರಲಿಲ್ಲ. ಅವಳ ಕೆನ್ನೆಗಳನ್ನು ಹಿಂಡಿದ.

"ನನಗೇ ಮೋಸ ಮಾಡ್ತೀಯಾ? ಮಗ ಬಂದ... ಇನ್ನು ನಾನು ಬೇಡವಾದ್ನಾ? ನಾನಿನ್ನು ಮುದುಕನಾಗಿಲ್ಲಮ್ಮಾ... ನೀನಿಲ್ಲೇ ನಿನ್ನ ಮಗನ ಜತೇಲಿರು. ನಾನು ಬೇರೆ ಇನ್ನೊಬ್ಬಳನ್ನು ಮದುವೆ ಆಗ್ತೀನಿ ನೋಡ್ತಿರು"

"ಅವಳು ಬರಲಿ ಕಚ್ಚಿ ಸಾಯಿಸಿ ಬಿಡ್ತೀನಿ" ಅವಳೂ ನಕ್ಕಳು.

"ನನ್ನ ಹೊಟ್ಟೆ ಉರಿಸಬೇಡ ಸಾಕ್ಷೀ... ಬಸುರಿಯಾಗಿದ್ದಾಗ, ನನ್ನನ್ನ ದೂರ ದೂರವೇ ಇಟ್ಟೆ... ಈಗ ಬಾಣಂತಿಯ ನೆಪ... ಇರಲಿ ನೋಡ್ಕೋತೀನಿ..."

"ಬೇಜಾರು ಮಾಡ್ಕೋಬೇಡಿ ಸಂಜಯ್... ನಿಮ್ಮಮ್ಮನ ಆಸೆಗೆ ಬಸುರಿ ಆದೆ. ಮಗನನ್ನು ಹೆತ್ತೆ... ನನ್ನನ್ನೇ ದೂಷಿಸ್ತೀರಲ್ಲ... ಇನ್ನು ಕೆಲವು ತಿಂಗಳುಗಳು ಅಷ್ಟೇ... ಬೇಗ ಬಾಣಂತನ ಮುಗಿಸ್ಕೊಂಡು ನಿಮ್ಮ ಮನೆಗೆ ಬಂದು ಬಿಡ್ತೀನಿ. ಆದರೆ ಒಂದು ಕಂಡೀಷನ್..."

"ಏನಮ್ಮ ಕಂಡೀಷನ್ನು? ಇಷ್ಟು ತಿಂಗಳು ಸತಾಯಿಸಿದ್ದು ಸಾಲದಾ?"

"ನಮಗೆ ಇವನೊಬ್ಬನೇ ಸಾಕು... ಮಕ್ಕಳಾಗದಂತೆ ಎಚ್ಚರಿಕೆ ವಹಿಸ್ಬೇಕು. ನೀವು ಡಾಕ್ಟರ ಹತ್ರ ಮಾತನಾಡಿ"

"ನನಗೆ ಅದೆಲ್ಲಾ ಗೊತ್ತಿಲ್ಲ. ನೀನೇ ಲೇಡಿ ಡಾಕ್ಟರ ಹತ್ರ ಮಾತನಾಡು. ಅದೇನು ಸಲಹೆ ಕೊಡ್ತಾರೋ ತಿಳ್ಕೋ..."

"ಯಾಕೆ ಈ ಮಾತನ್ನೆಲ್ಲಾ ಆಡೋಕೆ ನಿಮಗೆ ನಾಚ್ಕೇನಾ? ಹೆಂಡತಿ ಹತ್ರ ಸರಸಬೇಕು, ಸಂಯಮ ಬೇಡ್ವಾ?..."

"ಸಂಯಮದಿಂದ ಇದ್ದೂ ಇದ್ದೂ ನನ್ನ ಸಹನೆ ಮೀರಿದೆ. ನೀನು ರೇಗಿಸಬೇಡ... ಕೋಪ ಬಂದೆ ನಾನೇನ್ಮಾಡ್ತೀನೋ... ನಂಗೊತ್ತಿಲ್ಲ" ಅವಳ ಭುಜಗಳನ್ನು ಹಿಡಿದು ಅಲುಗಾಡಿಸಿದ. ಅವನ ವರ್ತನೆ ಅವಳಲ್ಲಿ ಭಯವನ್ನು ಹುಟ್ಟಿಸಿತು. ಹಿಂದೆ ಸರಿದಳು ಅವಳ ಬೆದರಿದ ಕಣ್ಣುಗಳನ್ನು ನೋಡಿ ಶಾಂತನಾದ.

"ಸಾರೀ ಸಾಕ್ಷೀ... ನಡೀ ಹೋಗೋಣ. ಅಮ್ಮಾ ಕಾಯ್ತಾ ಇದಾಳೆ" ಅವನು ಅವಳನ್ನು ಅಲ್ಲಿಯೇ ಬಿಟ್ಟು ಹೊರಕ್ಕೆ ಬಂದ. ಬಾಗಿಲಾಚೆ ಹಾಲಿನಲ್ಲಿ ವ್ಹೀಲ್‌ಛೇರ್ ಬಳಿ ನಿಂತಿದ್ದ ಮೃದುಲಾ ಅವನನ್ನು ಕಂಡು ಕಸಿವಿಸಿಗೊಂಡಳು. ಬಾಣಂತಿಯ ರೂಮಿನಲ್ಲಿ ಇವನೇನು ಮಾಡ್ತಿದ್ದ ಎಂದುಕೊಂಡು, ಅಶೋಕನ ಕಡೆ ನೋಡಿದಳು. ಅವನ ಗಮನ ಇವನ ಮೇಲಿರಲಿಲ್ಲ. ಸಂಜಯನ ಬೆನ್ನ ಹಿಂದೆ ಇತ್ತು.

41

ಸಂಜಯನ ತಾಯಿಯ ಮೇಲುಸ್ತುವಾರಿ ಇದ್ದುದರಿಂದ, ಯಾವ ಅವಘಡವೂ ಇಲ್ಲದೇ ಸಮಾರಂಭ ಪ್ರಾರಂಭವಾಯಿತು. ಅಭ್ಯಾಗತರು ಬಂದು ಸೇರತೊಡಗಿದ್ದರು. ಮೃದುಲಾ ಅಶೋಕನೊಡನೆ ಅಲ್ಲಿಗೆ ಬಂದೊಡನೆ ಅನೇಕರ ಗಮನ ಅವಳ ಮೇಲೆ ಹರಿಯಿತು.

ಈಗಾಗಲೇ ಎಷ್ಟೋ ಜನರಿಗೆ ಮೃದುಲಾ ಯಾರೆಂದು ತಿಳಿದಿತ್ತು. ತಿಳಿಯದೇ ಇದ್ದವರು ತಮ್ಮ ತಮ್ಮಲ್ಲೇ ಚರ್ಚಿಸಿ, ಅನುಮಾನವನ್ನು ಪರಿಹರಿಸಿಕೊಂಡರು. ಸಂಜಯನ ಅಸಹನೆ ಏನೆಂದು ಸಾಕ್ಷಿಗೆ ಅರ್ಥವಾಗಿತ್ತು.

ಶಾಸ್ತ್ರಿಗಳು, ಶಾಸ್ತ್ರೋಕ್ತವಾಗಿ ಸಮಾರಂಭವನ್ನು ನೆರವೇರಿಸಿದರು. ಮಗುವಿಗೆ, ಸಂಜಯನ ಇಷ್ಟದಂತೆ "ಶೌರ್ಯ" ಎಂದು ನಾಮಕರಣವನ್ನು ಮಾಡಿದರು. ಉಡುಗೊರೆಗಳ ರಾಶಿಯ ಸುರಿಮಳೆ ಆಯಿತು. ಮೃದುಲಾ ಮಗುವಿಗೆ ಒಂದು ಎಳೆ ಚಿನ್ನದ ಸರವನ್ನು ಉಡುಗೊರೆಯನ್ನಾಗಿ ಕೊಟ್ಟಳು.

"ಈ ದಿನ ಮಾಲಾಳ ಹುಟ್ಟು ಹಬ್ಬ. ಅವಳ ನೆನಪಿನ ಕಾಣಿಕೆ" ಎನ್ನುತ್ತಾ ಮಗುವಿನ ಎರಡೂ ಕೆನ್ನೆಗಳಿಗೆ ಮುತ್ತಿಟ್ಟಳು."

"ಥ್ಯಾಂಕ್ಸ್ ದೊಡ್ಡಮ್ಮಾ... ನಿಮಗೆ ಅಮ್ಮನ ಬರ್ತ್‌ಡೇ ಕೂಡಾ ನೆನಪಿನಲ್ಲಿದೆ" ಸಾಕ್ಷಿ ನುಡಿದಾಗ, ಸಂಜಯ ಕತ್ತು ತಗ್ಗಿಸಿದ್ದ. "ನಿಮಗೆ ಅಮ್ಮನ ಮೇಲೆ ತುಂಬಾ ಕೋಪ ಇತ್ತೇನೋ... ಅದಕ್ಕೇ ನೀವೆಂದೂ ನಮ್ಮ ಮನೆಗೆ ಬಂದಿರಲಿಲ್ಲ" ಎಂದಳು.

"ಇಲ್ಲ, ಸಾಕ್ಷೀ... ನನಗೆ ಯಾವ ಕೋಪವೂ ಇರಲಿಲ್ಲ. ಸಂಬಂಧವೂ ಇರಲಿಲ್ಲವಲ್ಲ. ಈಗ ಬಂದಿದೀನಲ್ಲ..."

"ಈಗ ನೀವು ಬಂದದ್ದು ತುಂಬಾ ಒಳ್ಳೇದಾಯ್ತು ದೊಡ್ಡಮ್ಮಾ. ಅಮ್ಮ ಇಲ್ಲದ ಮನೇಲಿ, ನಾವೆಲ್ಲಾ ತಬ್ಬಲಿಗಳಾಗಿ ಬಿಟ್ಟಿದ್ವಿ" ಸಾಕ್ಷಿ ಮತ್ತೆ ನುಡಿದಾಗ ಸಂಜಯ ಹಸೆಮಣೆಯಿಂದ ಎದ್ದ. ಸಾಕ್ಷಿ ಬೇಕೆಂದೇ ಈ ಮಾತುಗಳನ್ನಾಡುತ್ತಿದಾಳೆಂದು ಭಾವಿಸಿದ.

"ಸಾಕ್ಷಿ ಮಾತನಾಡಿ ಆಯಾಸ ಮಾಡ್ಕೋಬೇಡ, ರೆಸ್ಟ್ ತಗೋ" ಎಂದು ಹೇಳಿ ತಾನೆಲ್ಲೋ ಮರೆಯಾದ.

"ಸಾಕ್ಷೀ... ಸಂಜಯ್ ಹೇಳೋದು ಸರಿ. ನಿಧಾನವಾಗಿ ಮಾತನಾಡೋಣ. ಈಗ ಏಳು" ಅವಳಿಗೆ ಏಳಲು ಸಹಾಯ ಮಾಡಿದಳು.

ಬಂದವರೆಲ್ಲಾ ಊಟ ಮುಗಿಸಿ ಹೊರಡುವುದರಲ್ಲಿದ್ದರು. ಎಲ್ಲರೂ ಮೃದುಲಾಳನ್ನು ಬಂದು ಮಾತನಾಡಿಸಿದರು. ಸಂಜಯನ ಸ್ನೇಹಿತರು, ಅವನನ್ನು ಹೊಗಳಿದ್ದರು.

"ಅತ್ತೆ ಬದುಕಿಲ್ಲ, ಮಾವಂಗೆ ಹುಶಾರಿಲ್ಲ. ಆದರೂ ಇಷ್ಟೆಲ್ಲಾ ಮಾಡಿದೆಯಲ್ಲಾ ಎಲ್ಲಾ ಚೆನ್ನಾಗಿತ್ತು" ಎಂದರು.

"ನಮ್ಮ ಹೊಸ ನೆಂಟರೊಬ್ಬರನ್ನು ಪರಿಚಯ ಮಾಡಿಸಿಕೊಡ್ತೀನಿ ಬನ್ನಿ" ಎಂದು ಹೇಳಿ ಅವರನ್ನು ಮೃದುಲಾಳ ಬಳಿಗೆ ಕರೆತಂದ.

"ಇವರೆಲ್ಲಾ ನನ್ನ ಫ್ರೆಂಡ್ಸ್. ಫಂಕ್ಷನ್ ತುಂಬಾ ಚೆನ್ನಾಗಿತ್ತು ಅಂತ ಹೊಗಳಿದರು. ಆ ಕ್ರೆಡಿಟ್ ಎಲ್ಲಾ ನಿನಗೆ ಸೇರಬೇಕು..." ಅವನ ಮಾತಿನಲ್ಲಿ ವ್ಯಂಗ್ಯವನ್ನು ಕಂಡಳು.

"ನನಗೆ ಯಾವ ಕ್ರೆಡಿಟ್ಟು ಬೇಡ ಸಂಜಯ್. ನನಗೆ ಆ ಆಸೆಯೂ ಇಲ್ಲ... ಅದನ್ನೆಲ್ಲ ಪಡೆಯುವ ವಯಸ್ಸೂ ಅಲ್ಲ"

"ಮೀಟ್ ದಿಸ್ ಗ್ರೇಟ್ ಲೇಡಿ... ಇವರು ಮೇಡಂ ಮೃದುಲಾ, ಮಹಿಳಾ ಕಾಲೇಜಿನಲ್ಲಿ ಇಂಗ್ಲೀಷ್ ಲೆಕ್ಚರರ್..." ಎಂದು ಪರಿಚಯಿಸಿಕೊಟ್ಟ. ಅವರೆಲ್ಲಾ "ಹಲೋ"

ಮೇಡಂ ಎಂದು ಒಕ್ಕೊರಲಿನಿಂದ ಹೇಳಿದ್ದರು. ಸಂಜಯನ ಅತ್ತೆ ಎಂದು ಹೇಳಲಿಲ್ಲ ಎನ್ನುವುದನ್ನು ಗಮನಿಸಿದಳು. ಅದನ್ನು ಅವನ ತಾಯಿಯೂ ಗಮನಿಸಿದ್ದಳು. ಸ್ನೇಹಿತರನ್ನು ಕಳಿಸಿ ಬಂದ ಸಂಜಯನನ್ನು ಒಂದು ಕಡೆಗೆ ಕರೆದೊಯ್ದು ಅವನೊಡನೆ ಮಾತನಾಡಿದಳು. ನಂತರ ಆಕೆ ಮೃದುಲಾಳ ಬಳಿಗೆ ಬಂದಳು.

"ನನ್ನ ಮಗ ದುಡುಕು ಸ್ವಭಾವದವನು. ಏನೇನೋ ಆಡಿ ಬಿಡ್ತಾನೆ. ಅವನ ಮಾತಿಗೆ ಬೇಸರ ಪಟ್ಕೋಬೇಡಿ. ನಾನು ಅವನ ಪರವಾಗಿ ಕ್ಷಮೆ ಕೇಳ್ತೀನಿ" ಎಂದಳು.

"ಛೆ...ಛೆ... ನೀವ್ಯಾಕೆ ಕ್ಷಮೆ ಕೇಳ್ಬೇಕು...? ನನಗೆ ಯಾವ ಬೇಸರವೂ ಇಲ್ಲ. ನಿಮಗೆ ನನ್ನ ಪರಿಸ್ಥಿತಿ ಅರ್ಥವಾಗಿದೆಯಲ್ಲ ಅಷ್ಟು ಸಾಕು" ಎಂದಳು.

"ನನ್ನ ಬೀಗಿತ್ತಿ ತೀರಿ ಹೋದ ಮೇಲೆ, ಆ ಮನೆಗೆ ಒಬ್ಬರು ಯಜಮಾನಿತಿ ಬೇಕಿತ್ತು. ನೀವು ಬಂದು ಆ ಸ್ಥಾನವನ್ನು ತೆಗೆದುಕೊಂಡಿದೀರಿ. ಒಳ್ಳೇದೇ ಆಯ್ತು"

"ಅದು ನನ್ನದೇ ಸ್ಥಾನ. ನಾನು ಆ ಸ್ಥಾನವನ್ನು ಮಾಲಾಳಿಗೆ ವಹಿಸಿಕೊಟ್ಟಿದ್ದೆ. ಈಗ ಮತ್ತೆ ಮಾಲಾ ನನಗೆ ವಹಿಸಿಕೊಟ್ಟಿದಾಳೆ ಅಷ್ಟೇ... ಅವಳ ಮಕ್ಕಳಿಗೆ ನಾನು ದೊಡ್ಡಮ್ಮ..." ಎಂದು ಹೆಮ್ಮೆಯಿಂದ ಹೇಳಿಕೊಂಡಳು. ಆಕೆ ಅತ್ತ ಸರಿದಳು.

"ನೀವು ಬಂದುದು ತುಂಬಾ ಒಳ್ಳೇದಾಯ್ತು ದೊಡ್ಡಮ್ಮ. ಮನೇಲಿ ನಮಗೆಲ್ಲಾ ತುಂಬ ಬೇಸರ ಆಗ್ತಿತ್ತು" ರಾಶಿ ಮುದ್ದಾಗಿ ನುಡಿದಳು.

"ನಿಮಗೆಲ್ಲಾ ಬೇಸರ ಆಗದಿರಲಿ ಅಂತಲೇ ನಾನು ಬಂದಿದ್ದು ರಾಶಿ. ನನಗೂ ನಿಮ್ಮಂಥ ಮಕ್ಕಳೊಡನೆ ಇರಬೇಕೆಂಬ ಆಸೆ ನನಗೂ ಹುಟ್ಟಿತು" ಎನ್ನುತ್ತಾ ಸಾಕ್ಷಿಯ ಮಡಿಲಲ್ಲಿ ಮಲಗಿದ್ದ ಮಗುವಿನ ಕೆನ್ನೆಯನ್ನು ಸವರಿದಳು.

"ನೀವು ಮುಂಚೆ ಎಂದೂ ಹೀಗೆಲ್ಲಾ ಮಾತಾಡಿದವರಲ್ಲ" ಕಾರ್ತೀಕನೆಂದ.

"ಹೌದು, ಅದು ಆ ಕಾಲದಲ್ಲಿ, ಈಗ ಈ ಕಾಲವೇ ಬೇರೆ. ಕೆಲವೊಮ್ಮೆ ಕಾಲ ಛಲವನ್ನು ತಗ್ಗಿಸುತ್ತೆ. ಮನಸ್ಸನ್ನು ಪಲ್ಲಟಗೊಳಿಸುತ್ತೆ. ಈಗ ನಾನು ಮೇಡಂ ಮೃದುಲಾ ಅಲ್ಲ, ಈ ಮನೆಯ ದೊಡ್ಡಮ್ಮ. ದೊಡ್ಡಮ್ಮ ಅಂತ ಕರೆಸ್ಕೊಳ್ಳೋದ್ರಲ್ಲಿ ಒಂಥರಾ ಹಿತವಿದೆ" ಮೃದುಲಾ ತನ್ನ ಅಕ್ಕ ಪಕ್ಕ ಕುಳಿತ ಅಕ್ಕತಂಗಿಯರೊಡನೆ ನಗು ನಗುತ್ತಾ ಮಾತನಾಡಿದಳು. ಕಾರ್ತೀಕನೂ ಅಲ್ಲಿ ನಿಂತಿದ್ದ. ಸಂಜಯ ಅವರ ಬಳಿಗೆ ಬಂದಾಗ, ಎಲ್ಲರೂ ಮಾತನ್ನು ನಿಲ್ಲಿಸಿ ಅವನನ್ನೇ ನೋಡಿದರು.

"ಬನ್ನಿ ಮೇಡಂ ಎಲೆ ಹಾಕಿದೆ..." ಅವನು ಮೃದುಲಾಳನ್ನು ಕರೆದಾಗ ಎಲ್ಲರೂ ಕಕ್ಕಾಬಿಕ್ಕಿ.

"ನೀವುಗಳು ಕೂತ್ಕೊಳ್ಳಿ... ನಾನು ಮಗೂನ ನೋಡ್ಕೋತೀನಿ. ಹಾಗೇ ನಿಮ್ಮ ಮಾವನವರೂ ಒಬ್ಬರೇ ಆಗ್ತಾರೆ" ಅವಳು ನುಡಿದಳು.

"ಮಗೂನ ನಮ್ಮಮ್ಮ ನೋಡ್ಕೋತಾಳೆ. ಮಾವನವರನ್ನು ಅನಂತನ ಜೊತೆ ಮನೆಗೆ ಕಳಿಸಿಕೊಡೋಣ. ನಿಮಗೂ ಆಯಾಸ ಆಗಿರಬಹುದು. ಒಟ್ಟಿಗೇ ಕೂತು ಊಟ ಮಾಡೋಣ" ಅವನು ಅನುನಯದಿಂದ ಹೇಳಿದಾಗ ಎಲ್ಲರಿಗೂ ಅಚ್ಚರಿ...

"ಪ್ಲೀಸ್... ಯಾರೂ ಹಾಗೆ ನನ್ನನ್ನ ವಿಚಿತ್ರವಾಗಿ ನೋಡ್ಬೇಡಿ. ಎಲ್ಲರೂ ಊಟಕ್ಕೆ ಬನ್ನಿ" ಎಲ್ಲರೂ ಮೂಕರಾದವರಂತೆ ಅವನೊಂದಿಗೆ ಡೈನಿಂಗ್ ಹಾಲ್‌ಗೆ ಬಂದರು. ಕಾರ್ತೀಕ್, ಕ್ಷೀರಾ, ಕ್ಷೀರಾಳ ಪಕ್ಕ ರಾಶಿ ಕುಳಿತರು. ಸಂಜಯನ ತಾಯಿ ಬಂದು ಸಾಕ್ಷಿಯನ್ನು ಎಬ್ಬಿಸಿದಳು.

"ಸಾಕ್ಷೀ... ನಿನಗೆ ರೂಂನಲ್ಲೇ ಊಟ ಹಾಕಿಸ್ತೀನಿ... ಇಲ್ಲಿ ಅಪಥ್ಯ ಆಗುತ್ತೆ" ಎಂದು ಹೇಳಿ ಅವಳನ್ನು ಎಬ್ಬಿಸಿದಳು.

"ನೀವು ಏನೇನೋ ಮಾತ್ನಾಡಬೇಡಿ" ಎಂದು ಸಂಜಯರಿಗೆ ಹೇಳಿ ಸಾಕ್ಷಿ ಅತ್ತೆಯ ಜೊತೆ ನಡೆದಳು. ಸಂಜಯ ಮೃದುಲಾಳ ಪಕ್ಕ ಇದ್ದ ಕುರ್ಚಿಯಲ್ಲಿ ಕುಳಿತ.

"ಸಾರೀ ಮೇಡಂ... ನಾನು ಇಲ್ಲಿ ಕೂತ್ರೆ ನಿಮಗೆ ಮುಜುಗರ ಆಗುತ್ತಾ?" ಕೇಳಿದ.

"ಮುಜುಗರ ಯಾಕೆ? ಹಾಗೇನಿಲ್ಲ, ಕೂತ್ಕೊಳ್ಳಿ"

"ಥ್ಯಾಂಕ್ ಯೂ ಮೇಡಂ. ಎಲ್ಲಾ ಜವಾಬ್ದಾರಿಯನ್ನು ತೆಗೆದುಕೊಂಡು, ಸಮಾರಂಭವನ್ನು ಚೆನ್ನಾಗಿ ನಡೆಸಿಕೊಟ್ಟಿದೀರಿ, ಥ್ಯಾಂಕ್ಸ್"

"ಇದಕ್ಕೆ ಥ್ಯಾಂಕ್ಸ್ ಯಾಕೆ? ಇದು ನಮ್ಮ ಮನೆಯ ಕೆಲಸ. ಅದನ್ನು ನಾನು ಮಾಡಿದೀನಿ ಅಷ್ಟೇ" ಅವಳು ಮುಗುಳ್ನಗುತ್ತಾ ನುಡಿದಾಗ, ಅವನು ಗಂಭೀರನಾದ.

"ನಾನು ನಿಮ್ಮ ಬಗ್ಗೆ ಏನೇನೋ ತಪ್ಪುಕಲ್ಪನೆಗಳನ್ನಿಟ್ಟುಕೊಂಡಿದ್ದೆ. ಅದು ಸರಿಯಲ್ಲ ಅಂತ ಅರಿವಾಗಿದೆ, ಕ್ಷಮಿಸಿ ಬಿಡಿ"

"ಪರವಾಗಿಲ್ಲ ಬಿಡಿ, ನಿಮಗೆ ನನ್ನ ಮೇಲೆ ಅಸಮಾಧಾನವಿತ್ತು ಅಂತ ನನಗೆ ತಿಳಿದಿತ್ತು. ನಿಮ್ಮ ಅಸಮಾಧಾನ ಸಹಜವೇ ಬಿಡಿ. ಇದ್ದಕ್ಕಿದ್ದಂತೆ ನಾನು ಈ ಮನೆಯ ಸದಸ್ಯೆಯಾಗಿ ಬಂದು ಸೇರಿಕೊಂಡೆ... ನೀವು ಈ ಮನೆಗೆ ಅಳಿಯ... ನಾನು ಯಾರು ಅಂತ ನಿಮಗೆ ಗೊತ್ತಿರಲಿಲ್ಲವಲ್ಲ... ನಾನು ಯಾರು ಅನ್ನೋದಕ್ಕೆ ನಿಮಗೆ ಎವಿಡೆನ್ಸ್ ಬೇಕಾಗಿತ್ತು ಅಲ್ವಾ?"

"ಹಾಗೇನಿಲ್ಲ, ಎಲ್ಲರೂ ನಿಮ್ಮನ್ನು ಅಕ್ಸೆಪ್ಟ್ ಮಾಡಿಕೊಂಡಿದಾರಲ್ಲ"

"ಅಂದ್ರೇ... ನೀವು ಇನ್ನು ನನ್ನನ್ನು ಅಕ್ಸೆಪ್ಟ್ ಮಾಡಿಕೊಂಡಿಲ್ಲ ಅಂತಾಯ್ತು... ನಿಮಗೆ ಏನಾದ್ರೂ ಸಂದೇಹ ಇದ್ರೆ ನನ್ನನ್ನೇ ನೇರವಾಗಿ ಕೇಳಬಹುದಾಗಿತ್ತಲ್ಲ ಸಂಜಯ್... ಒಳಗೊಳಗೇ ಯಾಕೆ ಕೊರಗಿದ್ರೀ..."

"ಏನೋ ನಂಗೊತ್ತಿಲ್ಲ ಮೇಡಂ... ಆದರೆ ಇದ್ದಕ್ಕಿದ್ದ ಹಾಗೆ ಬಂದು ಇಲ್ಲಿ ಇರುವುದಕ್ಕೆ ನಿರ್ಧಾರ ಹೇಗೆ ತಗೊಂಡ್ರಿ?"

"ರಾಶೀ ಆದಿನ ಬಂದು, ನಿಮ್ಮ ಸ್ನೇಹಿತನೊಬ್ಬ ಮಿಸ್ ಬಿಹೇವ್ ಮಾಡಿದ್ದನ್ನು ಹೇಳಿಕೊಂಡು ಅತ್ತಳು. ಆ ಸಮಯಕ್ಕಾಗಲೇ, ಇವರೆಲ್ಲಾ ನನ್ನ ಸ್ನೇಹಿತೆಯ ಮಕ್ಕಳು ಅಂತ ಗೊತ್ತಾಗಿತ್ತು. ಕ್ಷೀರಾಳೂ ಮದುವೆಯಾಗಿ ಬಿಟ್ಟರೆ, ರಾಶೀನ ನಮ್ಮ ಮನೆಗೆ ಕರ್ಕೊಂಡು ಹೋಗೋಣ ಅಂತ ಅಂದ್ಕೊಂಡೆ. ಆದರೆ, ಅಶೋಕ್ ಒಬ್ಬರನ್ನೇ ಬಿಟ್ಟು ಹೋಗುವುದು ಸರಿಯಲ್ಲ ಅಂತ ಅನ್ನಿಸ್ತು. ಅಸಹಾಯಕರಾಗಿರುವ ಅಶೋಕ್‌ನನ್ನು

ಬಲವಂತವಾಗಿ ನನ್ನ ಮನೆಗೆ ಕರೆದುಕೊಂಡು ಹೋಗಲು ನನ್ನ ಮನಸ್ಸು ಒಡಂಬಡಲಿಲ್ಲ. ಅವರ ಸ್ವಾಭಿಮಾನ ಹಾಗೇ ಉಳಿಸಬೇಕು ಅಂತ ಅನ್ನಿಸ್ತು. ನನ್ನ ಅಭಿಮಾನವನ್ನು ಬಿಟ್ಟು ಈ ಮನೆಗೆ ಬಂದೆ. ನಮ್ಮಿಬ್ಬರ ಮದುವೆಯ ಫೋಟೋಗಳನ್ನು ತೋರಿಸಿ, ನನ್ನನ್ನು ನಾನು ಇಲ್ಲಿ ಎಸ್ಟಾಬ್ಲಿಷ್ ಮಾಡಿಕೊಳ್ಳಬೇಕಾಗಿರಲಿಲ್ಲ ಅಲ್ವಾ?

ಈಗಾಗಲೇ ನನ್ನ ಬಗ್ಗೆ ನಿಮ್ಮ ನಿಮ್ಮಲ್ಲಿ ಎಷ್ಟೋ ಚರ್ಚೆಗಳು ನಡೆದಿರಬಹುದು. ಇಲ್ಲಿ ಅಶೋಕ್‌ರವರಿಗೆ ಏನು ಆಸ್ತಿ ಇತ್ತೋ ಇಲ್ಲವೋ ನನಗೆ ಅದರ ಬಗ್ಗೆ ಆಸಕ್ತಿ ಇಲ್ಲ. ಅದೆಲ್ಲಾ ಈ ಹೆಣ್ಣು ಮಕ್ಕಳಿಗೆ ಸೇರುತ್ತೆ... ನನ್ನ ಬಗ್ಗೆ ನಿಮಗೆ ಯಾವ ಟೆನ್ಷನ್ನು ಬೇಡ. ಈಗ ಹೊತ್ತಾಗಿದೆ, ಊಟ ಮಾಡೋಣ. ನಿಧಾನವಾಗಿ ಮತ್ತೆಂದಾದ್ರೂ ಮಾತಾಡೋಣ" ಮೃದುಲಾ ಪಾಯಸಕ್ಕೆ ಕೈ ಹಾಕಿದಳು. ಸಂಜಯನೂ ಪ್ರಾರಂಭಿಸಿದ.

42

ಊಟದ ನಂತರ, ಲೆಖ್ಖವನ್ನು ಚುಕ್ತಾ ಮಾಡಿ ಎಲ್ಲರೂ ಮನೆಗೆ ಹಿಂದಿರುಗಿದರು. ಒಳ ಬಂದ ಸಾಕ್ಷಿ ಗೋಡೆಯ ಮೇಲಿದ್ದ ತಾಯಿಯ ಭಾವಚಿತ್ರದ ಎದುರಿಗೆ ನಿಂತಳು.

"ಅಮ್ಮಾ... ಇವತ್ತು ನಿನ್ನ ಹುಟ್ಟಿದ ಹಬ್ಬ. ಆದರೆ ನಾವುಗಳೆಲ್ಲಾ ನಮ್ಮ ನಮ್ಮ ಬಿಜ್ಜಿಯಲ್ಲಿ ಮರತೇ ಬಿಟ್ಟಿದ್ದೆವು. ಅದನ್ನು ನೆನೆಪಿಸಿದವರು ನಮ್ಮ ದೊಡ್ಡಮ್ಮ. ಅವರಿಗೆ ಥ್ಯಾಂಕ್ಸ್ ಹೇಳಬೇಕು. ಅಮ್ಮ ನಮ್ಮನ್ನೆಲ್ಲಾ ಕ್ಷಮಿಸು..." ಅವಳ ಕಣ್ಣುಗಳು ಒದ್ದೆಯಾಗಿದ್ದವು. ಅವಳ ಅಕ್ಕಪಕ್ಕದಲ್ಲಿ ರಾಶಿ, ಕ್ಷೀರಾ ಬಂದು ನಿಂತರು. ಮೃದುಲಾ ರಾಶಿಯನ್ನು ತನ್ನ ತೋಳಿನಲ್ಲಿ ಬಳಸಿದಳು. ಅವಳ ಕೈ ರಾಶಿಯ ಕೆನ್ನೆಯನ್ನು ಸವರಿತು.

"ಮಾಲಾ ನನ್ನ ಗೆಳತಿಯಾಗಿದ್ದಳು. ಅವಳ ಮದುವೆಯಾದ ಮೇಲೆ ನಾವಿಬ್ಬರೂ ಮತ್ತೆಂದೂ ಭೇಟಿಯಾಗಲಿಲ್ಲ. ಆದರೆ ಅವಳ ನೆನಪು ಸದಾ ನನ್ನ ಜೊತೆಯಲ್ಲೇ ಇತ್ತು. ಆಗಾಗ್ಗೆ ಅವಳ ಬಗ್ಗೆ ಯೋಚಿಸುತ್ತಲೇ ಇದ್ದೆನಲ್ಲ"

"ಆಗ ಅಮ್ಮನ ಮೇಲೆ, ಭಾರಿ ಕೋಪವೇ ಇತ್ತೇನೋ ಅಲ್ವಾ?"

"ಇಲ್ಲ, ನಿಮ್ಮಮ್ಮನ ಮೇಲೆ ನನಗೆ ಯಾವ ಕೋಪವೂ ಇರಲಿಲ್ಲ. ನನ್ನ ಮೇಲೆ ನನಗೆ ಕೋಪವಿತ್ತು. ನನ್ನ ಅಸಹಾಯಕತೆಯಿಂದಾಗಿ ನಾನೇ ಕೈಯಾರೆ ನನ್ನ ಸಂಸಾರವನ್ನು ಕೆಡಿಸಿಕೊಂಡಿದ್ದೆ. ತಪ್ಪು ನನ್ನದೇ ಆಗಿತ್ತಲ್ಲ. ನನ್ನ ಸ್ಥಾನವನ್ನು ನಾನು ಮಾಲಾಳಿಗೆ ಬಿಟ್ಟುಕೊಟ್ಟಿದ್ದೆ. ಆಗ ಅವಳಿಗೆ ನನ್ನ ಬಗ್ಗೆ ಯಾವ ಭಾವನೆ ಇತ್ತು ಅಂತ ನನಗೆ ತಿಳಿಯದು. ತಿಳಿದುಕೊಂಡು ಮಾಡಬೇಕಾದ್ದು ತಾನೇ ಏನು? ಈಗ ಅವಳು ನನ್ನನ್ನು ಕರೆಸಿಕೊಂಡಿದ್ದಾಳೆ. ಆಗಲೂ ನಾನು ಸ್ವಾರ್ಥಿಯಾಗಿದ್ದೆ. ಈಗಲೂ ನಾನು ಸ್ವಾರ್ಥಿಯೇ. ಆಗ ನಲಿವು ಇರಲಿಲ್ಲ. ಬಿಟ್ಟು ಕೊಟ್ಟ ವ್ಯಥೆ ಇತ್ತು. ಈಗ ಮಾಲಾಳನ್ನು ಕಳೆದುಕೊಂಡಿರುವ ನೋವಿದೆ. ಆಗ ನನ್ನ ಬಾಳನ್ನು ಕಳೆದುಕೊಂಡಿದ್ದೆ. ಈಗ ಗೆಳತಿಯನ್ನು ಕಳೆದುಕೊಂಡಿದ್ದೇನೆ. ಆದರೆ ಅವಳ ಸಂಸಾರದಲ್ಲಿ ಬಂದು ಸೇರಿಕೊಂಡಿದ್ದೀನಿ. ಮತ್ತೆ ನನ್ನ ಪತಿಯೊಂದಿಗೆ ಇರುವ ಅವಕಾಶ ನನಗೆ ಸಿಕ್ಕಿದೆ. ಇಲ್ಲಿ ನೋವು–ನಲಿವೂ ಎರಡೂ ಇದೆ. ನೀವುಗಳೆಲ್ಲ ಬೆಳೆದು ದೊಡ್ಡವರಾಗಿದೀರಿ. ಇದುವರೆಗೂ ನಿಮಗೆ ಈ

ದೊಡ್ಡಮ್ಮನ ಬಗ್ಗೆ ತಿಳಿದಿರಲಿಲ್ಲ. ಆದರೂ ಈಗ ನನ್ನನ್ನು ದೊಡ್ಡಮ್ಮ ಅಂತ ಒಪ್ಪಿಕೊಂಡು ನನಗೆ ದೊಡ್ಡ ಸ್ಥಾನವನ್ನು ಕೊಟ್ಟಿದೀರಿ. ಇದಕ್ಕಿಂತ ಹೆಚ್ಚಿನದೇನನ್ನು ನಾನು ಅಪೇಕ್ಷಿಸುವುದಿಲ್ಲ" ಮಾತನ್ನು ನಿಲ್ಲಿಸಿ ಒಮ್ಮೆ ಎಲ್ಲರನ್ನು ನೋಡಿದಳು. ಎಲ್ಲರೂ ಮೂಕರಂತೆ ನಿಂತಿದ್ದರು.

"ನೀವು ಹಿಂದೆ ಎಂದೂ ಇಷ್ಟು ಮಾತುಗಳನ್ನಾಡಿದ್ದನ್ನು ನಾನು ಕೇಳಿರಲಿಲ್ಲ. ನೀವು ಇದ್ದಕ್ಕಿದ್ದಂತೆ ಬದಲಾಗಿದೀರಿ" ಕಾರ್ತೀಕನೆಂದ. ಅವನು ಗೊಂದಲಕ್ಕೊಳಗಾಗಿದ್ದ.

"ಮನೇಲಿ ನೀನು ನಿನ್ನೊಡನೆ ಮಾತನಾಡಲು ಏನು ವಿಷಯಗಳಿರುತ್ತಿದ್ದವು? ನನ್ನ ಬಗ್ಗೆ ಏನನ್ನು ಹೇಳಿಕೊಳ್ಳಬೇಕೆಂದೆನಿಸುತ್ತಿರಲಿಲ್ಲ. ಈಗ ಮಾತನಾಡಬೇಕಾಗಿರುವುದರಿಂದ ಆಡ್ತಿದೀನಿ. ಇನ್ನು ಮುಂದೆ ಕಾಲೇಜಿನಲ್ಲಿ ಪಾಠ ಮಾಡುವ ಮೇಡಂ ಮೃದುಲಾ ನಾನಲ್ಲ. ಬರೀ ಮೃದುಲಾ..." ನಸುನಗುತ್ತಾ ನುಡಿದಳು.

"ಬರೀ ಮೃದುಲಾ ಅಲ್ಲ ಮೇಡಂ. ಮೃದುಲಾ ಅಶೋಕ್... ನೀವು ನನ್ನ ಮಾವನವರ ಧರ್ಮಪತ್ನಿ" ಸಂಜಯ್ ನುಡಿದಾಗ ಎಲ್ಲರೂ ಅಚ್ಚರಿಯಿಂದ ಅವನ ಕಡೆ ನೋಡಿದರು. ಆ ಮಾತು ನಿಜ ಎನ್ನುವಂತೆ, ಮಾಲಾಳ ಪಟಕ್ಕೆ ಇಟ್ಟಿದ್ದ ಕೆಂಗುಲಾಬಿ ಹೂವು ಜಾರಿ ಕೆಳಗೆ ಬಿತ್ತು. ಎಲ್ಲರೂ ಹರ್ಷೋದ್ಗಾರದೊಂದಿಗೆ ಚಪ್ಪಾಳೆಯನ್ನು ತಟ್ಟಿ ಮೃದುಲಾಳನ್ನು ಅಭಿನಂದಿಸಿದರು. ರಾಶಿ ಹೂವನ್ನು ಎತ್ತಿಕೊಂಡಳು.

"ದೊಡ್ಡಮ್ಮ... ನೀವು ಅಪ್ಪನ ಜೊತೆ ನಿಂತ್ಕೊಳ್ಳಿ... ಭಾವ ಫೋಟೋ ತೆಗೀತಾರೆ" ರಾಶಿ ಮೃದುಲಾಳ ಕೈ ಹಿಡಿದು ಕರೆತಂದು ತಂದೆ ಕುಳಿತಿದ್ದ ವ್ಹೀಲ್ ಛೇರ್ ಪಕ್ಕದಲ್ಲಿ ನಿಲ್ಲಿಸಿದಳು. ಸಂಜಯ್ ಪೋಕಸ್ ಮಾಡಿ, ಕ್ಯಾಮೆರಾ ಕ್ಲಿಕ್ ಮಾಡಿದ. ಒಂದು, ಇನ್ನೊಂದು, ಮತ್ತೊಂದು ಅಂತ ಹತ್ತಾರು ಗ್ರೂಪ್ ಫೋಟೋಗಳನ್ನು ಕಾರ್ತೀಕ್ ಹಾಗೂ ಸಂಜಯ್ ತೆಗೆದರು. ಎಲ್ಲರಿಗೂ ಏನೋ ಸಂಭ್ರಮ. ಏನೋ ಉತ್ಸಾಹ.

ತನ್ನ ಪಕ್ಕ ನಿಂತಿದ್ದ ಮೃದುಲಾಳ ಕೈಗೆ ತನ್ನ ಕೈಯನ್ನು ತಗುಲಿಸಿದ ಅಶೋಕನನ್ನು ಮೃದುಲಾ ಪ್ರೀತಿಯಿಂದ ನೋಡಿ ಅವನ ಕೈಗಳನ್ನು ಅದುಮಿದಳು. ಅವನ ತುಟಿಗಳು ಚಲಿಸಿದವು. ಅವನು ಅಸ್ಪಷ್ಟವಾಗಿ 'ಕಂಗ್ರಾಟ್ಸ್' ಎಂದು ಹೇಳಿದ್ದು ಮೃದುಲಾಳಿಗೆ ಕೇಳಿಸಿತ್ತು. ಮೃದುಲಾ ನಾಚಿಕೆಯಿಂದ ಎಲ್ಲರ ಕಡೆ ನೋಡಿದಳು.

"ಅಪ್ಪ ಏನೋ ಹೇಳ್ತಿದಾರೆ..." ರಾಶಿ ಅವರ ಬಾಯ ಬಳಿಗೆ ತನ್ನ ಕಿವಿಗಳನ್ನೊಡ್ಡಿದಳು. "ಕಂಗ್ರಾಟ್ಸ್" ಎಂದು ಅವನು ಹೇಳಿದ್ದು ಕ್ಷೀಣವಾಗಿ ಕೇಳಿಸಿತ್ತು. ಅಪ್ಪಾ ಮಾತಾಡ್ತಿದಾರೆ. ರಾಶಿ ಹರ್ಷದಿಂದ ಕಿರುಚಿದಳು. ಎಲ್ಲರೂ ಅದ್ಭುತವನ್ನು ಕಂಡವರಂತೆ ಅಚ್ಚರಿಯಿಂದ ಅವರನ್ನೇ ನೋಡಿದರು. ಸಾಕ್ಷಿ, ಕ್ಷೀರಾ, ತಂದೆಯ ಪಕ್ಕದಲ್ಲಿ ಬಂದು ನಿಂತರು.

ಮಾಲಾಳ ಫೋಟೋ ಮೇಲೆ ಬಿದ್ದ ಸೂರ್ಯನ ಕಿರಣಗಳು ಪ್ರತಿಫಲಿಸಿ ಮೃದುಲಾ ಅಶೋಕ್‌ರವರ ಮೇಲೆ ಪ್ರಭೆಯನ್ನು ಬೀರಿತ್ತು.

– ಮುಗಿಯಿತು –



ಈ ಕಾದಂಬರಿಯ ನಾಯಕಿ ಮೇಡಂ ಮೃದುಲಾ, ಕಾಲೇಜಿನಲ್ಲಿ ಲೆಕ್ಚರರ್ ಆಗಿರುತ್ತಾಳೆ. ಕಾರಣಾಂತರಗಳಿಂದ ಪತಿಯಿಂದ ದೂರವಿದ್ದರೂ, ಪ್ರೀತಿಯನ್ನು ಮರೆತಿರುವುದಿಲ್ಲ. ಇಪ್ಪತ್ತೈದು ವರ್ಷಗಳ ನಂತರ ಪ್ರೀತಿಸಿದವನನ್ನು ಕಂಡಾಗ ಅವಳು ಮತ್ತೊಮ್ಮೆ ಒಂದು ನಿರ್ಧಾರಕ್ಕೆ ಬರುತ್ತಾಳೆ. ಆ ನಿರ್ಧಾರ ಬೇರೆಯೇ ಆಗಿರುತ್ತದೆ. ತನ್ನ ಪತಿಯೊಡನೆ, ಅವನ ಮಕ್ಕಳೊಡನೆ ಇರುವ ಬಯಕೆಯನ್ನು ಹೊರಗೆಡವುತ್ತಾಳೆ. ಮೊದಲ ಪತ್ನಿಯನ್ನು ಮತ್ತೆ ಒಪ್ಪಿಕೊಳ್ಳಬೇಕಾದ ಸ್ಥಿತಿ ಅವನದು. ಆದರೆ ಅವನ ಮೂರು ಹೆಣ್ಣು ಮಕ್ಕಳು? ಸಾಕ್ಷಿ ಮದುವೆಯಾಗಿದ್ದವಳು, ಕ್ಷೀರಾ ಮದುವೆಯಾಗಲಿರುವವಳು, ರಾಶಿ ಓದುತ್ತಿರುವವಳು... ಮೂವರಿಗೂ ಮೂರು ರೀತಿಯ ಮನಸ್ಸುಗಳು, ಮೃದುಲಾಳನ್ನು ತಾಯಿಯ ಸ್ಥಾನಕ್ಕೆ ಬರಮಾಡಿಕೊಂಡರೆ...? ಇದು ನೀವು ಓದಿ ತಿಳಿಯಬೇಕಾಗಿದೆ.

ಕುತೂಹಲಕಾರಿ ಓದುಗರಿಗೆ, ಇದೊಂದು ಕುತೂಹಲವನ್ನು ಹುಟ್ಟಿಸುವ ಕಾದಂಬರಿ.

– ಪ್ರಕಾಶಕರು

ಸೌಮ್ಯ. ಎಂ
ಪ್ರಕಾಶರು ಮತ್ತು ಪುಸ್ತಕ ವ್ಯಾಪರಿಗಳು
ಬಸವನಗುಡಿ, ಬೆಂಗಳೂರು - 4